ಸಂವಾದ

ಜುಲೈ ೨೦೦೮ ರೂ.೨೦

ಶ್ರೀಲಂಕಾದಲ್ಲಿ ಪ್ರಜಾಸತ್ತೆ ಇದೆಯೆ?

ಕೊಂಕಣಿಗಳು ಮತ್ತು ಸಂಘನಿಷ್ಠೆ

ಚುನಾವಣೆಯ ಪಾಠಗಳು!

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೯

ಜುಲೈ ೨೦೦೯

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ|| ನಟರಾಜ್ ಹುಳಿಯಾರ್

ಪ್ರೊ|| ರಹಮತ್ ತರೀಕೆರೆ

ಡಾ|| ಕೆ. ಪುಟ್ಟಸ್ವಾಮಿ

ಡಾ|| ಡಿ. ಡೊಮಿನಿಕ್

ಡಾ|| ಬಿ.ಯು. ಸುಮಾ

ಡಾ|| ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ **Editorial: 9448048306**

✆ **Circulation: 080-23480278, 9945264687**

e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಸಂಪಾದಕರೊಂದಿಗೆ ಸಂವಾದ:
  - ❍ ಕಿರಣ್ ಎಂ, ಗಾಜನೂರು ೦೬
  - ❍ ಭರತ್ ರಾಜ್ ೦೮
- ❑ ರಾಜಕೀಯದಲ್ಲಿ ಮಹಿಳೆ ೧೦
  - ❍ ಸುಪ್ರಿಯಾ
- ❑ ಪ್ರಜಾತಂತ್ರವನ್ನೇ ಸೋಲಿಸುವ ಚುನಾವಣೆಗಳು!! ೧೪
  - ❍ ಶಿವಸುಂದರ್
- ❑ ಶ್ರೀಲಂಕಾದಲ್ಲಿ ಪ್ರಜಾಸತ್ತೆ ಇದೆಯೇ? ೧೮
  - ❍ ಡಾ. ಡೊಮಿನಿಕ್ ಡಿ

- ❑ ಸಮೂಹ ಮಾಧ್ಯಮಗಳು ಮತ್ತು ಸಾಮಾಜಿಕ ಹೊಣೆಗಾರಿಕೆ ೨೨
  - ❍ ಡಾ. ಎನ್. ಜಗದೀಶ್ ಕೊಪ್ಪ
- ❑ ಅಲೆಮಾರಿಗಳಾಗಿ ಮುದಗಲ್ಲಿನ ದಕ್ಕಲರು ಮತ್ತು ಅವರ ಸಂಸ್ಕೃತಿ ೨೪
  - ❍ ಮಹಾದೇವಪ್ಪ ನಾಗರಹಾಳ
- ❑ ಕೆಲವು ಗೊಂದಲಗಳು: ಬಹು ಭಾಷಿಕತೆ ಮತ್ತು ಶಿಕ್ಷಣ ೨೮
  - ❍ ಮೇಟಿ ಮಲ್ಲಿಕಾರ್ಜುನ
- ❑ ಕೊಂಕಣಿಗಳು ಮತ್ತು ಸಂಘನಿಷ್ಠೆ ೩೨
  - ❍ ಗುರು ಬಾಳಿಗ

- ❑ ಲೋಕಸಭಾ ಚುನಾವಣೆ ಹಾಗು ಮಿಥ್ಯೆಗಳು
  - ❍ ಭರತ್ ರಾಜ್ ೩೬
- ❑ ಧರೆ ಹತ್ತಿ ಉರಿದರೆ... ೧೨ ಚುನಾವಣೆಯ ಪಾಠಗಳು
  - ❍ ಡಾ. ಟಿ. ಆರ್ ಚಂದ್ರಶೇಖರ್ ೩೮
- ❑ ಬೌದ್ಧ ಸೌಂದರ್ಯ ಮೀಮಾಂಸೆ-೧೧ ಒಗರವಿಲ್ಲಾಗಿ ಪ್ರಸಾದವಿಲ್ಲ
  - ❍ ಡಾ. ಎಸ್. ನಟರಾಜ್ ಬೂದಾಳು ೪೨
- ❑ ದಲಿತ್ ಡೈರಿ
  - ❍ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ ೫೦
  - ❍ ಸಿ.ಎಚ್. ರಾಜಶೇಖರ್

ಕವನಗಳು : ❑ ಭವಿಷ್ಯಕ್ಕಷ್ಟು ಉಳಿಯಲಿ ೧೭ ❑ ನಿನ್ನ ಬಯಸಿತು ಕವಿತೆ ೩೭
❑ ಪರಿವರ್ತನೆಯ ರೂವಾರಿ ೪೪

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಹೊಸ ವ್ಯವಸ್ಥೆಯಿಂದ ಹೊಸ ಶ್ರೇಣಿ ವ್ಯವಸ್ಥೆ

ಮಾನ್ಯ ಸಂಪಾದಕರಿಗೆ,

ಇಂದು ದಲಿತ ಬೌದ್ಧಿಕತೆಯಲ್ಲಿ ಪ್ರಮುಖ ಚಿಂತಕರಾದ ಚಂದ್ರಭಾನ್ ಪ್ರಸಾದ್ ಅವರ ಅಂಕಣವನ್ನು ನೀವು ಕನ್ನಡದಲ್ಲಿ ನೀಡುತ್ತಿರುವುದು ಜ್ಞಾನ ಪ್ರಸಾರ ದೃಷ್ಟಿಯಿಂದ ಮುಖ್ಯವಾದದ್ದು. 'ದಿ ಹಿಂದೂ' ಪತ್ರಿಕೆಯಲ್ಲಿ ಅವರ ಬರಹ ಓದುವುದು ಈಗ ಅಕಸ್ಮಾತ್ ತಪ್ಪಿಹೋದರೂ ಅವರ ಮುಖ್ಯ ವಿಚಾರ ಸಂವಾದದಲ್ಲಿ ದೊರಕುತ್ತಿರುವುದು ಅನುಕೂಲವಾಗಿದೆ.

ಶಾಲಾ ಶಿಕ್ಷಣದ ಹಿನ್ನೆಲೆಯಲ್ಲಿ ಅವರು ಬಹಳ ಪ್ರಮುಖ ವಿಚಾರಗಳನ್ನು ಮುಂದಿಟ್ಟಿದ್ದಾರೆ! ಅವರು ಹೇಳುವ ಎಲ್ಲಾ ವಿಚಾರಗಳೂ (ಉದಾರಣೆಗೆ ಶಿಕ್ಷಕರು ಅವರವರ ರಾಜ್ಯಗಳಲ್ಲಿ ಇರಕೂಡದು ಎಂಬ ಚಿಂತನೆ) ತೀರಾ ಪ್ರಾಯೋಗಿಕ ಹಾಗೂ ಜಾರಿಗೊಳಿಸಲು ಸಾಧ್ಯವಾಗುವುದು ಅಲ್ಲವಾದರೂ, ಚಂದ್ರಭಾನ್ ಪ್ರಸಾದ್ ಬಹಳ ಮುಖ್ಯವಾದ ಸತ್ಯದ ಮುಖ ದರ್ಶನ ಮೂಡಿಸಿದ್ದಾರೆ. ಕೈಗಾರಿಕೆಯ ವ್ಯಾಕರಣವನ್ನು ಅವರು ಎಷ್ಟು ಸುಲಭವಾಗಿ "ಲಾಭವಿಲ್ಲದೆ ಯಾವುದೇ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವಂತಿಲ್ಲ" ಎಂದು ಹೇಳಿದರು.

ಪಂಡಿತ್ ನೆಹರೂ ತಮ್ಮ ಮಿಶ್ರ ಆರ್ಥಿಕ ನೀತಿಯಲ್ಲಿ ಈ ಸಮಸ್ಯೆಯನ್ನು ಮೀರಲು ಪ್ರಯತ್ನಿಸಿದರು. ಚಂದ್ರಭಾನ್ ಸೂಚಿಸುವ ಕೈಗಾರಿಕೀಕರಣಗೊಂಡ, ಆಧುನೀಕರಣಗೊಂಡ ಪ್ರಭಲ ರಾಷ್ಟ್ರ ಕಟ್ಟಬೇಕು. ಆದರೆ ಸಾಮಾಜಿಕವಾಗಿ ಅದರ ಲಾಭಬೇಕು. ಆರ್ಥಿಕ ಲಾಭವಿಲ್ಲದ ಅದರ ಸಮಸ್ಯೆಗಳನ್ನು ನಿಗ್ರಹಿಸಬೇಕು. ಮಿಶ್ರ ಆರ್ಥಿಕ ವ್ಯವಸ್ಥೆಯ ಲಾಭನಷ್ಟಗಳ ಚರ್ಚೆ ಇಲ್ಲಿ ನನ್ನ ಉದ್ದೇಶವಲ್ಲ. ಕೈಗಾರಿಕೀಕರಣದ ಆರ್ಥಿಕತೆ ಹಾಗೂ ಸಾಮಾಜಿಕ ಅಗತ್ಯ ಎರಡನ್ನೂ ಹೇಗೆಲ್ಲಾ ಯಾವೆಲ್ಲಾ ರೀತಿಯಲ್ಲಿ ಸಮನ್ವಯಗೊಳಿಸಬಹುದೆಂಬ ಚಿಂತನೆ ಪ್ರಯೋಗ ನಮ್ಮಲ್ಲಿ ಸಾಕಷ್ಟು ನಡೆದಿದೆ.

ಚಂದ್ರಭಾನು ಅವರು ಕೃಷಿಭೂಮಿ ನಮ್ಮ ದೇಶದಲ್ಲಿ ಕಾರ್ಖಾನೆಗಳಂತೆ ಆರ್ಥಿಕ ಪರಿವರ್ತನೆ ಹೊಂದಬೇಕು ಎಂದಾಗ ವ್ಯವಸ್ಥೆ ಬಳಸುವ ಕಾರ್ಮಿಕ ವಿಧಾನಗಳ ಬಗ್ಗೆ ನಾವು ಎಚ್ಚರ ವಹಿಸಬೇಕು. ನಮ್ಮದೇ ರಾಜ್ಯದ ಕೊಡಗು

ಪತ್ರಾಗಾರ

ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಾವಿರಾರು ಎಕರೆಗಳ ಸಮೂಹ ಕೃಷಿ ಭೂಮಿ /ಎಸ್ಟೇಟ್‌ಗಳ ವ್ಯವಸ್ಥೆ ನಾವೆಲ್ಲಾ ನೋಡಿದ್ದೇವೆ. ಅಲ್ಲಿ ಅನೇಕ ಕಡೆ ಕಾರ್ಮಿಕರ ಸ್ಥಿತಿ ನಾನಾ ಸಮಸ್ಯೆಗಳಿಗೆ ಒಳಗಾಗಿವೆ. ಕೌಶಲ್ಯವಿಲ್ಲದವರಿಗೆ ಕೆಲಸ ಇಲ್ಲ ಎಂಬುದು ಕೈಗಾರಿಕೆಗಳ ಸಾಮಾನ್ಯ ನಿಯಮ. ನಮ್ಮಲ್ಲಿ ಹಳೆ ವಿಧಾನದ ಕೃಷಿ ಮಾತ್ರ ತಿಳಿದಿದ್ದವರು ಏನು ಮಾಡಬೇಕು? ತುಂಡು ಭೂಮಿಗಳೆಲ್ಲಾ ಒಂದಾದಾಗ ಉಂಟಾಗುವ ಹೊಸ ಭೂಮಾಲಿಕತ್ವದ ಕ್ರಮ ಕಾರ್ಮಿಕ ಮತ್ತು ಬಂಡವಾಳಿಗಾರರ ಸಂಬಂಧವನ್ನು ಹೇಗೆ ಬದಲಾಯಿಸುತ್ತದೆ? ಹಾಗೆಂದು ಭೂಮಿಯನ್ನು ರಾಷ್ಟ್ರೀಕರಣಗೊಳಿಸಿದರೆ ಉಂಟಾಗುವ ಸಮಸ್ಯೆ ಇನ್ನೂ ಬೇರೆ ರೀತಿಯದು. ಅಲ್ಲಿ ಉತ್ಪಾದನೆ ಕುಸಿಯುವ, ಲಂಚ ರುಶುವತ್ತುಗಳು ಹೆಚ್ಚಾಗುವ ಅಪಾಯವೇ ಹೆಚ್ಚು.

ಆಧುನೀಕರಣ, ಬದಲಾದ ತಂತ್ರಜ್ಞಾನ, ಹೊಸ ಆರ್ಥಿಕ ನೀತಿ ಜಾತಿ ವ್ಯವಸ್ಥೆಗೆ ಬಹು ದೊಡ್ಡ ಏಟುನೀಡುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹೊಸ ವ್ಯವಸ್ಥೆ ಒಂದು ಹೊಸ ಶ್ರೇಣಿ ವ್ಯಸ್ಥೆಯನ್ನು ನಿರ್ಮಾಣ ಮಾಡುತ್ತದೆ. ಆಗ ಅದನ್ನು ಎದುರಿಸಲುಬೇಕಾದ ಚಿಂತನೆಯೂ ಬದಲಾವಣೆಯ ಬಯಕೆಯಲ್ಲೆ ಹುದುಗಿದ್ದರೆ ಚೆನ್ನ.

ನಮ್ಮ ದೇಶಕ್ಕೆ ವಿಜ್ಞಾನ ತಂತ್ರಜ್ಞಾನದ ಮೂಲಕ ಹರಿದು ಬಂತು. ಹಾಗಾಗಿ ವಿಜ್ಞಾನವನ್ನು ಕಟ್ಟುವ ಚಿಂತನೆ ಬೆಳೆಯದೆ ತಂತ್ರಜ್ಞಾನದ ಉಪಯೋಗದ ಲಾಭದತ್ತ ಮಾತ್ರ ಗಮನ ಹರಿಯಿತು. ಹಾಗೆಯೇ ಆರ್ಥಿಕ ಬದಲಾವಣೆ, ಆಧುನೀಕರಣದ ಮೂಲಕ ಸಾಮಾಜಿಕ ಬದಲಾವಣೆ ತರುವಾಗ, ಬದಲಾಗುವ ಆರ್ಥಿಕ ಸಂಬಂಧಗಳ ಬಗ್ಗೆ ಗಮನವಿಲ್ಲದೇ ಹೋದರೆ ನಾವು ಇನ್ನೊಂದು ಸಾಮಾಜಿಕ ಸಮಸ್ಯೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ. ಇಂದು ಕ್ಲಾಸ್ 4 ಕಾರ್ಮಿಕರ ಹೆಚ್ಚಿನ ಕೆಲಸಗಳನ್ನು ಬೆಂಗಳೂರಲ್ಲಿ ಹೊರಗುತ್ತಿಗೆ ನೀಡುತ್ತಿದ್ದಾರೆ. ಹೆಚ್ಚಿನ ಕೈಗಾರಿಕೆಗಳಲ್ಲಿ ಹೀಗೆ ಹೊರಗುತ್ತಿಗೆ ಪಡೆದ ಕಂಪೆನಿಗಳು ಕೈಗಾರಿಕೆಗಳ ಕಕ್ಕಸುಗಳನ್ನು ಸ್ವಚ್ಛಗೊಳಿಸುವ ಕೆಲಸಗಳನ್ನು ಯಾರಿಗೆ ನೀಡುತ್ತಿವೆ ನೋಡಿ. ಅವರ ಜಾತಿ ಗಮನಿಸಿ. ಆಧುನಿಕವಾಗಿ ಕೈಗಳಿಗೆ ಗ್ಲೌಸ್ ಹಾಕಿಕೊಂಡು ಅದೇ ಜಾತಿಯ ಹೆಚ್ಚಿನವರು ಅದೇ ಹಳೆ ಕೆಲಸ ಮಾಡುತ್ತಿದ್ದಾರೆ. ಹೀಗೆ ಆಗದ ಹಾಗೆ ಹೇಗೆ ಮಾಡುವುದು ಎಂಬುದೂ ನಮ್ಮ ಚಿಂತನೆಯ ಭಾಗವಾಗಬೇಕು. ಸರಿಯಾದ ಉತ್ತರ ನನಗೂ ತಿಳಿದಿಲ್ಲ.

ಎಸ್. ಆರ್. ವಿಜಯ ಶಂಕರ್
ಬೆಂಗಳೂರು.

ಮಾರ್ಗದರ್ಶಿ

ಮಾನ್ಯ ಸಂಪಾದಕರಿಗೆ,

ತಮ್ಮ 'ಸಂವಾದ' ಪತ್ರಿಕೆಯಲ್ಲಿ ಸಾಮಾಜಿಕ ಕಾಳಜಿ ಹೊತ್ತ ವೈಚಾರಿಕ ಲೇಖನಗಳನ್ನು ಸ್ವಾಗತಿಸುವೆ. ಭಿನ್ನವಾದ ಒಂದು ವೇದಿಕೆ ಸಂವಾದದ ಮೂಲಕ ಸಿದ್ಧಗೊಂಡಿದೆ. ಏಕೆಂದರೆ ದಲಿತ ಹೋರಾಟದ ರೂಪುರೇಷೆಗಳ ಮಾರ್ಗದರ್ಶಿಯಾಗಿ 'ಸಂವಾದ' ಮಾಸ ಪತ್ರಿಕೆ ಪ್ರಕಟವಾಗುತ್ತಿರುವುದು ಸ್ವಾಗತರ್ಹವೆಂದು ನನ್ನ ಅಭಿಪ್ರಾಯ. ಈ 'ಸಂವಾದ' ದೀನ-ದಲಿತರ ಬಡವರ ನೋವುಗಳಿಗೆ ಕಷ್ಟಗಳಿಗೆ ಸ್ಪಂದಿಸಿ, ಪ್ರಜ್ಞೆ ಮೂಡಿಸಲು ಮಾರ್ಗದರ್ಶಿಯಾಗಿದೆ. ಹಾಗೂ ಈ ಕೊಳಕು ಸಮಾಜದಿಂದ ಹೊರಬಂದು ಪ್ರೀತಿ, ಸಮಾನತೆ, ಸ್ವಾತಂತ್ರ್ಯವಿರುವ ಸಮಾಜವನ್ನು ರೂಪಿಸುವಲ್ಲಿ ಹಾಗೂ ದೀನ-ದಲಿತರ ಏಳಿಗೆಗೆ ದಾರಿದೀಪವಾಗಿ ಎಲ್ಲರಿಗೂ ತಲುಪುವಂತಾಗಲಿ ಹಾಗೂ 'ಸಂವಾದ' ಯಾವಾಗಲೂ ಯಶಸ್ಸಿನ ಹಾದಿಯಲ್ಲಿರಲಿ ಎಂದು ಹಾರೈಸುತ್ತೇನೆ. ಹಾಗೇನೆ ಇಂದಿನ ಜನತೆಯಲ್ಲಿ ಅಸಮಾನತೆ ತೊಲಗಿಸಲು ಶೋಷಣೆಗಳ ವಿರುದ್ಧ ಹೋರಾಡಲು, ದಲಿತರ ಪ್ರಗತಿಗಾಗಿ ಶ್ರಮಿಸುವ ರಕ್ಷಣಾ ಮಾರ್ಗ ತೋರಿಸುವ ದಾರಿದೀಪವಾಗಿ ತಮ್ಮ ಪತ್ರಿಕೆ ಮೂಡಿಬರಲಿ ಎಂದು ಆಶಿಸುತ್ತೇನೆ.

ರಮ್ಯ.ಜಿ
ಬೆಂಗಳೂರು

ಮಧ್ಯಮ ಮಾರ್ಗದ ವಿಶಿಷ್ಟ 'ಸಂವಾದ'

ಮಾನ್ಯ ಸಂಪದಾಕರಿಗೆ,

ಸಂವಾದ ಓದುತ್ತಿದ್ದೇನೆ. ಚೆನ್ನಾಗಿ ತರುತ್ತಿದ್ದೀರಿ. ಜವಾಬ್ದಾರಿಯುತವಾಗಿ ತರುತ್ತಿದ್ದೀರಿ. ಎಡಪಂಥ, ಸಾಮಾಜಿಕ ನ್ಯಾಯ, ಜನಪರ ಚಳುವಳಿಗಳು ಇವುಗಳೆಲ್ಲ ಹಲವು ಟಿಸಿಲುಗಳಲ್ಲಿ ಒಡೆದು, ಬೆಳೆದು, ಗೊಂದಲವನ್ನುಂಟು ಮಾಡುತ್ತಿರುವ ಸಂದರ್ಭದಲ್ಲಿ ಮಧ್ಯಮಮಾರ್ಗವನ್ನು ಕ್ರಮಿಸುವುದು ಸುಲಭವಲ್ಲ. ಎಸ್.ಎಸ್.ಹಿರೇಮಠರ ಬಗ್ಗೆ (ರಹಮತ್ ತರೀಕೆರೆ) ಲೇಖನ ಪ್ರಕಟಿಸಿ, ಒಳ್ಳೆಯ ಕೆಲಸ ಮಾಡಿದಿರಿ.

ಪ್ರಸನ್ನ, ಹೆಗ್ಗೋಡು

ಮಾನ್ಯ ಸಂಪಾದಕರಿಗೆ,

ನಮಸ್ಕಾರಗಳು. 'ಸಂವಾದ' ಪತ್ರಿಕೆಯನ್ನು ನಿರಂತರವಾಗಿ ಓದುತಿದ್ದೇನೆ. ಇಲ್ಲಿನ ಅನೇಕ ಬರಹಗಳ ಸೂಕ್ಷ್ಮತೆ ಮತ್ತು ನೈತಿಕ ನಿಲುವುಗಳಿಂದ ನಾನು ಕಲಿತ್ತಿದ್ದೇನೆ.

ತಕ್ಷಣಕ್ಕೆ ನೆನಪಾಗುತ್ತಿರುವ ನಾಮದೇವ ಢಸಾಳರ ಕುರಿತು ಬಂದ ಬರಹ ವಿಶಿಷ್ಟವಾಗಿತ್ತು. 'ದಲಿತ್ ಡೈರಿ' ದಲಿತ ಚಿಂತನೆಯ ನೆಲೆಗಳನ್ನು ಬೆಳೆಸುತ್ತಿದೆ.

ವಿಕ್ರಮ ವಿಸಾಜಿ,
ಸೊಂಡೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೩೫೦/-	ರೂ.೭೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಖೈರ್ಲಾಂಜಿ
ಮೂಲ: ಆನಂದ್ ತೇಲ್ ತುಂಬ್ಡೆ
ಸಂ: ಶಿವಸುಂದರ್
ಬೆಲೆ: 200/-

ಸ್ವಾತಂತ್ರ್ಯೋತ್ತರ ಭಾರತದ ಅತ್ಯಂತ ಹೀನಾಯ ಜಾತಿ ದೌರ್ಜನ್ಯವೊಂದನ್ನು ಇಲ್ಲಿ ನಿರೂಪಿಸಲಾಗಿದೆ. ಜತೆಯಲ್ಲೇ ಸಾಮಾಜಿಕ, ರಾಜಕೀಯ, ಪ್ರಭುತ್ವಗಳು, ಪೊಲೀಸರು, ಸಮೂಹ ಮಾಧ್ಯಮಗಳು ಮತ್ತು ನ್ಯಾಯಾಂಗಗಳು ಎಲ್ಲವೂ ಒಂದಾಗಿ ಇಂಥ ದೌರ್ಜನ್ಯಗಳು ಸಂಭವಿಸುವಂಥ ವಾತಾವರಣವನ್ನು ಸೃಷ್ಟಿಸಿದವು ಮತ್ತು ಅವುಗಳನ್ನು ಮುಚ್ಚಿಹಾಕಲು ಪ್ರಯತ್ನಿಸಿದವು ಎಂಬುನ್ನು ವಿವರಿಸುತ್ತದೆ. ಓದಲೇಬೇಕಾದ ಅಪರೂಪದ ಪುಸ್ತಕ ಇದು.

ಪ್ರಕಾಶಕರು : ಲಂಕೇಶ್ ಪ್ರಕಾಶನ ಬೆಂಗಳೂರು-560 004





ನಿರಂತರ
ಬಿ.ವಿ.ಕಕ್ಕಿಲ್ಲಾಯ ಸಂಭಾವನಾ ಗ್ರಂಥ
ಬೆಲೆ: ರೂ.300/-

90 ತುಂಬಿದ ಭಾರತ ಕಮ್ಯೂನಿಸ್ಟ್ ಪಕ್ಷದ ನಾಯಕ, ಮುತ್ಸದ್ದಿ ಸಂಗಾತಿ ಬೇವಿಂಜೆ ವಿಷ್ಣು ಕಕ್ಕಿಲ್ಲಾಯ (ಬಿವಿಕೆ) ಅವರಿಗೆ, ಅವರ ಅಭಿಮಾನಿ ವಿದ್ವಜ್ಜನ ಅರ್ಪಿಸುತ್ತಿರುವ ಮೆಚ್ಚಿಗೆಯ ಕಾಣಿಕೆಯೇ ಈ ನಿರಂತರ. ಈ ಗ್ರಂಥದಲ್ಲಿ ಅನೇಕ ಪ್ರಗತಿಶೀಲ ವಿದ್ವಾಂಸರು ಮೌಲಿಕ ಲೇಖನಗಳನ್ನು ನೀಡಿ ನುಡಿ ನಮನವನ್ನು ಸಲ್ಲಿಸಿದ್ದಾರೆ. ನಿರಂತರದ ತುಂಬ ಗಂಭೀರವಾದ ಬರಹಗಳು ತುಂಬಿದ್ದು, ಹೆಸರಾಂತ ವಿದ್ವಜ್ಜನರು ನೀಡಿರುವ ಮಹತ್ವದ ಕಾಣಿಕೆ ಹಾಗೂ ಕಕ್ಕಿಲ್ಲಾಯರ ಕೆಲವು ಭಾಷಣಗಳನ್ನು, ಲೇಖನಗಳನ್ನೂ, ಅವರ ಬಗ್ಗೆ ಅಭಿಮಾನಿಗಳು ಬರೆದ ಅಭಿನಂದನಾ ಬರಹಗಳನ್ನೂ ಒಳಗೊಂಡಿದೆ.

ಪ್ರಕಾಶಕರು: ಎಂ.ಎಸ್.ಕೃಷ್ಣನ್ ಸ್ಮರಣ ಸಂಸ್ಥೆ (ನೋಂ.), ಬೆಂಗಳೂರು-1



ಹೊಸ ಪುಸ್ತಕ

ತಳಮಳದ ಹಾದಿ
ಲೇ: ಡಾ. ಆನಂದ್ ಋಗ್ವೇದಿ
ಬೆಲೆ: 80/-

ಸಾಹಿತ್ಯ ಅಧ್ಯಯನದ ತಳಮಳದ ಹಾದಿಯಲ್ಲಿ ಲೇಖಕ ಬರೆದಿಟ್ಟುಕೊಂಡ , ಬರೆಸಲ್ಪಟ್ಟ ವಿವಿಧ ವೇದಿಕೆಗಳಲ್ಲಿ ಮಂಡಿಸಿದ ಸಾಹಿತ್ಯಿಕ, ವಿಮರ್ಶಾತ್ಮಕ ಟಿಪ್ಪಣೆಗಳ ಸಂಕಲಲವೇ ಈ ಕೃತಿ. ಈ ಟಿಪ್ಪಣಿಗಳ ಮೂಲಕ ತಳಮಳದ ಹಾದಿಯಲ್ಲಿರುವ ಲೇಖಕನೊಬ್ಬನ ಮುಖಾಮುಖಿಗಳು ಅನಾವರಣಗೊಳ್ಳುತ್ತವೆ. ಇಲ್ಲಿನ ಬರಹಗಳು ಕೇವಲ ಒಬ್ಬ ಬರಹಗಾರನ ತಳಮಳಗಳಾಗದೆ ಅಸಂಖ್ಯಾತ ಬರಹಗಾರರ ತಳಮಳಗಳೂ ಆಗಿರುವುದು ಈ ಕೃತಿಯ ವಿಶೇಷ. ಹೊಸ ಶೋಧದ ಚಡಪಡಿಕೆ ಈ ಕೃತಿಗೆ ಮಹತ್ವವನ್ನು ತಂದು ಕೊಟ್ಟಿದೆ.

ಪ್ರಕಾಶನ: ಪಲ್ಲವ ಪ್ರಕಾಶನ ಚನ್ನಪಟ್ಟಣ

ಎರಡು ನಾಟಕಗಳು
ಲೇ: ಡಾ॥ ವಿಜಯಶ್ರೀ ಸಬರದ
ಬೆಲೆ: ರೂ.80/-

'ಉರಿಲಿಂಗಪೆದ್ದಿ' ಮತ್ತು 'ಹೂವಿನ ತೇರನ್ನೇರಿ ಹೂವಾದವರು' ಎಂಬ ಎರಡು ನಾಟಕಗಳ ಸಂಕಲನ ಇದು. ಎರಡೂ ನಾಟಕಗಳಲ್ಲಿ ನಾಟಕಕಾರರ ಪ್ರಗತಿಪರ ಸಾಮಾಜಿಕ ಚಿಂತನೆಗಳು ವ್ಯಕ್ತವಾಗಿವೆ. ಕಳ್ಳನಾಗಿದ್ದ ಪೆದ್ದಣ್ಣ ಉರಿಲಿಂಗದೇವರ ಕೃಪೆ ಹಾಗೂ ಪತ್ನಿ ಕಾಳವ್ವೆಯ ಪ್ರೇರಣೆಯಿಂದ ಶರಣನಾಗುವುದು ಮನೋಜ್ಞವಾಗಿ ಮೂಡಿಬಂದಿದೆ. 'ಹೂವಿನ ತೇರನ್ನೇರಿ ಹೂವಾದವರು' ನಾಟಕ ಶರಣರ ಚಿಂತನೆಯನ್ನು ಕ್ರೋಡಿಕರಿಸಿ ಉತ್ತಮ ಸಂದೇಶವನ್ನು ಪ್ರೇಕ್ಷರಿಗೆ ನೀಡುತ್ತದೆ.

ಪ್ರಕಾಶನ: ಪಲ್ಲವಿ ಪ್ರಕಾಶನ ಗುಲಬರ್ಗಾ



ಸ್ವಾತಂತ್ರದೆಡೆಗೆ ನಿಲ್ಲದ ನಡಿಗೆ
ಕರ್ನಾಟಕ ಜನಪರ ವೇದಿಕೆ
ಬೆಲೆ: 30/-

'ಹಳೇ ಬೇರು ಹೊಸ ಚಿಗುರು' ಎಂಬ ಕಾರ್ಯಕ್ರಮದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಸಂದರ್ಶನಗಳನ್ನು ನಡೆಸಿ, ಈ ಪುಸ್ತಕ ಹೊರತಂದಿದ್ದಾರೆ. ಈ ಕೃತಿಯಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಹಿರಿಯ ಸ್ವಾತಂತ್ರ ಹೋರಾಟಗಾರರ ಹಿನ್ನೆಲೆ ಹಾಗೂ ಅವರ ಅನಿಸಿಕೆ ಅಭಿಪ್ರಾಯಗಳು ಪ್ರಕಟಗೊಂಡಿವೆ. ಎರಡನೇ ಭಾಗದಲ್ಲಿ ಸ್ವಾತಂತ್ರ ಹೋರಾಟ, ಹಾಗೂ ಇವತ್ತಿನ ತಲೆಮಾರಿನ ಅಭಿಪ್ರಾಯ ಮತ್ತು ಬದ್ಧತೆಗಳು ಮುಂದಿನ ಹೋರಾಟದ ಹಾದಿಗೆ ಹೇಗೆ ದೀವಿಗೆಗಳಾಗಬೇಕು ಎಂಬ ಆಶಯಗಳಿವೆ.

ಪ್ರಕಟಣೆ: ಕರ್ನಾಟಕ ಜನಪರ ವೇದಿಕೆ, ಮಂಡ್ಯ



ಗುಲಾಮಗಿರಿ
ಕನ್ನಡಕ್ಕೆ : ಸೂರ್ಯಕಾಂತ ಸುಜ್ಯಾತ್
ಬೆಲೆ: ರೂ.70/-

ಮೂಲ ಮರಾಠಿಯಲ್ಲಿರುವ ಈ ಕೃತಿಯನ್ನು ಸುಂದರವಾಗಿ ಕನ್ನಡಕ್ಕೆ ಅನುವಾದಿಸಲಾಗಿದೆ. 'ಗುಲಾಮಗಿರಿ' ಸಂಭಾಷಣೆಯ ರೂಪದಲ್ಲಿರುವ ಒಂದು ಕ್ರಾಂತಿಕಾರಿ ಗ್ರಂಥ. ಅಧುನಿಕ ಭಾರತದ ನಿರ್ಮಾಪಕರಲ್ಲಿ ಮಹತ್ಮಾ ಜ್ಯೋತಿಬಾ ಫುಲೆಯವರ ಹೆಸರು ಬಹು ಗಮನಾರ್ಹವಾದದ್ದು. ಜ್ಯೋತಿಬಾ ಫುಲೆಯವರು ಭಾರತೀಯ ಗೊಡ್ಡು ಸಂಪ್ರದಾಯಗಳ ವಿರುದ್ಧ ಸೆಡ್ಡು ಹೊಡೆದು ನಿಂತದ್ದು, ಅಂದಿನ ಬ್ರಾಹ್ಮಣ್ಯ ಮತ್ತು ಅವರ ಧೈರ್ಯ ಧೀಮಂತಿಕೆಗೆ ಜ್ವಲಂತ ಸಾಕ್ಷಿ. ಸಾಮಾಜಿಕ ಹೋರಾಟಗಾರರಿಗೆ ಈ ಕೃತಿ ಒಂದು ಉತ್ತಮ ಕೈಪಿಡಿ.

ಪ್ರಕಾಶಕರು : ಸುಮೇಧ ಪ್ರಕಾಶನ ಗುಲಬರ್ಗಾ

ಸಂಪಾದಕೀಯ

ಅಂತರಂಗ

ಗ್ರಾಮೀಣ ಮಕ್ಕಳು ಪ್ರಯೋಗ ಪಶುಗಳೇ?

ಶಾಲೆಗಳು ಆರಂಭವಾಗಿವೆ. ಸರ್ಕಾರಿ ಶಾಲೆಗಳ ಮಕ್ಕಳಿಗೆ ಸರ್ಕಾರ ಮೊಟ್ಟ ಮೊದಲ ಬಾರಿಗೆ ಸಕಾಲದಲ್ಲಿ ಬಟ್ಟೆ, ಪುಸ್ತಕ ವಿತರಣೆ ಮಾಡಿ ಶಭಾಷ್‌ಗಿರಿ ಪಡೆದಿದೆ. ಸರ್ವ ಶಿಕ್ಷಣ ಅಭಿಯಾನದ ಮೂಲಕ ಕೇಂದ್ರ ಸರ್ಕಾರ ಸರ್ಕಾರಿ ಶಾಲೆಗಳಿಗೆ ಹಣದ ಹೊಳೆಯನ್ನೇ ಹರಿಸುತ್ತಿರುವುದರಿಂದ, ಮುರಿದು ಬಿದ್ದ ಕೆಲವು ಶಾಲೆಗಳಾದರೂ ಸುಣ್ಣ ಬಣ್ಣ ಬಳಿದುಕೊಂಡು ಶಾಲೆಗಳಂತೆ ಕಾಣುತ್ತಿವೆ. ಮಕ್ಕಳಿಗೆ ಮತ್ತು ಪೋಷಕರಿಗೆ ಸರ್ಕಾರಿ ಶಾಲೆಗಳ ಬಗ್ಗೆ ಆಸಕ್ತಿ ಮೂಡಲು ಆರಂಭವಾಗಿದೆ.

ಮೇಲ್ನೋಟಕ್ಕೆ ಈ ಬೆಳವಣಿಗೆಗಳು ಆಕರ್ಷಕ ಹಾಗೂ ಆಶಾದಾಯಕವಾಗಿ ಕಂಡರೂ ಒಳಗಿನ ಸಮಸ್ಯೆಗಳು ಮಾತ್ರ ಬಿಗಡಾಯಿಸುತ್ತಲೇ ಇವೆ. ಗ್ರಾಮೀಣ ಪ್ರದೇಶದ ಮಕ್ಕಳಿಗೂ, ನಗರ ಪ್ರದೇಶದ ಮಕ್ಕಳಿಗೂ ಇರುವ ಶೈಕ್ಷಣಿಕ ಅಂತರ ಮಾತ್ರ ಬೆಳೆಯುತ್ತಲೇ ಹೋಗುತ್ತಿದೆಯೇ ಹೊರತು, ಕಡಿಮೆ ಆಗುತ್ತಿಲ್ಲ. ದೇಶದ ಎಲ್ಲ ಅಸಮಾನತೆಗಳಂತೆ ಶೈಕ್ಷಣಿಕ ಅಸಮಾನತೆ ಕೂಡ ಮಿತಿಮೀರಿ ಬೆಳೆಯುತ್ತಿದೆ. ಹಣವಂತರ ಖಾಸಗಿ ಶಾಲೆಗಳಲ್ಲಿನ ಶಿಕ್ಷಣ ಕ್ರಮ ಒಂದು ಬಗೆಯದಾದರೆ, ಬಡವರು ಮತ್ತು ಗ್ರಾಮೀಣ ಪ್ರದೇಶದ ಜನರ 'ಸರ್ಕಾರಿ ಶಿಕ್ಷಣ' ಮತ್ತೊಂದು ಬಗೆಯದಾಗಿದ್ದು, ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿ ಬೆಳೆಸುವ ಅವಿವೇಕ ಸರ್ಕಾರದಿಂದಲೇ ನಡೆಯುತ್ತಿದೆ.

ಹವಾನಿಯಂತ್ರಿತ ಮತ್ತು ಪ್ರತಿಷ್ಠಿತ ಇಂಗ್ಲಿಷ್ ಶಾಲೆಗಳ ಭರಾಟೆ ಒಂದು ಕಡೆಯಾದರೆ, ಕುಳಿತುಕೊಳ್ಳುವ ನೆಲವೂ ಸರಿಯಿಲ್ಲದ, ಮುರಿದ ದನದ ಕೊಟ್ಟಿಗೆಯಂಥ ಸರ್ಕಾರಿ ಶಾಲೆಗಳು ಇನ್ನೊಂದು ಕಡೆ ನಾಗರಿಕ ಸಮಾಜವನ್ನು ಅಣಕಿಸುತ್ತಿವೆ. ವಿಚಿತ್ರ ಎಂದರೆ, ಪ್ರತಿಯೊಂದು ಹೊಸ ಸರ್ಕಾರ ಅಥವಾ ಪ್ರತಿಯೊಬ್ಬ ಹೊಸ ಶಿಕ್ಷಣ ಸಚಿವರು ಬಂದಾಗಲೆಲ್ಲಾ ಹೊಸ ಹೊಸ ಯೋಜನೆಗಳು ಪ್ರಕಟಗೊಳ್ಳುತ್ತಲೇ ಇವೆ. ಅಂಥ ಯೋಜನೆಗಳಿಗಾಗಿ ಜನ ಸಾಮಾನ್ಯನ ಕೋಟಿಗಟ್ಟಲೆ ತೆರಿಗೆಯ ಹಣವೂ ಖರ್ಚಾಗುತ್ತಿದೆ. ಆದರೆ ಪ್ರತಿ ಫಲವೇನು?

ಸಮಾನತೆಯ ಬುನಾದಿಯೇ ಇಲ್ಲದ ಸರ್ಕಾರದ ಶಿಕ್ಷಣ ನೀತಿಯಿಂದಾಗಿ ಈ ಎಲ್ಲ ಯೋಜನೆಗಳು ವಿಫಲವಾಗುತ್ತಿವೆ. ಸಮಾನ ಶಿಕ್ಷಣ, ಸಮಾನ ಅವಕಾಶಗಳ ಬಗ್ಗೆ ಎಲ್ಲ ಸರ್ಕಾರಗಳೂ ಬರೀ ಬುರುಡೆ ಬಿಡುತ್ತಿವೆಯೇ ಹೊರತು ಪ್ರಾಮಾಣಿಕವಾಗಿ ಅವುಗಳನ್ನು ಜಾರಿಗೆ ತರುವ ಬದ್ಧತೆಯನ್ನು ಪ್ರದರ್ಶಿಸುತ್ತಿಲ್ಲ. ಸರ್ಕಾರಗಳ ಇಂಥ ನಡತೆಗಳನ್ನು ಗಮನಿಸಿದರೆ, ಅವುಗಳಿಗೆ ನಿಜವಾಗಿಯೂ ಸಮಾನ ಶಿಕ್ಷಣ ನೀಡುವ, ಸಮಾನತೆಯನ್ನು ಸಾಧಿಸುವ ಉದ್ದೇಶವೇ ಇಲ್ಲವೆನ್ನುವ ಅನುಮಾನ ಮೂಡುತ್ತದೆ. ಸರ್ವಶಿಕ್ಷಣ ಅಭಿಯಾನ ಆರಂಭವಾದ ನಂತರ ಸರ್ಕಾರಿ ಶಾಲೆಗಳೆಲ್ಲ ಉದ್ಧಾರವಾಗಿಯೇ ಬಿಟ್ಟವು ಎಂಬ ಭ್ರಮೆಯನ್ನು ಜನರಲ್ಲಿ ಬಿತ್ತಲಾಗುತ್ತಿದೆ.

ಆದರೆ ಸತ್ಯಾಂಶವೇ ಬೇರೆಯಾಗಿದೆ. ಆರಂಭದಲ್ಲಿ ಬಟ್ಟೆ, ಪುಸ್ತಕ, ಬಿಸಿಯೂಟ ಇತ್ಯಾದಿಗಳ ಆಕರ್ಷಣೆಗಾಗಿ ಮಕ್ಕಳ ಪ್ರವೇಶ ಸಂಖ್ಯೆ ಹೆಚ್ಚಿದಂತೆ ಕಾಣುತ್ತದೆಯಾದರೂ, ಓದಿನ ನಡುವೆ ಶಾಲೆ ಬಿಡುವ ಮಕ್ಕಳ ಸಂಖ್ಯೆಯಲ್ಲಿ ಇಳಿತವೇನೂ ಕಂಡು ಬಂದಿಲ್ಲ. ಶಿಕ್ಷಣ ಮಟ್ಟವೂ ಸುಧಾರಣೆಯಾಗಿಲ್ಲ. ಆದರೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾತ್ರ ಸೊಂಪಾಗಿ ಬೆಳೆಯುತ್ತಿದ್ದಾರೆ. ಜಡ್ಡು ಹಿಡಿದ ಶಿಕ್ಷಕರಿಂದ ಹಿಡಿದು ಎಲ್ಲ ಶ್ರೇಣಿಯ ಅಧಿಕಾರಿಗಳೂ ಸರ್ವಶಿಕ್ಷಣ ಅಭಿಯಾನದ ಹಣದ ಖರ್ಚು-ವೆಚ್ಚ ತೋರಿಸುವುದರಲ್ಲಿ ಮಗ್ನರಾಗಿರುವುದನ್ನು ಬಿಟ್ಟರೆ ಗುಣಾತ್ಮಕ ಶಿಕ್ಷಣ ಕ್ರಮವನ್ನು ಜಾರಿಗೆ ತರುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆಂದೇ ಶಿಕ್ಷಣ ವಲಯದಲ್ಲಿ ಚರ್ಚೆಯಾಗುತ್ತಿದೆ. ಸರ್ಕಾರದ ಯೋಜನೆಗಳಲ್ಲಿ ಹೇಗೆ ತಮ್ಮ ಉದ್ದೇಶಗಳಲ್ಲಿ ವಿಫಲವಾಗುತ್ತವೆ ಎಂಬುದಕ್ಕೆ ಇದು ಇತ್ತೀಚಿನ ಉದಾಹರಣೆ.

ಇನ್ನು ಸರ್ಕಾರದ ಭಾಷಾನೀತಿ. ಭಾಷಾ ನೀತಿ ಹೆಸರಿನಲ್ಲಿ ಸರ್ಕಾರ ಮಾಡಿಕೊಂಡಿರುವ ಅವಘಡ ಒಂದೆರಡಲ್ಲ. 1994ರಲ್ಲಿ ಜಾರಿಗೆ ತರಲಾದ ಭಾಷಾನೀತಿಯಿಂದ ಯಾರಿಗೆ ಲಾಭವಾಗಿದೆ ಎಂದು ನೋಡಿದರೆ ಕನ್ನಡಿಗರೆಲ್ಲ ಮುಖ ಮುಚ್ಚಿಕೊಳ್ಳ ಬೇಕಾಗುತ್ತದೆ. ಭಾಷಾ ನೀತಿಯಿಂದಾಗಿ ಖಾಸಗಿ ಶಾಲೆಗಳು ನಿರಾತಂಕವಾಗಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಮುಂದುವರೆಸಿದರೆ, ಸರ್ಕಾರಿ ಶಾಲೆಗಳು ಮಾತ್ರ ಕನ್ನಡ ಮಾಧ್ಯಮದಲ್ಲಿ ಪಾಠ ಮಾಡುವಂತಾಗಿದೆ.

ಇಂಗ್ಲೀಷ್ ಮಾಧ್ಯಮಕ್ಕೆ ಸರ್ಕಾರ ಅನುಮತಿ ನಿರಾಕರಿಸುವುದನ್ನು ಮನಗಂಡ ಖಾಸಗಿ ಶಾಲೆಗಳ ಕ್ಯಾಪಿಟೇಷನ್ ತಜ್ಞರು CBSC ಮತ್ತು ICSC ಹೆಸರಿನಲ್ಲಿ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ಸುಲಭವಾಗಿ ಆರಂಭಿಸಿದ್ದಾರೆ. ರಾಜ್ಯದಿಂದ ರಾಜ್ಯಕ್ಕೆ ವರ್ಗಾವಣೆಗೊಳ್ಳುವ ಕೇಂದ್ರ ಸರ್ಕಾರಿ ನೌಕರರಿಗಾಗಿ ಆರಂಭವಾದ ಈ ಶಾಲೆಗಳು ರಾಜ್ಯ ಸರ್ಕಾರದ ಭಾಷಾ ನೀತಿಯ ದುರ್ಲಾಭ ಪಡೆದುಕೊಂಡು ನಾಯಿಕೊಡೆಗಳಂತೆ ಎಲ್ಲೆಂದರಲ್ಲಿ ತಲೆ ಎತ್ತುತ್ತಿವೆ. ಕನ್ನಡ ಮಾಧ್ಯಮದ ಬಗ್ಗೆ ಬುರುಡೆ ಬಿಡುವ ಸರ್ಕಾರವೇ ಇಂಥ ಶಾಲೆಗಳ ಅನುಮತಿಗೆ ಅವಕಾಶ ಮಾಡಿಕೊಟ್ಟ ದ್ವಂದ್ವ ನೀತಿ ಅನುಸರಿಸುತ್ತಿದೆ. ಸರ್ಕಾರದ ಭಾಷಾ ನೀತಿ ಎಷ್ಟೊಂದು ಢೋಂಗಿ ಎಂಬುದಕ್ಕೆ ಇವಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ.

ಸರ್ಕಾರಿ ಶಾಲೆಯಲ್ಲಿ ಮಗುವೊಂದು ಕನ್ನಡ ಮಾಧ್ಯಮದಲ್ಲಿ ಕಲಿತರೆ, ಬೆಂಗಳೂರಿನ ಪ್ರತಿಷ್ಠಿತ ಶಾಲೆಯಲ್ಲೂ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ನೀಡಬೇಕು. ಒಂದು ಕಡೆ ಉಳ್ಳವರ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಯಲು ಅವಕಾಶ ನೀಡಿ, ಬಡವರ ಮಕ್ಕಳಿಗೆ ಕನ್ನಡದಲ್ಲೇ ಕಲಿಯಿರಿ ಎಂದು ಕಡ್ಡಾಯ ಮಾಡುವುದು ಸರ್ಕಾರವೇ ಮಾಡುತ್ತಿರುವ ವ್ಯವಸ್ಥಿತ ಮೋಸವಾಗುತ್ತದೆ. ಆ ಮೋಸವನ್ನು ಭಾಷಾನೀತಿ ಮುಂತಾದ ಭಾವನಾತ್ಮಕ ಭ್ರಮೆಯಲ್ಲಿ ಬಡಜನರ ಮೇಲೆ ಹೇರುವುದು ಅತ್ಯಂತ ನೀಚತನವಾಗಿದೆ. ಭಾಷಾನೀತಿ ನಾಡಿನ ಎಲ್ಲ ಶಾಲೆಗಳಿಗೂ ಅನ್ವಯವಾಗಬೇಕೇ ಹೊರತು ಕೆಲವರಿಗೆ ಮಾತ್ರವಲ್ಲ!

ಭಾಷಾ ನೀತಿ ಜಾರಿಗೆ ತರುವಲ್ಲಿ ಹಲವು ಅಡಚಣೆಗಳಿವೆ. ಸಂವಿಧಾನ, ನ್ಯಾಯಾಂಗಗಳು ಇಂಥದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಕಳೆದ 15ವರ್ಷಳಿಂದಲೂ ಈ ವಿವಾದ ಇತ್ಯರ್ಥಗೊಳ್ಳದೆ ಹಾಗೇ ಉಳಿದಿದೆ. ಇದನ್ನು ಇತ್ಯರ್ಥಗೊಳಿಸಲು ಸರ್ಕಾರ ಪ್ರಮಾಣಿಕ ಪ್ರಯತ್ನವನ್ನೂ ಮಾಡುತ್ತಿಲ್ಲ. ಹಾಗಾಗಿ ಸರ್ಕಾರದ ಉದ್ದೇಶಗಳೇ ಪ್ರಶ್ನಾರ್ಹವಾಗಿವೆ.

ಕಲಿಕೆಯ ಪದ್ಧತಿ ಅಳವಡಿಸಿಕೊಳ್ಳುವಲ್ಲಿ ಕೂಡ ಸರ್ಕಾರಿ ಶಾಲೆಗಳು ಸರಿಯಾದ ಕ್ರಮ ಅನುಸರಿಸುತ್ತಿಲ್ಲ. ಸರ್ಕಾರ ಯಾವುದೇ ಬರಲಿ, ಮಂತ್ರಿ ಯಾರೇ ಆಗಲಿ ಶಿಕ್ಷಣ ನೀತಿ ಮಾತ್ರ ಸಮಗ್ರವಾಗಿರಬೇಕು ಮತ್ತು ಸಮಾನವಾಗಿರಬೇಕೆಂಬ ನೀತಿಯನ್ನು ಅಳವಡಿಸಿಕೊಳ್ಳದಿದ್ದರೆ, ಅಸಮಾನ ವ್ಯವಸ್ಥೆಗೆ ಸರ್ಕಾರವೇ ಹೊಣೆಗಾರನಾಗಬೇಕಾಗುತ್ತದೆ.

○ ಇಂದೂಧರ ಹೊನ್ನಾಪುರ

ಜಾತಿ ರಾಜಕಾರಣ ಚರ್ಚೆ: ಸಮಾಜ ಶಾಸ್ತ್ರೀಯ ಸಮಸ್ಯೆ

ಸಂಪಾದಕರೊಡನೆ ಸಂವಾದ

ಕಿರಣ್ ಎಂ, ಗಾಜನೂರು

ಕಳೆದ ತಿಂಗಳ ಸಂವಾದ ಪತ್ರಿಕೆಯಲ್ಲಿ ಪ್ರಕಟಗೊಂಡ ಡಾ.ಜೆ.ಸೋಮಶೇಖರ್‌ರವರ ಜಾತಿ ವ್ಯವಸ್ಥೆ ಮತ್ತು ರಾಜಕಾರಣ ಎಂಬ ಲೇಖನ ವಿದ್ವತ್‌ಪೂರ್ಣವಾಗಿದೆ ಎನ್ನಿಸಿದರೂ ಆ ಲೇಖನ ಜಾತಿ ಮತ್ತು ರಾಜಕಾರಣ ಕುರಿತಾದಂತಹ ಇತ್ತೀಚಿನ ವಾಗ್ವಾದಗಳ ಕಡೆಗೆ ಹೆಚ್ಚು ಆಸಕ್ತಿ ಹೊಂದಿದೆ ಎಂದು ಅನಿಸುವುದಿಲ್ಲ. ನಾವು ಭಾರತದ ಸಂದರ್ಭದಲ್ಲಿನ ಜಾತಿ ಮತ್ತು ರಾಜಕಾರಣದ ಕುರಿತಾದ ಚರ್ಚೆಯನ್ನು ಗಮನಿಸಿದರೆ ಬಹುಪಾಲು ರಾಜಕೀಯ ಚಿಂತಕರು ಮತ್ತು ವಿದ್ವಾಂಸರು ಜಾತಿಯ ಕುರಿತಾದ ಸಮಾಜಶಾಸ್ತ್ರೀಯ ವಿವರಣೆಯನ್ನು ಒಪ್ಪಿ ರಾಜಕಾರಣವನ್ನು (politics) ವಿವರಿಸಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಸೋಮಶೇಖರ್‌ರವರ ಲೇಖನವು ಜಾತಿ ಕುರಿತಾದ ಸಮಾಜಶಾಸ್ತ್ರೀಯ ವಿವರಣೆಯನ್ನು ಒಪ್ಪಿಕೊಂಡು ರಾಜಕಾರಣವನ್ನು ಚರ್ಚೆಗೆ ಎಳೆಯುತ್ತದೆ. ಆದರೆ ಪ್ರಸ್ತುತ ಹಲವು ಸಂಶೋಧನೆಗಳು ಪ್ರಗತಿಯಲ್ಲಿದ್ದು ಜಾತಿಯ ಕುರಿತಾದ ಸಮಾಜ ಶಾಸ್ತ್ರೀಯ ವಿವರಣೆಯನ್ನು ಪ್ರಶ್ನೆಗೊಡ್ಡುತ್ತೀವೆ. ಆ ಎಲ್ಲಾ ಸಂಶೋಧನೆಗಳ ಗುಣಾತ್ಮಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭಾರತದ ಸಂದರ್ಭದಲ್ಲಿನ ಜಾತಿ ರಾಜಕಾರಣದ ಕುರಿತಾದ ಲೇಖನಕ್ಕೆ ಪ್ರತಿಕ್ರಿಯೇ ನೀಡಬಯಸುತ್ತೇನೆ.

ಡಾ. ಸೋಮಶೇಖರ್‌ರವರು ತಮ್ಮ ಇಡೀ ಲೇಖನದಲ್ಲಿ ಭಾರತದ ರಾಜಕೀಯ ಸಮಾಜದಲ್ಲಿ ಜಾತಿಯೇ ಕೇಂದ್ರಬಿಂದು ಎಂದು ವಿವರಿಸುತ್ತಾ ಪ್ರಜಾಸತ್ತಾತ್ಮಕ ರಾಜಕೀಯದ ಮೂಲ ತತ್ವವಾದ ರಾಜಕೀಯ ಸಮಾನತೆಗೆ ಜಾತಿ ವ್ಯವಸ್ಥೆ ಅಡ್ಡಿಯಾಗಿದೆ ಎಂದು ಪ್ರತಿಪಾದಿಸುತ್ತಾರೆ. ಅಲ್ಲದೆ ಜಾತಿ ಆಧಾರಿತ ಸಾಮಾಜಿಕ ಅಸಮಾನತೆ ಭಾರತದಲ್ಲಿರುವುದರಿಂದ ರಾಜಕೀಯ ಮತ್ತು ಆರ್ಥಿಕ ಪ್ರಭುತ್ವಗಳು ಕನಸಾಗಿವೆ ಎಂದು ನಂಬುತ್ತಾರೆ. ಅಲ್ಲದೇ ಪ್ರಜಾಪ್ರಭುತ್ವದ ಯಶಸ್ಸಿಗೆ ಜಾತಿ ಪ್ರಾಬಲ್ಯ ಕ್ಷೀಣಿಸಬೇಕಾಗಿರುವುದು ಅಗತ್ಯವಾಗಿದೆ ಎಂದು ವಿವರಿಸುತ್ತಾರೆ. ಅಲ್ಲದೇ ರಾಜಕೀಯ ಪಕ್ಷಗಳ ಪ್ರತಿಯೊಂದು ನಡೆಯುವ ಜಾತಿಯನ್ನು ಅವುಗಳ ನಡುವಿನ ಸಂಬಂಧವನ್ನು ಬಲಿಷ್ಠಗೊಳಿಸುತ್ತಿದೆ ಎಂದು ನಂಬುತ್ತಾರೆ. ಮುಂದುವರಿದು ಜಾತಿ ಪ್ರಾಬಲ್ಯ ಕ್ಷೀಣಿಸಲು ದೊಡ್ಡ ಪ್ರಮಾಣದಲ್ಲಿ ಶೂದ್ರಾತಿ ಶೂದ್ರ ಜಾತಿಗಳು ಒಗ್ಗೂಡಬೇಕು ಎಂದು ಬಯಸುತ್ತಾರೆ. ಪ್ರಸ್ತುತ ರಾಜಕೀಯ ಸನ್ನಿವೇಶಕ್ಕೆ ಭಾರತದ ಜಾತಿವ್ಯವಸ್ಥೆಯನ್ನು ಮೂಲವಾಗಿಸುತ್ತಾ ಅದಕ್ಕೆ ಪರ್ಯಾಯವನ್ನು ಪ್ರಬಲ ದಲಿತ ರಾಜಕಾರಣದಲ್ಲಿ ಹುಡುಕುತ್ತಾರೆ.

ಪ್ರಸ್ತುತ ಮೇಲಿನ ವಿವರಣೆಗಳನ್ನು ನೋಡಿದಾಗ ಪ್ರಮುಖವಾಗಿ ಎರಡು ಅಂಶಗಳನ್ನು ಮುಖ್ಯವಾಗುತ್ತವೆ ಅವು ಯಾವುವೆಂದರೆ.

1. ಲೇಖಕರು ಇಂದಿನ ಬಹುಜನಪ್ರೀಯವಾದ ಶಕ್ತಿರಾಜಕಾರಣವನ್ನು ಸಮಸ್ಯೆಯಾಗಿಸುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ ರಾಜಕಾರಣ ಎಂದರೇನು? ಎಂಬುದಕ್ಕೆ ಹಲವಾರು ವ್ಯಾಖ್ಯಾನಗಳಿವೆ. ಸರಳವಾಗಿ ಹೇಳುವುದಾದರೆ ಪ್ರಭುತ್ವದ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು ಎಂದು ವಿವರಿಸಿಕೊಳ್ಳಬಹುದು. ಪ್ರಖ್ಯಾತ ರಾಜಕೀಯ ಶಾಸ್ತ್ರಜ್ಞ ಡೇವಿಡ್ ಈಸ್ಟನ್ ರಾಜಕೀಯವನ್ನು ಮೌಲ್ಯಗಳ ಅಧಿಕಾರಯುತ ವಿತರಣೆ ಎಂದು ವಿಶ್ಲೇಷಿಸಿದ್ದಾನೆ. ಅಂದರೆ ರಾಜಕಾರಣ ಎಂಬುದು ಪ್ರಭುತ್ವದ ಕಾರ್ಯಚಟುವಟಿಕೆ ಅದರಲ್ಲಿ ಪ್ರಜೆಗಳ ಪಾಲ್ಗೊಳ್ಳುವಿಕೆ ಮುಂತಾದವುಗಳ ಕುರಿತಂತೆ ತಿಳಿಸುವುದಾಗಿದೆ. ಆದರೆ ಜನಸಾಮನ್ಯರ ಸಾಮಾನ್ಯ ತಿಳುವಳಿಕೆಯಲ್ಲಿ ರಾಜಕೀಯ ಎಂದರೆ ಯಾವ ಮಾರ್ಗವನ್ನಾದರೂ ಹಿಡಿದು ಸಾರ್ವಜನಿಕ ಅಧಿಕಾರವನ್ನು ಪಡೆಯುವ ತಂತ್ರಗಾರಿಕೆ ಎನ್ನುವ ನೆಗೆಟಿವ್ ಆದಂತಹ ಭಾವನೆ ಪ್ರಬಲವಾಗಿದೆ. ಪ್ರಸ್ತುತ ಸೋಮಶೇಖರ್ ರವರ ಲೇಖನವು ಸಾಮಾನ್ಯ ಜನರ ಅರ್ಥ ದಲ್ಲಿನ ನೆಗೆಟಿವ್ ಮಾದರಿಯ ರಾಜಕಾರಣವನ್ನೇ (Power politics) ಸಮಸ್ಯೆಯನ್ನಾಗಿ ಗ್ರಹಿಸುತ್ತಿದೆ.

ಲೇಖಕರು ಇಂದಿನ ಬಹುಜನಪ್ರೀಯವಾದ ಶಕ್ತಿರಾಜಕಾರಣವನ್ನು ಸಮಸ್ಯೆಯಾಗಿಸುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ ರಾಜಕಾರಣ ಎಂದರೇನು? ಎಂಬುದಕ್ಕೆ ಹಲವಾರು ವ್ಯಾಖ್ಯಾನಗಳಿವೆ. ಸರಳವಾಗಿ ಹೇಳುವುದಾದರೆ ಪ್ರಭುತ್ವದ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು ಎಂದು ವಿವರಿಸಿಕೊಳ್ಳಬಹುದು. ಪ್ರಖ್ಯಾತ ರಾಜಕೀಯ ಶಾಸ್ತ್ರಜ್ಞ ಡೇವಿಡ್ ಈಸ್ಟನ್ ರಾಜಕೀಯವನ್ನು ಮೌಲ್ಯಗಳ ಅಧಿಕಾರಯುತ ವಿತರಣೆ ಎಂದು ವಿಶ್ಲೇಷಿಸಿದ್ದಾನೆ. ಅಂದರೆ ರಾಜಕಾರಣ ಎಂಬುದು ಪ್ರಭುತ್ವದ ಕಾರ್ಯ ಚಟುವಟಿಕೆ ಅದರಲ್ಲಿ ಪ್ರಜೆಗಳ ಪಾಲ್ಗೊಳ್ಳುವಿಕೆ ಮುಂತಾದವುಗಳ ಕುರಿತಂತೆ ತಿಳಿಸುವುದಾಗಿದೆ.

2. ಜಾತಿ ಮತ್ತು ರಾಜಕಾರಣವನ್ನು ವಿವರಿಸುವಾಗ ಜಾತಿ ವ್ಯವಸ್ಥೆಯ ಕುರಿತಾದ ಸಮಾಜಶಾಸ್ತ್ರೀಯ ವಿವರಣೆಗಳು ಲೇಖಕರನ್ನು ಬಹುವಾಗಿ ಪ್ರಭಾವಿಸಿರುವುದು ಸ್ಪಷ್ಟವಾಗುತ್ತದೆ.

ಸರಿ ಲೇಖಕರ ಈ ಎರಡು ಸಮಸ್ಯಗಳಿಗೆ ಇರುವ ಪರಿಹಾರವೇನು? ಪ್ರಸ್ತುತ ರಾಜಕಾರಣ ಮತ್ತು ಜಾತಿ ಸಂಬಂಧವನ್ನು ವಿವರಿಸಿಲು ಸಾಧ್ಯವಿರುವ ಮೂರನೇಯ ಮಾದರಿ ಯಾವುದು ಎಂಬುದು ಇಲ್ಲಿ ಪ್ರಮುಖ ಪ್ರಶ್ನೆಯಾಗುತ್ತದೆ ಈ ಹಿನ್ನೆಲೆಯಲ್ಲಿ ಜಾತಿ ಮತ್ತು ರಾಜಕಾರಣದ ಚರ್ಚೆಯನ್ನು ಗಮನಿಸುವುದು ಸೂಕ್ತ.

ಭಾರತದ ರಾಜಕೀಯದ ಮೇಲೆ ಸ್ವಾತಂತ್ರ್ಯ ಪೂರ್ವದಿಂದಲೂ ಹಲವಾರು ಅಂಶಗಳು ತಮ್ಮ ಪ್ರಭಾವವನ್ನು ಬೀರಿವೆ. ಅದರಲ್ಲಿ ಜಾತೀಯು ಭಾರತೀಯ ರಾಜಕರಣದಲ್ಲಿ ತನ್ನದೇ ಆದ ವಿಶಿಷ್ಟ ರೀತಿಯ ಪ್ರಭಾವವನ್ನು ಬೀರುತ್ತಲೆ ಬಂದಿದೆ. ಭಾರತದ ಜಾತಿ ಮತ್ತು ರಾಜಕರಣವನ್ನು ಕುರಿತು ಹಲವಾರು ಚಿಂತಕರು ವಿಭಿನ್ನ ನೆಲೆಗಟ್ಟಿನಲ್ಲಿ ಸಿದ್ಧಾಂತಗಳನ್ನು ರಚಿಸಿದ್ದಾರೆ. ಅವರಲ್ಲಿ ಪ್ರಮುಖರಾದವರು ರಜನಿಕೊತಾರಿ, ಸೂಸಾನ್‌ಬೇಲಿ, ಪೌಲಿನ್‌ಕೂಲೆಂಡ ನಿಕೋಲಸ್ ಡರ್ಕ್ಸ್, ಎಂ.ಎನ್.ಶ್ರೀನಿವಾಸ್ ಮುಂತಾದವರು. ಆದರೆ ಈ ಎಲ್ಲಾ ಚಿಂತಕರು ಜಾತಿ ಮತ್ತು ರಾಜಕರಣವನ್ನು ವಿಶ್ಲೇಷಿಸುವಾಗ ಈಗಾಗಲೇ ಭಾರತ ಸಮಾಜದ ವಾಸ್ತವಗಳೆಂದು ಬಿಂಬಿತವಾಗಿರುವ ಜಾತಿಯ ವ್ಯವಸ್ಥೆಯ ಕುರಿತಾಗಿ ಇರುವ ಸಿದ್ಧಾಂತಗಳ ಬೆಳಕಿನಲ್ಲಿ ಭಾರತದ ರಾಜಕಾರಣವನ್ನು ನೋಡುವ ಪ್ರಯತ್ನವನ್ನು ಮಾಡಿದ್ದಾರೆ. ಮತ್ತು ಈ ಒಂದು ಅಂಶ ರಾಜಕಾರಣವನ್ನು ಕುರಿತ ಅವರ ವಿಶ್ಲೇಷಣೆಯನ್ನು ತಪ್ಪು ಹಾದಿ ಹಿಡಿಸಿದೆ.

ಈ ಹಿನ್ನೆಲೆಯಲ್ಲಿ ನೋಡುವುದಾದರೆ ಭಾರತದ ಸಂದರ್ಭದಲ್ಲಿ ಜಾತಿ ಮತ್ತು ರಾಜಕಾರಣದ ಚರ್ಚೆ ಮತ್ತು ಹಿಂದುಳಿದ ಜಾತಿಗಳ ಚಳುವಳಿಗಳಿಗೆ ವಸಾಹತು ಕಾಲದ ಚರಿತ್ರೆಯಿದ್ದರೂ ಈ ಕುರಿತಂತೆ ಗಮನಾರ್ಹ ಅಧ್ಯಾಯನಗಳು ಪ್ರಾರಂಭವಾಗಿರುವುದು 60ರ ದಶಕದಿಂದೀಚೆಗೆ 1960 ರವರೆಗೆ ಹಿಂದುಳಿದ ಜಾತಿಗಳ ಚಳುವಳಿಗಳ ಕಡೆಗೆ ಬೌದ್ಧಿಕ ವಲಯ ಗಮನ ಹರಿಸದಿರುವುದಕ್ಕೆ ಆದರ್ಶವಾದೀ, ವರ್ಗರಹಿತ ಸಮಾಜವಾದೀ, ಮಾದರಿಯಸಮಾಜ, ಕಲ್ಯಾಣರಾಜ್ಯ, ಮುಂತಾದ ನೆಹರೂರವರ ವಿಚಾರಧಾರೆಗಳು ಕಾರಣವಾದಂತೆ ಹಿಂದುಳಿದ ಜಾತಿಗಳ ಸಂಚಲನೆಗೆ ಕಾಂಗ್ರೆಸ್‌ನ ನಿರ್ಲಕ್ಷ್ಯವೂ ಕಾರಣವಾಗಿರಬ

ಹುದು. (Social deprivation and Social mobilization a case study of backward classes in Andra Pradesh E. venkatesh (2003) P.45) ಭಾರತದಲ್ಲಿ 1960ರ ನಂತರದ ಸ್ವಾತಂತ್ರ್ಯೋತ್ತರ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಅವಲೋಕಿಸಿದಾಗ ಆ ಕಾಲಘಟ್ಟದಲ್ಲಿ ಹಿಂದುಳಿದ ಜಾತಿಗಳು, ರಾಜಕೀಯ ಪಕ್ಷಗಳ ಮೇಲೆ ಪ್ರಾಬಲ್ಯ ಸಾಧಿಸುತ್ತಿದ್ದ ಮೇಲ್ ಜಾತಿಗಳಿಗೆ ಸವಾಲೊಡ್ಡಲು ಪ್ರಾರಂಭಿಸಿದವು. ಅದನ್ನು ನಾವು ಕರ್ನಾಟಕದ ರಾಜಕಾರಣದಲ್ಲಿಯೂ ಗುರುತಿಸಬಹುದು. ಜಾತಿ ಮತ್ತು ರಾಜಕರಣವನ್ನು ಕುರಿತು ಚರ್ಚಿಸುವ ಮೊದಲು ಜಾತಿಯ ಸಿದ್ಧಾಂತಗಳು ಎಂದರೇನು? ಅವುಗಳ ಮೂಲಭೂತ ಲಕ್ಷಣಗಳೇನು ಎಂಬುದರ ಕುರಿತು ಸ್ವಲ್ಪ ಚರ್ಚಿಸುವೆ.

21ನೇ ಶತಮಾನದ ಆಧುನಿಕ ಜಗತ್ತಿನಲ್ಲಿ ಜಾತಿ ವ್ಯವಸ್ಥೆಯನ್ನೆ ಕೇಂದ್ರವಾಗಿಸಿಕೊಂಡು ಹಲವಾರು ಚಿಂತಕರು ತಮ್ಮ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿದ್ದಾರೆ. ಅದರಲ್ಲಿ ಪ್ರಮುಖರಾದವರು ಲೂಯಿಸ್ ದುಮೋ. ದಿವಾಂಕರ್‌ಗುಪ್ತ ಮುಂತಾದವರು ಈ ಎಲ್ಲಾ ಚಿಂತಕರ ಪ್ರಕಾರ ಭಾರತೀಯ ಸಮಾಜ ಜಾತಿ ವ್ಯವಸ್ಥೆ ಎಂಬ ಒಂದು ಪರಿಕಲ್ಪನೆಯಿಂದ ನಿಯಂತ್ರಿಸಲ್ಪಡುತ್ತಿದೆ. ಮತ್ತು ಜಾತಿ ವ್ಯವಸ್ಥೆ ಈ ಕಳಗಿನ ಲಕ್ಷಣಗಳನ್ನು ಒಳಗೊಂಡಿದೆ. ಅವು ಯಾವುವು ಎಂದರೆ

* ಏಣಿಶ್ರೇಣಿ ವ್ಯವಸ್ಥೆ
* ವರ್ಣ ವ್ಯವಸ್ಥೆ
* ಬ್ರಾಹ್ಮಣ-ಅಸ್ಪೃಶ್ಯ
* ಮೇಲು-ಕೀಳು
* ಊಟೋಪಚಾರಗಳಲ್ಲಿ ನಿರ್ಬಂಧ
* ವಿವಾಹ ಸಂಬಂಧಗಳಲ್ಲಿ ನಿರ್ಬಂಧ
* ಇತ್ಯಾದಿ

ಜಾತಿ ವ್ಯವಸ್ಥೆಯ ಈ ಲಕ್ಷಣಗಳು ಭಾರತದ ಸಮಾಜಿಕ ವ್ಯವಸ್ಥೆಯಲ್ಲಿ ಯಜಮಾನ್ಯವನ್ನು ಹೊಂದಿದೆ. ಆದ್ದರಿಂದ ಭಾರತ ಅಭಿವೃದ್ಧಿ ಹೊಂದುತಿಲ್ಲ. ಇಲ್ಲಿನ ಸಮಾಜ ನಿಂತ ನೀರಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಎಂಬ ಈ ವರ್ಣಗಳಿರುವುದರಿಂದ ಇಲ್ಲಿ ಮಾನವೀಯತೆಗೆ ಬೆಲೆ ಇಲ್ಲವಾಗಿದೆ. ಈ ರೀತಿಯ ಆರೋಪವನ್ನು ಭಾರತೀಯರಲ್ಲಿ ಹೋಲಿಸಿದ್ದಾರೆ. ಇದೇ ಅಲ್ಲದೆ ಇನ್ನು ಮುಂದುವರೆದು ಭಾರತವು ಸಾಮಾಜಿಕ ವಿಕಾಸದ ಪ್ರಾಥಮಿಕ ಹಂತದಲ್ಲಿಯೇ ನಿಂತುಬಿಟ್ಟಿದೆ. ಈ ವಿಕಾಸದ ಹಾದಿಯಲ್ಲಿ ಪ್ರಾಥಮಿಕ ಹಂತವನ್ನು ದಾಟಿ "ನಾಗರೀಕರಾಗಿರುವ" ಬ್ರಿಟೀಷರು ಭಾರತೀಯ ಸಮಾಜದ ಸಾಮಾಜಿಕ ರಚನೆಗಳ ಸ್ವರೂಪವನ್ನು ಕಲಿಸುವುದರೊಂದಿಗೆ ಈ ಸಾಮಾಜಿಕ ರಚನೆಗಳಿಗೆ, ಆಧಾರಭೂತವಾಗಿ ಹಿಂದುಯಿಸಂ, ಬುದ್ಧಯಿಸಂ, ಜೈನಿಸಂ ಎಂಬ ಅವಾಸ್ತವಿಕ ರಿಲಿಯನ್‌ಗಳನ್ನು ಅಡಿಪಾಯವಾಗಿಸಿದರು ನಂತರದ ದಿನಗಳಲ್ಲಿ ಈ ರೀತಿಯ ವಿವರಣೆ ಭಾರತದ ಸಮಾಜದಲ್ಲಿನ ವಾಸ್ತವ ಎಂದು ಬಿಂಬಿತವಾಗಿದೆ.

ಆದರೆ ಇತ್ತೀಚಿನ ಕೆಲವು ಸಂಶೋಧನೆಗಳು ಪಾಶ್ಚಾತ್ಯರು ಮತ್ತು ಕ್ರೈಸ್ತ ಮಿಷನರಿಗಳು ಮಧ್ಯಯುಗದ ಯುರೋಪ್‌ನಲ್ಲಿದ್ದ ತಮ್ಮ ಅನುಭವಾತ್ಮಕ ರಿಲಿಜಿಯನ್, ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆಗಳ ಮಾದರಿಯಲ್ಲಿ ಭಾರತೀಯ ಸಮಾಜವನ್ನು ವಿವರಿಸಿದ್ದಾರೆ. ಇದರ ಪರಿಣಾಮ ಕ್ರೈಸ್ತ ಮಿಷನರಿಗಳು ಭಾರತೀಯ ಸಂಸ್ಕೃತಿಯನ್ನು

ಭಾರತದ ರಾಜಕೀಯದ ಮೇಲೆ ಸ್ವಾತಂತ್ರ್ಯ ಪೂರ್ವದಿಂದಲೂ ಹಲವಾರು ಅಂಶಗಳು ತಮ್ಮ ಪ್ರಭಾವವನ್ನು ಬೀರಿವೆ. ಅದರಲ್ಲಿ ಜಾತೀಯು ಭಾರತೀಯ ರಾಜಕರಣದಲ್ಲಿ ತನ್ನದೇ ಆದ ವಿಶಿಷ್ಟ ರೀತಿಯ ಪ್ರಭಾವವನ್ನು ಬೀರುತ್ತಲೇ ಬಂದಿದೆ. ಭಾರತದ ಜಾತಿ ಮತ್ತು ರಾಜಕರಣವನ್ನು ಕುರಿತು ಹಲವಾರು ಚಿಂತಕರು ವಿಭಿನ್ನ ನೆಲೆಗಟ್ಟಿನಲ್ಲಿ ಸಿದ್ಧಾಂತಗಳನ್ನು ರಚಿಸಿದ್ದಾರೆ. ಅವರಲ್ಲಿ ಪ್ರಮುಖರಾದವರು ರಜನಿಕೊತಾರಿ, ಸೂಸಾನ್‌ಬೇಲಿ, ಪೌಲಿನ್‌ಕೂ ಲೆಂಡ ನಿಕೋಲಸ್ ಡರ್ಕ್ಸ್, ಎಂ.ಎನ್.ಶ್ರೀನಿವಾಸ್ ಮುಂತಾದವರು. ಆದರೆ ಈ ಎಲ್ಲಾ ಚಿಂತಕರು ಜಾತಿ ಮತ್ತು ರಾಜಕರಣವನ್ನು ವಿಶ್ಲೇಷಿಸುವಾಗ ಈಗಾಗಲೇ ಭಾರತ ಸಮಾಜದ ವಾಸ್ತವಗಳೆಂದು ಬಿಂಬಿತವಾಗಿರುವ ಜಾತಿಯ ವ್ಯವಸ್ಥೆಯ ಕುರಿತಾಗಿ ಇರುವ ಸಿದ್ಧಾಂತಗಳ ಬೆಳಕಿನಲ್ಲಿ ಭಾರತದ ರಾಜಕಾರಣವನ್ನು ನೋಡುವ ಪ್ರಯತ್ನವನ್ನು ಮಾಡಿದ್ದಾರೆ. ಮತ್ತು ಈ ಒಂದು ಅಂಶ ರಾಜಕಾರಣವನ್ನು ಕುರಿತ ಅವರ ವಿಶ್ಲೇಷಣೆಯನ್ನು ತಪ್ಪು ಹಾದಿ ಹಿಡಿಸಿದೆ.

ಕ್ರಿಶ್ಚಿಯನ್ ಥಿಯಾಲಜಿಯ ಚೌಕಟ್ಟಿನ ಒಳಗೆ ಅಧ್ಯಯನ ಮಾಡಿದ್ದಾರೆಯೇ ಹೊರತು, ಭಾರತೀಯ ಸಂಸ್ಕೃತಿ ರಿಲಿಜಿಯನ್ ಅನ್ನು ಹೊಂದಿರದೆ ಕ್ರಿಶ್ಚಿಯನ್ ಸಂಸ್ಕೃತಿಗಿಂತ ಭಿನ್ನವಾಗಿರಬಹುದು ಎಂಬ ಆಲೋಚನೆಯನ್ನು ಪಾಶ್ಚಾತ್ಯರು ಮಾಡಿರುವಂತೆ ಕಾಣುವುದಿಲ್ಲ. ಎಂಬುದನ್ನು ನಿರೂಪಿಸಿವೆ.

ಆದರೆ ಈ ರೀತಿ ರಚನೆಗೊಂಡ ಭಾರತ ಸಮಾಜದ ಕುರಿತಾದ ಕಥೆ ಇಂದು ಇಡೀ ಬೌದ್ಧಿಕ ವಲಯದ ಚರ್ಚೆಯ ಮೇಲೆ ತನ್ನ ಒಂದು ಯಜಮಾನ್ಯವನ್ನು ಸಾಧಿಸಿದೆ. ಇಲ್ಲಿನ ಸಮಸ್ಯೆ ಎಂದರೆ ಪಾಶ್ಚಾತ್ಯರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿರೂಪಿತವಾದ ಭಾರತದ ಸಮಾಜದ ಕುರಿತಾದ ಈ ವಿವರಣೆ ಒಂದು ವೈಜ್ಞಾನಿಕ ನಿರೂಪಣೆ ಎಂದೇ ಸಮಾಜ ವಿಜ್ಞಾನದ ವಲಯದಲ್ಲಿ ಇಂದಿಗೂ ನಂಬಲಾಗಿದೆ. ಜೊತೆಗೆ ಈ ವಾದವೇ ಸಮಾಜ ವಿಜ್ಞಾನಗಳ ಎಲ್ಲಾ ಸಿದ್ಧಾಂತಗಳಿಗೆ ಮೆಟಾ ಥಿಯರಿಯಾಗಿ ಕೆಲಸ ಮಾಡಿದೆ. ಅಷ್ಟೇ ಅಲ್ಲದೇ ಈ ವಿಶ್ಲೇಷಣೆಗಳು ಭಾರತದ ಸಾಮಾಜಿಕ ನ್ಯಾಯ, ಮೀಸಲಾತಿ, ಶಿಕ್ಷಣ ವ್ಯವಸ್ಥೆಗಳನ್ನು ಇಂದಿಗೂ ಪ್ರಭಾವಿಸುತ್ತಿರುವುದನ್ನು ಕಾಣಬಹುದು.

ಅದ್ದರಿಂದಲೇ ಭಾರತ ಅಥವ ಭಾರತ ಸಮಾಜದ ಕುರಿತು ನಡೆಯುತ್ತಿರುವ ಯಾವುದೇ ಚರ್ಚೆಗಳು ಜಾತಿ ವ್ಯವಸ್ಥೆಯ ವಿವರಣೆಗಳನ್ನು ಒಳಗೊಳ್ಳದೆ ಮುಂದುವರೆಯುವಂತಿಲ್ಲ. ಈ ಪ್ರವೃತ್ತಿ ರಾಜಕಾರಣದ ಕುರಿತಾದ ಚರ್ಚೆಯನ್ನು ಬಿಟ್ಟಿಲ್ಲ ಆದ್ದರಿಂದಲೇ ಇಂದಿಗೂ ಜಾತಿ ವ್ಯವಸ್ಥೆಯ ಸಿದ್ಧಾಂತದ ಬೆಳಕಿನಲ್ಲಿ ಭಾರತೀಯ ರಾಜಕರಣವನ್ನು ವಿಶ್ಲೇಷಿಸಿರುವ ಚಿಂತಕರು ಕಳೆದ 50-60 ವರ್ಷಗಳಿಂದ ಒಂದೇ ರೀತಿಯ ಹೇಳಿಕೆಗಳನ್ನು ವಿಭಿನ್ನ ರೀತಿಯಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಅವರ ಈ ಪ್ರಯತ್ನವೇ ಜಾತಿ ಮತ್ತು ರಾಜಕರಣ ಕುರಿತಾದ ವಿಶ್ಲೇಷಣೆಗಳನ್ನು ತಪ್ಪು ಹಾದಿ ಹಿಡಿಸಿದೆ. ಉದಾಹರಣೆಗೆ ಭಾರತ ಒಂದು ಹಿಂದುಳಿದ ದೇಶವಾಗಿದೆ. ಇಲ್ಲಿನ ರಾಜಕಾರಣದಲ್ಲಿ ಜಾತಿ ವ್ಯವಸ್ಥೆ ತನ್ನದೇ ಆದಂತಹ ಪ್ರಭಾವವನ್ನು ಹೊಂದಿದೆ. ಸ್ವತಂತ್ರ್ಯ ಪೂರ್ವದಿಂದಲೂ ಜಾತಿಪದ್ಧತಿ ರಾಜಕಾರಣದ ಮೇಲೆ ತಮ್ಮ ಪ್ರಭಾವವನ್ನು ಬಿರುತ್ತಲಿದೆ ಎಂಬಿತ್ಯಾದಿ.

ಆದ್ದರಿಂದ ಇಂದು ನಾವು ಪ್ರಮುಖವಾಗಿ ಕೇಳಬೇಕಾದ ಪ್ರಶ್ನೆ ಎಂದರೆ ಈಗಾಗಲೇ ಹೇಳಿರುವಂತೆ ಭಾರತೀಯ ಸಮಾಜದ ಸಮಗ್ರ ಗ್ರಹಿಕೆಯು ಪಾಶ್ಚಾತ್ಯರ ಸ್ವಸಂಸ್ಕೃತಿಯ ಅನುಭವದ ನೆಲೆಯಲ್ಲಿ ರೂಪುಗೊಂಡಿದ್ದು, ಈ ಗ್ರಹಿಕೆಗಳನ್ನು ವಿವರಿಸುವ ಪರಿಕಲ್ಪನೆಗಳು ಅನೇಕ ಸಂಧಿಗ್ಧತೆಗಳಿಂದ ಕೂಡಿವೆ. ಈ ಸಂಧಿಗ್ದ ಪರಿಕಲ್ಪನೆಗಳ ಬಳಕೆ ಎಷ್ಟರ ಮಟ್ಟಿಗೆ ನಮ್ಮ ಸಾಮಾಜಿಕ ಆಗು-ಹೋಗುಗಳನ್ನು ಅಥವಾ ಭವಿಷ್ಯವನ್ನು ರೂಪಿಸಲು ಅಥವಾ ನಿರ್ವಚಿಸಲು ಸಾಧ್ಯ? ಈ ಪೂರ್ವ ಕಲ್ಪನೆಗಳ ಮೇಲೆ ನಿಂತಿರುವ ಬೌದ್ಧಿಕ ವಲಯದಿಂದಾಗಲಿ, ಚಳುವಳಿಗಳಿಂದಾಗಲಿ (ಪಂಥಾತೀತವಾಗಿ) ಎಂತಹ ಪರ್ಯಾಯಗಳನ್ನು ನೀರಿಕ್ಷಿಸಲು ಸಾಧ್ಯ?

ಒಂದು ಅರ್ಥದಲ್ಲಿ ಇಂದು ನಾವು ನಮ್ಮ ಸಮಾಜಿಕ ಮತ್ತು ರಾಜಕೀಯ ಸಮಸ್ಯಗಳನ್ನು ಗ್ರಹಿಸಿರುವುದು ಮತ್ತು ವಿವರಿಸುತ್ತಿರುವುದು ಪಾಶ್ಚಾತ್ಯರು ಕೊಡಮಾಡಿದ ಸೈದ್ಧಾಂತಿಕ ಚೌಕಟ್ಟಿನಲ್ಲಿಯೇ? ಆದ್ದರಿಂದಲೇ ನಾವು ಇಂದು ನಮ್ಮ ಸಮಾಜದ ಸಮಸ್ಯೆಗಳನ್ನು ಅರಿಯಲು ಮತ್ತು ಪರಿಹಾರ ಕಂಡುಕೊಳ್ಳಲು ಸೋತಿದ್ದೇವೆ. ನಮ್ಮ ಸಮಾಜ ವಿಜ್ಞಾನಗಳ ವಲಯದಲ್ಲಿ ಬಹುದೊಡ್ಡ ಪರಿಕಲ್ಪನೆ ಮತ್ತು ಸಿದ್ಧಾಂತಗಳೆಂದು ಗುರುತಿಸಲ್ಪಡುತ್ತಿರುವ ಸೆಕ್ಯುಲರಿಸಂ ಕಮ್ಯೂನಲಿಸಂ, ಬಹುಸಂಸ್ಕೃತಿ, ಜಾತಿ ವ್ಯವಸ್ಥೆ ಇಂದಿಗೂ ಸಹ ಸಮಾಜ ಸಮಸ್ಯೆಗಳಿಗೆ ಪರಿಹಾರವಾಗದೆ ಕೇವಲ ಬೌದ್ಧಿಕ ಜಿಜ್ಞಾಸೆಯಾಗಿ ಮಾತ್ರ ಉಳಿದಿರುವುದು ಮಾತ್ರವಲ್ಲದೆ ಸಾರ್ವಜನಿಕ ಬದುಕಿನ ಚರ್ಚೆಗಳಲ್ಲಿ ಭಾಗಿಯಾಗಿಲ್ಲದಿರುವುದು ಇದಕ್ಕೆ ನಿರ್ದಶನ. ಈ ಎಲ್ಲಾ ಸಮಸ್ಯೆಗಳಿಗೆ ಇರುವ ಪರಿಹಾರವೆಂದರೆ ನಮ್ಮ ಸಮಾಜವನ್ನು ಸಮರ್ಥವಾಗಿ ಅರ್ಥಮಾಡಿಕೊಳ್ಳಲು ಮತ್ತು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾದ ಸಿದ್ಧಾಂತಗಳ ರಚನೆಯ ಕುರಿತಾದ ಸಂಶೋಧನೆಗಳನ್ನು ಹೆಚ್ಚು ಹೆಚ್ಚು ಪ್ರಭಾವಿಯಾಗಿ ಮಾಡುವುದಾಗಿದೆ.

ಒಟ್ಟಾರೆಯಾಗಿ ನೋಡುವುದಾದರೆ ಇವರುಗಳೆಲ್ಲ ಜಾತಿಗಳ ನಡುವಿನ ತಾರತಮ್ಯವನ್ನು ಜಾತಿ ವ್ಯವಸ್ಥೆ ಎಂದು ನಿರೂಪಿಸಿಕೊಂಡು ತಮ್ಮ ಒಂದು ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಒಂದು ವೇಳೆ ಈ ಜಾತಿಯ ಸಿದ್ಧಾಂತಗಳು ವಿವರಿಸಿದ್ದಂತೆ ನಮ್ಮ ಸಮಾಜ ಇದ್ದಿದ್ದರೆ ಇಂದು ಕೆಲವೊಂದು ಲಕ್ಷಣಗಳು ನಮಗೆ ಗೋಚರಿಸಬೇಕಿತ್ತು. ಅವು ಯಾವುವು ಎಂದರೆ ಭಾರತ ಹಿಂದುಳಿದಿರ

(9ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಕರ್ನಾಟಕದ ಸಾಮಾಜಿಕ ತಲ್ಲಣಗಳು

ಭರತ್‌ರಾಜ್

ಸಮೃದ್ಧ ಸಂಪದ್ಭರಿತ ಕನ್ನಡನಾಡು ಇಂದು ಹತ್ತು ಹಲವು ಸಾಮಾಜಿಕ ಸಮಸ್ಯೆಗಳಲ್ಲಿ ತೊಳಲಾಡುತ್ತಿರುವುದು ದಿನನಿತ್ಯದ ಸುದ್ದಿಯಾಗಿದೆ. ಕೋಲಾರದ ಮಾಲೂರಿನ ದಲಿತರ ಮೇಲಿನ ಬಹಿಷ್ಕಾರ, ಅತ್ಯಾಚಾರಗಳಂತಹ ಪ್ರಕರಣಗಳು ಹಿಂದೆಂದಿಗಿಂತಲೂ ಈಗ ಅಧಿಕವಾಗಿವೆ. ಕಂಬಾಲಪಲ್ಲಿಯ ಮಾರಣಹೋಮದ ಕಾರಣಕರ್ತರಿಗೇ ಇನ್ನೂ ಶಿಕ್ಷೆ ನೀಡಲಾಗಿಲ್ಲ. ಹಾವೇರಿ ರೈತರನ್ನು ಗುಂಡಿಕ್ಕಿದ ಪೊಲೀಸರಿಗೆ ಯಾವ ಗಂಭೀರ ಶಿಕ್ಷೆಯೂ ನೀಡಿಲ್ಲ. ಮೊನ್ನೆಯ ಚುನಾವಣಾ ಸಂದರ್ಭದಲ್ಲಿ ಧರ್ಮಸ್ಥಳದಲ್ಲಿ ಆಂಧ್ರ ಪೊಲೀಸರು ನಡೆಸಿದ ಗುಂಡಿನ ದಾಳಿ ಹಾಗೂ ಕೊಲೆಗೆ ತಕ್ಕ ಶಿಕ್ಷೆ ನೀಡಿಲ್ಲ. ಬದಲಿಗೆ ಜಾಮೀನು ನೀಡಿ ಬಿಡುಗಡೆ ಮಾಡಲಾಗಿದೆ.

ಕಳೆದ 2-3 ವರ್ಷಗಳಿಂದ ಸುದ್ದಿಯಾಗುತ್ತಿರುವ ಅಕ್ರಮ ಗಣಿಗಾರಿಕೆಗಳು ಯಾವುದೇ ಎಗ್ಗಿಲ್ಲದೆ ನಡೆಯುತ್ತಿದೆ. ಸರ್ಕಾರದ ಪ್ರಮುಖ ಮಂತ್ರಿಗಳೇ ಕರ್ನಾಟಕದ ಭೂಸಂಪತ್ತನ್ನು ಎಲ್ಲಾ ಕಾನೂನುಗಳನ್ನು ಧಿಕ್ಕರಿಸಿ ಹಾಡುಹಗಲೇ ಕೊಳ್ಳೆ ಹೊಡೆಯುತ್ತಿರುವುದು ಬಹಳ ಆತಂಕಕಾರಿ ವಿಷಯವಾಗಿದೆ. ಇದೆಲ್ಲದರ ಜೊತೆಗೆ ಬರುತ್ತಿರುವ ಎಸ್.ಇ.ಜೆಡ್‌ಗಳು, ಬೆಂಗಳೂರಿನ ಕೊಳಚೆ ಪ್ರದೇಶದ ಭೂಮಿಗಳನ್ನು ಕಬಳಿಸುತ್ತಿರುವುದು, ಜನರನ್ನು ನಿರ್ವಸಿತರನ್ನಾಗಿಸುತ್ತಿರುವುದು ಹೆಚ್ಚಾಗುತ್ತಲೇ ಇವೆ. ಪ್ರತಿದಿನ ಕೊಲೆ ದರೋಡೆ, ಅತ್ಯಾ ಚಾರಗಳಂತಹ ಪ್ರಕರಣಗಳು ದಿನಪತ್ರಿಕೆಗಳ ಸುದ್ದಿಗಳಲ್ಲಿ ಪ್ರಮುಖವಾಗಿವೆ. ಹಣದುಬ್ಬರ ಪ್ರಮಾಣ ಇಳಿದಿದೆ ಎನ್ನಲಾಗಿದ್ದರೂ ಶ್ರೀಸಾ ಮಾನ್ಯನ ಅಗತ್ಯ ವಸ್ತುಗಳ ಬೆಲೆಯೇರಿಕೆ ಏರುಮುಖವಾಗಿಯೇ ಸಾಗುತ್ತಿದೆ. ಅಚ್ಚರಿಯೆಂದರೆ ಇವುಗಳ ಬಗ್ಗೆ ಪ್ರತಿಭಟನೆಗಳು ನಡೆಯದಿರುವುದು. ಸಂಘಟನೆಗಳು, ವ್ಯಕ್ತಿಗಳು ದನಿಯೆತ್ತದೇ ಇರುವುದನ್ನು ಗಮನಿಸಿದಾಗಿ ಇವರೆಲ್ಲರ ಸಂವೇದನಾಶೀಲತೆ ನಾಶಗೊಂಡಿದೆಯೇನೋ ಅನಿಸುತ್ತದೆ.

ಇನ್ನೊಂದು ಆತಂಕಕಾರಿ ಸಂಗತಿಯೆಂದರೆ ಜನರ ಪ್ರಜಾತಾಂತ್ರಿಕ ಹಕ್ಕುಗಳ ಹರಣ ಏರುತ್ತಲೇ ಇರುವುದು. ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯ, ಪ್ರತಿಭಟನೆಗಳಿಗೆ ಅವಕಾಶಗಳು ಕುಬ್ಜವಾಗುತ್ತಿರುವುದು ಇತ್ತೀಚಿನ ಒಂದು ಪ್ರಮುಖ ವಿದ್ಯಮಾನವಾಗಿದೆ. ಹಲವಾರು ನಿರ್ಬಂಧಗಳನ್ನು ಜನರ ಹೋರಾಟ ಪ್ರತಿಭಟನೆಗಳ ಮೇಲೆ ಹೇರಲಾಗುತ್ತಿದೆ. ಪ್ರತಿಭಟನೆಯನ್ನು ಹೀಗೇ ಮಾಡಬೇಕು, ಧಿಕ್ಕಾರ ಕೂಗಬಾರದು, ಘೋಷಣೆ ಕೂಗಬಾರದು ಇಂತಹ ಸ್ಥಳದಲ್ಲಿ ಮಾತ್ರ ಪ್ರತಿಭಟನೆ ನಡೆಸಬೇಕು, ಮೆರವಣಿಗೆ ಮಾಡಬಾರದು ಹೀಗೆಲ್ಲಾ ನಿರ್ಬಂದಗಳನ್ನು ಸರ್ಕಾರದ ಪೊಲೀಸ್ ಹಾಗೂ ಆಡಳಿತಾಂಗಗಳು ಜನರ ಮೇಲೆ ಹೇರುತ್ತಿವೆ. ಅಂದರೆ ಪ್ರಜಾತಾಂತ್ರಿಕ ಅವಕಾಶಗಳ ಕಡಿತ ತೀವ್ರವಾಗುತ್ತಿವೆ. ಇದಲ್ಲದೆ ಹಣ ಆಮಿಷ, ಕೊಲೆ ಬೆದರಿಕೆ ಒಡ್ಡಿ ಜನಪರ ಪ್ರತಿಭಟನಾಕಾರರನ್ನು ತಟಸ್ಥಗೊಳಿಸುವುದೂ ಕೂಡ ಯಾವುದೇ ಎಗ್ಗಿಲ್ಲದೆ ನಡೆಯುತ್ತಿವೆ.

ಮತ್ತೊಂದು ಭಾಗದಲ್ಲಿ ಪ್ರಜಾತಂತ್ರವಾದಿಗಳು ಪ್ರಗತಿಪರರು ಬುದ್ಧಿಜೀವಿಗಳು ಎನಿಸಿಕೊಂಡವರು ಅವರವರೇ ಕಟ್ಟಿಕೊಂಡ ವೈಯಕ್ತಿಕತೆಯ ಭ್ರಮಾ ದ್ವೀಪದಲ್ಲಿ ವಿಹರಿಸುತ್ತಿದ್ದಾರೆ. ನಾಡಿಗೆ ಹಾಗೂ ಜನರಿಗೆ ಯಾವುದೇ ವಿಪತ್ತು

ಕನ್ನಡ ನಾಡಿನಲ್ಲಿ ಸಾಕಷ್ಟು ಪ್ರಜಾತಂತ್ರವಾದಿಗಳು ಜನಪರ, ಪ್ರಗತಿಪರ ವ್ಯಕ್ತಿಗಳಿದ್ದರೂ ಶಕ್ತಿಹೀನರಾಗುತ್ತಿದ್ದಾರೆ. ಅದಕ್ಕೆ ಕಾರಣ ಕೇವಲ ವ್ಯಕ್ತಿಗಳಾಗಿ ಇವರುಗಳು ಉಳಿದಿರುವುದು ಈ ತರಹದ ವ್ಯಕ್ತಿಗಳು ಹಾಗೂ ಶಕ್ತಿಗಳಲ್ಲಿ ಜನರ ಹಾಗೂ ನಾಡಿಗೆ ವಿಪತ್ತು ಬಂದಾಗ ಎಲ್ಲರೂ ಒಗ್ಗೂಡಿ ಧ್ವನಿ ಎತ್ತೋಣ ಎಂಬ ದೃಷ್ಟಿಕೋನ ಇಲ್ಲದವರೇ ಹೆಚ್ಚಾಗಿದ್ದಾರೆ. ಜನರು ತಮ್ಮದೇ ರೀತಿಯಲ್ಲಿ ಬೀದಿಗಿಳಿದು ಹೋರಾಟ ಪ್ರತಿಭಟನೆಗಳನ್ನು ಸಂಘಟಿತವಾಗಿ ನಡೆಸುತ್ತಿದ್ದರೂ ಇವರುಗಳು ತಾವೇ ಸೃಷ್ಟಿಸಿಕೊಂಡಿರುವ ವೈಯಕ್ತಿಕತೆಯ ಗಾಜಿನ ಮನೆಯಲ್ಲಿ ಕುಳಿತು ಪ್ರಬಂಧ, ಸಂಶೋಧನೆ, ವೈಯಕ್ತಿಕ ಪ್ರಚಾರಗಳ ಬಗ್ಗೆ ಯೋಚಿಸುತ್ತಿರುತ್ತಾರೆ. ಜನರ ಹಾಗೂ ನಾಡಿನ ಹಿತಾಸಕ್ತಿಯನ್ನು ಪ್ರಧಾನ ಲಕ್ಷ್ಯವಾಗಿಸಿ ವೈಯಕ್ತಿಕ ಹಿತಾಸಕ್ತಿಯನ್ನು ಎರಡನೇ ಆದ್ಯತೆಯಾಗಿ ನೋಡುವ ದೃಷ್ಟಿಕೋನ ಇವರಲ್ಲಿ ಬಹಳ ಜನರಿಗೆ ಇಲ್ಲವಾಗಿರುವುದನ್ನು ನಾವು ನೋಡುತ್ತಿದ್ದೇವೆ.

ಬಂದರೂ ಕಣ್ಣ ಮುಂದೆಯೇ ನಾಡುನಾಶವಾಗುತ್ತಿದ್ದರೂ ಇವರಲ್ಲಿ ಹಲವರಿಗೆ ಸಮಷ್ಟಿ ಪ್ರಜ್ಞೆ ಜಾಗೃತವಾಗಿ ಕಾಡುವುದಿಲ್ಲ. ಎಲ್ಲದರಲ್ಲೂ ತಮ್ಮ ವ್ಯಕ್ತಿಗತ ಲಾಭ, ಪ್ರಚಾರ, ವೇದಿಕೆಗಳನ್ನೇ ನಿರೀಕ್ಷಿಸುತ್ತಾ ಅದು ಇಲ್ಲ ಎಂದಾಗ ಜನರಿಂದ ದೂರ ನಿಂತು ಬೋಧನೆ ಮಾಡುವ ಕಾಯಕ ನಡೆಸುತ್ತಾರೆ. ಪ್ರಜಾತಂತ್ರದ ಬಗ್ಗೆ ಸಾಕಷ್ಟು ಮಾತಾಡುವ ಹಲವರಿಗೆ ಪ್ರಜಾತಾಂತ್ರಿಕವಾಗಿ ವ್ಯವಹರಿಸುವ ಪ್ರಜ್ಞೆ ಸಂಕುಚಿತವಾಗಿರುತ್ತದೆ. ತಮ್ಮದೇ ಮಾತುಗಳಿಗೆ ಅಂಗೀಕಾರ ದೊರೆಯಬೇಕೆಂಬ ಹಠ ಇವರಲ್ಲಿ ಇರುತ್ತದೆ. ಪ್ರಜಾತಾಂತ್ರಿಕತೆಯ ದೊಡ್ಡ ಮೌಲ್ಯವಾದ ಜನರು ಹಾಗೂ ಬಹುಸಂಖ್ಯಾತ ಅಭಿಪ್ರಾಯಗಳನ್ನು ತಮ್ಮ ಮೂಗಿನ ನೇರಕ್ಕೆ ಅನುಗುಣವಾಗಿ ಇಲ್ಲದಿದ್ದರೆ ತಿರಸ್ಕರಿಸಿ ತಮ್ಮ ವ್ಯಕ್ತಿಗತ ನಿಷ್ಠೆ ಪ್ರದರ್ಶಿಸಿ ಜನರಿಂದ ದೂರವಿರುತ್ತಿದ್ದಾರೆ. ಮಾಡಬಹುದಾದುದನ್ನೂ ಮಾಡಲಾಗದ ವೈಕಲ್ಯತೆಗೆ ಗುರಿಯಾಗಿದ್ದಾರೆ. ಇವರಲ್ಲಿ ಹಲವರು ಅರಾಜಕರಾಗಿರುವವರು ಇದ್ದಾರೆ. ಕಾರ್ಯಪರತೆ ಇರದಿರುವವರು ಹಲವರಿದ್ದಾರೆ. ಕೆಲವರು ಒಂದು ಮಟ್ಟದವರೆಗೆ ಇರುತ್ತಾರೆ ನಂತರ ಯಾವುದಾದರು ನೆಪ ಹೇಳಿ ಹಿಂದ್ಸರಿಯಲು ನೋಡುತ್ತಾರೆ. ಹೀಗೆಲ್ಲಾ ಮಾಡುವುದರಿಂದ ತಮ್ಮನ್ನು ತಾವೇ ಅಲ್ಲದೆ ಜನರು ಹಾಗು ನಾಡಿಗೆ ವಂಚಿಸಿದಂತಾಗುತ್ತದೆ ಎಂಬ ಪಾಪಪ್ರಜ್ಞೆ ಇವರನ್ನು ಕಾಡುವುದಿಲ್ಲ.

ಕನ್ನಡ ನಾಡಿನಲ್ಲಿ ಸಾಕಷ್ಟು ಪ್ರಜಾತಂತ್ರವಾದಿಗಳು ಜನಪರ, ಪ್ರಗತಿಪರ ವ್ಯಕ್ತಿಗಳಿದ್ದರೂ ಶಕ್ತಿಹೀನರಾಗುತ್ತಿದ್ದಾರೆ. ಅದಕ್ಕೆ ಕಾರಣ ಕೇವಲ ವ್ಯಕ್ತಿಗಳಾಗಿ ಇವರುಗಳು ಉಳಿದಿರುವುದು ಈ ತರಹದ ವ್ಯಕ್ತಿಗಳು ಹಾಗೂ ಶಕ್ತಿಗಳಲ್ಲಿ ಜನರ ಹಾಗೂ ನಾಡಿಗೆ ವಿಪತ್ತು ಬಂದಾಗ ಎಲ್ಲರೂ ಒಗ್ಗೂಡಿ ಧ್ವನಿ ಎತ್ತೋಣ ಎಂಬ ದೃಷ್ಟಿಕೋನ ಇಲ್ಲದವರೇ ಹೆಚ್ಚಾಗಿದ್ದಾರೆ. ಜನರು ತಮ್ಮದೇ ರೀತಿಯಲ್ಲಿ ಬೀದಿಗಿಳಿದು ಹೋರಾಟ ಪ್ರತಿಭಟನೆಗಳನ್ನು ಸಂಘಟಿತವಾಗಿ ನಡೆಸುತ್ತಿದ್ದರೂ ಇವರುಗಳು ತಾವೇ ಸೃಷ್ಟಿಸಿಕೊಂಡಿರುವ ವೈಯಕ್ತಿಕತೆಯ ಗಾಜಿನ ಮನೆಯಲ್ಲಿ ಕುಳಿತು ಪ್ರಬಂಧ, ಸಂಶೋಧನೆ, ವೈಯಕ್ತಿಕ ಪ್ರಚಾರಗಳ ಬಗ್ಗೆ ಯೋಚಿಸುತ್ತಿರುತ್ತಾರೆ. ಜನರ ಹಾಗೂ ನಾಡಿನ ಹಿತಾಸಕ್ತಿಯನ್ನು ಪ್ರಧಾನ ಲಕ್ಷ್ಯವಾಗಿಸಿ ವೈಯಕ್ತಿಕ ಹಿತಾಸಕ್ತಿಯನ್ನು ಎರಡನೇ ಆದ್ಯತೆಯಾಗಿ ನೋಡುವ ದೃಷ್ಟಿಕೋನ ಇವರಲ್ಲಿ ಬಹಳ ಜನರಿಗೆ ಇಲ್ಲವಾಗಿರುವುದನ್ನು ನಾವು ನೋಡುತ್ತಿದ್ದೇವೆ.

ಪರಸ್ಪರ ವ್ಯಕ್ತಿಗತ ದಾಳಿ, ಇಲ್ಲದಿದ್ದರೆ ಪರಸ್ಪರ ಅನುಚಿತ ಹೊಗಳಿಕೆ, ಅದಲ್ಲದಿದ್ದರೆ ಸ್ವಯಂಪ್ರಶಂಸೆಗಳಲ್ಲಿ ತೊಡಗಿರುವವರು ಬಹಳ ಜನರು ಇದ್ದಾರೆ. ಒಬ್ಬರು ಬಂದಲ್ಲಿ ಇನ್ನೊಬ್ಬರು ಇರುವುದಿಲ್ಲ. ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಆರೋಗ್ಯಕರ ವಿಮರ್ಶೆಗಳನ್ನು ಮಾಡುತ್ತಾ ಸಾಮೂಹಿಕ ಹಿತಾಸಕ್ತಿಯನ್ನು ಮುಂದಿಟ್ಟು ಒಗ್ಗೂಡಬೇಕೆಂಬ ಕನಿಷ್ಠ ಪ್ರಜಾತಾಂತ್ರಿಕ ಗುಣವನ್ನು ಕೂಡ ಇವರಲ್ಲಿ ಬಹಳಷ್ಟು ಜನರು ರೂಢಿಸಿಕೊಳ್ಳದಿರುವುದರಿಂದಾಗಿ ಒಂದು ಕಡೆ ಸೇರಲಾಗದ, ಒಂದೇ ವೇದಿಕೆ

ಹಂಚಿಕೊಳ್ಳಲಾಗದ ಸ್ಥಿತಿಗೆ ಕಾರಣರಾಗಿದ್ದಾರೆ. ಕೆಲವರು ತಮ್ಮ ಗುಂಪುಗಳನ್ನು ಕಟ್ಟಿಕೊಂಡು ತಮ್ಮ ವೈಯಕ್ತಿಕ ಲಾಬಿಗಾಗಿ ಬಳಸುತ್ತಿದ್ದಾರೆ. ಹಾಗಾಗಿ ಇರುವ ಶಕ್ತಿಯನ್ನೂ ಕಳೆದುಕೊಳ್ಳುತ್ತಿದ್ದಾರೆ. ಕೆಲವರು ಸುಲಭವಾಗಿರುವ, ತಮಗೆ ಅನುಕೂಲವಾಗಿರುವ ವಿಷಯಗಳಿಗೆ ಮಾತ್ರ ಪ್ರತಿಕ್ರಿಯಿಸುತ್ತಾರೆ. ನಾಡು,ನುಡಿ, ಜನರು ಮುಖ್ಯವಾಗುವುದಿಲ್ಲ.

ಕನ್ನಡ ನಾಡಿನಲ್ಲಿ ಸಾಕಷ್ಟು ಸಂವೇದನಾಶೀಲ ಜನಪರ ಬುದ್ಧಿ ಜೀವಿಗಳು ಇದ್ದರೂ ವೈಚಾರಿಕ ಶೂನ್ಯತೆ, ಸಂಘಟನಾಶೀಲತೆಯ ಕೊರತೆ ಗಂಭೀರವಾಗಿ ಬಾಧಿಸುತ್ತಿದೆ. ಇದರಿಂದಾಗಿ ರಕ್ಷಣಾ ವೇದಿಕೆಗಳಂತಹ ದುರಭಿಮಾನಿ, ಭೂದಂಧೆಯ, ಎತ್ತುವಳಿ ಸಂಘಟನೆಗಳು ಬೆಳೆಯುತ್ತಾ ಹಾನಿ ಮಾಡುತ್ತಿವೆ. ಯಾಕೆಂದರೆ ಜನರಿಗೆ ಸಂಘಟಿತ ಹೋರಾಟ ಅಗತ್ಯವೆನಿಸುತ್ತದೆ. ಬೇರೆ ಆಯ್ಕೆ ಇಲ್ಲವಾಗಿದೆ. ದಲಿತ ರೈತ ಚಳುವಳಿಗಳು ಇಂದು ಚಳುವಳಿಯಾಗಿ ಉಳಿದಿಲ್ಲದಿರುವುದರ ಹಿಂದಿನ ಕಾರಣಗಳಾದ ವ್ಯಕ್ತಿಕೇಂದ್ರತೆ, ವ್ಯಕ್ತಿ ಪ್ರತಿಷ್ಠೆ, ಅಪ್ರಜಾತಾಂತ್ರಿಕತೆ, ಸಂಕುಚಿತತೆ, ಕೆಟ್ಟ ರಾಜಕೀಯಗಳನ್ನು ಈಗಲಾದರೂ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ, ತಿದ್ದಿಕೊಳ್ಳಬೇಕಾಗಿದೆ. ಇಲ್ಲಿ ನಾನು ಸಾರಸಗಟಾಗಿ ಎಲ್ಲರನ್ನೂ ಹೇಳುತ್ತಿಲ್ಲ. ಕೆಲವರು ಸಾಮೂಹಿಕವಾಗಿ ತೊಡಗುತ್ತಿರುವುದನ್ನು ನಾನು ನಿರಾಕರಿಸುತ್ತಿಲ್ಲ.

ಹಲವಾರು ಪ್ರಜಾತಂತ್ರವಾದಿಗಳು ಒಂದು ಮಟ್ಟದಲ್ಲಿ ದನಿ ಎತ್ತುತ್ತಿದ್ದರೂ ಸಂಘಟಿತರಾಗಿ ಮಾಡುವುದಿಲ್ಲ, ಒಗ್ಗೂಡಿ ಮಾಡುವ ಪ್ರಯತ್ನ ಕಡಿಮೆ. ವೈಯಕ್ತಿಕ ನೆಲೆಯಲ್ಲಿ ನಿಂತು ಮಾತಾಡುತ್ತಿರುತ್ತಾರೆ.

ಇದೆಲ್ಲದರಿಂದಾಗಿ ಕೋಮುವಾದಿ, ಜಾತಿವಾದಿ, ಪ್ರತಿಗಾಮಿ ಶಕ್ತಿಗಳು ತಮ್ಮ ಆಟಾಟೋಪಗಳನ್ನು ಹೆಚ್ಚಿಸುತ್ತಿವೆ. ಲೂಟಿಕೋರ ಉದ್ಯಮಿಗಳ ಕಾಟ ಹೆಚ್ಚುತ್ತಿವೆ. ಸರ್ಕಾರಗಳು ಜನವಿರೋಧಿ ಕಾಯ್ದೆ ಕಟ್ಟಲೆ ನಿರ್ಬಂಧಗಳನ್ನು ಯಾವುದೇ ತಡೆಯಿಲ್ಲದೆ ಜಾರಿಗೊಳಿಸುತ್ತಿವೆ. ಪ್ರಜಾತಾಂತ್ರಿಕ ಜನಪರ ಮೌಲ್ಯಗಳು ಹಾಗೂ ಅವಕಾಶಗಳು ತಗ್ಗುತ್ತಿವೆ. ಪ್ರಜಾಪ್ರಭುತ್ವವಾದಿ ಬುದ್ಧಿಜೀವಿಗಳು ಸತ್ವರಹಿತರಾಗುತ್ತಿದ್ದಾರೆ. ಈಗಲಾದರೂ ಈ ತಪ್ಪುಗಳನ್ನು ಸರಿಪಡಿಸಿ ತಿದ್ದಿಕೊಳ್ಳಬೇಕಾದ ಜವಾಬ್ದಾರಿ ಎಲ್ಲಾ ಜನಪರ ವ್ಯಕ್ತಿಗಳು ತೆಗೆದುಕೊಳ್ಳಬೇಕೆನಿಸುತ್ತಿದೆ. □

ಪ್ರೀತಿ

ಮಂಜಿನಲ್ಲಿ ಸೇರಿದ್ದರೆ
ಕರಗಿ ಹೋಗುತ್ತಿತ್ತು,
ಬೆಂಕಿಗೆ ಬಿದ್ದಿದ್ದರೆ
ಬರಿದು ಹೋಗುತ್ತಿತ್ತು,
ನನ್ನದೆಗೆ ಬಿದ್ದು
ಅದೀಗ ಕಾವ್ಯವಾಗಿದೆ.

○ ದಯಾನಂದ

ಸಮಾಜ ಶಾಸ್ತ್ರೀಯ ಸಮಸ್ಯೆ

(7ನೇ ಪುಟದಿಂದ)

ಬೇಕಿತ್ತು. ಬ್ರಾಹ್ಮಣನೇ ಸಮಾಜ ವ್ಯವಸ್ಥೆಯ ಅದಿನಾಯಕನಾಗಬೇಕಿತ್ತು. ಅಸ್ಪೃಶ್ಯ ಅಥವ ದಲಿತ ಇಂದು ಸಮಾಜಿಕವಾಗಿ ಆರ್ಥಿಕವಾಗಿ ಧಾರ್ಮಿಕವಾಗಿ ಸಾಂಸ್ಕೃತಿಕವಾಗಿ ಧ್ವನಿ ಎತ್ತಲಾಗದವನಂತೆ ಇರಬೇಕಿತ್ತು. (ಭಾರತದ ಜಾತೀಯ ವ್ಯವಸ್ಥೆಯ ಕುರಿತಾಗಿ ಮಾತನಾಡುವಾಗ 50-60 ವರ್ಷಗಳಿಂದ ಇದೇ ರೀತಿಯ ವ್ಯಾಖ್ಯಾನಗಳನ್ನು ನೀಡುತ್ತಿದ್ದಾರೆ) ಆದರೆ ಇಂದು ಹಾಗಾಗುತ್ತಿಲ್ಲ. ಅದಕ್ಕೆ ಒಂದು ಅತ್ಯಂತ ಉತ್ತಮ ಉದಾಹರಣೆ ಎಂದರೆ ಉತ್ತರ ಪ್ರದೇಶದ ಚುನಾವಣಾ ಫಲಿತಾಂಶ ಇಲ್ಲಿ ಮಾಯಾವತಿಯವರ ಬಹುಜನ ಸಮಾಜವಾದಿ ಪಕ್ಷ ತನ್ನ ಒಂದು ವಿಜಯವನ್ನು ಅಲ್ಲಿನ ಎಲ್ಲಾ ಜಾತಿಗಳನ್ನೊಳಗೊಂಡಂತೆ ಪಡೆದಿದ್ದಾರೆ. ಒಂದು ವೇಳೆ ಜಾತಿಯ ಸಿದ್ಧಾಂತಗಳನ್ನು ನಿರೂಪಿಸಿದಂತೆ ಸಮಾಜ ನಿಂತ ನೀರಾಗಿದ್ದರೆ. ಈ ರೀತಿಯ ಹೊಂದಾಣಿಕೆ ಸಾಧ್ಯವೇ ಆಗಬಾರದಾಗಿತ್ತು. ಆದರೆ, ಇಂದು ಅದು ಸಾಧ್ಯವಾಗಿದೆ ಎಂದಾದಲ್ಲಿ ನಮ್ಮ ಸಿದ್ಧಾಂತಗಳು ವಿಮರ್ಶಕರು ಜಾತಿ ಮತ್ತು ರಾಜಕಾರಣವನ್ನು ನೋಡುವ ದೃಷ್ಟಿಯಲ್ಲಿ ಎಲ್ಲಿಯೋ ಗೊಂದಲವಿದ್ದಂತಿದೆ. ಈ ಪರಿಸ್ಥಿತಿ ಕೇವಲ ಉತ್ತರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಕರ್ನಾಟಕದ ಜಾತಿ ಮತ್ತು ರಾಜಕಾರಣದ ಇತಿಹಾಸವನ್ನು ಗಮನಿಸಿದರೆ ಈ ಅಂಶ ಇನ್ನು ಸ್ಪಷ್ಟವಾಗುತ್ತದೆ. ಲೇಖನದ ಅಗತ್ಯಕ್ಕಾಗಿ ಕರ್ನಾಟಕದ ರಾಜಕೀಯದ ಇತಿಹಾಸವನ್ನು ಜಾತಿಯ ಪ್ರಭಾವದೊಂದಿಗೆ 4 ಹಂತಗಳಲ್ಲಿ ಗುರುತಿಸಬಹುದಾಗಿದೆ.

* ಬ್ರಾಹ್ಮಣ ಚಳುವಳಿ * ಬ್ರಾಹ್ಮಣೇತರ ಚಳುವಳಿ
* ಹಿಂದುಳಿದ ವರ್ಗಗಳ ಹೋರಾಟ * ದಲಿತ ಚಳುವಳಿ

ಈ ಎಲ್ಲಾ ಹೋರಾಟ ಮತ್ತು ಚಳುವಳಿಗಳಲ್ಲಿ ಜಾತೀಯು ಅತ್ಯಂತ ಪ್ರಮುಖವಾದ ಪ್ರಭಾವವನ್ನು ಬೀರಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಜಾತಿ ವ್ಯವಸ್ಥೆಯಲ್ಲಿ ವಿವರಿಸಿದಂತೆ ಭಾರತೀಯ ಸಮಾಜ ಇಲ್ಲ ಎಂಬುವುದು ಇದರಿಂದ ಸ್ಪಷ್ಟವಾಗುತ್ತದೆ. ಒಂದು ವೇಳೆ ಹಾಗೆ ಇದ್ದಿದ್ದರೆ ಈ ಹೋರಾಟಗಳು ನಡೆಯಲೇಬಾರದಾಗಿತ್ತು. ಮತ್ತು ರಾಜಕರಣದಲ್ಲಿ ಇಂದಿಗೂ ಸಹ ಸಮಾಜದ ಉನ್ನತ ವರ್ಗವಾದ ಬ್ರಾಹ್ಮಣರೇ (ಸಿದ್ಧಾಂತದಲ್ಲಿ ವಿವರಿಸಿರುವಂತೆ) ಪ್ರತಿನಿಧ್ಯ ವಹಿಸಬೇಕಾಗಿತ್ತು. ಅದರೆ ಇಂದು ಹಾಗಾಗುತಿಲ್ಲ. ಕಾಲಕಾಲಕ್ಕೆ ತಕ್ಕಂತೆ ರಾಜಕೀಯದಲ್ಲಿ ಹಲವಾರು ವ್ಯತ್ಯಾಸಗಳನ್ನು ಕಾಣುತ್ತಿದ್ದೇವೆ. ಒಟ್ಟಾರೆಯಾಗಿ ಇಲ್ಲಿನ ಸಮಸ್ಯೆ ಎಂದರೆ ಭಾರತದಲ್ಲಿನ ಜಾತಿ ಮತ್ತು ರಾಜಕಾರಣವನ್ನು ಕುರಿತು ವಿಶ್ಲೇಷಿಸಿರುವ ಚಿಂತಕರು ಜಾತಿಯ ನಡುವಿನ ತಾರತಮ್ಯವನ್ನು ಜಾತಿಯ ವ್ಯವಸ್ಥೆ ಎಂದು ನಿರೂಪಿಸಿದ್ದಾರೆ. ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ "ಭಾರತದ ಜಾತಿ ವ್ಯವಸ್ಥೆ ಪಾಶ್ಚಾತ್ಯರು ತಮ್ಮ ಒಂದು ಸಾಂಸ್ಕೃತಿಕರ ಹಿನ್ನಲೆಯಲ್ಲಿಯೇ ಪೌರ್ವತರನ್ನು ನೋಡಿದ್ದರಿಂದಲೇ ಈ ರೀತಿಯ ಗೊಂದಲಗಳಾಗಿವೆ ಎಂಬ ಅಂಶಸ್ಪಷ್ಟವಾಗುತ್ತಿದೆ. ಅದ್ದರಿಂದ ಯಾವುದೇ ಚಿಂತಕ ಜಾತಿ ಮತ್ತು ರಾಜಕಾರಣವನ್ನು ವಿವರಿಸುವಾಗ ಜಾತಿಯ ಕುರಿತಾದ ಸಮಾಜಶಾಸ್ತ್ರಿಯ ವಿವರಣೆಗಳಲ್ಲಿರುವ ಸಮಸ್ಯಗಳನ್ನು ಪರಿಹರಿಸಿಕೊಳ್ಳುವುದು ಅಂತ್ಯಂತ ಅಗತ್ಯವಾಗಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ರಾಜಕೀಯದಲ್ಲಿ ಮಹಿಳೆ

ಸರೋಜಿನಿ ನಾಯ್ಡು ಕಾಲದಿಂದ..... ಭಾರತದ ರಾಜಕೀಯ ಕ್ಷೇತ್ರ ಸಶಕ್ತ ಮಹಿಳೆಯರನ್ನು ಕಂಡಿದೆ. ೧೯೨೫ರಲ್ಲಿ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅನ್ನು ಮುನ್ನಡೆಸಿದ ಅದರ ಪ್ರಥಮ ಮಹಿಳಾ ಅಧ್ಯಕ್ಷೆ ಸರೋಜಿನಿ ನಾಯ್ಡು ಅವರಿಂದ ೧೯೬೬ರಲ್ಲಿ ರಾಷ್ಟ್ರದ ಮೊದಲ ಮಹಿಳಾ ಪ್ರಧಾನಿಯಾದ ಇಂದಿರಾ ಗಾಂಧಿಯವರೆಗೆ ಅಧಿಕಾರ ರಾಜಕಾರಣದಲ್ಲಿ ಮಹಿಳೆ ಹೆಜ್ಜೆ ಇರಿಸಿದ್ದಾಳೆ. ಜೊತೆಗೇ ಹಲವು ರಾಜ್ಯಗಳಲ್ಲಿ ಅನೇಕ ಮಹಿಳಾ ಮುಖ್ಯಮಂತ್ರಿಗಳು, ಸಚಿವರು ಆಡಳಿತ ನಡೆಸಿದರೂ ಭಾರತೀಯ ಮಹಿಳೆ ನಡೆಸಿದರೂ ಭಾರತೀಯ ಮಹಿಳೆ ರಾಜಕೀಯದಲ್ಲಿನ್ನೂ ನಗಣ್ಯಳಾಗಿಯೇ ಇದ್ದಾಳೆ. ದಕ್ಷಿಣ ಏಷ್ಯಾ ರಾಷ್ಟ್ರಗಳ ಪರಂಪರೆಗೆ ಅನುಗುಣವಾಗಿ ಅಧಿಕಾರ ಹಿಡಿದ ಬಹುತೇಕ ಮಹಿಳೆಯರಿಗೆ ತಂದೆ, ಪತಿ ಅಥವಾ ಪುರುಷ ಸಂಬಂಧಿಗಳ ಬೆಂಬಲ ಇತ್ತು.

ಸುಪ್ರಿಯಾ

ಕಾಂಗ್ರೆಸ್, ಬಿಎಸ್‌ಪಿ, ಎಐಎಡಿಎಂಕೆ, ತೃಣಮೂಲ ಕಾಂಗ್ರೆಸ್ ನೇತೃತ್ವವನ್ನು ಮಹಿಳೆಯರೇ ವಹಿಸಿದ್ದರೂ 14ನೇ ಲೋಕ ಸಭೆಯಲ್ಲಿ ಮಹಿಳೆಯರ ಪ್ರಾತಿಬನಿಧ್ಯ ಅತ್ಯಂತ ಕಡಿಮೆ ಇತ್ತು. ಈಗ 15ನೇ ಲೋಕಸಭೆ ಚುನಾವಣೆ ಸಂದರ್ಭದಲ್ಲೂ ಪರಿಸ್ಥಿತಿ ಸುಧಾರಿಸ ಲಿಲ್ಲ. ರಾಜಕೀಯ ಪ್ರವೇಶಕ್ಕೆ ಮಹಿಳೆಗಿರುವ ಸಮಸ್ಯೆಗಳೇನು?

ಜಿಲ್ಲಾ ಪರಿಷತ್ ಹಾಗೂ ಪಂಚಾಯಿತಿ ಮಟ್ಟಗಳಲ್ಲಿ ಮೂರನೆ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ ವಿಚಾರ ಯಾವುದೇ ರಾಜಕೀಯ ಪಕ್ಷಗಳ ಪ್ರತಿರೋಧವಿಲ್ಲದೆ ಭಾರತದ ಎಲ್ಲಾ ರಾಜ್ಯಗಳಲ್ಲಿ ಜಾರಿಯಾಗಿ ಹೋಯಿತು.

ಈ ದಿಸೆಯಲ್ಲಿ ಕೇಂದ್ರ ಸರ್ಕಾರದ ಶಾಸನ ಜಾರಿಯಾಗುವ ಮುಂಚೆಯೇ ಕರ್ನಾಟಕದಲ್ಲಿ 1983ರಲ್ಲೇ ರಾಮಕೃಷ್ಣ ಹೆಗಡೆ ಅವರ ಸರ್ಕಾರ ಈ ಪ್ರಕ್ರಿಯೆಯನ್ನು ಆರಂಭಿಸಿತ್ತು. ಇದು ಗ್ರಾಮ ಪಂಚಾಯಿತಿ ಮಟ್ಟಗಳಲ್ಲಿ ಮಹಿಳೆಯರಿಗೆ ಶೇ.25ರಷ್ಟು ಮೀಸಲು ಒದಗಿಸಿತ್ತು.

1980ರ ದಶಕದ ಮಧ್ಯಭಾಗದಲ್ಲಿ ಶರದ್‌ಜೋಷಿ ನೇತೃತ್ವದ ಮಹಾರಾಷ್ಟ್ರದ ಶೇತ್ಕರಿ ಸಂಘಟನೆ ಮಹಾರಾಷ್ಟ್ರ ರಾಜ್ಯದ ಪಂಚಾಯಿತಿ ಚುನಾವಣೆಗಳಿಗೆ ಸರ್ವ ಮಹಿಳಾ ಸಮಿತಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿತು. ಸಾಧ್ಯವಾದಷ್ಟು ಕ್ಷೇತ್ರಗಳಲ್ಲಿನ ಜಿಲ್ಲಾ ಪರಿಷತ್‌ಗಳಿಗೆ ಮಹಿಳೆಯರು ಆಯ್ಕೆಯಾಗುವುದರತ್ತ ಗಮನ ಕೇಂದ್ರೀಕರಿಸಿದವು. ಇದಕ್ಕೆ ಸಂಘಟನೆಯ ಪುರುಷರ ಬೆಂಬಲದ ಪಾತ್ರವಿತ್ತು.

ಹೀಗಿದ್ದೂ 1996ರ ಸೆಪ್ಟೆಂಬರ್‌ನಲ್ಲಿ ಸಂಸತ್ತಿನಲ್ಲಿ ಮಂಡಿಸಲಾದ ಸಂಸತ್ ಹಾಗೂ ರಾಜ್ಯ ಶಾಸನಸಭೆಗಳಲ್ಲಿ ಮೂರನೇ ಒಂದರಷ್ಟು ಸ್ಥಾನ ಮಹಿಳೆಯರಿಗೆ ಮೀಸಲಿಡುವ ಮಸೂದೆಗೆ ಭಾರಿ ಪ್ರತಿರೋಧ ಹಾಗೂ ವಿರೋಧ ವ್ಯಕ್ತವಾಯಿತು.

ವಿಪರ್ಯಾಸವೆಂದರೆ ನಮ್ಮೆಲ್ಲಾ ಪ್ರಮುಖ ರಾಜಕೀಯ ಪಕ್ಷಗಳೂ–ಕಾಂಗ್ರೆಸ್, ಬಿಜೆಪಿ, ಜನತಾದಳ ಹಾಗೂ ಎರಡು ಕಮ್ಯುನಿಸ್ಟ್ ಪಕ್ಷಗಳೂ ತಮ್ಮ ರಾಜಕೀಯ ಪ್ರಣಾಳಿಕೆಗಳಲ್ಲಿ ಶೆ.33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲು ಬದ್ಧ ಎಂದು ಹೇಳಿಕೊಳ್ಳುತ್ತಲೇ ಬಂದಿವೆ.

ಶಾಸನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಎಷ್ಟೆಲ್ಲಾ ಹೋರಾಡಿದರೂ ಫಲ ಕಾಣದ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. 15ನೇ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ನೋಡಿದರೆ ರಾಜಕೀಯ ರಂಗವಿನ್ನೂ ಪುರುಷರ ಕೋಟೆಯಾಗಿಯೇ ಮುಂದುವರಿಯುವಂತೆ ಕಾಣುತ್ತಿದೆ. ಈ ಪರಿಸ್ಥಿತಿಯನ್ನು 1920ರ ದಶಕದಲ್ಲಿದ್ದ ಪರಿಸ್ಥಿತಿಗೆ ಹೋಲಿಸಿ ನೋಡಿ:

ಪ್ರತಿನಿಧಿ ಸರ್ಕಾರಕ್ಕಾಗಿ ಭಾರತೀಯರ ಚಳವಳಿಗೆ ಸ್ಪಂದಿಸದ ಬ್ರಿಟಿಷ್ ಸರ್ಕಾರ, ಸರ್ಕಾರದಲ್ಲಿ ಕೆಲವು ಭಾರತೀಯರನ್ನು ಒಳಗೊಳ್ಳುವ ಉದ್ದೇಶದಿಂದ ಸಾಂವಿಧಾನಿಕ ಸುಧಾರಣೆಗಳಿಗಾಗಿ ಪ್ರಸ್ತಾವವೊಂದನ್ನು ಸಿದ್ಧಪಡಿಸಲು 1919ರಲ್ಲಿ ಮಾಂಟೇಗ್ ಹಾಗೂ ಜೆಮ್ಸ್ ಪೋರ್ಡ್ ನೇತೃತ್ವದ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯ ಮುಂದೆ ಅನೇಕ ಗುಂಪುಗಳು ತಂತಮ್ಮ ಪಾತಿನಿಧ್ಯದ ಅಗತ್ಯದ ವಿಚಾರಗಳನ್ನು ಪ್ರತಿಪಾದಿಸಿಕೊಂಡವು. ಈ ಸಮಿತಿಯ ಬಳಿಗೆ ಸರೋಜಿನಿ ನಾಯ್ಡು ಹಾಗೂ ಮಾರ್ಗರೆಟ್ ಕಸಿನ್ಸ್ ಮಹಿಳೆಯರ ಸಣ್ಣ ನಿಯೋಗವೊಂದನ್ನು ಒಯ್ದಿದ್ದರು. ಪುರುಷರಂತೆ ಮಹಿಳೆಯರಿಗೂ ಶಾಸನಸಭೆಗಳಲ್ಲಿ ಪ್ರಾತಿನಿಧ್ಯದ ಸಮಾನ ಹಕ್ಕುಗಳನ್ನು ಒದಗಿಸಬೇಕೆಂದು ಅವರು ಒತ್ತಾಯಿಸಿದ್ದರು.

ಬ್ರಿಟಿಷ್ ಸರ್ಕಾರ ಸಹಜವಾಗಿಯೇ ಈ ಬೇಡಿಕೆ ಮೂರ್ಖತನದ್ದು ಎಂದು ಭಾವಿಸಿತು. ಏಕೆಂದರೆ ಬಹುತೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೋರಾಟಗಳೇ ನಡೆದಿದ್ದರೂ ಆಗಿನ್ನೂ ಮಹಿಳೆಯರಿಗೆ ಮತದಾನದ ಹಕ್ಕನ್ನೇ ನೀಡಿರಲಿಲ್ಲ.

'ಪರ್ದಾ ಪದ್ಧತಿ ಹಾಗೂ ಮಹಿಳಾ ಶಿಕ್ಷಣದ ವಿರುದ್ಧ ನಿಷೇಧ ಜಾರಿಗೊಳಿಸುವುದನ್ನು ಮುಂದುವರಿಸಿರುವ ಸಮಾಜದಲ್ಲಿ ಮಹಿಳೆಯರಿಗೆ ವೋಟು ನೀಡುವ ಹಕ್ಕಿನ ವಿಸ್ತರಣೆ ಅಪಕ್ವವಾಗುತ್ತದೆ' ಎಂದು ಸೌತ್‌ಬರೊ ಸಮಿತಿ ತಿಳಿಸಿತ್ತು. (ಸ್ಟೇಟಸ್ ಆಫ್ ವಿಮೆನ್ ಸಮಿತಿ ಕುರಿತ ವರದಿ ಪುಟ 284–285).

ಆದರೆ ಈ ಬೇಡಿಕೆಯನ್ನ ಯಥಾವತ್ತಾಗಿ ತಿರಸ್ಕರಿಸುವ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಳ್ಳುವ ಬದಲಿಗೆ ಮಹಿಳೆಯರಿಗೆ ಮತದಾನದ ಹಕ್ಕು ನೀಡಲು ಅಥವಾ ತಿರಸ್ಕರಿಸಲು ಬ್ರಿಟಿಷ್ ಸರ್ಕಾರ ಆಗಷ್ಟೇ ಭಾರತದಲ್ಲಿ ರಚಿಸಿದ್ದ ಪ್ರಾದೇಶಿಕ ಶಾಸನಸಭೆ

(ಪ್ರಾವಿನ್ಶಿಯಲ್ ಲೆಜಿಸ್ಲೇಚರ್)ಗಳ ವಿವೇಚನೆಗೇ ವಹಿಸಿತು. ಬ್ರಿಟಿಷರ ಪರಿಕಲ್ಪನೆ ಏನಾಗಿತ್ತೆಂದರೆ, ಭಾರತೀಯರು ಅಷ್ಟೊಂದು 'ಹಿಂದುಳಿದವರು' ಆಗಿರುವುದರಿಂದ ಅವರು ಮಹಿಳೆಯರಿಗೆ ಸಮಾನ ರಾಜಕೀಯ ಹಕ್ಕುಗಳನ್ನು ಒಪ್ಪಿಕೊಳ್ಳುವುದು ಎಂದೂ ಸಾಧ್ಯವೇ ಇಲ್ಲ ಎಂಬಂತಹದಾಗಿತ್ತು. ಆದರೆ ಅ ಸಂದರ್ಭದಲ್ಲಿ ಭಾರತದಲ್ಲಿ ಯಾವುದೇ ಸಾಮೂಹಿಕವಾದ ಮಹಿಳಾ ಮತದಾನ ಚಳವಳಿ ನಡೆಯದೇ ಇದ್ದರೂ ಭಾರತದ ಪ್ರತಿಯೊಂದು ಪ್ರಾದೇಶಿಕ ಶಾಸನಸಭೆಗಳು ಯಾವುದೇ ಗೊಂದಲ ಇಲ್ಲದೆ ಪುರುಷರೊಂದಿಗೆ ಮಹಿಳೆಯರ ಪ್ರತಿನಿಧ್ಯಕ್ಕೂ ಅಲ್ಪಾವಧಿಯಲ್ಲೇ ಅವಕಾಶ ನೀಡಿದವು.

ಭಾರತ ಹಾಗೂ ಬ್ರಿಟನ್‌ನ ಮಹಿಳಾ ಸಂಘಟನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಐರಿಷ್ ಸ್ತ್ರೀವಾದಿ ಮಾರ್ಗರೆಟ್ ಕಸಿನ್ಸ್‌ನ ಸಾಕ್ಷ್ಯ ಅಥವಾ ನಿವೇದನೆ ಮಹಿಳೆಯರ ರಾಜಕೀಯ ಹಕ್ಕುಗಳ ಬಗ್ಗೆ ಪಾಶ್ಚಾತ್ಯ ಹಾಗೂ ಭಾರತೀಯ ಪ್ರತಿಕ್ರಿಯೆಗಳ ಮಧ್ಯದ ವೈರುಧ್ಯವನ್ನು ಸ್ಪಷ್ಟವಾಗಿ ಬಿಡಿಸಿ ಹೇಳಿದೆ. ಅದರ ಪಠ್ಯ ಹೀಗಿದೆ:

'ಐವತ್ತು ವರ್ಷಗಳ ಶಾಂತಿಯುತ ಸಾಂವಿಧಾನಿಕ ಕ್ರಮಗಳನ್ನೆಲ್ಲಾ ಪ್ರಯತ್ನಿಸಿಯಾದ ನಂತರ ಎಂಟು ವರ್ಷಗಳ ಕಾಲ ನಮ್ಮ ತೀವ್ರತರ ಪ್ರಚಾರಾಂದೋಲನ ಕಾಲದಲ್ಲಿ ಬಹುಶಃ ಪುರುಷ ರಾಜಕಾರಣಿಗಳ ಕ್ರೌರ್ಯ, ಅನ್ಯಾಯಗಳು, ಪುರುಷ ನಿಯಂತ್ರಿತ ಮಾಧ್ಯಮ, ಇಂಗ್ಲೆಂಡ್ ಹಾಗೂ ಐರ್‌ಲೆಂಡ್‌ಗಳಲ್ಲಿ ರಸ್ತೆಯಲ್ಲಿ ಹೋಗುವ ವ್ಯಕ್ತಿಗಳಿಂದ ನರಳಿದ ನನ್ನಂಥ ಮಹಿಳೆಯರಿಗೆ, ಈ ಭಾರತೀಯ ಶಾಸಕರ ಸ್ವಯಂ ಸರ್ಕಾರದಲ್ಲಿ ಮೂಲ ಪರೀಕ್ಷೆಯನ್ನು ಅಂಗೀಕರಿಸಿದ ವಿವೇಚನೆ ಹಾಗೂ ಸಮಾನತೆಯನ್ನು ಪೂರ್ಣ ಮೆಚ್ಚಿಕೊಳ್ಳುವಂತಹದ್ದಾಗಿದೆ.....1921ರ ಮದ್ರಾಸ್ ಶಾಸನಸಭಾ ಮಂಡಳಿ ಹಾಗೂ 1929ರ ಬಿಹಾರ ಮಂಡಳಿಯವರೆಗೆ ಭಾರತದ ಎಲ್ಲಾ ಶಾಸನಸಭಾ ಮಂಡಳಿಗಳೂ ಸ್ವಲ್ಪ ಮಟ್ಟಿಗಿನ ಸಾಕ್ಷರತೆ, ಆಸ್ತಿ, ವಯಸ್ಸು, ತೆರಿಗೆ ಪಾವತಿ, ವಾಸಸ್ಥಳದ ಅಳತೆ....ಯಂತಹ ಸಮಾನ ಅರ್ಹತೆಗಳನ್ನು ಹೊಂದಿದ ಪುರುಷರು ಹಾಗೂ ಮಹಿಳೆಯರಿಗೆ ಸಮಾನ ನಾಗರಿಕ ಸಂಕೇತ ಹಾಗೂ ಸಾಧನಗಳನ್ನು ನೀಡಲಾಗಿತ್ತು.'(ಮಾರ್ಗರೆಟ್ ಕಸಿನ್ಸ್, ಇಂಡಿಯನ್ ವುಮನ್ ಹುಡ್ ಟುಡೆ, ಕಿತಾಬಿಸ್ತಾನ್ ಸೀರೀಸ್, ಅಲಹಾಬಾದ್ 1937 ಪುಟ 32-33).

ಸ್ವಲ್ಪ ಮಟ್ಟಿಗಿನ ಆಸ್ತಿ ಹಾಗೂ ಶಿಕ್ಷಣ ಹೊಂದಿದವರಿಗಷ್ಟೇ ಒಂದು ಮಿತಿಯಲ್ಲಿ ಮತದಾನದ ಹಕ್ಕನ್ನು ನೀಡಲು ಬ್ರಿಟಿಷರು ಸಿದ್ಧವಾಗಿದ್ದರಿಂದ ಈ ಮಿತಿಗಳು ಸೇರಿಕೊಂಡಿದ್ದವು. ಅವರು ಸಾರ್ವತ್ರಿಕ ವಯಸ್ಕ ಮತದಾನ ಪರಿಗಣಿಸಲು ಸಿದ್ಧರಿರಲಿಲ್ಲ. ಲಿಂಗ ತಾರತಮ್ಯ ಇಲ್ಲದೆ ವಯಸ್ಕ ಮತದಾನವನ್ನು ತಕ್ಷಣ ಒಪ್ಪಿಕೊಳ್ಳಬೇಕೆಂದು 1930ರಲ್ಲಿ ಪ್ರಾತಿನಿಧಿಕ ಮಹಿಳಾ ಸಂಘಟನೆಯೊಂದು ಮನವಿಯನ್ನು ಸಿದ್ಧ ಪಡಿಸಿದಾಗ ಬ್ರಿಟಿಷ್ ಸರ್ಕಾರ ಅದನ್ನು ತಿರಸ್ಕರಿಸಿತ್ತು. ಇದೇ ಬೇಡಿಕೆ ಭಾರತೀಯ ನಾಯಕರಿಂದ ವಿಭಿನ್ನವಾದ ಪ್ರತಿಕ್ರಿಯೆಯನ್ನು ಪಡೆದುಕೊಂಡಿತ್ತು. ಅದರ ಮುಂದಿನ ವರ್ಷವೇ 1931ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಕರಾಚಿ ಅಧಿವೇಶನ ಮಹಿಳೆಯರ ಸ್ಥಾನಮಾನ, ಅರ್ಹತೆ ಏನೇ ಇದ್ದರೂ ಮಹಿಳೆಯರಿಗೆ ರಾಜಕೀಯ ಸಮಾನತೆ ನೀಡುವ ಐತಿಹಾಸಿಕ ನಿರ್ಣಯವನ್ನು ಕೈಗೊಂಡಿತು. ಈ ಪ್ರಸ್ತಾವಕ್ಕೆ ಯಾವುದೇ ವಿರೋಧವೂ ಬರಲಿಲ್ಲ.

ಯೂರೋಪಿನ ಮಹಿಳೆಯರಿಗೆ ಮತದಾನದ ಹಕ್ಕು ಪಡೆದುಕೊಳ್ಳಲು ಇಡೀ ಶತಮಾನದ ಹೋರಾಟಬೇಕಾಯಿತು. ಆದರೆ ಭಾರತದ ಮಹಿಳೆಯರಿಗೆ ಮತದಾನದ ಹಕ್ಕು ಏನೂ ಕಿರಿಕಿರಿ ಇಲ್ಲದೆ ಅಥವಾ ಹೋರಾಟ ಇಲ್ಲದೆಯೇ ದಕ್ಕಿದೆ. ಗರ್ಭಪಾತದ ಹಕ್ಕು, ಸಮಾನ ಉದ್ಯೋಗ ಹಾಗೂ ಶೈಕ್ಷಣಿಕ ಅವಕಾಶಗಳ ಹಕ್ಕು, ಸಮಾನ ಉದ್ಯೋಗ ಹಾಗೂ ಶೈಕ್ಷಣಿಕ ಅವಕಾಶಗಳ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನ, ಕೌಟುಂಬಿಕ ಹಿಂಸೆ ವಿರುದ್ಧದ ರಕ್ಷಣೆ-ಈ ಎಲ್ಲವೂ ಭಾರತದಲ್ಲಿ ಹೆಚ್ಚು ಪ್ರತಿರೋಧ ಅಥವಾ ದ್ವೇಷ ಇಲ್ಲದೆ ಕಾನೂನುಗಳಾಗಿ ಜಾರಿಯಾಗಿವೆ. ಆದರೆ ಈ ಕಾನೂನುಗಳ ಅನುಷ್ಠಾನದಲ್ಲಿ ಸಮರ್ಪಕ ಆಡಳಿತ ಯಂತ್ರದ ಕೊರತೆ ಅಥವಾ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ಎಲ್ಲಾ ಪ್ರಗತಿಪರ ಕಾನೂನುಗಳು ನಾಗರಿಕರ ಬದುಕಿನ ಮೇಲೆ ಪ್ರಭಾವ ಬೀರುವಲ್ಲಿ ವಿಫಲವಾಗಿವೆ.

ಮಹಿಳೆಯ ಹಕ್ಕುಗಳನ್ನು ರಕ್ಷಿಸುವ ಪ್ರತಿಪಾದನೆಯ ಕಾನೂನುಗಳು ವಿಶ್ವದ ಬೇರೆ ರಾಷ್ಟ್ರಗಳಲ್ಲಿ ಉಂಟು ಮಾಡುವ ಪ್ರತಿರೋಧ ಅಥವಾ ದ್ವೇಷಕ್ಕೆ ಹೋಲಿಸಿದರೆ ಭಾರತದಲ್ಲಿ ಇದು ಕಡಿಮೆ.

ಯೂರೋಪಿನ ಮಹಿಳೆಯರಿಗೆ ಮತದಾನದ ಹಕ್ಕು ಪಡೆದುಕೊಳ್ಳಲು ಇಡೀ ಶತಮಾನದ ಹೋರಾಟ ಬೇಕಾಯಿತು. ಆದರೆ ಭಾರತದ ಮಹಿಳೆಯರಿಗೆ ಮತದಾನದ ಹಕ್ಕು ಏನೂ ಕಿರಿಕಿರಿ ಇಲ್ಲದೆ ಅಥವಾ ಹೋರಾಟ ಇಲ್ಲದೆಯೇ ದಕ್ಕಿದೆ. ಗರ್ಭಪಾತದ ಹಕ್ಕು, ಸಮಾನ ಉದ್ಯೋಗ ಹಾಗೂ ಶೈಕ್ಷಣಿಕ ಅವಕಾಶಗಳ ಹಕ್ಕು, ಸಮಾನ ಉದ್ಯೋಗ ಹಾಗೂ ಶೈಕ್ಷಣಿಕ ಅವಕಾಶಗಳ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನ, ಕೌಟುಂಬಿಕ ಹಿಂಸೆ ವಿರುದ್ಧದ ರಕ್ಷಣೆ-ಈ ಎಲ್ಲವೂ ಭಾರತದಲ್ಲಿ ಹೆಚ್ಚು ಪ್ರತಿರೋಧ ಅಥವಾ ದ್ವೇಷ ಇಲ್ಲದೆ ಕಾನೂನುಗಳಾಗಿ ಜಾರಿಯಾಗಿವೆ. ಆದರೆ ಈ ಕಾನೂನುಗಳ ಅನುಷ್ಠಾನದಲ್ಲಿ ಸಮರ್ಪಕ ಆಡಳಿತ ಯಂತ್ರದ ಕೊರತೆ ಅಥವಾ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ಎಲ್ಲಾ ಪ್ರಗತಿಪರ ಕಾನೂನುಗಳು ನಾಗರಿಕರ ಬದುಕಿನ ಮೇಲೆ ಪ್ರಭಾವ ಬೀರುವಲ್ಲಿ ವಿಫಲವಾಗಿವೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಎಲ್ಲಾ ಹಂತಗಳಲ್ಲೂ ಕಾಂಗ್ರೆಸ್ ಪಕ್ಷದಲ್ಲಿ ಹಲವು ಮಹಿಳಾ ಕಾರ್ಯಕರ್ತೆಯರು ಹಾಗೂ ನಾಯಕಿಯರು ಸಕ್ರಿಯರಾಗಿದ್ದರು. ಆದರೆ ಸ್ವಾತಂತ್ರ್ಯಾನಂತರ 1952ರಲ್ಲಿ ಮೊದಲ ಲೋಕಸಭೆಗೆ ಚುನಾವಣೆ ನಡೆದಾಗಲಿಂದಲೂ ಮಹಿಳಾ ಪ್ರಾತಿನಿಧ್ಯ ಪ್ರಮಾಣ ಶೇ. 10ಕ್ಕಿಂತ ಕಡಿಮೆ ಪ್ರಮಾಣಕ್ಕೇ ಸ್ಥಗಿತಗೊಂಡಿದೆ.

ಈ ಪಟ್ಟಿ ನೋಡಿ:

ಲೋಕಸಭೆ (ಕೆಳಮನೆ) ಯಲ್ಲಿ ಮಹಿಳಾ ಪ್ರಾತಿನಿಧ್ಯ

ಲೋಕಸಭೆ ಅವಧಿ	ಒಟ್ಟು ಸ್ಥಾನ	ಮಹಿಳಾ ಸದಸ್ಯರ ಸಂಖ್ಯೆ	ಪ್ರಮಾಣ
1952-57	489	14	2.8
1957-62	494	22	4.4
1962-67	494	31	6.2
1967-71	520	29	5.6
1971-77	520	21	4.05
1977-80	542	19	3.5
1980-84	542	28	5.1
1984-89	542	42	8.16
1989-91	529	29	5.5
1991-96	521	37	6.8
1996	543	40	7.37
1998	543	43	7.92
1999	543	49	9.02
2004	543	45	8.29

1999ರಲ್ಲಿ ಆಯ್ಕೆಯಾದ 13ನೇ ಲೋಕಸಭೆಯಲ್ಲಿ 49 ಮಹಿಳಾ ಸದಸ್ಯರಿದ್ದರು. ಶೇ.9.02ರಷ್ಟಾಗುವ ಈ ಪ್ರಮಾಣವೇ ಈವರೆಗೆ ಲೋಕಸಭೆಯಲ್ಲಿ ಕಂಡ ಗರಿಷ್ಠ ಮಹಿಳಾ ಪ್ರಾತಿನಿಧ್ಯವಾಗಿದೆ. ಕನಿಷ್ಠ ಪಾತಿನಿಧ್ಯವಿದ್ದದ್ದು ಕೇವಲ 14 ಎಂಪಿಗಳು ಅಥವಾ ಶೇ. 2.8ರಷ್ಟು ಮಹಿಳಾ ಎಂಪಿಗಳನ್ನು ಹೊಂದಿದ್ದ ಮೊದಲ ಲೋಕಸಭೆಯಲ್ಲಿ.

ಸ್ವತಂತ್ರ ಭಾರತದಲ್ಲಿ ರಾಜಕೀಯ ಎನ್ನುವುದು ಮಹಿಳೆಗೆ ಕ್ಲಿಷ್ಟಕರ ಆಗಿದೆ. ಇದಕ್ಕೆ ಮುಖ್ಯಕಾರಣ ಲಿಂಗ ತಾರತಮ್ಯ. ಪಕ್ಷದಲ್ಲಿ ಪ್ರಭಾವಶಾಲಿ ಪುರುಷರ ನೆರವಿಲ್ಲದ ತಮ್ಮತನ ಸಾಧಿಸುವುದು ಮಹಿಳೆಯರಿಗೆ ಕಷ್ಟ ಎನ್ನುವ ಸ್ಥಿತಿ ಇದೆ.

ಉತ್ತರಪ್ರದೇಶದ ಮುಖ್ಯಮಂತ್ರಿ ಮಾಯಾವತಿ

ಆದರೂ ನಮ್ಮ ರಾಜಕಾರಣದಲ್ಲಿ ಮಹಿಳೆಯರ ಕಡೆಗಣನೆ ಲಿಂಗ ತಾರತಮ್ಯದಾಚೆಗೂ ವ್ಯಾಪಿಸಿಕೊಳ್ಳುತ್ತದೆ. ಇದು ನಮ್ಮ ರಾಜಕಾರಣ ಹಾಗೂ ಸರ್ಕಾರಗಳಲ್ಲಿ ಅಪರಾಧಿಗಳು, ಭ್ರಷ್ಟರ ಪ್ರಭಾವ ಹೆಚ್ಚಾದಂತೆ ಪರಾಮಾಣಿಕ, ಸಭ್ಯ ರಾಜಕಾರಣಿಗಳ ಪ್ರಭಾವ ಕುಗ್ಗುವಿಕೆಯ ಪ್ರಕ್ರಿಯೆಯ ಭಾಗವೂ ಆಗಿರುತ್ತದೆ. ಚುನಾವಣಾ ರಾಜಕಾರಣದಲ್ಲಿ ನೆಲೆ ಉಳಿಸಿಕೊಂಡು ಪ್ರಾಮಾಣಿಕತೆಯನ್ನೂ ಕಾಪಾಡಿಕೊಳ್ಳುವುದು ಕ್ಲಿಷ್ಟಕರ ಎನ್ನುವ ಸನ್ನಿವೇಶ ಇದು. ಇಂತಹ ಭ್ರಷ್ಟ ವಾತಾವರಣದಲ್ಲಿ ಅಧಿಕಾರ, ಕಿತ್ತಾಟ, ಲೂಟಿಯಲ್ಲಿ ಪುರುಷ ರಾಜಕಾರಣಿಗಳನ್ನು ಅನುಕರಿಸುವಲ್ಲಿ ಸಮರ್ಥರಾದ ಮಹಿಳಾ ರಾಜಕಾರಣಿಗಳು ಮಾತ್ರ ಉಳಿದುಕೊಳ್ಳುವುದು ಸಾಧ್ಯ.

ಇಂದಿರಾ ಗಾಂಧಿ, ಜಯಲಲಿತಾ, ಮಾಯಾವತಿ, ಮುಂತಾದ ಮಹಿಳಾ ರಾಜಕಾರಣಿಗಳು ಅಧಿಕಾರದಲ್ಲಿದ್ದಾಗ ಭ್ರಷ್ಟ ಪುರುಷ ರಾಜಕಾರಣಿಗಳಂತೆಯೇ ಭ್ರಷ್ಟರು ಸರ್ವಾಧಿಕಾರಿಗಳಾದ ಉದಾಹರಣೆಗಳಿವೆ. ಈ ಮಹಿಳಾ ನಾಯಕಿಯ ಮಾದರಿಗಳು ಮಹಿಳಾ ಕಾಳಜಿಗಳನ್ನು ಬದಲಾಗದೇ ಧ್ವನಿಸುವಂತಹ ಪ್ರತೀಕಗಳೇನೂ ಅಲ್ಲ. ಇಡೀ ರಾಜಕೀಯ ಸ್ವರೂಪ ಬದಲಾಗದೇ ರಾಜಕೀಯಕ್ಕೆ ಬರೀ ಮಹಿಳೆಯ ಪ್ರವೇಶ ಹೊಸದೇನನ್ನೂ ತರದು.

ರಾಜಕಾರಣದಲ್ಲಿ ಸಂವಹನ, ಮೈತ್ರಿ ಮುಖ್ಯವಾದದ್ದು. ಆದರೆ ನಮ್ಮಲ್ಲಿನ ಸಾಂಸ್ಕೃತಿಕ ಕಾರಣಗಳಿಂದಾಗಿ ಪುರುಷರ ಜೊತೆಗಿನ ನಿಕಟ ಸಂಪರ್ಕವನ್ನು ಸಾಧಿಸುವುದು ಕ್ಲಿಷ್ಟಕರ. ಉಮಾಭಾರತಿಯ ಸ್ವತಂತ್ರ ಜನಪ್ರಿಯತೆಯನ್ನು ತಮ್ಮ ಅಧಿಕಾರಕ್ಕೆ ಬೆದರಿಕೆ ಎಂದು ಪರಿಗಣಿಸಿದ ಆಕೆ ಇದ್ದ ಬಿಜೆಪಿಯಲ್ಲಿನ ಪಕ್ಷದವರೇ ಆಕೆಯ ವಿರುದ್ಧ ನಡೆಸಿದ ಅಪನಿಂದೆಯ ಪ್ರಚಾರ ಆಕೆಯನ್ನು ಅತ್ಮಹತ್ಯೆಯ ಯತ್ನಕ್ಕೆ ದೂಡಿತ್ತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಬಿಜೆಪಿಯ ನಾಯಕರೊಬ್ಬರ ಜೊತೆಗಿನ ಆಕೆಯ ವೈಯಕ್ತಿಕ ನಿಟಕತೆಯನ್ನು ಎಲ್ಲಾ ಬಗೆಯ ಕೆಟ್ಟ ವದಂತಿಗಳ ಪ್ರಚಾರಕ್ಕೆ ಬಳಸಿದ್ದರು. ಪುರುಷರ ಜೊತೆಗೆ ಮುಕ್ತವಾಗಿ ಬೆರೆಯಲು ಅಡ್ಡಿಗಳನ್ನು ಸೃಷ್ಟಿಸುವ ಪರಿಸರ ಇಲ್ಲಿ ಅಂತರ್ಗತವಾಗಿದೆ. ಆದರೆ ಪುರುಷರ ಈ ಬಗೆಯ ತಡೆಗೋಡೆಗಳನ್ನು ಹಾಕಿಕೊಳ್ಳುತ್ತಾ ತಮ್ಮ ಚಾರಿತ್ರ್ಯವನ್ನು ಸಾಬೀತು ಪಡಿಸಬೇಕಾದ ಅಗತ್ಯ ಇರುವುದಿಲ್ಲ.

ರಾಜಕಾರಣದಲ್ಲಿ ಸಂವಹನ, ಮೈತ್ರಿ ಮುಖ್ಯವಾದದ್ದು. ಆದರೆ ನಮ್ಮಲ್ಲಿನ ಸಾಂಸ್ಕೃತಿಕ ಕಾರಣಗಳಿಂದಾಗಿ ಪುರುಷರ ಜೊತೆಗಿನ ನಿಕಟ ಸಂಪರ್ಕವನ್ನು ಸಾಧಿಸುವುದು ಕ್ಲಿಷ್ಟಕರ. ಉಮಾಭಾರತಿಯ ಸ್ವತಂತ್ರ ಜನಪ್ರಿಯತೆಯನ್ನು ತಮ್ಮ ಅಧಿಕಾರಕ್ಕೆ ಬೆದರಿಕೆ ಎಂದು ಪರಿಗಣಿಸಿದ ಆಕೆ ಇದ್ದ ಬಿಜೆಪಿಯಲ್ಲಿನ ಪಕ್ಷದವರೇ ಆಕೆಯ ವಿರುದ್ಧ ನಡೆಸಿದ ಅಪನಿಂದೆಯ ಪ್ರಚಾರ ಆಕೆಯನ್ನು ಅತ್ಮಹತ್ಯೆಯ ಯತ್ನಕ್ಕೆ ದೂಡಿತ್ತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಬಿಜೆಪಿಯ ನಾಯಕರೊಬ್ಬರ ಜೊತೆಗಿನ ಆಕೆಯ ವೈಯಕ್ತಿಕ ನಿಟಕತೆಯನ್ನು ಎಲ್ಲಾ ಬಗೆಯ ಕೆಟ್ಟ ವದಂತಿಗಳ ಪ್ರಚಾರಕ್ಕೆ ಬಳಸಿದ್ದರು. ಪುರುಷರ ಜೊತೆಗೆ ಮುಕ್ತವಾಗಿ ಬೆರೆಯಲು ಅಡ್ಡಿಗಳನ್ನು ಸೃಷ್ಟಿಸುವ ಪರಿಸರ ಇಲ್ಲಿ ಅಂತರ್ಗತವಾಗಿದೆ. ಆದರೆ ಪುರುಷರ ಈ ಬಗೆಯ ತಡೆಗೋಡೆಗಳನ್ನು ಹಾಕಿಕೊಳ್ಳುತ್ತಾ ತಮ್ಮ ಚಾರಿತ್ರ್ಯವನ್ನು ಸಾಬೀತು ಪಡಿಸಬೇಕಾದ ಅಗತ್ಯ ಇರುವುದಿಲ್ಲ.

ಮಹಿಳೆಯ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಭಾರತದ ಬಹುತೇಕ ಪುರುಷರು ಇಷ್ಟ ಪಡಬಹುದು. ಆದರೆ ಕುಟುಂಬ ಮಟ್ಟದಲ್ಲಿ ಅದರ ಸ್ವರೂಪ, ವರ್ತನೆಗಳ ಬದಲಾವಣೆಗೆ ನಿರಂತರ ಪ್ರಯತ್ನಗಳು ಬೇಕಾಗುತ್ತವೆ. ಸಾಂಸ್ಕೃತಿಕ ಮೌಲ್ಯಗಳನ್ನು ಬದಲಿಸಿ ಮಹಿಳೆಯ ಮನೆ ಹೊಣೆಗಾರಿಕೆಗಳನ್ನು ಕಡಿಮೆ ಮಾಡುವ ಪ್ರಯತ್ನಗಳು ಅಷ್ಟು ಸುಲಭವಲ್ಲ.

ಕಾಕತಾಳೀಯವೆಂಬಂತೆ ಚುನಾವಣಾ ರಾಜಕಾರಣದಲ್ಲಿ ಸ್ವತಂತ್ರ ರಾಜಕೀಯ ನೆಲೆಯನ್ನು ಬೆಳೆಸಿಕೊಂಡು ಪುರುಷರ ಜೊತೆ ಸ್ಪರ್ಧಿಸುವ ಸಾಮರ್ಥ್ಯವುಳ್ಳವರಲ್ಲಿ ಬಹುತೇಕ ಮಂದಿ ಏಕಾಂಗಿ ಅಥವಾ ವಿಧವೆಯರು.

ಸಾಧಾರಣ ಮಹಿಳೆಯರಿಗೆ ಭಾರತೀಯ ಸಮಾಜ ಕರುಣೆ ತೋರುವುದಿಲ್ಲ. ಆದರೆ ಪುರುಷರಿಗಿಂತ ಹೆಚ್ಚು ಬಲಶಾಲಿಗಳೆಂಬಂತೆ ಸಾಬೀತು ಪಡಿಸಿದ ಮಹಿಳೆಯರನ್ನು ಭಾರತೀಯ ಮನಸುಗಳು ಆರಾಧಿಸುತ್ತವೆ.

ಯಶಸ್ವಿ ಮಹಿಳಾ ರಾಜಕಾರಣಿಗಳು ಮಹಿಳಾ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿರುವುದಾಗಿ ಕಾಣಿಸಿಕೊಳ್ಳಲು ಇಷ್ಟ ಪಡುವುದಿಲ್ಲ.

ಸದ್ಯದ ಸಂದರ್ಭದಲ್ಲಿ ರಾಜಕೀಯದ ಸಾರ್ವಜನಿಕ ವಲಯದಲ್ಲಿ ಸಕ್ರಿಯವಾಗಿ ಸಾಧ್ಯವಾದಷ್ಟು ರಾಜಕೀಯ ಹಿನ್ನೆಲೆ ಇರುವ ಬೆಂಬಲವಾಗಿ ನಿಲ್ಲುವ ಕುಟುಂಬದ ಅಗತ್ಯ ಇದೆ. ಕುಟುಂಬದ ಹೊಣೆಗಾರಿಕೆ ಅದರಲ್ಲೂ ಮಕ್ಕಳ ಹೊಣೆ ಹೊತ್ತುಕೊಳ್ಳಬಹುದಾದ ಬಂಧುಗಳ ಸಹಕಾರ, ಜೊತೆಗೆ ಕುಟುಂಬದಲ್ಲಿ ಸಾಕಷ್ಟು ಹಣವೂ ಇರಬೇಕಾಗುತ್ತದೆ.

ಗಾಂಧೀಜಿಯವರ ಚಿಂತನೆಗಳೂ:

1940ರಲ್ಲಿ ಶಾಂತಿನಿಕೇತನದಲ್ಲಿ ಮಹಿಳೆಯರನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ಗಾಂಧೀಜಿ ಅವರು 'ಮಹಿಳಾ ಸದಸ್ಯರ ಸಮರ್ಪಕ ಪಾಲು ಇಲ್ಲದ ಶಾಸನಸಭೆಯನ್ನು ನಾನು ಬಹಿಷ್ಕರಿಸುತ್ತೇನೆ' ಎಂದಿದ್ದರು.

ಇದಕ್ಕೂ ಮುಂಚೆ ಭಾರತಕ್ಕೆ ಹೊಸ ಸಂವಿಧಾನ ರಚಿಸಲು ಬ್ರಿಟಿಷ್ ಸರ್ಕಾರ ಲಂಡನ್‌ನಲ್ಲಿ ಕರೆದಿದ್ದ ಎರಡನೇ ದುಂಡುಮೇಜಿನ ಪರಿಷತ್ ಸಭೆಯಲ್ಲಿ ಪಾಲ್ಗೊಂಡಿದ್ದರು ಗಾಂಧಿ. ಇಂಡಿಯನ್‌ನ್ಯಾಷನಲ್ ಕಾಂಗ್ರೆಸ್‌ನ ಏಕೈಕ ಪ್ರತಿನಿಧಿಯಾಗಿ ಗಾಂಧಿ ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಇನ್ನಿತರ ಪ್ರತಿನಿಧಿಗಳು ವೈಸ್‌ರಾಯ್ ಲಾರ್ಡ್ ಇರ್ವಿನ್ ನಾಮಕರಣ ಮಾಡಿದ ಸದಸ್ಯರಾಗಿದ್ದರು.

ಅಲ್ಪಸಂಖ್ಯಾತರಿಗೆ ಸೂಕ್ತ ಪ್ರಾತಿನಿಧ್ಯ ನೀಡಲು ಶಾಸನಸಭೆಗಳಿಗೆ ಸದಸ್ಯರನ್ನು ನಾಮಕರಣ ಮಾಡುವ ಯಾವುದೇ ಯೋಜನೆಯ ಪರವಾಗಿ ಕಾಂಗ್ರೆಸ್ ಇಲ್ಲ. ಆದರೆ ಮಹಿಳೆಯಂತಹ ವಿಶೇಷ ವರ್ಗಗಳು ಸೇರಿದಂತೆ ಅಲ್ಪಸಂಖ್ಯಾತರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಲು ಅಭ್ಯರ್ಥಿಗಳ ಪ್ರಾಯೋಜನೆ ರಾಷ್ಟ್ರೀಯ ಸಂಘಟನೆಯ ಕರ್ತವ್ಯವಾಗಿದೆ. ಅವರನ್ನು ಹಾಗೇ ಬಿಟ್ಟು ಬಿಟ್ಟಲ್ಲಿ, ಅವರನ್ನು ಚುನಾಯಿಸಲು ಚುನಾಯಿತ ಶಾಸನಸಭೆಗೆ ಅನುವಾಗುವಂತೆ ಸಂವಿಧಾನದಲ್ಲಿ ವಿಧಿಯೊಂದನ್ನು ಅಳವಡಿಸುವುದರ ಪರ ತಾವಿರುವುದಾಗಿ ಗಾಂಧೀಜಿ ಹೇಳಿದ್ದರು.

ಗಾಂಧಿಜಿಯವರ 'ಹರಿಜನ' ಪತ್ರಿಕೆಯ ಓದುಗರೊಬ್ಬರು ಚುನಾಯಿತ ಸಭೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರನ್ನು ಆಯ್ಕೆ ಮಾಡಲು ಕಾಂಗ್ರೆಸ್‌ಗೆ ಮನಸ್ಸಿಲ್ಲ ಎಂದು ಆರೋಪಿಸಿ ಸಮಾನತೆಯ ಆಧಾರದ ಮೇಲೆ ವಿವಿಧ ಸಂಸ್ಥೆಗಳಿಗೆ ಹೆಚ್ಚಿನ ಮಹಿಳೆಯರನ್ನು ತೆಗೆದುಕೊಳ್ಳುವುದು ಅಗತ್ಯವಲ್ಲವೆ ಎಂದು ಪ್ರಶ್ನಿಸಿದ್ದರು.

ಇದಕ್ಕೆ 'ಹರಿಜನ' (ಏ.7, 1946) ಪತ್ರಿಕೆಯಲ್ಲಿ ಉತ್ತರಿಸುತ್ತಾ ಗಾಂಧೀಜಿಯವರು ಬರೆದದ್ದು ಹೀಗೆ:

"ಇಂತಹ ವಿಚಾರಗಳಲ್ಲಿ ಸಮಾನತೆ ಅಥವಾ ಮತ್ತೆಷ್ಟೋ ಪಾಲು ಎಂಬುದು ನನಗೆ ಒಗ್ಗದ ವಿಚಾರ. ಮೆರಿಟ್ ಅಥವಾ ಸಾಮರ್ಥ್ಯವೇ ಇಲ್ಲಿ ಮುಖ್ಯ, ಆದರೆ ಮಹಿಳೆಯರನ್ನು ಅಲ್ಲಗಳೆಯುವುದು ಸಂಪ್ರದಾಯವೇ ಆಗಿ



ರಾಷ್ಟ್ರಪತಿ ಪ್ರತಿಭಾ ಪಾಟೀಲ್

ಬಿಟ್ಟಿದೆ. ಇದಕ್ಕೆ ವ್ಯತಿರಿಕ್ತವಾದ ಸಂಪ್ರದಾಯ ಮಹಿಳೆಯರಿಗೆ ಆದ್ಯತೆ ನೀಡುವುದಾಗಬೇಕು, ...(ಶಾಸನಸಭೆಗಳಲ್ಲಿ) ಲಿಂಗದ ಆಧಾರದ ಮೇಲೆ ಸದಸ್ಯತ್ವಕ್ಕೆ ಪಟ್ಟು ಹಿಡಿಯುವುದು ಅಪಾಯಕಾರಿ ಸಂಗತಿ. ಮಹಿಳೆಯರಾಗಲಿ ಅಥವಾ ಇನ್ಯಾವುದೇ ಗುಂಪಾಗಲಿ ಅನುಗ್ರಹದ ಆಶ್ರಯವನ್ನು ನಿರಾಕರಿಸಬೇಕು. ಅವರು ನ್ಯಾಯ ಕೇಳಬೇಕು, ಅನುಗ್ರಹವನ್ನಲ್ಲ. ಹೀಗಾಗಿ, ಸಮರ್ಪಕ ಕೆಲಸವೆಂದರೆ ತಮ್ಮ ಪ್ರಾದೇಶಿಕ ಭಾಷೆಗಳಲ್ಲಿ ಸಾಮಾನ್ಯ ಶಿಕ್ಷಣವನ್ನು ಪ್ರಸಾರ ಮಾಡುವುದು. ಆ ಮೂಲಕ ನಾಗರಿಕ ಪ್ರಜೆಗಳ ಅನೇಕ ಕರ್ತವ್ಯಗಳಿಗೆ ಅವರು ಸನ್ನದ್ಧರಾಗುವಂತೆ ಮಾಡುವುದು...."

"ಭ್ರಷ್ಟತೆ ಹಾಗೂ ಜಾತಿ ಆಧರಿತ ರಾಜಕೀಯ ಕೊನೆಗಾಣಿಸಲು ಮಹಿಳೆಯರ ಬೃಹತ್ ಮತಶಕ್ತಿಯ ಕುರಿತಾಗಿ ಚಿಂತಿಸಿದ ಬಹುಶಃ ಏಕೈಕ ಭಾರತೀಯ ನಾಯಕ ಗಾಂಧೀಜಿ. 1946ರ ಏಪ್ರಿಲ್ 21ರ 'ಹರಿಜನ್' ಪತ್ರಿಕೆಯ ಸಂಚಿಕೆಯಲ್ಲಿ ಗಾಂಧೀಜಿ ಸ್ತ್ರೀವಾದಿಗಳಿಗೆ ಹೇಳುವುದು ಹೀಗೆ: 'ಮಹಿಳಾ ಹಕ್ಕುಗಳು ಎಂದು ಕೂಗಾಡಬೇಡಿ. ಎಷ್ಟು ಸಾಧ್ಯವೊ ಅಷ್ಟು ಮಹಿಳೆಯರನ್ನು ಮತದಾರರಾಗಿ ನೋಂದಾಯಿಸಲು ಗಮನ ನೀಡಿ. ವ್ಯಾವಹಾರಿಕವಾದ ಶಿಕ್ಷಣ ನೀಡಿ. ಸ್ವತಂತ್ರವಾಗಿ ಯೋಚಿಸುವಂತೆ ಮಾಡಿ. ಅವರನ್ನು ಬಂಧಿಸಿರುವ ಜಾತಿ ಸಂಕೋಲೆಯಿಂದ ಬಿಡುಗಡೆ ಮಾಡಲು ಯತ್ನಿಸಿ. ಆ ಮೂಲಕ ಅವರಲ್ಲಾಗುವ ಬದಲಾವಣೆಗಳಿಂದ ಮಹಿಳೆಯ ರಾಜಕೀಯ ಶಕ್ತಿಯನ್ನು ಅರ್ಥ ಮಾಡಿಕೊಳ್ಳುವುದು ಪುರುಷರಿಗೆ ಅನಿವಾರ್ಯವಾಗುತ್ತದೆ. ಜೊತೆಗೆ ಆಕೆಯ ತ್ಯಾಗದ ಸಾಮರ್ಥ್ಯ ಅರಿತು ಆಕೆಗೆ ಗೌರವದ ಸ್ಥಾನ ನೀಡುವುದೂ ಅನಿವಾರ್ಯವಾಗುತ್ತದೆ. ಮಹಿಳಾ ಕಾರ್ಯಕರ್ತರು ಇದನ್ನು ಮಾಡಿದಲ್ಲಿ ಅವರು ಸದ್ಯದ ಅಶುದ್ಧ ರಾಜಕೀಯ ವಾತಾವರಣವನ್ನು ಶುದ್ಧಗೊಳಿಸಿದಂತಾಗುತ್ತದೆ. ..."

ಅಸ್ಪೃಶ್ಯತೆ ತೊಡೆಯುವ ಹೋರಾಟವಲ್ಲದೆ ಮಹಿಳೆ ಕುರಿತ ಪಾರಂಪರಿಕ ದೃಷ್ಟಿಕೋನಗಳಲ್ಲಿ ಗಾಂಧೀಜಿಯವರು ತಂದ ಕ್ರಾಂತಿಕಾರಕ ಬದಲಾವಣೆಗಳೂ ಸಮಾಜ ಸುಧಾರಣೆ ಹಾದಿಯಲ್ಲಿ ಮುಖ್ಯವಾದುದು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಪುರುಷರ ಜೊತೆ ಸರಿಸಮನಾಗಿ ಸತ್ಯಾಗ್ರಹ ಚಳವಳಿಯಲ್ಲಿ ಪಾಲ್ಗೊಳ್ಳಲು ಗಾಂಧೀಜಿ ಮಹಿಳೆಯರಿಗೆ ಕರೆ ನೀಡಿದರು.

1930ರ ದಶಕದಲ್ಲಿ ಪುರುಷರ ಜೊತೆ ಜೊತೆಗೆ ಮಹಿಳೆಯರೂ ಸತ್ಯಾಗ್ರಹ ಚಳವಳಿಯಲ್ಲಿ ಪಾಲ್ಗೊಳ್ಳಬೇಕು ಎಂದು ಗಾಂಧೀಜಿ ಕರೆ ನೀಡಿದರು. ಉಪ್ಪಿನ ಸತ್ಯಾಗ್ರಹದ ಅವಧಿಯಲ್ಲಿ ಬಂಧನಕ್ಕೊಳಗಾದ ಸುಮಾರು 30,000 ಮಂದಿಯಲ್ಲಿ 17,000 ಜನರು ಮಹಿಳಾ ಕಾರ್ಯಕರ್ತರಾಗಿದ್ದರು ಎಂಬುದೇ ಮಹಾತ್ಮ ನಾಯಕತ್ವದಲ್ಲಿ ಮಹಿಳೆಯರು ಸಮಾನ ಪಾತ್ರ ನಿರ್ವಹಿಸುತ್ತಿದ್ದರೆಂಬುದರ ದ್ಯೋತಕ.

ತಮಿಳು ನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತ

ತಮ್ಮ ಹಕ್ಕುಗಳಿಗಾಗಿ ಹೋರಾಡುವಾಗ ಭಾರತದ ಮಹಿಳೆಯರು ಪಶ್ಚಿಮ ರಾಷ್ಟ್ರಗಳನ್ನು ಅನುಕರಣೆ ಮಾಡಬಾರದೆಂಬುದು ಗಾಂಧೀಜಿಯವರ ಆಶಯವಾಗಿತ್ತು. ಸೀತಾ, ದ್ರೌಪದಿ, ಸಾವಿತ್ರಿ, ದಮಯಂತಿಯಂತಹ ಪಾತ್ರಗಳಿಂದ ಪ್ರೇರಣೆ ಪಡೆದುಕೊಳ್ಳಬೇಕೆಂದು ಅವರು ತಮ್ಮ ಪತ್ರಿಕಾ ಬರಹಗಳಲ್ಲಿ ಬರೆದಿದ್ದರು.

ಸೀತಾ, ದ್ರೌಪದಿಯಂತಹ ಪುರಾಣದ ಪಾತ್ರಗಳನ್ನು ಅನುಕರಿಸುವಾಗ, ಸಾಮಾನ್ಯವಾಗಿ ಹೇಳಲಾಗುವ ಪುರುಷರೊಂದಿಗಿನ ಅವರ ವಿಧೇಯತೆಯನ್ನಲ್ಲ, ಅವರ ಸ್ವತಂತ್ರ ಮನೋಭಾವವನ್ನು ಅನುಕರಿಸಬೇಕು ಎಂದು ಗಾಂಧೀಜಿ ಹೇಳುತ್ತಿದ್ದರು. 'ಎಷ್ಟೇ ಮುಕ್ತ ಹಾಗೂ ಸ್ವತಂತ್ರನಾಗಿದ್ದರೂ ಸೀತಾ ಇಲ್ಲದೆ ರಾಮ ಇಲ್ಲ. ಎಂದು ಗಾಂಧೀಜಿ ಯೆಂಗ್ ಇಂಡಿಯಾ (ಫೆ.3, 1927)ದಲ್ಲಿ ಬರೆದಿದ್ದರು. ಆದರೆ ಮುಕ್ತ ಸ್ವಾತಂತ್ರ್ಯಕ್ಕೆ ದ್ರೌಪದಿ ಬಹುಶಃ ಉತ್ತಮ ಉದಾಹರಣೆ ಎಂದೂ ಗಾಂಧಿ ಎಂದಿದ್ದರು.

1930ರ ದಶಕದಲ್ಲಿ ಪುರುಷರ ಜೊತೆ ಜೊತೆಗೆ ಮಹಿಳೆಯರೂ ಸತ್ಯಾಗ್ರಹ ಚಳವಳಿಯಲ್ಲಿ ಪಾಲ್ಗೊಳ್ಳಬೇಕು ಎಂದು ಗಾಂಧೀಜಿ ಕರೆ ನೀಡಿದರು. ಉಪ್ಪಿನ ಸತ್ಯಾಗ್ರಹದ ಅವಧಿಯಲ್ಲಿ ಬಂಧನಕ್ಕೊಳಗಾದ ಸುಮಾರು 30,000 ಮಂದಿಯಲ್ಲಿ 17,000 ಜನರು ಮಹಿಳಾ ಕಾರ್ಯಕರ್ತರಾಗಿದ್ದರು ಎಂಬುದೇ ಮಹಾತ್ಮ ನಾಯಕತ್ವದಲ್ಲಿ ಮಹಿಳೆಯರು ಸಮಾನ ಪಾತ್ರ ನಿರ್ವಹಿಸುತ್ತಿದ್ದರೆಂಬುದರದ್ಯೋತಕ. ತಮ್ಮ ಹಕ್ಕುಗಳಿಗಾಗಿ ಹೋರಾಡುವಾಗ ಭಾರತದ ಮಹಿಳೆಯರು ಪಶ್ಚಿಮ ರಾಷ್ಟ್ರಗಳನ್ನು ಅನುಕರಣೆ ಮಾಡಬಾರದೆಂಬುದು ಗಾಂಧೀಜಿಯವರ ಆಶಯವಾಗಿತ್ತು. ಸೀತಾ, ದ್ರೌಪದಿ, ಸಾವಿತ್ರಿ, ದಮಯಂತಿಯಂತಹ ಪಾತ್ರಗಳಿಂದ ಪ್ರೇರಣೆ ಪಡೆದುಕೊಳ್ಳಬೇಕೆಂದು ಅವರು ತಮ್ಮ ಪತ್ರಿಕಾ ಬರಹಗಳಲ್ಲಿ ಬರೆದಿದ್ದರು. ಸೀತಾ, ದ್ರೌಪದಿಯಂತಹ ಪುರಾಣದ ಪಾತ್ರಗಳನ್ನು ಅನುಕರಿಸುವಾಗ, ಸಾಮಾನ್ಯವಾಗಿ ಹೇಳಲಾಗುವ ಪುರುಷರೊಂದಿಗಿನ ಅವರ ವಿಧೇಯತೆಯನ್ನಲ್ಲ, ಅವರ ಸ್ವತಂತ್ರ ಮನೋಭಾವವನ್ನು ಅನುಕರಿಸಬೇಕು ಎಂದು ಗಾಂಧೀಜಿ ಹೇಳುತ್ತಿದ್ದರು.

ಲೋಕಸಭಾದಕ್ಷೆ ಮೀರಾ ಕುಮಾರ್

ಈ ಅಂತರ ಮುಚ್ಚುವುದು ಸಾಧ್ಯವೆ?

ಭಾರತದ ಜನಸಂಖ್ಯೆಯಲ್ಲಿ ಪುರುಷರ ಪಾಲು ಶೇ. 51.73 2004ರ ಸಾರ್ವತ್ರಿಕ ಚುನಾವಣೆಯಲ್ಲಿ ಪುರುಷ ಮತದಾರರ ಪ್ರಮಾಣ ಶೇ. 55.8 ಶೇ. 91ರಷ್ಟು ಚುನಾಯಿತ ಪ್ರತಿನಿಧಿಗಳು ಹಾಗೂ 91.4ರಷ್ಟು ರಾಜ್ಯಸಭಾದ ಚುನಾಯಿತ ಪ್ರತಿನಿಧಿಗಳು ಪುರುಷರು. ಕೇಂದ್ರದ ಬಹುತೇಕ 34 ರಾಜ್ಯ ಸಚಿವರು ಪುರುಷರು. 32 ಕ್ಯಾಬಿನೆಟ್ ಸಚಿವರಲ್ಲಿ 30 ಮಂದಿ ಪುರುಷರು.

ಭಾರತದ ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ. 48.26 2004ರ ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳಾ ಮತದಾರರ ಪ್ರಮಾಣ ಶೇ. 44.2 ಶೇ.9.2 ಲೋಕಸಭೆಯ ಚುನಾಯಿತ ಪ್ರತಿನಿಧಿಗಳು ಹಾಗೂ ಶೇ. 8.6ರಷ್ಟು ರಾಜ್ಯಸಭಾಧ ಚುನಾಯಿತ ಪ್ರತಿನಿಧಿಗಳು ಮಹಿಳೆಯರು. ಕೇವಲ ಕೇಂದ್ರದ 6 ರಾಜ್ಯ ಸಚಿವರು ಮಹಿಳೆಯರು. 32 ಕ್ಯಾಬಿನೆಟ್ ಸಚಿವರಲ್ಲಿ ಇಬ್ಬರು ಮಾತ್ರ ಮಹಿಳೆಯರು.

ಕಳೆದ ಅರ್ಧ ಶತಮಾನಕ್ಕೂ ಹೆಚ್ಚು ವರ್ಷಗಳಿಂದಲೂ ಶೇ 10ರ ಕೆಳಗೇ ಮಹಿಳಾ ಪ್ರಾತಿನಿಧ್ಯ ಗಿರಕಿ ಹೊಡೆಯುತ್ತಿದೆ. ಮಹಿಳೆಯನ್ನು ದೇವತೆಯೆಂದು ಪೂಜಿಸುವ ರಾಷ್ಟ್ರದಲ್ಲಿ ಅಧಿಕಾರ ರಾಜಕಾರಣದಲ್ಲಿ ಮಹಿಳೆಯರು ಪಡೆದಿರುವ ಶೋಚನೀಯ ಪ್ರಾತಿನಿಧ್ಯ ಇದು.

ನಮ್ಮ ನೆರೆಯ ರಾಷ್ಟ್ರಗಳು ಈಗಾಗಲೇ ಮಹಿಳಾ ಕೋಟಾ ಜಾರಿ ಮಾಡಿವೆ. ನೇಪಾಳದಲ್ಲಿ ಶೇ. 33, ಪಾಕಿಸ್ತಾನದಲ್ಲಿ ಶೇ.22 ಹಾಗೂ ಬಾಂಗ್ಲಾದೇಶದಲ್ಲಿ ಶೇ. 14 ಮೀಸಲು ಸೌಲಭ್ಯ ಇದೆ. ಆದರೆ ನಮ್ಮಲ್ಲಿ 1996ರ ಸೆಪ್ಟೆಂಬರ್‌ನಲ್ಲಿ ಸಂಸತ್ತಿನಲ್ಲಿ ಮೊದಲ ಬಾರಿಗೆ ಮಂಡಿಸಲ್ಪಟ್ಟಿದ್ದ ಶೇ.33ರಷ್ಟು ಮೀಸಲು ಸೌಲಭ್ಯ ಕಲ್ಪಿಸುವ ಮಹಿಳಾ ಮೀಸಲು ಅನಂತರವೂ ಹಲವು ಬಾರಿ ಮಂಡನೆ ನಾಟಕಗಳೊಂದಿಗೆ ನೆನೆಗುದಿಗೆ ಸಿಲುಕಿದೆ.

(ಸೌಜನ್ಯ: 'ನಮ್ಮ ಮಾನಸ') □

ಪ್ರಜಾತಂತ್ರವನ್ನೇ ಸೋಲಿಸುವ ಚುನಾವಣೆಗಳು!!

ಈಗ ಚುನಾವಣೆಗೆ ನಿಲ್ಲುವ ಪ್ರತಿ ಅಭ್ಯರ್ಥಿಯೂ ಸಹ ತಮ್ಮ ಹಣಕಾಸು ಹಿನ್ನೆಲೆಯ ಬಗ್ಗೆ ಚುನಾವಣಾ ಅಯೋಗಕ್ಕೆ ವರದಿ ಸಲ್ಲಿಸುವುದು ಕಡ್ಡಾಯ. ಅವರು ಅಯೋಗಕ್ಕೆ ಸಲ್ಲಿಸುವ ಲೆಕ್ಕಾಚಾರವೆಲ್ಲಾ ಕೇವಲ ರಾಮನ ಲೆಕ್ಕ. ಕೃಷ್ಣನ ಲೆಕ್ಕ ಹುಡುಕಿ ತೆಗೆಯುವುದು ಸಾಕ್ಷಾತ್ ಕೃಷ್ಣ ಪರಮಾತ್ಮನಿಗೂ ಸಾಧ್ಯವಿಲ್ಲ. ಹಾಗಿದ್ದರೂ ಸಹ ಆ ಪಟ್ಟಿಯಲ್ಲಿ ಒಬ್ಬನೂ/ಳೂ ಬಿಪಿಎಲ್(ಬಿಲೋ ಪಾವರ್ಟಿ ಲೈನ್- ಬಡತನ ರೇಖೆಗಿಂತ ಕೆಳಗಿರುವವರ) ಪಕ್ಷದ ಸದಸ್ಯನಿಲ್ಲ! ಅಂದರೆ ಈ ಚುನಾವಣೆಯಲ್ಲಿ ನಿಂತಿರುವ ಯಾವ 'ಪ್ರಜೆಯೂ' ಬಡತನ ರೇಖೆಗಿಂತ ಕೆಳಗಿಲ್ಲ. ಹೀಗಾಗಿಯೇ ರಾಜಕೀಯದಲ್ಲೂ ಸಹ ಅವರು ಬಡವರಿಗೂ ಮತ್ತು ಶ್ರೀಮಂತರಿಗೂ ನಡುವೆ ವ್ಯವಸ್ಥೆ ಎಳೆದಿರುವ ಈ ಲಕ್ಷಣ ರೇಖೆಯನ್ನು ದಾಟ ಬರುವುದಿಲ್ಲ. ಜನಪರ ಹೋರಾಟದಲ್ಲಿರುವ ಕೆಲವರು ಈ ರೇಖೆಯನ್ನು ದಾಟದರೂ ಈ ಲಕ್ಷ್ಮಣ ರೇಖೆಯನ್ನು ಕಾಯುತ್ತಿರುವ ರಾಮರು ಅವರನ್ನು ಕಾಡಿಗಟ್ಟಿ ಬಿಡುತ್ತಾರೆ!

ಶಿವಸುಂದರ್

"ಆಪರೇಷನ್ ಸಕ್ಸಸ್, ಪೇಷೆಂಟ್ ಡೈಡ್" ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ ಭಾರತೀಯ ಚುನಾವಣೆಗಳು ಮತ್ತು ಭಾರತೀಯ ಪ್ರಜಾತಂತ್ರ. ವಾಸ್ತವದಲ್ಲಿ ಚುನಾವಣೆಗಳು ಪ್ರಜಾತಂತ್ರಕ್ಕೆ ಮತ್ತಷ್ಟು ಜೀವವನ್ನು ಎರೆಯಬೇಕು. ಪ್ರಜಾತಂತ್ರವನ್ನೂ ಜೀವಂತವಾಗಿಡಬೇಕು, ಆದರೆ ಈ ಚುನಾವಣೆಗಳು ಪ್ರಜಾಂತ್ರವನ್ನು ಪೊರೆಯುತ್ತಿವೆಯೋ? ಕೊಲ್ಲುತ್ತಿವೆಯೋ?

ಚುನಾವಣೆಯು ಒಂದು ದೇಶದಲ್ಲಿ ಪ್ರಜಾತಂತ್ರ ಜೀವಂತವಾಗಿರುವುದಕ್ಕೆ ದೊಡ್ಡ ಸಾಕ್ಷಿ ಎಂದು ಹೇಳುವ ಮುತ್ಸದ್ಧಿಗಳು ಪಕ್ಕದ ಪಾಕಿಸ್ತಾನಕ್ಕೆ ಹೋಲಿಸಿದರೆ ಭಾರತ ಪ್ರಜಾತಂತ್ರ ಎಷ್ಟು ಮಾಗಿದೆ ನೋಡಿ ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ. ಭಾರತದ ಪ್ರಜಾತಂತ್ರದಲ್ಲಿ ದೋಷಗಳಿದೆ ಎಂದು ಒಪ್ಪಿಕೊಳ್ಳುವವರೂ ಚುನಾವಣೆ ಈ ದೇಶದ ಪ್ರಜಾತಂತ್ರವನ್ನು ಹೆಚ್ಚಿಸುತ್ತಿದೆ ಎಂದೇ ಅಭಿಪ್ರಾಯ ಪಡುತ್ತಾರೆ. ಅದಕ್ಕೆ ಅವರು ಪ್ರಜಾತಂತ್ರದ ಬಗ್ಗೆ ಅಬ್ರಹಾಂ ಲಿಂಕನ್‌ನ ಪ್ರಖ್ಯಾತ 'ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳೇ ಆಳುವ ವ್ಯವಸ್ಥೆ' ಎಂಬ ವ್ಯಾಖ್ಯಾನವಾವನ್ನು ಉದ್ಧರಿಸುತ್ತಾರೆ. ತಮ್ಮನ್ನು ಯಾರು ಆಳಬೇಕೆಂದು ಈ ಚುನಾವಣೆಗಳ ಮೂಲಕ ಜನರೇ ನಿರ್ಧರಿಸುವುದರಿಂದ ಇದಕ್ಕಿಂತ ಉತ್ತಮ ಪ್ರಜಾತಂತ್ರವಾಗಲೀ, ಚುನಾವಣೆಗಿಂತ ಉತ್ತಮ ಪ್ರಜಾತಾಂತ್ರಿಕ ಪ್ರಕ್ರಿಯೆಯಾಗಲೀ ಮತ್ತೊಂದಿಲ್ಲವೆಂಬುದು ಬಹುತೇಕ ಗಾಂಧಿವಾದಿಗಳಿಂದ ಹಿಡಿದು, ಸಮಾಜವಾದಿ, ಸ 'ಮಜಾ'ವಾದಿಗಳ ತನಕ ಎಲ್ಲರ ಅಭಿಪ್ರಾಯ. ಇಲ್ಲಿ 'ಪ್ರಜೆ'ಯೆನ್ನುವವರು ಯಾರು? ಓಟು ಹಾಕುವ ಪ್ರಜೆ, ಚುನಾವಣೆಗೆ ನಿಂತು ಗೆಲ್ಲುವ ಪ್ರಜೆ, ಗೆದ್ದ ಸರ್ಕಾರಗಳಿಂದ ಅನುಕೂಲ ಪಡೆಯುವ ಪ್ರಜೆ ಒಬ್ಬರೆಯೇ? ಅಥವಾ ಬೇರೆ ಬೇರೆಯೇ?ಪ್ರಜೆಗಳೇ ಆಳುವ ವ್ಯವಸ್ಥೆ ಎಂದರೆ ಯಾವ ಪ್ರಜೆ ಬೇಕಾದರೂ ಚುನಾವಣೆಗೆ ನಿಲ್ಲುವ ಅವಕಾಶಗಳು ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಇರಬೇಕಿತ್ತಲ್ಲವೇ? ಈ ಬಾರಿ ಚುನಾವಣೆಗೆ ನಿಲ್ಲುತ್ತಿರುವ ಅಭ್ಯರ್ಥಿಗಳು ಎಂಥಾ 'ಪ್ರಜೆ'ಗಳು?

ಮೊನ್ನೆ ಆಂಧ್ರಪ್ರದೇಶದಲ್ಲಿ ತೆಲಂಗಾಣ ರಾಜ್ಯಸಭಾ (ಟಿ.ಆರ್.ಎಸ್) ಕಚೇರಿಯಲ್ಲಿ ಪಕ್ಷದ ಟಿಕೆಟ್ ಪಡೆದ ಅಭ್ಯರ್ಥಿಯನ್ನು ಆ ಪಕ್ಷದ ಸದಸ್ಯರೇ ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ. ಕಾರಣ? ಈವರೆಗೆ ಈ ಮನುಷ್ಯ ಯಾರೆಂಬುದೇ ಆ ಪಕ್ಷದ ಸದಸ್ಯರಿಗೆ ತಿಳಿದಿರಲಿಲ್ಲ. ಮೇಲಾಗಿ ಪಕ್ಷದ ಕಾರ್ಯಕರ್ತರು ಈ ಅಪರಿಚಿತನಿಗೆ ಟಿಕೆಟ್ ಕೊಡಬಾರದು ಎಂದು ಹಠ ಹಿಡಿದಿದ್ದಕ್ಕೆ ಆತ "10 ಕೋಟಿ ರೂಪಾಯಿಗಳನ್ನು ಪಕ್ಷಕ್ಕೆ ಕೊಟ್ಟು ಟಿಕೆಟ್ ಖರೀದಿಸಿದ್ದೇನೆ" ಎಂದು ಅಬ್ಬರಿಸಿದ್ದಾನೆ. ಸಿಟ್ಟಿಗೆದ್ದ ಕಾರ್ಯಕರ್ತರು ತೆಲಂಗಾಣ ಬಿಟ್ಟು ಓಡಿ ಹೋಗುವಂತೆ ಅವನಿಗೆ ತದಕಿದ್ದಾರೆ. ಈವರೆಗೆ ಈ ಟಿಆರ್‌ಎಸ್ ಪಕ್ಷದ ಹೋರಾಟಗಳಲ್ಲಾಗಲೀ, ಸಿದ್ಧಾಂತಗಳಲ್ಲಾಗಲೀ ಎಂದೂ ಭಾಗವಹಿಸದ ಈ 'ಪ್ರಜೆ' ಕೇವಲ ತನ್ನ ಹಣದ ಬಲದಿಂದ ಉಮೇದುವಾರಿಕೆಯನ್ನು ಅರ್ಥಾತ್ ಲೋಕಸಭೆಯಲ್ಲಿ ಪ್ರಜೆಗಳ ಹೆಸರಲ್ಲಿ ಶಾಸನ ಮಾಡುವ ಅಧಿಕಾರವನ್ನು ಖರೀದಿ ಮಾಡುತ್ತಾನೆ. ಕಳೆದ ಚುನಾವಣೆಯಲ್ಲಿ ಮದ್ಯ, ಜೂಜು, ಮಾನಿನಿ ಮದಿರೆಯರನ್ನು ಬಿಟ್ಟರೆ ಬೇರೇನೂ ಗೊತ್ತಿಲ್ಲದ ವಿಜಯ್ ಮಲ್ಯನಂಥ 'ಪ್ರಜೆ' ಸಹ ಈ ದೇಶದಲ್ಲಿ 'ಜನತಾ ಪಕ್ಷದ' ರಾಜ್ಯಾಧ್ಯಕ್ಷನಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೂ ಸಹ ಈ ದೇಶದ ಪ್ರಜಾತಂತ್ರ ಮೆಚೂರ್ ಆಗಿರುವ ಲಕ್ಷಣವೇ ಇರಬೇಕು.

ಇದು ಕೇವಲ ಒಂದು ಪಕ್ಷದ ಕಥೆಯಲ್ಲ. ಇಂದು ಕರ್ನಾಟಕದಲ್ಲಿ ಪ್ರತಿ ಪಕ್ಷವೂ 'ಗೆಲ್ಲಬಲ್ಲ' ಸಮರ್ಥ 'ಪ್ರಜೆ'ಗಾಗಿ ಹುಡುಕಾಡುತ್ತಿದೆ. ಈವರೆಗೆ ಪಕ್ಷದ ಬಗ್ಗೆ, ಜನರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಕೇವಲ ಹಣದ ಥೈಲಿ ಮಾತ್ರ ಇರುವ ದೊಡ್ಡ ದೊಡ್ಡ ಕುಳಗಳು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ ಅಭ್ಯರ್ಥಿ ಯಾಗುತ್ತಿದ್ದಾರೆ. ವಿಜಯ ಕರ್ನಾಟಕದಂತ ಪಕ್ಕಾ ಚಡ್ಡಿ ಪತ್ರಿಕೆ ಸಹ, ಬಿಜೆಪಿ ಪಕ್ಷವು ಬೆಂಗಳೂರು ಉತ್ತರ ವಿಭಾಗಕ್ಕೆ ಗೆಲ್ಲಬಲ್ಲ 'ತಾಕತ್ತು' ಅರ್ಥಾತ್

ಹಣದ ತಾಕತ್ತು ಇರುವ ವ್ಯಕ್ತಿ ಯಾವುದೇ ಪಕ್ಷದಲ್ಲಿದ್ದರೂ ಕರೆದು ತರುವ ಪ್ರಯತ್ನದಲ್ಲಿದೆ ಎಂದು ವರದಿ ಮಾಡಿತ್ತು.

ಈಗ ಚುನಾವಣೆಗೆ ನಿಲ್ಲುವ ಪ್ರತಿ ಅಭ್ಯರ್ಥಿಯೂ ಸಹ ತಮ್ಮ ಹಣಕಾಸು ಹಿನ್ನೆಲಯ ಬಗ್ಗೆ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸುವುದು ಕಡ್ಡಾಯ. ಅವರು ಅಯೋಗಕ್ಕೆ ಸಲ್ಲಿಸುವ ಲೆಕ್ಕಾಚಾರವೆಲ್ಲಾ ಕೇವಲ ರಾಮನ ಲೆಕ್ಕ. ಕೃಷ್ಣನ ಲೆಕ್ಕ ಹುಡುಕಿ ತೆಗೆಯುವುದು ಸಾಕ್ಷಾತ್ ಕೃಷ್ಣ ಪರಮಾತ್ಮನಿಗೂ ಸಾಧ್ಯವಿಲ್ಲ. ಹಾಗಿದ್ದರೂ ಸಹ ಆ ಪಟ್ಟಿಯಲ್ಲಿ ಒಬ್ಬನೂ/ಳೂ ಬಿಪಿಎಲ್(ಬಿಲೋ ಪಾವರ್ಟಿ ಲೈನ್ –ಬಡತನ ರೇಖೆಗಿಂತ ಕೆಳಗಿರುವವರು) ಪಕ್ಷದ ಸದಸ್ಯನಿಲ್ಲ! ಅಂದರೆ ಈ ಚುನಾವಣೆಯಲ್ಲಿ ನಿಂತಿರುವ ಯಾವ 'ಪ್ರಜೆಯೂ' ಬಡತನ ರೇಖೆಗಿಂತ ಕೆಳಗಿಲ್ಲ. ಹೀಗಾಗಿಯೇ ರಾಜಕೀಯದಲ್ಲೂ ಸಹ ಅವರು ಬಡವರಿಗೂ ಮತ್ತು ಶ್ರೀಮಂತರಿಗೂ ನಡುವೆ ವ್ಯವಸ್ಥೆ ಎಳೆದಿರುವ ಈ ಲಕ್ಷಣ ರೇಖೆಯನ್ನು ದಾಟಿ ಬರುವುದಿಲ್ಲ.ಜನಪರ ಹೋರಾಟದಲ್ಲಿರುವ ಕೆಲವರು ಈ ರೇಖೆಯನ್ನು ದಾಟಿದರೂ ಈ ಲಕ್ಷಣ ರೇಖೆಯನ್ನು ಕಾಯುತ್ತಿರುವ ರಾಮರು ಅವರನ್ನು ಕಾಡಿಗಟ್ಟಿ ಬಿಡುತ್ತಾರೆ!

ನಮ್ಮ ಸಂವಿಧಾನದಲ್ಲಿ ಭಾರತವನ್ನು ಒಂದು ಸ್ವತಂತ್ರ, ಸಾರ್ವಭೌಮಿ, ಸಮಾಜವಾದಿ, ಜಾತ್ಯತೀತ ಗಣರಾಜ್ಯವನ್ನಾಗಿ ಕಟ್ಟಿಕೊಳ್ಳಬೇಕೆಂದು ಬರೆದುಕೊಳ್ಳಲಾಗಿದೆ. ಆದರೆ ಅದು ಅಂಬೇಡ್ಕರ್ ಬರೆದ ನಿರ್ದೇಶನಾ ತತ್ವದಲ್ಲಿರುವ ಆದರ್ಶ ಮಾತ್ರ. ಸಂವಿಧಾನದ ಉಳಿದ ಭಾಗಚು ನಿರ್ದೇಶನಾ ತತ್ವಗಳು ಆಚರಣೆಗೆ ಬರದಂತೆ ರೂಪಿತಗೊಂಡಿವೆ. ಅದಕ್ಕೆ ಜಡಗಟ್ಟಿದ ಹಿಂದೂ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಹುದಾದ ಹಿಂದೂ ಕೋಡ್ ಬಿಲ್ ಅನ್ನು ಜಾರಿಗೆ ತರಲಾಗದೆ ಅಂಬೇಡ್ಕರ್ ಹತಾಷೆಯಿಂದ ರಾಜೀನಾಮೆ ಕೊಟ್ಟದ್ದು. "ಇಂದು ನಾವು ರಾಜಕೀಯವಾಗಿ ಸಮಾನವಾಗಿರುವ ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನವಾಗಿರುವ ಅಂತರ್ ವೈರುಧ್ಯಗಳಿಂದ ಕೂಡಿದ ಕಾಲಘಟ್ಟವನ್ನು ಪ್ರವೇಶಿಸುತ್ತಿದ್ದೇವೆ. ಆದಷ್ಟು ಬೇಗ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ತರುವೆಡೆ ಪ್ರಭುತ್ವ ಗಮನ ಹರಿಸದಿದ್ದರೆ ರಕ್ತ ಪೂರಿತ ಕ್ರಾಂತಿಯಿಂದಲೇ ಜನ ಇದನ್ನು ಬದಲಾಯಿಸುತ್ತಾರೆ" ಎಂದು ದಾರ್ಶನಿಕವಾಗಿ ನುಡಿದದ್ದು.

ಅಂಬೇಡ್ಕರ್ ಬರೆದ ನಿರ್ದೇಶನಾ ತತ್ವದ ಕಲಂ 39(ಸಿ)ಯು ಸರ್ಕಾರಗಳು ಈ ದೇಶದ ಸಂಪತ್ತು ಒಂದೆಡೆ ಕೇಂದ್ರೀಕರಣವಾಗದಂತೆ ನೀತಿಗಳನ್ನು ರೂಪಿಸಬೇಕೆಂದು ಹೇಳುತ್ತದೆ. ಆದರೆ 91ರಿಂದ ಜಾರಿಯಲ್ಲಿರುವ ಆರ್ಥಿಕ ನೀತಿಗಳು ಈ ದೇಶದ ಸಂಪತ್ತೆಲ್ಲಾ ಕೆಲವೇ ಕೆಲವು ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕರಣವಾಗುವಂತೆ ಮಾಡಿದೆ. ಆದರಿಂದಲೇ ಕಳೆದ 20ವರ್ಷಗಳಲ್ಲಿ ಅಂಬಾನಿಗಳ ಆಸ್ತಿ 300 ಕೋಟಿ ರೂ.ಗಳಿಂದ 3 ಲಕ್ಷ ಕೋಟಿ ರೂ.ಗಳಿಗೇರಿದರೆ ಅದೇ ಅವಧಿಯಲ್ಲಿ 2 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾರಣ? ಚುನಾವಣೆ ಮೂಲಕ ಅಧಿಕಾರಕ್ಕೆ ಬಂದ ಎಲ್ಲಾ ಪಕ್ಷಗಳಲ್ಲಿ ಮತ್ತವರ ಅಭ್ಯರ್ಥಿಗಳಲ್ಲಿ ಯಾರೂ ಬಿಪಿಎಲ್ 'ಪ್ರಜೆ'ಗಳಿಲ್ಲ. ಯಾವ ಬಿಪಿಎಲ್ ಕೂಡಾ ಚುನಾವಣೆಯ ಮೂಲಕ ಅಧಿಕಾರವನ್ನು ಪಡೆಯುವ ಕನಸನ್ನೂ ಇಟ್ಟುಕೊಳ್ಳಲು ಸಾಧ್ಯವಿಲ್ಲ.

ಆದ್ದರಿಂದ ಒಂದರ್ಥದಲ್ಲಿ ಈಗಿರುವ ಚುನಾವಣಾ ಪದ್ಧತಿಗಳು ಮತ್ತು ಪಕ್ಷಗಳು ಪ್ರಜಾತಂತ್ರವನ್ನೇ ಕೊಲ್ಲುತ್ತಿದೆ ಎನಿಸುವುದಿಲ್ಲವೇ?

ಕಳೆದ ಅರವತ್ತು ವರ್ಷಗಳ ಭಾರತೀಯ ಪ್ರಜಾತಂತ್ರದ ಅನುಭವವು, ಇದು ಹೇಗೆ ಬಹುಸಂಖ್ಯಾತರ ಒಟ್ಟು ನಿಲುವಿಗೆ ವಿರುದ್ಧವಾಗಿ ವರ್ತಿಸುತ್ತಾ ಬಂದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದಲೇ ಆ ಅಯೋಗವು ತಾನು ನೀಡಿದ ಅಂತಿಮ ಶಿಫಾರಸ್ಸುಗಳಲ್ಲಿ ಕನಿಷ್ಟ ಮೊದಲೆರಡು ಅಭ್ಯರ್ಥಿಗಳ ನಡುವೆಯಾದರೂ ಮತ್ತೊಮ್ಮೆ ಸ್ಪರ್ಧೆ ಏರ್ಪಡಿಸಬೇಕೆಂದು ಸಲಹೆ ಮಾಡಿತ್ತು. ಆ ಆತ್ಮಹತ್ಯಾಕಾರಿ ಸಲಹೆಯನ್ನು ಆಳುವ ಪಕ್ಷವಾಗಲೀ, ವಿರೋಧ ಪಕ್ಷವಾಗಲೀ ಒಪ್ಪಲಿಲ್ಲ. ಅದಕ್ಕೆ ಈ ಸಲಹೆಯ ಬಗ್ಗೆ ರಾಷ್ಟ್ರೀಯ ಚರ್ಚೆಯಿರಲಿ, ಪ್ರಚಾರವೂ ನಡೆಯಲಿಲ್ಲ! ಈವರೆಗೆ ನಮ್ಮನ್ನಾಳಿದ ಯಾವ ಸರ್ಕಾರಗಳು ಬಹುಮತ ಪಡೆದ ಸರ್ಕಾರವಲ್ಲ ಅನ್ನುವುದಕ್ಕೆ ಕಳೆದ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳು ಪಡೆದ ಮತಗಳನ್ನು ಮತ್ತು ಒಟ್ಟಾರೆ ಚಲಾಯಿತ ಮತಗಳನ್ನು ಹೋಲಿಸಿ ನೋಡಿದರೆ ಸಾಕು ಅರ್ಥವಾಗುತ್ತದೆ.

ಜನರಿಂದ ಆಯ್ಕೆಯಾಗದಿದ್ದರೂ ಸರ್ಕಾರ ರಚಿಸುವ ಕುತಂತ್ರ

ಅಬ್ರಾಹಾಂ ಲಿಂಕನ್ ಪ್ರಕಾರ ಒಂದು ಪ್ರಜಾತಂತ್ರದ ನಿಜವಾದ ಲಕ್ಷಣವೆಂದರೆ ಆಳುವ ಸರ್ಕಾರಗಳನ್ನು ಬಹುಸಂಖ್ಯಾತ ಜನರು ಆಯ್ಕೆಮಾಡಬೇಕಲ್ಲವೇ? 15 ನೇ ಲೋಕಸಭೆಗೆ ಚುನಾವಣೆ ನಡೆಯುವ ಈ ಹೊತ್ತಿನಲ್ಲಾದರೂ 1952ರಿಂದ ಈ ದೇಶವನ್ನು ಆಳಿದ 15 ಸರ್ಕಾರಗಳು ನಿಜಕ್ಕೂ ಬಹುಸಂಖ್ಯಾತ ಭಾರತೀಯರಿಂದ ಆಯ್ಕೆಯಾಗಲ್ಪಟ್ಟವರೇ ಎಂದು ವಿಶ್ಲೇಷಣೆ ಮಾಡಬೇಕಲ್ಲವೇ?

1999ರಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಮೈತ್ರಿಕೂಟ ಅಧಿಕಾರದಲ್ಲಿದ್ದಾಗ ಈ ದೇಶದ ಸಂವಿಧಾನಕ್ಕೆ ಕರಸೇವೆ ಮಾಡಲು ನಿವೃತ್ತ ಮುಖ್ಯ ನ್ಯಾಯಾಧೀಶ ವೆಂಕಟಾಚಲಯ್ಯನವರ ನೇತೃತ್ವದಲ್ಲಿ ಒಂದು 'ಸಂವಿಧಾನ ಸುಧಾರಣಾ ಅಯೋಗ'ವನ್ನು ನೇಮಕ ಮಾಡಿದ್ದು ನೆನಪಿನಲ್ಲಿರಬೇಕಲ್ಲವೇ? ಆ ಅಯೋಗ ತನ್ನನ್ನು ನೇಮಕ ಮಾಡಿದ್ದ ಸರ್ಕಾರ ಕೇಳದಿದ್ದರೂ ಆಳುವ ಸರ್ಕಾರಗಳು ಬಹುಮತ ಪಡೆದ ಸರ್ಕಾರವೇ ಎಂಬ ಪ್ರಶ್ನೆ ಹಾಕಿಕೊಂಡಿತ್ತು. ಆದರೆ ಅವರು ಕಂಡುಕೊಂಡ ಉತ್ತರ ಅವರಿಗೇ ಆಶ್ಚರ್ಯತರುವಂತಿತ್ತು. ಅಯೋಗದ ಅಧ್ಯಯನದ ಪ್ರಕಾರ ಆವರೆಗೆ (2000) ಅಧಿಕಾರ ಅನುಭವಿಸಿದ (ಆಗ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಎನ್.ಡಿ.ಎಯೂ ಸೇರಿದಂತೆ) ಯಾವ ಪಕ್ಷಗಳು ಚಲಾಯಿಸಿದ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದುಕೊಂಡಿರಲಿಲ್ಲ. ಆದರೂ ನಮ್ಮ ಸಂವಿಧಾನ ಸಭೆ ಅಳವಡಿಸಿದ First-Past-The-Post (FPTP) ಪದ್ಧತಿಯ– ಅಂದರೆ ಚಲಾಯಿಸಿದ ಮತಗಳಲ್ಲಿ ಯಾರು ಹೆಚ್ಚು ಮತ ಪಡೆಯುತ್ತಾರೋ ಅವರು ವಿಜೇತರು ಎಂಬ ಪದ್ಧತಿಯ– ಪ್ರಕಾರ ಚಲಾಯಿಸಿದ ಮತಗಳಲ್ಲಿ ಅತ್ಯಧಿಕ ಮತ ಪಡೆದವರೇ ವಿಜೇತರಾಗುತ್ತಾ ಬಂದರು. ಅಂದರೆ ಒಂದು ಕ್ಷೇತ್ರದಲ್ಲಿ ಬಹುಮುಖೀ ಸ್ಪರ್ಧೆ ಇದ್ದು ಐದಾರು ಸಮಬಲರು ಸ್ಪರ್ಧಿಸಿದ್ದರೆ ಗೆದ್ದ ಅಭ್ಯರ್ಥಿಗೆ ಶೇ.20 ಮತ ಬಂದರೂ ಅರ್ಥಾತ್ ಶೇ.80 ಜನ ತಿರಸ್ಕರಿಸಿದರೂ ಗೆದ್ದುಬರುವ ಅವಕಾಶವನ್ನು ನಮ್ಮ ಪ್ರಜಾತಂತ್ರ ಕಲ್ಪಿಸಿಕೊಟ್ಟಿತು.

ಕಳೆದ ಅರವತ್ತು ವರ್ಷಗಳ ಭಾರತೀಯ ಪ್ರಜಾತಂತ್ರದ ಅನುಭವವು, ಇದು ಹೇಗೆ ಬಹುಸಂಖ್ಯಾತರ ಒಟ್ಟು ನಿಲುವಿಗೆ ವಿರುದ್ಧವಾಗಿ ವರ್ತಿಸುತ್ತಾ ಬಂದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದಲೇ ಆ ಅಯೋಗವು ತಾನು ನೀಡಿದ ಅಂತಿಮ ಶಿಫಾರಸ್ಸುಗಳಲ್ಲಿ ಕನಿಷ್ಟ ಮೊದಲೆರಡು ಅಭ್ಯರ್ಥಿಗಳ ನಡುವೆಯಾದರೂ ಮತ್ತೊಮ್ಮೆ ಸ್ಪರ್ಧೆ ಏರ್ಪಡಿಸಬೇಕೆಂದು ಸಲಹೆ ಮಾಡಿತ್ತು. ಆ ಆತ್ಮಹತ್ಯಾಕಾರಿ ಸಲಹೆಯನ್ನು ಆಳುವ ಪಕ್ಷವಾಗಲೀ, ವಿರೋಧ ಪಕ್ಷವಾಗಲೀ ಒಪ್ಪಲಿಲ್ಲ. ಅದಕ್ಕೆ ಈ ಸಲಹೆಯ ಬಗ್ಗೆ ರಾಷ್ಟ್ರೀಯ ಚರ್ಚೆಯಿರಲಿ, ಪ್ರಚಾರವೂ ನಡೆಯಲಿಲ್ಲ!

ಈವರೆಗೆ ನಮ್ಮನ್ನಾಳಿದ ಯಾವ ಸರ್ಕಾರಗಳು ಬಹುಮತ ಪಡೆದ ಸರ್ಕಾರವಲ್ಲ ಅನ್ನುವುದಕ್ಕೆ ಕಳೆದ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳು ಪಡೆದ ಮತಗಳನ್ನು ಮತ್ತು ಒಟ್ಟಾರೆ ಚಲಾಯಿತ ಮತಗಳನ್ನು ಹೋಲಿಸಿ ನೋಡಿದರೆ ಸಾಕು. ಅರ್ಥವಾಗುತ್ತದೆ. ಈ ಬಗ್ಗೆ ಚುನಾವಣಾ ಅಯೋಗವೇ ಗಾಬರಿಗೊಳಿಸುವಂತ ಅಂಕಿಅಂಶಗಳನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ ಗೆದ್ದ ಅಭ್ಯರ್ಥಿಗಳಲ್ಲಿ ಶೇ.70ಕ್ಕೂ ಹೆಚ್ಚು ಅಭ್ಯರ್ಥಿಗಳು ಚಲಾಯಿಸಿದ ಮತಗಳಲ್ಲಿ ಶೇ.33ಕ್ಕಿಂತ ಕಡಿಮೆ ಮತಗಳನ್ನು ಪಡೆದಿದ್ದರು. ಶೇ.5ರಷ್ಟು ಅಭ್ಯರ್ಥಿಗಳು ಮಾತ್ರ ಚಲಾವಣೆಗೊಂಡ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದಿದ್ದರು.

ಆದರೆ ಶೇ.50ಕ್ಕಿಂತ ಹೆಚ್ಚು ಮತ ಪಡೆದ ಈ ಶೇ.5ರಷ್ಟು ಅಭ್ಯರ್ಥಿಗಳನ್ನಾದರೂ ನಿಜವಾದ ಜನಪ್ರತಿನಿಧಿಗಳೆಂದು ಹೇಳಲು ಸಾಧ್ಯವೇ? ಕಷ್ಟ.ಏಕೆಂದರೆ ಒಟ್ಟಾರೆ ಮತದಾರರಲ್ಲಿ ಓಟೇ ಹಾಕದ ಮತದಾರನ ಇಂಗಿತವೇನು? ಆ ಮತದಾರರು ಗೆದ್ದ ಅಭ್ಯರ್ಥಿಯೊಂದಿಗೆ ಎಲ್ಲಾ ಅಭ್ಯರ್ಥಿಗಳನ್ನು ತಿರಸ್ಕರಿಸಿದ್ದಾರೆಂದು ತಾನೇ ಅರ್ಥ? ಉದಾಹರಣೆಗೆ ಈವರೆಗೆ ಲೋಕಸಭಾ ಚುನಾವಣೆಗಳಲ್ಲಿ ಓಟು ಹಾಕಿರುವವರ ಪ್ರಮಾಣ ಶೇ.65ನ್ನೂ ಎಂದಿಗೂ ದಾಟಿಲ್ಲ. ಈವರೆಗೆ ಅತಿ ಹೆಚ್ಚು ಮತದಾನ ದಾಖಲಾಗಿರುವುದು 1985ರಲ್ಲಿ ಇಂದಿರಾ ಗಾಂಧಿ ಹತ್ಯೆ ನಡೆದ ನಂತರ ನಡೆದ ಎಂಟನೇ ಲೋಕಸಭಾ ಚುನಾವಣೆಯಲ್ಲಿ. ಆಗ 64.1 ರಷ್ಟು ಮತದಾನ ದಾಖಲಾಗಿತ್ತು. ಮತ್ತು ಅದೊಂದು ಲೋಕಸಭೆಯಲ್ಲಿ ಮಾತ್ರ ಗೆದ್ದ ಪಕ್ಷ (ಕಾಂಗ್ರೆಸ್) ಚಲಾವಣೆಗೊಂಡ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದುಕೊಂಡಿತ್ತು. ಅದನ್ನು ಬಿಟ್ಟರೆ 1952ರಿಂದ ಈವರೆಗೆ ನಡೆದಿರುವ 14 ಲೋಕಸಭಾ ಚುನಾವಣೆಗಳಲ್ಲಿ ಹತ್ತು ಚುನಾವಣೆಗಳಲ್ಲಿ ಮತದಾನದ ಪ್ರಮಾಣ ಶೇ.60ರ ಗಡಿ ದಾಟಲಿಲ್ಲ. ಅಂದರೆ ಸರಾಸರಿ ಶೇ.55ರಷ್ಟು ಮತದಾನವಾಗುತ್ತಿದೆಯೆಂದು ಭಾವಿಸಿದರೂ (ಕಳೆದ ಬಾರಿ ಶೇ.58.3ರಷ್ಟು ಮತದಾನವಾಗಿತ್ತು.)ಶೇ.45

ರಷ್ಟು ಮತದಾರರು ಗೆದ್ದ ಅಭ್ಯರ್ಥಿಯನ್ನು ತಿರಸ್ಕರಿಸಿದ್ದಾರೆಂದರ್ಥ. ಅಂದರೆ ಚಲಾಯಿಸಿದ ಮತಗಳಲ್ಲಿ ಶೇ.90 ರಷ್ಟು ಮತದಾನವನ್ನು ಪಡೆಯದ ಹೊರತೂ ಯಾವ ಗೆದ್ದ ಅಭ್ಯರ್ಥಿಯನ್ನು ಬಹುಸಂಖ್ಯಾತ ಜನರ ಅಭ್ಯರ್ಥಿಯೆಂದು ಹೇಳಲು ಸಾಧ್ಯವೇ ಇಲ್ಲ. ಸಾಕ್ಷಾತ್ ನೆಹರೂ ಇಂದು ಹಿಡಿದು ಈವರೆಗೆ ಯಾವ ಗೆದ್ದ ಅಭ್ಯರ್ಥಿಗೂ ಚಲಾಯಿಸಿದ ಮತಗಳಲ್ಲಿ ಶೇ.90ರಷ್ಟು ಮತದಾನವಾಗಿಲ್ಲ. ಈ ಮಾದರಿಯ ಚುನಾವಣಾ ಪ್ರಜಾತಂತ್ರದಲ್ಲಿ ನಮ್ಮನ್ನು ಆಳಿದವರು ಯಾರು ಬಹುಸಂಖ್ಯಾತ ಜನರ ಪ್ರತಿನಿಧಿಗಳಲ್ಲ ಎಂದಾಯಿತಲ್ಲವೇ?

ಈ ಅಂಕಿಅಂಶಗಳು ಏನನ್ನು ಹೇಳುತ್ತಿವೆ? ಭಾರದ ಆಳುವ ಪ್ರಭುಗಳ ಬಗ್ಗೆ ಭಾರತೀಯ ಮತದಾರರಿಗೆ ಆಗಿರುವ ಭ್ರಮನಿರಸನವನ್ನಲ್ಲವೇ? ಆದರೂ ನಮ್ಮ ಸಂಸದೀಯ ಪ್ರಜಾತಂತ್ರವು ಬಹುಸಂಖ್ಯಾತರಿಂದ ತಿರಸ್ಕೃತಗೊಂಡ ಅಭ್ಯರ್ಥಿಯನ್ನೇ ವಿಜೇತನೆಂದು ಘೋಷಿಸಿ ಜನತೆಯ ಅಣಕ ಮಾಡುತ್ತದೆ. ಕೆಲವು ಅಪವಾದಗಳನ್ನು ಹೊರತು ಪಡಿಸಿದಂತೆ, 1967ರಿಂದಾಚೆಗೆ ನಡೆದ ಚುನಾವಣೆಗಳಲ್ಲಿ ಯಾವ ಒಂದು ಪಕ್ಷಕ್ಕೂ ಬಹುಮತ ದೊರೆಯದಿರುವುದು ಏನನ್ನು ಸೂಚಿಸುತ್ತದೆ? ಇದರ ಮೂಲಕ ಜನತೆ ಈ ವ್ಯವಸ್ಥೆಯ ಬಗ್ಗೆ, ಚುನಾವಣೆಗೆ ನಿಂತಿರುವ ಪಕ್ಷಗಳ ಬಗ್ಗೆ ಅತ್ಯಂತ ಭ್ರಮನಿರಸನಗೊಂಡಿರುವುದು ಅತ್ಯಂತ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಅದರರ್ಥ 1967ಕ್ಕೆ ಮುನ್ನ ಆಳಿದ ಕಾಂಗ್ರೆಸ್ ಪಕ್ಷ ಬಹುಸಂಖ್ಯಾತರ ಬೆಂಬಲವನ್ನು ಪಡೆದಿತ್ತು ಎಂದೇನಲ್ಲ.

1952ರಲ್ಲಿ ನಡೆದ ಮೊಟ್ಟಮೊದಲ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 490 ಸೀಟುಗಳಲ್ಲಿ 245 ಸೀಟುಗಳು ಲಭಿಸಿ ಸೀಟುಗಳ ಲೆಕ್ಕಾಚಾರದಲ್ಲಿ ಸರಳ ಬಹುಮತ ಪಡೆದುಕೊಂಡರೂ ಪಡೆದ ಓಟು ಶೇರು ಕೇವಲ ಶೇ.45..ಅಂದರೆ ಶೇ.50ಕ್ಕಿಂತ ಕಡಿಮೆ. ಇದು, ಸ್ವಾತಂತ್ರ್ಯ ಬಂದ ತರುಣದಲ್ಲಿ ಮತ್ತು ಕಾಂಗ್ರೆಸ್ ದೇಶವ್ಯಾಪಿ ಪಕ್ಷವಾಗಿದ್ದಾಗ ಎಂಬುದನ್ನು ಮರೆಯಬಾರದು. 1957ರಲ್ಲಿ ನಡೆದ ಎರಡನೇ ಲೋಕಸಭೆಯಲ್ಲೂ ಕಾಂಗ್ರೆಸ್ 296 ಸೀಟುಗಳನ್ನು ಪಡೆದುಕೊಂಡಿತಾದರೂ ಶೇ. 50ರಷ್ಟು ಮತಗಳನ್ನು ಪಡೆದುಕೊಳ್ಳಲಿಲ್ಲ. 1962ರಲ್ಲಿ 357 ಸೀಟುಗಳನ್ನು ಪಡೆದುಕೊಂಡರೂ ಅದು ಸೀಟು ಹೆಚ್ಚಳವಾಗಿತ್ತೇ ವಿನಃ ಓಟು ಹೆಚ್ಚಳವಾಗಿರಲಿಲ್ಲ. 1967ರಲ್ಲಿ ಅಂದರೆ ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದ ನಂತರ ಕಾಂಗ್ರೆಸ್‌ನ ಬಗ್ಗೆ ಮುಡಿದ ಭ್ರಮನಿರಸನ ಸ್ಪಷ್ಟವಾಗಿ ಚುನಾವಣೆಯಲ್ಲಿ ಕಾಣಿಸಿಕೊಂಡಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್ 60 ಸೀಟುಗಳನ್ನು ಕಳೆದುಕೊಂಡು ಅದರ ಸಂಖ್ಯೆ 297ಕ್ಕಿಳಿಯಿತು ಮಾತ್ರವಲ್ಲ ಬಿಹಾರ, ಕೇರಳ, ಒರಿಸ್ಸಾ, ಮದ್ರಾಸ್, ಪಂಜಾಬ್ ಮತ್ತು ಪ.ಬಂಗಾಳ ವಿಧಾನಸಭೆಗಳಲ್ಲಿ ಹೀನಾಯ ಸೋಲನ್ನು ಕಂಡಿತು. 1969ರಲ್ಲಿ ಪಕ್ಷದ ಅಂತರಿಕ ಒಡಕಿನಿಂದ ಕಾಂಗ್ರೆಸ್ 283 ಸೀಟುಗಳನ್ನು ಮಾತ್ರ ಪಡೆದರೆ 1971ರಲ್ಲಿ ಇಂದಿರಾ ಗಾಂಧಿ 'ಗರೀಬಿ ಹಠಾವೋ', ಬ್ಯಾಂಕುಗಳ ರಾಷ್ಟ್ರೀಕರಣದಂತ ಸೋಗಲಾಡಿ ಭರವಸೆಗಳನ್ನು ನೀಡುವ ಮೂಲಕ ಕಾಂಗ್ರೆಸ್ ಪಕ್ಷದ ಪರಿಸ್ಥಿತಿ ಸುಧಾರಿಸಿ 352 ಸೀಟುಗಳನ್ನು ಪಡೆದರೂ ಅರ್ಧಕ್ಕಿಂತ ಹೆಚ್ಚು ಮತದಾರರು ಆಕೆಯ ಭರವಸೆಗಳನ್ನು ನಂಬಲಿಲ್ಲ.

ಆ ನಂತರ ಸರ್ವಾಧಿಕಾರಿ ಇಂದಿರಮ್ಮ 1975ರಲ್ಲಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದರಿಂದ, ತುರ್ತು

ಶಾಂತಿ ಭಂಗ

ತಪೋ ನೆಲದ
ಮೇಲೆ
ಬುದ್ಧ ಬಸವರು
ಮಾಡಿದ
'ಧ್ಯಾನ'
ಬಿಕ್ಕಿದೆ ನೋವಿನಿಂದ
'ಶಾಂತಿ' ಯ
ಭಂಗದಿಂದ!



○ ಟಿ.ಎಸ್. ರಾಜೇಂದ್ರ ಪ್ರಸಾದ್

ಸ್ಥಿತಿ ತೆಗೆದ ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲುಂಡಿತು. ಆದರೆ ಗೆದ್ದ ಜನತಾ ಪಕ್ಷದ ಒಕ್ಕೂಟಕ್ಕೆ 298 ಸೀಟುಗಳು ಲಭಿಸಿ ಸರಳ ಬಹುಮತ ದೊರೆತರೂ ಅವರ ಪಡೆದುಕೊಂಡ ಓಟು ಶೇರು ಕಾಂಗ್ರೆಸ್‌ಗಿಂತ ಜಾಸ್ತಿ ಆಗಿರಲಿಲ್ಲ . ಇದು ಈ ಹೊಸ ಪಕ್ಷ ಜನರಲ್ಲಿ ಅಂಥ ಭರವಸೆಯನ್ನೇನೂ ತುಂಬಿರಲಿಲ್ಲ ಎಂಬುದನ್ನು ಸಾರಿ ಹೇಳುತ್ತದೆ. ತಮ್ಮ ಒಳಕಚ್ಚಾಟಗಳಿಂದ ಈ ಜನತಾ ಪರಿವಾರ ಐದು ವರ್ಷ ಪೂರೈಸದಿದ್ದರಿಂದ 1980 ರಲ್ಲೇ ಮತ್ತೊಂದು ಚುನಾವಣೆ ಎದುರಾಯಿತು. ಇದರಲ್ಲಿ

1985ರಲ್ಲಿ ನಡೆದ ಚುನಾವಣೆಯು, ಇಂದಿರಾ ಗಾಂಧಿಯ ಹತ್ಯೆಯಾದ ತರುವಾಯ ಅಪಾರ ಅನುಕಂಪದ ಅಲೆಯ ಮೇಲೆ ನಡೆದದ್ದರಿಂದ ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಡೆದ ಸ್ವಾತಂತ್ರ್ಯಾ ನಂತರದ ಇತಿಹಾಸದಲ್ಲೇ ಅತ್ಯಧಿಕವಾದ ಶೇ.50ಕ್ಕಿಂತ ಹೆಚ್ಚಿನ ಓಟು ಶೇರಾಗಲೀ 403 ಸೀಟುಗಳಾಗಲೀ ಒಂದು ಅಪವಾದವೇ ವಿನಃ ವಾಸ್ತವವಾದದ್ದಲ್ಲ. ಇದು ನಂತರ 1989ರಲ್ಲಿ ನಡೆದ ಚುನಾವಣೆಯಲ್ಲಿ ಸಾಬೀತಾಗಿಹೋಯಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್ 200ಕ್ಕೂ ಹೆಚ್ಚು ಸ್ಥಾನಗಳನ್ನು ಕಳೆದುಕೊಂಡು ಕೇವಲ 197 ಸೀಟುಗಳನ್ನು ಪಡೆದುಕೊಂಡಿತು. ಆಗ ಅಧಿಕಾರ ರಚಿಸಿದ ರಾಷ್ಟ್ರೀಯ ರಂಗದ ಪ್ರಮುಖ ಘಟಕವಾಗಿದ್ದ ಜನತಾ ದಳ ಪಡೆದುಕೊಂಡಿದ್ದು ಕೇವಲ 143 ಸೀಟುಗಳು ಅಂದರೆ ಕಾಂಗ್ರೆಸ್‌ಗಿಂತ ಕಡಿಮೆ.

ಕಾಂಗ್ರೆಸ್ ಮತ್ತೆ 351 ಸೀಟು ಪಡೆದು ಅಧಿಕಾರಕ್ಕೆ ಬಂದರೆ ಅಧಿಕಾರದಲ್ಲಿದ್ದ ಜನತಾ ಪಕ್ಷಕ್ಕೆ ದಕ್ಕಿದ್ದು ಕೇವಲ 32 ಸೀಟುಗಳು. ಆದರೆ ಇವರಿಬ್ಬರ ಓಟೂ ಶೇರುಗಳೂ ಸಹ ಶೇ.40ಕ್ಕಿಂತ ಕಡಿಮೆಯಿತ್ತು ಎಂಬುದೇ ಇಲ್ಲಿ ಗಮನಾರ್ಹ.

1985ರಲ್ಲಿ ನಡೆದ ಚುನಾವಣೆಯು, ಇಂದಿರಾ ಗಾಂಧಿಯ ಹತ್ಯೆಯಾದ ತರುವಾಯ ಅಪಾರ ಅನುಕಂಪದ ಅಲೆಯ ಮೇಲೆ ನಡೆದದ್ದರಿಂದ ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಡೆದ ಸ್ವಾತಂತ್ರ್ಯ ನಂತರದ ಇತಿಹಾಸದಲ್ಲೇ ಅತ್ಯಧಿಕವಾದ ಶೇ.50ಕ್ಕಿಂತ ಹೆಚ್ಚಿನ ಓಟು ಶೇರಾಗಲೀ 403 ಸೀಟುಗಳಾಗಲೀ ಒಂದು ಅಪವಾದವೇ ವಿನಃ ವಾಸ್ತವವಾದದ್ದಲ್ಲ. ಇದು ನಂತರ 1989ರಲ್ಲಿ ನಡೆದ ಚುನಾವಣೆಯಲ್ಲಿ ಸಾಬೀತಾಗಿಹೋಯಿತು. ಆ ಚುನಾವಣೆಯಲ್ಲಿಕಾಂಗ್ರೆಸ್ 200ಕ್ಕೂ ಹೆಚ್ಚು ಸ್ಥಾನಗಳನ್ನು ಕಳೆದುಕೊಂಡು ಕೇವಲ 197 ಸೀಟುಗಳನ್ನುಪಡೆದುಕೊಂಡಿತು. ಆಗ ಅಧಿಕಾರ ರಚಿಸಿದ ರಾಷ್ಟ್ರೀಯ ರಂಗದ ಪ್ರಮುಖ ಘಟಕವಾಗಿದ್ದ ಜನತಾ ದಳ ಪಡೆದುಕೊಂಡಿದ್ದು ಕೇವಲ 143 ಸೀಟುಗಳು ಅಂದರೆ ಕಾಂಗ್ರೆಸ್‌ಗಿಂತ ಕಡಿಮೆ.

1985ರ ನಂತರ ಈವರೆಗೆ ನಡೆದಿರುವ ಯಾವ ಚುನಾವಣೆಗಳಲ್ಲೂ ಯಾವ ಒಂದು ಪಕ್ಷಕ್ಕೂ ಅಧಿಕಾರ ರಚಿಸುವಷ್ಟು ಸೀಟುಗಳು ಅಂದರೆ 272 ಸೀಟುಗಳು ದಕ್ಕಿಲ್ಲ. ಅಧಿಕಾರ ಹಿಡಿದ ಯಾವ ಮೈತ್ರಿಕೂಟಗಳು ಶೇ.50ಕ್ಕಿಂತ ಹೆಚ್ಚಿನ ಓಟು ಶೇರನ್ನು ಪಡೆಯಲಿಲ್ಲ. 1991ರಲ್ಲಿ ರಾಜೀವ್ ಗಾಂಧಿ ಹತ್ಯೆಯಾದ ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೂ ಪಡೆದ ಸೀಟುಗಳು ಕೇವಲ232. ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಪಡೆದುಕೊಂಡದ್ದು 120 ಸೀಟುಗಳು. 1996ರಲ್ಲಿ ನಡೆದ 11ನೇ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ 161 ಸೀಟು ದಕ್ಕಿದರೆ ಕಾಂಗ್ರೆಸ್‌ಗೆ 140 ಸೀಟುಗಳು ದಕ್ಕಿದವು. 1998ರ 12ನೇ ಲೋಕಸಭೆಯಲ್ಲಿ ಚುನಾವಣೋತ್ತರ ಮೈತ್ರಿ ಮಾಡಿಕೊಂಡ ಬಿಜೆಪಿ ಕೂಟಕ್ಕೆ ಲಭಿಸಿದ್ದು ಕೇವಲ 265 ಸೀಟುಗಳು, ಅದು ಅಧಿಕಾರ ನಡೆಸಿದ್ದು ಹೊರಗಿನಿಂದ ಬೆಂಬಲಿಸಿದ ಎಐಡಿಎಂಕೆ ನೀಡಿದ ಬೆಂಬಲದಿಂದ. ಅದು ಬೆಂಬಲ ವಾಪಸ್ ತೆಗೆದುಕೊಂಡ ನಂತರ ಸರ್ಕಾರ ಕುಸಿದು 1999ರಲ್ಲಿ 13ನೇ ಲೋಕಸಭೆ ಚುನಾವಣೆ ನಡೆಯಿತು. ಇದರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟ ಅಧಿಕಾರಕ್ಕೆ ಬಂದಿತು. ಈ ಕೂಟ ಪಡೆದುಕೊಂಡ ಸೀಟುಗಳ ಸಂಖ್ಯೆ 298 ಅದರಲ್ಲಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಿಜೆಪಿ ಪಡೆದುಕೊಂಡ ಸೀಟು ಕೇವಲ 182. ಇದು ಬಿಜೆಪಿ ಈ ವರೆಗೆ ಪಡೆದುಕೊಂಡಿರುವ ಅತಿ ಹೆಚ್ಚು ಸೀಟುಗಳು. ಕಾಂಗ್ರೆಸ್ ಪಕ್ಷ ಪಡೆದುಕೊಂಡಿದ್ದು ಕೇವಲ 114 ಸೀಟುಗಳು. 2004ರ 14ನೇ ಲೋಕಸಭೆಯಲ್ಲಿ ಅಧಿಕಾರ ರಚಿಸಿದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಮೈತ್ರಿಕೂಟ ಅಧಿಕಾರ ರಚಿಸಿತು. ಈ ಚುನಾವಣೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಕಾಂಗ್ರೆಸ್ ಪಕ್ಷ ಪಡೆದುಕೊಂಡ ಸೀಟುಗಳ ಸಂಖ್ಯೆ ಕೇವಲ 145. ಪ್ರಮುಖ ವಿರೋಧ ಪಕ್ಷವಾದ ಬಿಜೆಪಿಗೆ ದೊರೆತದ್ದು ಕೇವಲ 138 ಸೀಟುಗಳು.

ಇದು ಈವರೆಗಿನ ಭಾರತದ ಚುನಾವಣಾ ಪ್ರಜಾತಂತ್ರದ ಕಥೆ. ಭಾರತೀಯ ಪ್ರಜಾತಂತ್ರಕ್ಕೆ 61 ವರ್ಷ ಕಳೆದ ನಂತರ ಯಾವ ಪಕ್ಷಕ್ಕೂ ಸ್ವತಂತ್ರವಾಗಿ ಅಧಿಕಾರ ರಚಿಸುವಷ್ಟು ಸೀಟುಗಳೂ ಸಿಕ್ಕುತ್ತಿಲ್ಲ. ಓಟುಗಳೂ ಸಿಕ್ಕು

ತ್ತಿಲ್ಲ. ಸ್ವತಂತ್ರವಾಗಿ ಅಧಿಕಾರ ರಚಿಸಲು 272 ಸೀಟುಗಳು ಬೇಕಿದ್ದರೆ ಕಳೆದ ಮೂರು ನಾಲ್ಕು ಚುನಾವಣೆಗಳಿಂದ ಯಾವ ಒಂದು ಪಕ್ಷಕ್ಕೂ ಅದರ ಅರ್ಧದಷ್ಟೂ ಸೀಟುಗಳು ದಕ್ಕುತ್ತಿಲ್ಲ. ಅಷ್ಟು ಮಾತ್ರವಲ್ಲ ಕಳೆದ ಕೆಲವು ಚುನಾವಣೆಗ ಳಿಂದ ಯಾವ ಪಕ್ಷಕ್ಕೂ ಶೇ.40ರಷ್ಟು ಓಟು ಶೇರು ಸಿಗು ತ್ತಿಲ್ಲ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಓಟು ಶೇರು ಶೇ.38ರಷ್ಟಿದ್ದರೆ ಬಿಜೆಪಿಯದ್ದು ಶೇ.30ರಷ್ಟು ಮಾತ್ರವಾ ಗಿತ್ತು. ಕರ್ನಾಟಕದ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿ 110 ಸೀಟುಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಅಧಿಕಾರ ರಚಿಸಿದರೂ ಅದು ಪಡೆದುಕೊಂಡ ಓಟು ಶೇರು ಶೇ.33.9.ಆದರೆ ಕೇವಲ 80 ಸೀಟುಗಳನ್ನು ಪಡೆ ದುಕೊಂಡ ಕಾಂಗ್ರೆಸ್ ಪಕ್ಷ ಪಡೆದುಕೊಂಡ ಓಟು ಶೇರು ಶೇ.34.6 ಅಂದರೆ ಅಧಿಕಾರ ರೂಢ ಬಿಜೆಪಿಗಿಂತ 0.7 ರಷ್ಟು ಜಾಸ್ತಿ. ಅಂದರೆ ಕರ್ನಾಟಕದ ಮತದಾರರಲ್ಲಿ ಅತಿ ಹೆಚ್ಚು ಜನ ಬಿಜೆಪಿಯ ಬದಲಿಗೆ ಕಾಂಗ್ರೆಸನ್ನೇ ಆಯ್ದು ಕೊಂಡರೂ, (ಇದಕ್ಕೆ ಜಾತ್ಯತೀತ ಜನತಾದಳದ ಓಟುಗ ಳನ್ನು ಸೇರಿಸಿದರೆ ಒಟ್ಟು ಶೇ.55ರಷ್ಟು) ಜನ ಕೋಮುವಾ ದಿಗಳನ್ನು ತಿರಸ್ಕರಿಸಿದರೂ ಬಿಜೆಪಿಯೇ ಅಧಿಕಾರಕ್ಕೆ ಬರು ವಂತೆ ಮಾಡಿರುವುದು ನಮ್ಮ ಚುನಾವಣಾ ಪದ್ಧತಿಗಳು.

ಕಳೆದ ಕೆಲವು ಚುನಾವಣೆಗಳಿಂದ ಕಾಂಗ್ರೆಸ್ ಸುತ್ತ ಹತ್ತಾರು ಪಕ್ಷಗಳು ಮತ್ತು ಬಿಜೆಪಿ ಸುತ್ತಾ ಹತ್ತಾರು ಕೂಡಿಕೊಂಡು ಕೂಟ ರಚಿಸಿಕೊಂಡು ಯುಪಿಎ, ಎನ್‌ಡಿಎ ಎಂದು ಅಧಿಕಾರ ಹಿಡಿಯುತ್ತಿದ್ದವು. ಈ ಬಾರಿ ಜನ ಅದನ್ನೂ ತಿರಸ್ಕರಿಸುತ್ತಿರುವಂತೆ ಕಾಣುತ್ತದೆ. ಈವರೆಗೆ ನಡೆದಿರುವ ಚುನಾವಣಾ ಪೂರ್ವ ಸಮೀಕ್ಷೆಗಳು ಯಾವುವೂ ಒಂದು ಪಕ್ಷವಿರಲಿ ಒಂದು ಕೂಟವೂ ಅಧಿ ಕಾರಕ್ಕೆ ಬರುವುದು ಕಷ್ಟವೆಂದು ಸಾರುತ್ತಿವೆ. CNN-IBN, CSDS ನವರು ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎ ಕೂಟಕ್ಕೆ 215–235 ಸೀಟುಗಳು, ಎನ್‌ಡಿಎ ಕೂಟಕ್ಕೆ 165 –185 ಸೀಟುಗಳು ಮತ್ತು ಇತರರಿಗೆ 120–150 ಸೀಟು ಗಳು ಬರಲಿವೆ. ಸ್ಟಾರ್ ನ್ಯೂಸ್ ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎಗೆ 257, ಎನ್‌ಡಿಎಗೆ 185 ಮತ್ತು ಇತರ ರಿಗೆ 96 ಸೀಟುಗಳು ಬರಲಿವೆ. ಟೈಮ್ಸ್ ಆಫ್ ಇಂಡಿಯಾ ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎಗೆ 201, ಎನ್‌ಡಿಎಗೆ 195 ಮತ್ತು ಇತರರಿಗೆ 147 ಸೀಟುಗಳು ಸಿಗಲಿವೆ. ಇತ್ತೀಚೆಗೆ ಇಂಡಿಯಾ ಟಿವಿ ನಡೆಸಿದ ಸಮೀ ಕ್ಷೆಯ ಪ್ರಕಾರ ಯುಪಿಎಗೆ 178, ಎನ್‌ಡಿಎಗೆ 187 ಮತ್ತು ಇತರರಿಗೆ 178 ಸೀಟುಗಳು ಬರಲಿವೆ. ಇವುಗಳ ನಡುವಿನ ವ್ಯತ್ಯಾಸವೇನೇ ಇರಲಿ, ಈಗ ಒಂದು ಪಕ್ಷಕ್ಕಿರಲಿ ಒಂದು ಕೂಟಕ್ಕೇ ಬಹುಮತ ಬರಲಿಕ್ಕಿಲ್ಲ. ಈಗ ಕೂಟಾಂತರ ಮೈತ್ರಿ ಆಗದ ಹೊರತು ಸರ್ಕಾರ ರಚನೆ ಸಾಧ್ಯವಿಲ್ಲ.

ಇದು ಭಾರತದ ಚುನಾವಣಾ ಪ್ರಜಾತಂತ್ರ ಎದುರಿ ಸುತ್ತಿರುವ ಹೊಸ ಬಿಕ್ಕಟ್ಟು, ವಿಶ್ವಾಸದ ಬಿಕ್ಕಟ್ಟು.

ಮತದಾನದಲ್ಲಿ, ಓಟು ಶೇರಿನಲ್ಲಿ, ಸೀಟುಗಳ ಸಂಖ್ಯೆಯಲ್ಲಿ ಎಲ್ಲದರಲ್ಲೂ ಭಾರತೀಯ ಮತದಾರ ಈ ವ್ಯವಸ್ಥೆಯ ಬಗ್ಗೆ, ಆಳುವವರ ಬಗ್ಗೆ ತನ್ನ ಸ್ಪಷ್ಟ ಅವಿಶ್ವಾಸ ಮತ್ತು ತಿರಸ್ಕಾರವನ್ನು ಸೂಚಿಸುತ್ತಿದ್ದಾನೆ/ಳೆ. ಆದರೂ ನಮ್ಮ ಚುನಾವಣಾ ಪದ್ಧತಿಯ ತಂತ್ರಗಳು ಪ್ರಜಾತಂತ್ರ ವನ್ನೇ ಸೋಲಿಸಿ ಸೋತವರನ್ನೇ ವಿಜೇತರನ್ನಾಗಿ ಆಯ್ಕೆ ಮಾಡಿ ಅಧಿಕಾರ ಕೊಡುತ್ತದೆ. ವ್ಯವಸ್ಥೆ ಬದಲಾಗದಿದ್ದರೂ ಹೋಗಲಿ, ಈ ಚುನಾವಣಾ ಪದ್ಧತಿಗಳಾದರೂ ಬದಲಾಗ ಬೇಕಲ್ಲವೇ? □

ಭವಿಷ್ಯಕ್ಕಿಷ್ಟು ಉಳಿಯಲಿ



ಬಾನ ದಾರಿಯಲಿ
ಕ್ಷಿಪಣೆ ಹಾರಿಸುವುದು ಬೇಡ
ಹಕ್ಕಿಗಳಿಗಿನಿತು ಆಕಾಶವಿರಲಿ

ಅರಣ್ಯದಲಿ
ಅಷ್ಟೂ ಮರಗಳ ಕಡಿಯುವುದು ಬೇಡ
ಕೋಗಿಲೆಗಳಿಗಷ್ಟು ಮರಗಳಿರಲಿ

ಬೆಟ್ಟಗಳಲಿ
ಮಣ್ಣ ಅಗೆದು ಗಣಿಯೆಂಬ ಕನ್ನ ಕೊರೆಯುವುದು ಬೇಡ
ಹರಿಯುವ ನದಿಗಳಿಗೂ ಹಾದಿಯಿರಲಿ

ನಾಶಗೊಳಿಸಿ
ಎಲ್ಲವ ನಮ್ಮ ಸುಖಕೆಂದು ಬೀಗುವುದು ಬೇಡ
ಹುಟ್ಟಲಿರುವ ಮಗುವಿಗೂ ನಾಳೆಯೆಂಬುದಿರಲಿ!

❍ ಕು.ಸ.ಮಧುಸೂದನ

ಶ್ರೀಲಂಕಾದಲ್ಲಿ ಪ್ರಜಾಸತ್ತೆ ಇದೆಯೇ?

ಡಾ. ಡೊಮಿನಿಕ್.ಡಿ

ಕಳೆದ ದಶಕದಲ್ಲಿ ಆರಂಭವಾದ 'ಭೂಮಂಡಲೀಕರಣ' ಎನ್ನುವುದು ಹೇಗೆ ಆರ್ಥಿಕ ಸಂಕಷ್ಟಗಳಿಗೆ ಕಾರಣವಾಗುತ್ತದೆ ಎಂದು ಪ್ರಸಿದ್ಧ ಸ್ತ್ರೀವಾದಿ ಸೂಸಾನ್ನ ಜಾರ್ಜ್ ತಮ್ಮ ಬರವಣಿಗೆಯಲ್ಲಿ ಬಹಳ ಹಿಂದೆಯೇ ಸೂಚಿಸಿದ್ದರು. ಅವರ ಕೃತಿ 'ಲೊಗಾನೋ ರಿಪೋರ್ಟ್' ಮುಂಬರಲಿರುವ ಜನಾಂಗೀಯ ಹಿಂಸೆಯ ಕುರಿತಂತೆ ಸಾಕಷ್ಟು ಮಾಹಿತಿಯನ್ನು ನೀಡುತ್ತದೆ. 'ಅಭಿವೃದ್ಧಿ' ಎನ್ನುವುದು ಮುಂದಿನ ದಿನಗಳಲ್ಲಿ ಉಳ್ಳವರು ನಡೆಸುವ ವಂಚನೆಯಾಗಿ ಜಗತ್ತಿನಾದ್ಯಂತ ಶೇ.೨೦ ರಷ್ಟು ಜನರನ್ನು ೨೦೨೦ ರೊಳಗೆ ಬಲಿತೆಗೆದುಕೊಳ್ಳುತ್ತದೆ ಎಂಬುದನ್ನು ಸೂಸಾನ್ನರವರು ತಮ್ಮ ಕೃತಿಯಲ್ಲಿ ಸೂಚ್ಯವಾಗಿ ಹೇಳುತ್ತಾ, ಈ ಶೇ. ೨೦ರಷ್ಟು ಜನರು ಆಗ್ನೇಯ ಏಶಿಯಾದ ದೇಶಗಳಲ್ಲಿ ಜೀವಿಸುವವರೇ ಆಗಿದ್ದಾರೆ ಎಂದಿದ್ದರು. ಸಂಬಂಧಿಸಿದಂತೆ ನಿಜವಾಗುತ್ತಿದೆ ಎಂಬುದನ್ನು ಪ್ರಸ್ತುತ ವಿದ್ಯಮಾನಗಳೇ ಸಾದರ ಪಡಿಸುತ್ತಿವೆ.

ಪ್ರಸ್ತುತ ಜಾಗತಿಕ ವಿದ್ಯಮಾನದಲ್ಲಿ ಒಂದೆಡೆ ಆರ್ಥಿಕ ಕುಸಿತ ಶ್ರಮವನ್ನು ಕದಿಯುತ್ತಿರುವವರ ಎದೆಯಲ್ಲಿ ಭಯವನ್ನುಂಟುಮಾಡುತ್ತಿದ್ದರೆ, ಮತ್ತೊಂದೆಡೆ ಹಿಂಸೆ ಜನ ಸಾಮಾನ್ಯರನ್ನು ಎಂದಿಗಿಂತಲೂ ಇಂದು ಭಯಾನಕವಾಗಿ ಕಾಡುತ್ತಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಅಲ್ಪಸಂಖ್ಯಾತರಾಗಿರುವ ಕುಲೀನ ಮಂದಿಯ ಐಶರಾಮಿ ಸೋಗಲಾಡಿತನವೇ ಆಗಿದೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಧಿಕಾರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಸಂಪತ್ತನ್ನು ಸೂರೆ ಮಾಡುತ್ತಿರುವ ಈ ಕುಲೀನರು ಎಂದೂ ಕಾಡದ ಸಾಂಸ್ಕೃತಿಕ ಭೀತಿಯಲ್ಲಿ ಇಂದು ಸಿಲುಕಿದಂತೆ ಕಾಣುತ್ತಿದ್ದಾರೆ. ಆದ್ದರಿಂದ ಇವರು ದೇಶ/ರಾಷ್ಟ್ರಗಳ ಗಡಿಯನ್ನು ಸಾಂಸ್ಕೃತಿಕ ವಾರಸುದಾರಿಕೆಯ ಪ್ರಶ್ನೆಯೆಂಬಂತೆ ಬಿಂಬಿಸಿ, ಇಲ್ಲದ 'ಭಯೋತ್ಪಾದನೆ'ಯ ಭೂತವನ್ನು ಎದುರಿಸಲು ಸರ್ಕಾರಿ ಸಾಮ್ಯದಲ್ಲಿರುವ ಸೈನ್ಯವನ್ನು ಜನಸಾಮಾನ್ಯರ ನ್ಯಾಯಯುತ ಬೇಡಿಕೆಗಳ ವಿರುದ್ಧ ಛೂ ಬಿಡುತ್ತಿದ್ದಾರೆ. ಇದಕ್ಕೆ ಶ್ರೀಲಂಕಾದಲ್ಲಿ ನಡೆದಿರುವ ಜನಾಂಗೀಯ ಹತ್ಯೆಯೇ ನಿದರ್ಶನವಾಗಿದೆ. ಅಲ್ಲಿ ಸಾರ್ವಜನಿಕವಾಗಿ ಬೌದ್ಧ ಮತವನ್ನು ನಂಬಿರುವ ಬಹು ಸಂಖ್ಯಾತರಾಗಿರುವ ಸಿಂಹಳೀಯರು, ಅದರ ಅಹಿಂಸಾ ನೀತಿಯನ್ನು ಹಾಗೂ ಸೋದರತೆಯನ್ನು ಗಾಳಿಗೆ ತೂರಿ, ಅಲ್ಲಿರುವ ತಮಿಳರ ಅಸ್ತಿತ್ವಕ್ಕೆ ಕಂಟಕರಾಗಿ ಪರಿಣಮಿಸಿದ್ದಾರೆ.

ನಾನು ಪ್ರಾಥಮಿಕ ತರಗತಿಯಲ್ಲಿ ಓದುತ್ತಿರುವಾಗ ಭಾರತದ ನಕಾಶೆಯನ್ನು ನೋಡುವಾಗಲೆಲ್ಲಾ ಅದರ ದಕ್ಷಿಣದ ಬಲ ಮಗ್ಗುಲಲ್ಲಿ ಯಾವಾಗಲೂ ಶ್ರೀಲಂಕಾ ಇರುತ್ತಿದ್ದದನ್ನು ಕಾಣುತ್ತಿದ್ದೆ. ಆಗ ಅದೂ ಸಹ ಭಾರತಕ್ಕೆ ಸೇರಿರಬಹುದದೆಂದು ಭಾವಿಸಿದ್ದೆ. ಆದರೆ ತದನಂತರದಲ್ಲಿ ಭಾರತ ಹೇಗೆ ಶ್ರೀಲಂಕಾದ ಬಗ್ಗೆ ದೊಡ್ಡಣ್ಣನ ನೀತಿಯನ್ನು ಆ ಮೂಲಕ ಅನುಸರಿಸುತ್ತಿತ್ತು ಎಂಬುದು ತಿಳಿದು ಚಕಿತಗೊಂಡಿದ್ದೆ. ಅಂದರೆ ನಕಾಶೆಯನ್ನು ಕಲಿಯುವುದರ ಮೂಲಕವೇ ಗಡಿ ಪ್ರದೇಶಗಳನ್ನು ಕುರಿತಂತೆ ನಮ್ಮಲ್ಲಿ ಒಂದು ರೀತಿಯ ನಡಾವಳಿಯನ್ನು ಅಗೋಚರವಾಗಿಯೇ ಸಂಘಟಿಸಿಕೊಟ್ಟಿರುವುದನ್ನು ನಾವು ಇಂದು ಗಮನಿಸಬೇಕಾಗಿದೆ. ಆದ್ದರಿಂದ ಪ್ರಸ್ತುತ ಲೇಖನದಲ್ಲಿ ಈ ದೇಶ-ಪ್ರಭುತ್ವಗಳನ್ನು ಮತ್ತು ಅದರೊಳಗೆ ಜೀವಿಸುತ್ತಿರುವ ಪ್ರಜೆಗಳನ್ನು ಏಕರೂಪಿಯಾದ ಸಾಂಸ್ಕೃತಿಕ ಐಡೆಂಟಿಯೊಳಗೆ ಬಂಧಿಸುವ ಪಾಲಿಟಿಕ್ಸ್‌ನ್ನು ಅನಾವರಣ ಮಾಡುತ್ತಾ, ಈ ರಾಷ್ಟ್ರೀಯ ಗಡಿಗಳೊಳಗೆ ಬಹುತ್ವದ ಪ್ರಶ್ನೆಗಳನ್ನು ಹೇಗೆ ಅಮುಕಲಾಗುತ್ತಿದೆ ಎನ್ನುವುದನ್ನು ಚರ್ಚಿಸಲಿದ್ದೇನೆ.

ಕಳೆದ ದಶಕದಲ್ಲಿ ಆರಂಭವಾದ 'ಭೂಮಂಡಲೀಕರಣ' ಎನ್ನುವುದು ಹೇಗೆ ಆರ್ಥಿಕ ಸಂಕಷ್ಟಗಳಿಗೆ ಕಾರಣವಾಗುತ್ತದೆ ಎಂದು ಪ್ರಸಿದ್ಧ ಸ್ತ್ರೀವಾದಿ ಸೂಸಾನ್ನ ಜಾರ್ಜ್ ತಮ್ಮ ಬರವಣಿಗೆಯಲ್ಲಿ ಬಹಳ ಹಿಂದೆಯೇ ಸೂಚಿಸಿದ್ದರು. ಅವರ ಕೃತಿ 'ಲೊಗಾನೋ ರಿಪೋರ್ಟ್' ಮುಂಬರಲಿರುವ ಜನಾಂಗೀಯ ಹಿಂಸೆಯ ಕುರಿತಂತೆ ಸಾಕಷ್ಟು ಮಾಹಿತಿಯನ್ನು ನೀಡುತ್ತದೆ. 'ಅಭಿವೃದ್ಧಿ' ಎನ್ನುವುದು ಮುಂದಿನ ದಿನಗಳಲ್ಲಿ ಉಳ್ಳವರು ನಡೆಸುವ ವಂಚನೆಯಾಗಿ ಜಗತ್ತಿನಾದ್ಯಂತ ಶೇ.20 ರಷ್ಟು ಜನರನ್ನು 2020ರೊಳಗೆ ಬಲಿತೆಗೆದುಕೊಳ್ಳುತ್ತದೆ ಎಂಬುದನ್ನು ಸೂಸಾನ್ನರವರು ತಮ್ಮ ಕೃತಿಯಲ್ಲಿ ಸೂಚ್ಯವಾಗಿ ಹೇಳುತ್ತಾ, ಈ ಶೇ. 20ರಷ್ಟು ಜನರು ಆಗ್ನೇಯ ಏಶಿಯಾದ ದೇಶಗಳಲ್ಲಿ ಜೀವಿಸುವವರೇ ಆಗಿದ್ದಾರೆ ಎಂದಿದ್ದರು. ಇದು ಹೇಗೆಂದರೆ ಅಭಿವೃದ್ಧಿಗೊಂಡ ದೇಶಗಳಲ್ಲಿನ ನಾಗರಿಕರು ಬರಲಿರುವ ಆರ್ಥಿಕ ಅವಘಡಗಳನ್ನು ಅದರಲ್ಲೂ ಜಾಗತಿಕವಾಗಿ ಪರಿಸರದಲ್ಲಿ ಕಾಣಿಸಿಕೊಳ್ಳಲಿರುವ 'ಅಸಮತೋಲನ'ವನ್ನು ಎದುರಿಸಲು ತಯಾರಾಗಿದ್ದು, ಅಭಿವೃದ್ಧಶೀಲ ರಾಷ್ಟ್ರಗಳಲ್ಲಿನ ಅಂದರೆ ಆಗ್ನೇಯ ಏಶಿಯಾ ದೇಶಗಳ ತಳಮಟ್ಟದ ಬದುಕಿನಲ್ಲೇ ಬಂಧಿಯಾಗಿರುವ ಜನರು ಇನ್ನೂ ತಯಾರಾಗಿಲ್ಲದೆ, ಅದಕ್ಕೆ ಬಲಿಯಾಗಲಿದ್ದಾರೆ ಎಂಬ ಭವಿಷ್ಯವಾಣಿಯನ್ನು 'ಲೊಗಾನೋ ರಿಪೋರ್ಟ್' ಹೇಳಿತ್ತು. ಈ ಭವಿಷ್ಯವಾಣಿ ಆಗ್ನೇಯ ಏಶಿಯಾದ

ದೇಶಗಳಿಗೆ ಸಂಬಂಧಿಸಿದಂತೆ ನಿಜವಾಗುತ್ತಿದೆ ಎಂಬುದನ್ನು ಪ್ರಸ್ತುತ ವಿದ್ಯಮಾನಗಳೇ ಸ್ಥಾದರ ಪಡಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಆಗ್ನೇಯ ಏಶಿಯಾದಲ್ಲಿ ನಡೆಯುತ್ತಿರುವ ಹಿಂಸೆಯ ಸ್ವರೂಪ – ಅದು ಆಂತರಿಕವಾಗಿರುವ ಜನಾಂಗೀಯ ಯುದ್ಧಗಳಾಗಿರಬಹುದು, ಕೋಮು ಗಲಭೆಗಳಾಗಿರಬಹುದು, ಭಯೋತ್ಪಾದನೆಯಾಗಿರಬಹುದು, ಅಥವಾ ಯಾವುದೇ ರೀತಿಯ ಅವಘಟಗಳಾಗಿರಬಹುದು –ಅವನ್ನು ನಾವು ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ.

ಆದರೆ ಈ ಯಾವುದೇ ಸಂಗತಿಗಳನ್ನು ಗಮನಿಸಿದೆ ಅಧಿಕಾರರೂಢ ಕುಲೀನರು ಜಾರ್ಜ್‌ಬುಷ್‌ನ ನೇತೃತ್ವದಲ್ಲಿ 'ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ' ಎಂದು ಶತಮಾನಗಳ ಶೋಷಣೆಯ ವಿರುದ್ಧ ನಡೆಯುತ್ತಿರುವ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಹತ್ತಿಕ್ಕುವುದನ್ನು ನಾವು ಕಣ್ಣು-ಕಿವಿ ಮುಚ್ಚಿ, ಮಾಧ್ಯಮಗಳು ಬಿಂಬಿಸುವ ಇಲ್ಲದ ಭಯೋತ್ಪಾದನೆಯನ್ನು ನಂಬುತ್ತಿದ್ದೇವೆ. ಹೀಗೆ ಈ ಸಮರವನ್ನು ಸಂಘಟಿಸುವ ನೆಪದಲ್ಲಿ ಉಳ್ಳವರು ನಡೆಸುವ ಶಸ್ತ್ರಾಸ್ತ್ರಗಳ ಮಾರಾಟವನ್ನು ಹಾಗೂ ಅವರ ಮಾರುಕಟ್ಟೆಯ ಪೈಪೋಟಿಯನ್ನು ಗಮನಿಸದ 'ಸಭ್ಯ ನಾಗರಿಕರು' ತಮ್ಮ ಪೂರ್ಣ ಸಮ್ಮತಿಯನ್ನು ಈ ಭಯೋತ್ಪಾದನೆಯ ಸಮರಕ್ಕೆ ನೀಡಿಬಿಟ್ಟಿದ್ದಾರೆ. ಉದಾಹರಣೆಗೆ ವಸಾಹತುಶಾಹಿ ಯುಗದಿಂದಲೇ ಆರಂಭವಾದ ಶ್ರೀಲಂಕಾ ತಮಿಳರ ಹಕ್ಕುಗಳನ್ನು ರಕ್ಷಿಸದೆ, ಕೇವಲ 'ಎಲ್‌ಟಿಟಿಇ'ಯನ್ನು ನೆಪವಾಗಿಟ್ಟುಕೊಂಡು ಆಗ್ನೇಯ ಏಶಿಯಾದಲ್ಲಿ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುವ ಭಾರತ ಮತ್ತು ಚೀನಾ ನಡೆಸುವ ಹುನ್ನಾರಗಳನ್ನು ಗಮನಿಸಿದರೂ, ಗಮನಿಸಿದಂತೆ ಸಿಂಹಳೀಯನಾದ ಪ್ರಸ್ತುತ ಶ್ರೀಲಂಕಾದ ಅಧ್ಯಕ್ಷ ಎಲ್‌ಟಿಟಿಇನ ವಿರುದ್ಧ ಸಮರ ಸಾರಿ, ಎಲ್‌ಟಿಟಿಇಯನ್ನು ಧ್ವಂಸ ಮಾಡಿ ಬೀಗುತ್ತಿದ್ದಾನೆ.

ಈ ಹಿನ್ನೆಲೆಯಲ್ಲಿ ಶ್ರೀಲಂಕಾದ ಪ್ರಜಾಪ್ರಭುತ್ವದ ದೃಷ್ಟಿಯಿಂದ ನಾವು ಮೂರು ಮುಖ್ಯ ಸಂಗತಿಗಳನ್ನು ಗಮನಿಸಬೇಕಾಗಿದೆ: ಒಂದು – ಪ್ರಸ್ತುತ ತಮಿಳರ ಸಮಸ್ಯೆಯ ಚಾರಿತ್ರಿಕ ಸಂದರ್ಭ, ಎರಡು –ಎಲ್‌ಟಿಟಿಇಯ ಸಂಘಟನೆ ಮತ್ತು ಅದು ಪ್ರತಿಪಾದಿಸಿದ ಪ್ರತ್ಯೇಕ ರಾಷ್ಟ್ರೀಯತೆಯ ಸ್ವರೂಪ, ಮೂರು – ಶ್ರೀಲಂಕಾದಲ್ಲಿ ಅಧಿಕಾರ ರೂಢವಾಗಿರುವ ಸಿಂಹಳೀಯರ ಐಡೆಂಟಿಟಿ ಸಂಘಟನೆ ಮತ್ತು ಭವಿಷ್ಯದ ಸವಾಲು.

ಮೊದಲನೆಯದಾಗಿ ಪ್ರಸ್ತುತ ತಮಿಳರ ಸಮಸ್ಯೆಯ ಚಾರಿತ್ರಿಕ ಸಂದರ್ಭವನ್ನು ಕುರಿತು ಯೋಚಿಸುವಾಗ ಶ್ರೀಲಂಕಾದ ಮೂಲನಿವಾಸಿಗಳು ಯಾರು ಎನ್ನುವ ಪ್ರಶ್ನೆ ನಮ್ಮೆದುರು ನಿಲ್ಲುತ್ತದೆ. ಆದರೆ ಈ 'ಮೂಲ'ದ ಸಮಸ್ಯೆಯನ್ನು ಬಿಡಿಸಿಕೊಳ್ಳುವಾಗ ವಲಸಿಗರಾಗಿ ಒಂದು ಜಾಗಕ್ಕೆ ಬಂದಾಗ, ಹಾಗೆ ಬಂದವರು ನೆಲೆನಿಲ್ಲುವುದನ್ನು ಹಾಗೂ ಅಲ್ಲಿನ ಪರಿಸರವನ್ನು ಖಾಸಗೀಕರಿಸಿಕೊಂಡು ಅದನ್ನೇ ಒಡೆತನವೆಂದು ಭಾವಿಸುವವರೇ ಆಗಿದ್ದಾರೆನ್ನುವುದನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಆದರೆ ವಸಾಹತುಪೂರ್ವದ ಸನ್ನಿವೇಶವನ್ನು ನಾವು ಗಮನಿಸಿದಾಗ ವಲಸೆ ಎನ್ನುವುದು ಒಂದು ಸಾಮಾನ್ಯವಾದ ಸಂಗತಿಯೇ ಆಗಿತ್ತು. ಆದರೆ ಅದು ಯಾವಾಗ ಲಾಭದ ವಿಷಯವಾಗುತ್ತದೋ, ಮತ್ತು ಜೀವ-ಸಂಕುಲವನ್ನು ಆ ಲಾಬಕ್ಕಾಗಿ ವಸಾತೀಕರಿಸಲಾಗುತ್ತದೆಯೋ ಆಗ ವಲಸೆ ಎನ್ನುವುದು ಶೋಷಣೆಯ ಮತ್ತು ತಾರತಮ್ಯದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಹೀಗಿರುವಾಗ ವಸಾಹತುಪೂರ್ವದ ಶ್ರೀಲಂಕಾದಲ್ಲಿ ಇದ್ದ ಜನ ಸಮುದಾಯಗಳೆಂದರೆ ತಮಿಳರು, ಮುಸಲ್ಮಾನರು, ಸಿಂಹಳೀಯರು, ಬರ್ಘ ಸಮುದಾಯ (ಮಿಶ್ರ ಜನಾಂಗೀಯ ಅಲ್ಪಸಂಖ್ಯಾತರು) ಮತ್ತು ಮಲಯರು (ಬುಡಕಟ್ಟು ಅಲ್ಪಸಂಖ್ಯಾತರು). ಇವರಲ್ಲಿ ಸಿಂಹಳೀಯರು ಬಹುಸಂಖ್ಯಾತರಾಗಿದ್ದು ಶೇ. 74% ರಷ್ಟಿದ್ದಾರೆ. ಬಹುಹಿಂದಿನಿಂದಲೇ ಶ್ರೀಲಂಕಾದ ಉತ್ತರ ಮತ್ತು ಪೂರ್ವದಲ್ಲಿ ವಾಸಿಸುವ ತಮಿಳಿಯನ್ನರು ಶೇ. 12.6 ರಷ್ಟು ಇದ್ದರೆ, 19ನೇ. ಶತಮಾನದಲ್ಲಿ ದಕ್ಷಿಣ ಭಾರತದಿಂದ ಟೀ ಎಸ್ಟೇಟ್‌ಗಳಲ್ಲಿ ಕೂಲಿ ಕಾರ್ಮಿಕರಾಗಿ ಬಂದಂಥ ತಮಿಳರು ಶೇ.5.6ರಷ್ಟು ಹಾಗೂ ಅರಬ್ ಮೂಲದ ಮುಸ್ಲಿಂರು ಶೇ.4ರಷ್ಟು ಮಂದಿ. ಉಳಿದವರ ಸಂಖ್ಯೆ ಎಂದೂ ಸಹ ಶ್ರೀಲಂಕಾದ ರಾಜಕಾರಣದಲ್ಲಿ ಮುಖ್ಯವಾಗಿಲ್ಲ.

ಮೊದಲನೆಯದಾಗಿ ಪ್ರಸ್ತುತ ತಮಿಳರ ಸಮಸ್ಯೆಯ ಚಾರಿತ್ರಿಕ ಸಂದರ್ಭವನ್ನು ಕುರಿತು ಯೋಚಿಸುವಾಗ ಶ್ರೀಲಂಕಾದ ಮೂಲನಿವಾಸಿಗಳು ಯಾರು ಎನ್ನುವ ಪ್ರಶ್ನೆ ನಮ್ಮೆದುರು ನಿಲ್ಲುತ್ತದೆ. ಆದರೆ ಈ 'ಮೂಲ'ದ ಸಮಸ್ಯೆಯನ್ನು ಬಿಡಿಸಿಕೊಳ್ಳುವಾಗ ವಲಸಿಗರಾಗಿ ಒಂದು ಜಾಗಕ್ಕೆ ಬಂದಾಗ, ಹಾಗೆ ಬಂದವರು ನೆಲೆನಿಲ್ಲುವುದನ್ನು ಹಾಗೂ ಅಲ್ಲಿನ ಪರಿಸರವನ್ನು ಖಾಸಗೀಕರಿಸಿಕೊಂಡು ಅದನ್ನೇ ಒಡೆತನವೆಂದು ಭಾವಿಸುವವರೇ ಆಗಿದ್ದಾರೆನ್ನುವುದನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಆದರೆ ವಸಾಹತು ಪೂರ್ವದ ಸನ್ನಿವೇಶವನ್ನು ನಾವು ಗಮನಿಸಿದಾಗ ವಲಸೆ ಎನ್ನುವುದು ಒಂದು ಸಾಮಾನ್ಯವಾದ ಸಂಗತಿಯೇ ಆಗಿತ್ತು.

ಹೀಗಿರುವಾಗ ವಸಾಹತುಶಾಹಿ ಸಂದರ್ಭದಲ್ಲಿ ಚಲಾವಣೆಗೆ ಬಂದಂಥ ಜನಾಂಗೀಯ ಸಿದ್ಧಾಂತಗಳು ಶ್ರೀಲಂಕಾದಲ್ಲಿ ಭಿನ್ನ ಭಿನ್ನ ಕುಲಶಾಸ್ತ್ರಗಳನ್ನು ಮೇಲಿನವರ ಎತ್ನಿಕ್ ಬೇರುಗಳನ್ನು ಮತ್ತಷ್ಟು ಗಟ್ಟಿಗೊಳಿಸಿ ವಸಾಹತುಶಾಹಿ ಆಧುನಿಕತೆಯಲ್ಲಿ ಏಕೀಕರಣಪಡೆಯ ರಾಷ್ಟ್ರಕ್ಕಾಗಿ ಹೋರಾಡಲು ಪ್ರಚೋದನೆಯಾಗುತ್ತದೆ. ಬಹುಸಂಖ್ಯಾತರಾದ ಸಿಂಹಳೀಯರು ತಾವು ಬೌದ್ಧಮತಾವಲಂಬಿಗಳಾಗಿ ಕ್ರಿ.ಪೂ. 5ನೇ ಶತಮಾನದಿಂದಲೇ ಬಂಗಾಲ ನಾಡಿನಿಂದ ವಲಸೆ ಬಂದ ಆರ್ಯಜನಾಂಗದವರೆಂದು ಪರಿಭಾಷಿಸುತ್ತಾ ಉದಯೀಮಾನ ಶ್ರೀಲಂಕಾ ರಾಷ್ಟ್ರಕ್ಕೆ ತಮ್ಮ ಹಕ್ಕನ್ನು ಸ್ಥಾಪಿಸಲಾರಂಭಿಸುತ್ತಾರೆ. ಆದರೆ ಇದನ್ನು ಒಪ್ಪದ ತಮಿಳರು ತಾವು ಸಿಂಹಳೀಯರಿಗಿಂತಲೂ ಹಿಂದೆ ಬಂದ ದಕ್ಷಿಣ ಭಾರತದ ದ್ರಾವಿಡ ಮೂಲವನ್ನು ಮುಂದಿಟ್ಟು ತಮ್ಮ ಶ್ರೇಷ್ಠತೆಯನ್ನು ಸಂಘಟಿಸಿಕೊಂಡರು. ಆದರೆ ಜನ ಸಮುದಾಯಗಳನ್ನು ಹೀಗೆ ಜನಾಂಗೀಯತೆಯ ಆದಾಯ ರ್ಥರ್ಗಳೀ ವರ್ಗೀಕರಿಸಿದ್ದು ವಸಾಹತುಶಾಹಿ ಭಾಷಾಶಾಸ್ತ್ರದ ಜ್ಞಾನಮೀಮಾಂಸೆ.

ಹೀಗಿರುವಾಗ 19ನೇ ಶತಮಾನದಲ್ಲಿ ಶ್ರೀಲಂಕಾದಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡ ಪೋರ್ಚುಗೀಸರು, ಡಚ್ಚರು ಮತ್ತು ಬ್ರಿಟಿಷರು ತಮ್ಮದೇ ಆದಂಥ ಮತಾಂತರ ಮತ್ತು ಇತರೆ ಚಟುವಟಿಕೆಗಳ ಮೂಲಕ ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಂಡರಲ್ಲದೆ ಅಂತಿಮವಾಗಿ ಬ್ರಿಟಿಷರ ಪ್ರಾಬಲ್ಯಕ್ಕೆ ಶರಣಾಗುತ್ತಾರೆ. ಆಗಲೇ ಬ್ರಿಟಿಷರು ತಮ್ಮ ಎಸ್ಟೇಟ್‌ಗಳಲ್ಲಿ ದುಡಿಯಲು ತಮಿಳುನಾಡಿನಿಂದ ಜನರನ್ನು ಕರೆತಂದದ್ದು. ಹೀಗೆ ಆರಂಭವಾದ ವಸಾಹತುಶಾಹಿ ಆರ್ಥಿಕತೆಗೆ ಸೆಣಸಾಟ ಆರಂಭವಾದದ್ದು ಭಾರತೀಯ ಮೂಲದ ಶೆಟ್ಟಿಯರ್, ಮುಸ್ಲಿಂರು ಮತ್ತು ಬ್ರಿಟಿಷರ ನಡುವೆ. ಈ ಸನ್ನಿವೇಶದಲ್ಲಿ ಸಿಂಹಳೀಯ ಕುಲೀನರು ಒಂದು ರೀತಿಯ ಶಕ್ತಿಹೀನತೆನ್ನು ಅನುಭವಿಸತೊಡಗಿ, ತಮ್ಮ ಮೆಜಾರಿಟಿಯ ಕಾರಣವನ್ನು ಮುಂದಿಟ್ಟು ಉದಯೀಮಾನ ಶ್ರೀಲಂಕಾದ ರಾಷ್ಟ್ರಕ್ಕೆ 1931 ರಿಂದಲೇ ಹಕ್ಕುದಾರಿಕೆಯನ್ನು ಸ್ಥಾಪಿಸತೊಡಗಿ, 1948ರಲ್ಲಿ ಸ್ವಾತಂತ್ರ್ಯ ಪಡೆದ ಶ್ರೀಲಂಕಾದಲ್ಲಿ ರಾಜಕೀಯ ಪ್ರಾಬಲ್ಯಕ್ಕೆ ಮುಂದಡಿಯಿಡುತ್ತಾರೆ. ಆದರೆ ಹಾದಿ ಸುಗಮವೇನೂ ಆಗಿರಲಿಲ್ಲ. ಕಾರಣ ಸ್ವತಂತ್ರ ರಾಷ್ಟ್ರವಾದ ಶ್ರೀಲಂಕಾದ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ರಾಜಕೀಯ ಪ್ರಾತಿನಿಧ್ಯದ ಮತ್ತು ಬಹುತ್ವಕ್ಕೆ ಮಾದರಿಯಾದ ಪ್ರಜಾಸತ್ತೆಯ ಅವಕಾಶವನ್ನು ಕಲ್ಪಿಸಲಾಗಿತ್ತು. ಆದರೆ ಇಂಥ ಸಂವಿಧಾನದ ಲಿಬರಲ್

ನೀತಿಗಳನ್ನು ಜಾರಿಗೊಳಿಸಿತು. ಧರ್ಮವನ್ನಾಧರಿಸಿದ ಸಂಘಟಿತ ಪಕ್ಷವು ತನ್ನ ಯಜಮಾನಿಕೆಯನ್ನು ಸಿಂಹಳ ಭಾಷಾ ಮೇಲೆ ಸ್ಥಾಪಿಸತೊಡಗಿತು. ಇಲ್ಲೇ ನಿಜವಾದ ಎತ್ನಿಕ್ ಸಮಸ್ಯೆ ಶುರುವಾಗುವುದು. ಏಕೆಂದರೆ ಮೆಜಾರಿಟಿ ಸಂಖ್ಯೆಯ ಬೌದ್ಧಮತೀಯ ಸಿಂಹಳೀಯರು ಮೊದಮೊದಲು ತಮಿಳರನ್ನೊಳಗೊಂಡ ಫೆಡರಲ್ ಮಾದರಿಯ ಸರ್ಕಾರದಲ್ಲಿ ಪಾಲ್ಗೊಂಡರೂ ಸಹ ಕ್ರಮೇಣ ಅಂದರೆ 1976ರ ವೇಳೆಗೆ ತಮಿಳರನ್ನು ಸರ್ಕಾರದಿಂದ ದೂರೀಕರಿಸಿಬಿಡುತ್ತಾರೆ.

ಇಲ್ಲೆ ಪ್ರತ್ಯೇಕ ತಮಿಳು ಈಲಂ ದೇಶ ಸ್ಥಾಪನೆಯ ಸಂಘಟನೆ ಪ್ರಾರಂಭವಾಗಿ ಕ್ರಮೇಣ ಎಲ್‌ಟಿಟಿಇಯ ಮಿಲಿಟೆಂಟ್ ಮಾದರಿ ಸಂಘಟನೆ ಹುಟ್ಟಿಕೊಳ್ಳುವುದು. ಇದು ಎರಡನೆಯ ಘಟ್ಟವಾಗಿ ಶ್ರೀಲಂಕಾದಲ್ಲಿ ಪ್ರತ್ಯೇಕತೆಯ ರಾಜಕಾರಣವನ್ನು ಹೆಚ್ಚಿಸುತ್ತದೆ ಮತ್ತು ಸಿಂಹಳೀಯರ ಏಕರೂಪಿ ಐಡೆಂಟಿಟಿಯು ಮತ್ತಷ್ಟು ಸ್ಥಿರೀಕರಣಗೊಳ್ಳಲು ಇದೇ ಸನ್ನಿವೇಶ ಕಾರಣವಾಗುತ್ತದೆ. ಇದರ ಪರಿಣಾಮವಾಗಿ ತಮಿಳರ ಪ್ರಾತಿನಿಧ್ಯವಿಲ್ಲದ ಸಿಂಹಳೀಯರ ರಾಜಕಾರಣ ತನ್ನ ಯಜಮಾನಿಕೆಯನ್ನು ಸ್ಥಾಪಿಸುತ್ತದೆಯಲ್ಲದೆ ಅಭಿವೃದ್ಧಿ ಮೂಲ ಉದ್ಯಮಗಳನ್ನು ಹಾಗೂ ಇತರೆ ಸಾರ್ವಜನಿಕ ಚಟುವಟಿಕೆಗಳನ್ನು ಏಕಪಕ್ಷೀಯವಾದ ಸರ್ಕಾರ ರಾಷ್ಟ್ರೀಕರಣಗೊಳಿಸುತ್ತದೆ. ಇದು ಕ್ರಮೇಣ ಸಿಂಹಳೀಯರೇ ಸಿಂಹಪಾಲನ್ನು ಹೊಂದುವ ಮತ್ತು ಯಜಮಾನಿಕೆಯನ್ನು ಸಾರ್ವಜನಿಕವಾಗಿ ಸ್ಥಾಪಿಸಿಕೊಳ್ಳುವ ಅವಕಾಶವಾಗಿ ಪರಿಣಮಿಸಿ, ಉಳಿದವರೆಲ್ಲರನ್ನು ಮೂಲೆಗುಂಪಾಗಿಸುವ ಹಾಗೂ ಸಂವಿಧಾನಾತ್ಮಕವಾಗಿ ಇದ್ದ ಹಕ್ಕುಗಳನ್ನು ಕಸಿದುಕೊಳ್ಳುವ ಸಹಜ ಸನ್ನಿವೇಶವನ್ನು ಸಿಂಹಳೀಯರು ತಮ್ಮದನ್ನಾಗಿಸಿಕೊಳ್ಳುತ್ತಾರೆ.

ಈ ಯಜಮಾನಿಕೆಯನ್ನು ಮೊದಮೊದಲು ಭಾರತ ತಡೆಯಲು ಪ್ರಯತ್ನಿಸಿ, ಎಲ್‌ಟಿಟಿಇಗೆ ಅಗತ್ಯವಾದ ಬೆಂಬಲವನ್ನು ನೀಡುತ್ತದೆ. ಈ ಬೆಂಬಲದಿಂದ ಉತ್ತೇಜನಗೊಂಡ ಎಲ್‌ಟಿಟಿಇ ತನ್ನ ಹಿಂಸಾಕೃತ್ಯಗಳಿಗೆ ಅವಕಾಶವನ್ನು ಅದ್ಭುತವಾಗಿ ಪಡೆದುಕೊಳ್ಳುತ್ತದೆ. ಇಲ್ಲೇ ಮೂರನೇ ಘಟ್ಟ ಪ್ರಾರಂಭವಾಗುವುದು ಮತ್ತು ಎಲ್‌ಟಿಟಿಇ ಜಾಗತಿಕವಾಗಿ ಭಯೋತ್ಪಾದನಾ ಗುಂಪೆಂದು ಪರಿಗಣಿತವಾಗಿ ಅದರ ವಿರುದ್ಧ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳುವುದು. ಇದರಿಂದ ಉತ್ತೇಜಿತವಾದ ಶ್ರೀಲಂಕಾ ಸರ್ಕಾರ ತನ್ನ ಮಿಲಿಟರಿಯನ್ನು ದ್ವಿಗುಣಗೊಳಿಸಿಕೊಳ್ಳುತ್ತದೆ. ಏಕೆಂದರೆ ಏಕರೂಪೀಕರಣಗೊಂಡ ಶ್ರೀಲಂಕಾದ ಐಡೆಂಟಿಟಿಯ ರಕ್ಷಣೆ ಆಗಬೇಕಲ್ಲವೇ!

ಆದರೆ ಈ ನಡುವೆ ನಿಜವಾದ ಶ್ರೀಲಂಕಾ ತಮಿಳರ ಹಕ್ಕುಗಳನ್ನು ಮತ್ತು ಅದರ ಬೆಂಬಲಕ್ಕೆ ನಿಂತವರನ್ನು ಯಾವುದೇ ಮುಲಾಜಿಲ್ಲದೆ ಸೆದೆಬಡಿದದ್ದು ಈಗಿನ ಶ್ರೀಲಂಕಾದ ಅಧ್ಯಕ್ಷರಾಗಿರುವ ಮಹಿಂದ ರಾಜಪಕ್ಷ. ಕಾರಣ ಜಾಗತಿಕವಾಗಿ ಭಯೋತ್ಪದಾನೆಯ ವಿರುದ್ಧ ಸಾರಿದ ಯುದ್ಧ ಇರಾಕ್, ಆಫ್ಘನಿಸ್ತಾನ, ಪಾಕಿಸ್ತಾನ, ಬರ್ಮಾ ಮುಂತಾದೆಡೆ ಲಕ್ಷ ಲಕ್ಷಜನರನ್ನು ಬಲಿತೆಗೆದು ಕೊಳ್ಳತೊಡಗಿದಾಗಿ, ಇದರಿಂದ ಉತ್ತೇಜಿತರಾದಂತೆ ಶ್ರೀಲಂಕಾದ ಅಧ್ಯಕ್ಷರು ಎಲ್‌ಟಿಟಿಇ ಮತ್ತು ತಮಿಳರ ಮೇಲೆ ನೇರ ಯುದ್ಧ ಶುರುಮಾಡಿದ್ದು. ಹೀಗಿರುವಾಗ ದೇಶದೊಳಗೆ ಯುದ್ಧ ಆರಂಭವಾಗುವಾಗ ವಿಮಾನ ದಾಳಿ ನಡೆಯುವಂತಿಲ್ಲ. ಕಾರಣ ಅದು ಅಪಾರ ಸಾವು–ನೋವುಗಳಿಗೆ ಕಾರಣವಾಗುತ್ತದೆ. ಆದರೆ ಇದ್ಯಾವುದೇ ನಿರ್ಬಂಧ ಶ್ರೀಲಂಕಾ ಸರ್ಕಾರಕ್ಕೆ ಇರಲಿಲ್ಲ! ಏಕೆಂದರೆ ಅದು ಭಯೋತ್ಪಾದನೆ ವಿರುದ್ಧ ತಾನೆ ಯುದ್ಧಹೂಡಿದ್ದು ಮತ್ತು ಜಯಶಾಲಿಯಾದದ್ದು!

ಈ ನಡುವೆ ನಿಜವಾದ ಶ್ರೀಲಂಕಾ ತಮಿಳರ ಹಕ್ಕುಗಳನ್ನು ಮತ್ತು ಅದರ ಬೆಂಬಲಕ್ಕೆ ನಿಂತವರನ್ನು ಯಾವುದೇ ಮುಲಾಜಿಲ್ಲದೆ ಸೆದೆಬಡಿದದ್ದು ಈಗಿನ ಶ್ರೀಲಂಕಾದ ಅಧ್ಯಕ್ಷರಾಗಿರುವ ಮಹಿಂದ ರಾಜಪಕ್ಷ. ಕಾರಣ ಜಾಗತಿಕವಾಗಿ ಭಯೋತ್ಪದಾನೆಯ ವಿರುದ್ಧ ಸಾರಿದ ಯುದ್ಧ ಇರಾಕ್, ಆಫ್ಘನಿಸ್ತಾನ, ಪಾಕಿಸ್ತಾನ, ಬರ್ಮಾ ಮುಂತಾದೆಡೆ ಲಕ್ಷ ಲಕ್ಷಜನರನ್ನು ಬಲಿತೆಗೆದು ಕೊಳ್ಳತೊಡಗಿದಾಗಿ, ಇದರಿಂದ ಉತ್ತೇಜಿತರಾದಂತೆ ಶ್ರೀಲಂಕಾದ ಅಧ್ಯಕ್ಷರು ಎಲ್‌ಟಿಟಿಇ ಮತ್ತು ತಮಿಳರ ಮೇಲೆ ನೇರ ಯುದ್ಧ ಶುರುಮಾಡಿದ್ದು. ಹೀಗಿರುವಾಗ ದೇಶದೊಳಗೆ ಯುದ್ಧ ಆರಂಭವಾಗುವಾಗ ವಿಮಾನ ದಾಳಿ ನಡೆಯುವಂತಿಲ್ಲ. ಕಾರಣ ಅದು ಅಪಾರ ಸಾವು–ನೋವುಗಳಿಗೆ ಕಾರಣವಾಗುತ್ತದೆ. ಆದರೆ ಇದ್ಯಾವುದೇ ನಿರ್ಬಂಧ ಶ್ರೀಲಂಕಾ ಸರ್ಕಾರಕ್ಕೆ ಇರಲಿಲ್ಲ! ಏಕೆಂದರೆ ಅದು ಭಯೋತ್ಪಾದನೆ ವಿರುದ್ಧ ತಾನೆ ಯುದ್ಧ ಹೂಡಿದ್ದು ಮತ್ತು ಜಯಶಾಲಿಯಾದದ್ದು!

ಈ ಹಿನ್ನೆಲೆಯಲ್ಲಿ ಶ್ರೀಲಂಕಾದಲ್ಲಿ ನಿಜಾವಾಗಿ ಪ್ರಜಾಸತ್ತೆ ಜೀವಂತವಾಗಿದೆಯೇ ಎನ್ನುವ ಪ್ರಶ್ನೆ ಎದುರಾಗುತ್ತದೆ. ಆದರೆ ಈ ಸನ್ನಿವೇಶದಲ್ಲೂ ಶ್ರೀಲಂಕಾದಲ್ಲಿ ಸಿಂಹಳೀಯರ ನಡುವೆಯೇ ಇರುವ ಪ್ರಜಾಸತ್ತಾತ್ಮಕ ಬುದ್ಧಿಜೀವಿಗಳನ್ನು ಮರೆಯುವಂತಿಲ್ಲ. ಕಾರಣ ಇವರೆಲ್ಲರ ಆಶಯ ಪ್ರಜಾಸತ್ತೆಯನ್ನು ಬೆಳೆಸುವುದು ಮತ್ತು ಅದರ ಜೀವಾಳವಾದ ಬಹುತ್ವವನ್ನು ಎತ್ತಿಹಿಡಿಯುವುದೇ ಆಗಿದೆ.

ಆದ್ದರಿಂದ ನಾಗರಿಕ ಸಮಾದೆದುರು ಇರುವ ಪ್ರಶ್ನೆಗಳೆಂದರೆ ಶ್ರೀಲಂಕಾದಲ್ಲಿ ಸಾವು–ನೋವು ಅನುಭವಿಸಿದವರ ನಿಖರವಾದ ಮಾಹಿತಿ ಮತ್ತು ನಿರಾಶ್ರಿತರಾಗಿ ಉಳಿದುಕೊಂಡವರ ರಕ್ಷಣೆ ಮತ್ತು ಶ್ರೀಲಂಕಾದಲ್ಲಿ ಅವರು ಗೌರವಯುತವಾಗಿ ಬದುಕಲು ಅವರ ನ್ಯಾಯಯುತ ಹಕ್ಕಿನ ಅವಕಾಶ. ಎರಡನೆಯದಾಗಿ ಶ್ರೀಲಂಕಾದಲ್ಲಿ ಎದುರಾಗಿರುವ ಎತ್ನಿಕ್ ಹಿಂಸೆಯಿಂದ ಅಲ್ಲಿನ ಸಂವಿಧಾನವನ್ನು, ಅಹಿಂಸೆಯನ್ನು ಎತ್ತಿಹಿಡಿಯುವ ಬೌದ್ಧದಮ್ಮವನ್ನು ಪಾರುಮಾಡುವುದೇ ಆಗಿದೆ. ಈಗ ಹೇಳಿ ಪ್ರಜಾಪ್ರಭುತ್ವದ ವಿರುದ್ಧ ಜಾಗತಿಕವಾಗಿ ಸಾರಿರುವ ಯುದ್ಧವನ್ನು ನಾವು ಬೆಂಬಲಿಸುವುದಾದರೂ ಹೇಗೆ? ಮತ್ತು ಯಾವುದೇ ರಾಷ್ಟ್ರ ಇನ್ನು ಮುಂದೆ ಏಕರೂಪಿ ಐಡೆಂಟಿಟಿಯನ್ನು ಧರ್ಮವನ್ನಾಗಿ ಸಂಘಟಿಸುವುದು ಎಷ್ಟು ಸರಿಯಾದುದು? □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ರೇಷ್ಮೆ ಇಲಾಖೆ

ರೇಷ್ಮೆ ಕೃಷಿಕರು / ಉದ್ದಿಮೆದಾರರಿಗೆ ಸರ್ಕಾರದ ಉತ್ತೇಜನ

ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ವೆಂಕಟರಮಣಪ್ಪ
ಸನ್ಮಾನ್ಯ ಸಣ್ಣ ಕೈಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ರೇಷ್ಮೆ ಉದ್ಯಮಕ್ಕೆ ಪ್ರಶಸ್ತವಾದ ತಾಣ. ಸರ್ಕಾರವು ರೇಷ್ಮೆ ಕೃಷಿ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವು ಪ್ರೋತ್ಸಾಹ ನೀಡುತ್ತಿದೆ. ಕೃಷಿ ಬೆಳೆಗಾರರು ಮತ್ತು ಉದ್ಯಮದಲ್ಲಿ ತೊಡಗಿರುವ ರೀಲರ್‌ಗಳ ಹಿತರಕ್ಷಣೆಗೆ ಪೂರಕವಾದ ನೀತಿ ನಿಯಮಗಳನ್ನು ರೂಪಿಸಿ ಜಾರಿಗೊಳಿಸಿದೆ.

- ರೇಷ್ಮೆ ವರದಾನ ಯೋಜನೆಯಡಿ 1200 ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ಹಿಪ್ಪುನೇರಳೆ ನಾಟಿಗೆ ರೂ.140.50 ಲಕ್ಷಗಳನ್ನು ಪ್ರೋತ್ಸಾಹ ಧನವಾಗಿ ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 1900 ಹೆಕ್ಟೇರ್ ಹಿಪ್ಪುನೇರಳೆ ಪ್ರದೇಶದಲ್ಲಿ ಹನಿ ನೀರಾವರಿ ಘಟಕಗಳ ಅಳವಡಿಕೆಗೆ ರೂ.697.00 ಲಕ್ಷಗಳ ಸಹಾಯಧನ ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 2510 ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ರೂ.1632.00 ಲಕ್ಷಗಳ ಸಹಾಯಧನ ನೀಡಲಾಗಿದೆ.
- ರೇಷ್ಮೆ ವರದಾನ ಯೋಜನೆಯಡಿ 375 ಹಣ್ಣು ಹುಳುವಿನ ಮನೆ (ಮೌಂಟಿಂಗ್ ಹಾಲ್) ಗಳ ನಿರ್ಮಾಣಕ್ಕೆ ರೂ.140.45 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 773 ಫಲಾನುಭವಿಗಳಿಗೆ ಚಾಕಿ ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ರೇಷ್ಮೆ ಹುಳು ಸಾಕುವ ಸಲಕರಣೆಗಳ ಖರೀದಿಗೆ ರೂ.127.68 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಇಬ್ಬರು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಸ್ವಯಂಚಾಲಿತ ರೀಲಿಂಗ್ ಯಂತ್ರಗಳನ್ನು ಅಳವಡಿಸಲು ರೂ.150 ಲಕ್ಷಗಳ ಸಹಾಯ ಧನವನ್ನು ನೀಡಲಾಗಿದೆ.
- ಆರೋಗ್ಯ ವಿಮೆ ಯೋಜನೆಯಡಿ 10,000 ರೇಷ್ಮೆ ಬೆಳೆಗಾರರು ಹಾಗೂ ರೀಲರ್‌ಗಳಿಗೆ ರೂ.72.60 ಲಕ್ಷಗಳನ್ನು ವಿಮಾ ಕಂತಾಗಿ ಸಂದಾಯ ಮಾಡಲಾಗಿದೆ.
- ವಿವಿಧ ಯೋಜನೆಗಳಡಿ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ರೂ.590.00 ಲಕ್ಷಗಳ ಪ್ರೋತ್ಸಾಹ / ಸಹಾಯಧನ ನೀಡಲಾಗಿದೆ.
- ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರ ಹಿತರಕ್ಷಣೆಗಾಗಿ ರೂ.107.40 ಲಕ್ಷಗಳನ್ನು ಬೋನಸ್ / ಸಹಾಯಧನವಾಗಿ ನೀಡಲಾಗಿದೆ.
- ಪರಿಶಿಷ್ಟ ಜಾತಿ / ಪಂಗಡದ ರೇಷ್ಮೆ ಬೆಳೆಗಾರರು / ರೀಲರುಗಳಿಗೆ ಪ್ರತ್ಯೇಕ ಯೋಜನೆಗಳಿದ್ದು ರೂ.315.00 ಲಕ್ಷಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಸಾಲ ಯೋಜನೆಯಡಿ ರೇಷ್ಮೆ ಕೃಷಿ ಚಟುವಟಿಕೆಗಳಿಗೆ 3120 ಫಲಾನುಭವಿಗಳಿಗೆ ವಾಣಿಜ್ಯ ಸಂಸ್ಥೆಗಳ ಮೂಲಕ ರೂ.2547.10 ಲಕ್ಷಗಳ ಸಾಲವನ್ನು ಒದಗಿಸಲಾಗಿದೆ.
- ರಾಜ್ಯ / ಜಿಲ್ಲಾ ಮಟ್ಟದ ಪ್ರಗತಿಪರ ರೇಷ್ಮೆ ಕೃಷಿಕರ / ರೀಲರುಗಳ ಪ್ರಗತಿಯನ್ನು ಆಧರಿಸಿ ಇಲಾಖೆಯಿಂದ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

2009-10ನೇ ಸಾಲಿನಲ್ಲೂ ಮೇಲ್ಕಂಡ ಯೋಜನೆಗಳು ಅನುಷ್ಠಾನದಲ್ಲಿದ್ದು ಇವುಗಳ ಪ್ರಯೋಜನವನ್ನು ಪಡೆಯಲು ರೇಷ್ಮೆ ಇಲಾಖೆಯ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿ.

ಕರ್ನಾಟಕ ವಾರ್ತೆ

ಸಮೂಹ ಮಾಧ್ಯಮಗಳು ಮತ್ತು ಸಾಮಾಜಿಕ ಹೊಣೆಗಾರಿಕೆ

ಡಾ. ಎನ್. ಜಗದೀಶ್ ಕೊಪ್ಪ

ಬದಲಾದ ನಾಗರೀಕತೆ, ಆಧುನಿಕ ತಂತ್ರಜ್ಞಾನದ ಪರಿಣಾಮವಾಗಿ ಸಮೂಹ ಮಾಧ್ಯಮಗಳು ಎಂದು ಕರೆಸಿಕೊಳ್ಳುತ್ತಿರುವ ಇಂದಿನ ಪತ್ರಿಕೋದ್ಯಮ, ದೃಶ್ಯ ಮಾಧ್ಯಮ, ರೇಡಿಯೊ, ಅಂತರ್ಜಾಲ ಇವುಗಳಲ್ಲಿ ಪತ್ರಿಕೆ, ರೇಡಿಯೊ ಹೊರತು ಪಡಿಸಿದರೆ ಉಳಿದವು ಇತ್ತೀಚಿನ ಎರಡು ದಶಕಗಳಲ್ಲಿ ಅಸ್ತಿತ್ವಕ್ಕೆ ಬಂದು, ವರ್ತಮಾನ ಜಗತ್ತಿನಲ್ಲಿ ಮುಂಚೂಣಿಯಲ್ಲಿವೆ.

ಪ್ರಜಾಪ್ರಭುತ್ವದ ನಾಲ್ಕನೆ ಮುಖ್ಯ ಅಂಗ ಎನಿಸಿಕೊಂಡಿದ್ದ ಪತ್ರಿಕೋದ್ಯಮಕ್ಕೆ, ಇದರಲ್ಲಿ ತೊಡಗಿಸಿಕೊಂಡಿದ್ದ ವ್ಯಕ್ತಿಗಳಿಗೆ ಸಮಾಜದಲ್ಲಿ ವಿಶಿಷ್ಠ ಸ್ಥಾನಮಾನ ಕೂಡ ಇತ್ತು. ಸ್ವಾತಂತ್ರ್ಯಪೂರ್ವ ಹಾಗೂ ನಂತರದ ಎಷ್ಟೋ ವರ್ಷಗಳ ಕಾಲ ಪತ್ರಿಕೋದ್ಯಮ ಲಾಭದಾಯಕ ಉದ್ಯಮ ಆಗಿರಲಿಲ್ಲ. ಪತ್ರಿಕೋದ್ಯಮ ಒಂದು ರೀತಿ ಸಮಾಜ ಸೇವೆಯಾಗಿತ್ತು. ಪತ್ರಿಕೆಯ ಓದುಗರೇ ಪತ್ರಿಕೆಯ ನಿಜವಾದ ವಾರಸುದಾರರಾಗಿದ್ದರು. ಜೊತೆಗೆ ಪತ್ರಿಕೆಗೆ - ಪತ್ರಕರ್ತರಿಗೆ ಒಂದು ನೈತಿಕ ಚೌಕಟ್ಟು ಕೂಡ ಇತ್ತು. ಇದು ಯಾರೊ ಹಾಕಿದ ಲಕ್ಷ್ಮಣರೇಖೆಯಾಗಿರಲಿಲ್ಲ. ಓದುಗರ ಮತ್ತು ಸಮಾಜದ ನಂಬಿಕೆಗೆ ಅರ್ಹವಾಗಲು ಸ್ವಯಂ ತಾನೇ ಹಾಕಿಕೊಂಡಿದ್ದ ನೈತಿಕ ಗಡಿರೇಖೆಯಾಗಿತ್ತು. ಇವೆಲ್ಲವು ಎರಡು ದಶಕಗಳ ಹಿಂದಿನ ಮಾತು.

ದೂರಸಂಪರ್ಕ ಹಾಗೂ ಮಾಹಿತಿ ತಂತ್ರಜ್ಞಾನ ವಲಯಗಳಲ್ಲಿ ಉಂಟಾದ ಕ್ಷಿಪ್ರ ಕ್ರಾಂತಿಯ ಫಲವಾಗಿ ಪತ್ರಿಕೋದ್ಯಮದ ಮೂಲ ಚಹರೆಯೇ ಬದಲಾಗಿದೆ. ಸುದ್ಧಿ ಪ್ರಸಾರಕ್ಕೆ ಮೂಲ ಆಧಾರವಾಗಿದ್ದ ಪತ್ರಿಕೆ ಜೊತೆ ಜೊತೆಗೆ ಸೃಷ್ಟಿಯಾದ ವಿದ್ಯುನ್ಮಾನ ಮಾಧ್ಯಮಗಳು ಹೊಸ ಪೈಪೋಟಿ ಜಗತ್ತನ್ನೇ ಸೃಷ್ಟಿಸಿವೆ. ಸ್ವಾತಂತ್ರ್ಯ ಲಭಿಸಿ ಅರವತ್ತು ವರ್ಷಗಳಾದ ನಂತರವೂ ಈ ದೇಶದಲ್ಲಿ ಪತ್ರಿಕೆಗಳೂ ತಲುಪದ ಹಳ್ಳಿ-ಹಳ್ಳಿಗಳಿಗೆ ದೃಶ್ಯಮಾಧ್ಯಮಗಳು ಲಗ್ಗೆ ಇಟ್ಟವು. ಅಷ್ಟೇ ಅಲ್ಲ ಕ್ಷಣಾರ್ಧದಲ್ಲಿ ಜಗತ್ತಿನ ವಿದ್ಯಾಮಾನಗಳನ್ನು ವೀಕ್ಷಕರ ಕಣ್ಮುಂದೆ ತಂದು ನಿಲ್ಲಿಸಿದವು. ಇದರ ಪರಿಣಾಮವಾಗಿ ಪತ್ರಿಕೋದ್ಯಮ ಕೂಡ ಆಧುನಿಕ ತಂತ್ರಜ್ಞಾನದಿಂದ ಚೇತರಿಸಿಕೊಂಡು, ವಿದ್ಯುನ್ಮಾನ ಮಾಧ್ಯಮಗಳಿಗಿಂತ ಭಿನ್ನವಾಗಿ ಪೈಪೋಟಿ ನೀಡುತ್ತಿರುವುದು ನಿಜ. ಆದರೆ ಈ ಪೈಪೋಟಿ ಜಗತ್ತಿನಲ್ಲಿ ಈವರೆಗೆ ಕಾಪಾಡಿಕೊಂಡು ಬಂದಿದ್ದ ನೈತಿಕ ಜಗತ್ತು ಛಿದ್ರವಾಯಿತು. ಸಮಾಜ ಸೇವೆ ಎಂದು ನಂಬಿದ್ದ ಪತ್ರಿಕೋದ್ಯಮಿಗಳು ಹಿಂದೆ ಸರಿದರು. ಪತ್ರಿಕೋದ್ಯಮ ಉದ್ಯಮಿ - ಹಣಬಲವುಳ್ಳ ರಾಜಕಾರಣಿಗಳ ಪಾಲಾಯಿತು. ಅಪಾರ ಪ್ರಮಾಣದ ಬಂಡವಾಳ ಬೇಡುವ ದೃಶ್ಯಮಾಧ್ಯಮ ಪ್ರಾರಂಭದಿಂದಲೂ ಉದ್ಯಮಿಗಳ ಜೊತೆಯಲ್ಲೇ ಬೆಳೆದು ಬಂದದ್ದರಿಂದ, ಅದಕ್ಕೆ ನೀತಿ-ಅನೀತಿಗಳ ಚಿಂತೆಗಿಂತ ಈ ಉದ್ಯಮವನ್ನು ಲಾಭದಯಕವಾಗಿ ಮುನ್ನಡೆಸುವುದೇ ಮುಖ್ಯವಾಯಿತು. ಏಕೆಂದರೆ ಟೆಲಿವಿಷನ್ ಮಾಧ್ಯಮಕ್ಕೆ ಅಗೋಚರ ವೀಕ್ಷಕರಿರುವುದರಿಂದ, ಪತ್ರಿಕೆ ಮತ್ತು ಓದುಗನ ನಡುವೆ ಬೆಳೆದು ಬರುವ ಭಾವನಾತ್ಮಕತೆ ಇಲ್ಲಿ ಬೆಳೆದು ಬಂದಿಲ್ಲ.

ಈ ಎಲ್ಲಾ ಬೆಳವಣಿಗೆಗಳ ಒಟ್ಟು ಪರಿಣಾಮವೆಂದರೆ, ಪತ್ರಿಕೆ-ಟೆಲಿವಿಷನ್ ಎಂಬ ಬೇಧ ಭಾವವಿಲ್ಲದೆ ಎಲ್ಲಾ ಮಾಧ್ಯಮಗಳಲ್ಲಿ ಕಾರ್ಪೊರೇಟ್ ಕಲ್ಚರ್ ಅಂದರೆ ವಾಣಿಜ್ಯ ಸಂಸ್ಕೃತಿ ಬೆಳೆದು ಬಂದಿತು. ಈ ಸಂಸ್ಕೃತಿಯಲ್ಲಿ ಲಾಭವೇ ಮುಖ್ಯಗುರಿಯಾಯಿತೆ ಹೊರತು, ಸತ್ಯ, ಪ್ರಾಮಾಣಿಕತೆ, ಪಾರದರ್ಶಕತೆ, ನೈತಿಕತೆ ಮುಖ್ಯವಾಗಲಿಲ್ಲ. ಹಾಗಾಗಿ ಪತ್ರಿಕೆಗಳಲ್ಲಿ ಅತಿ ಮುಖ್ಯಸ್ಥಾನ ಪಡೆದು, ಸಾರಥಿ ಎನಿಸಿಕೊಂಡಿದ್ದ ಸಂಪಾದಕನ ಹೆಸರು ಈ ಮೊದಲು ಪತ್ರಿಕೆಯ ತಲೆಬರಹದಡಿ ಪ್ರಕಟವಾಗುತ್ತಿತ್ತು, ಇದೀಗ ಅದು ಕೊನೆಯ ಪುಟದ ಮೂಲೆಗೆ ತಳ್ಳಲ್ಪಟ್ಟಿದೆ. ಅದೇ ರೀತಿ ಯಾವ ಕಾರಣಕ್ಕೂ ಪತ್ರಿಕೆಯ ಒಟ್ಟು ಸುದ್ದಿ ಪ್ರಸಾರದ ಶೇ.40 ರಷ್ಟು ಮೀರಿ ಜಾಹಿರಾತು ಇರಬಾರದು ಎಂಬ ನಿಯಮವನ್ನು ಗಾಳಿಗೆ ತೂರಲಾಗಿದೆ. ಪತ್ರಿಕೆಯ ಪ್ರಥಮ ಪುಟದಲ್ಲಿ ಕಾಲು ಪುಟಕ್ಕೆ ಮೀರಿ ಜಾಹಿರಾತು ಇರಬಾರದೆಂಬ ನೀತಿ ಕಣ್ಮರೆಯಾಗಿ ಹಣಕ್ಕಾಗಿ ಇಡೀ ಪುಟವನ್ನೇ ಒತ್ತೆ ಇಡುವ ಜಗತ್ತಿನಲ್ಲಿ ನಾವಿದ್ದೇವೆ. ಸುದ್ದಿ ಮತ್ತು ಜಾಹಿರಾತುಗಳ ನಡುವೆ ಇದ್ದ ಗಡಿ ರೇಖೆ ಅಳಿಸಿ ಹೋಗಿದೆ. ಇಂದು



ಪ್ರಜಾಪ್ರಭುತ್ವದ ನಾಲ್ಕನೆ ಮುಖ್ಯ ಅಂಗ ಎನಿಸಿಕೊಂಡಿದ್ದ ಪತ್ರಿಕೋದ್ಯಮಕ್ಕೆ, ಇದರಲ್ಲಿ ತೊಡಗಿಸಿಕೊಂಡಿದ್ದ ವ್ಯಕ್ತಿಗಳಿಗೆ ಸಮಾಜದಲ್ಲಿ ವಿಶಿಷ್ಠ ಸ್ಥಾನಮಾನ ಕೂಡ ಇತ್ತು. ಸ್ವಾತಂತ್ರ್ಯ ಪೂರ್ವ ಹಾಗೂ ನಂತರದ ಎಷ್ಟೋ ವರ್ಷಗಳ ಕಾಲ ಪತ್ರಿಕೋದ್ಯಮ ಲಾಭದಾಯಕ ಉದ್ಯಮ ಆಗಿರಲಿಲ್ಲ. ಪತ್ರಿಕೋದ್ಯಮ ಒಂದು ರೀತಿ ಸಮಾಜ ಸೇವೆಯಾಗಿತ್ತು. ಪತ್ರಿಕೆಯ ಓದುಗರೇ ಪತ್ರಿಕೆಯ ನಿಜವಾದ ವಾರಸುದಾರರಾಗಿದ್ದರು. ಜೊತೆಗೆ ಪತ್ರಿಕೆಗೆ - ಪತ್ರಕರ್ತರಿಗೆ ಒಂದು ನೈತಿಕ ಚೌಕಟ್ಟು ಕೂಡ ಇತ್ತು. ಇದು ಯಾರೊ ಹಾಕಿದ ಲಕ್ಷ್ಮಣರೇಖೆಯಾಗಿರಲಿಲ್ಲ. ಓದುಗರ ಮತ್ತು ಸಮಾಜದ ನಂಬಿಕೆಗೆ ಅರ್ಹವಾಗಲು ಸ್ವಯಂ ತಾನೇ ಹಾಕಿಕೊಂಡಿದ್ದ ನೈತಿಕ ಗಡಿರೇಖೆಯಾಗಿತ್ತು. ಇವೆಲ್ಲವು ಎರಡು ದಶಕಗಳ ಹಿಂದಿನ ಮಾತು.

ಪತ್ರಿಕೆಯ ನಿಷ್ಠೆ ಮೀಸಲಾಗಿರುವುದು ಓದುಗರಿಗಲ್ಲ. ಜಾಹಿರಾತಿಗಾಗಿ ಅದರಿಂದ ಬರುವ ಹಣಕ್ಕಾಗಿ.

ಇಂತಹ ಅಯೋಮಯ ಸ್ಥಿತಿಯಲ್ಲಿ ಪತ್ರಿಕೆ, ಟಿ.ವಿ. ಎಂಬ ಬೇಧಗಳಿಲ್ಲದೆ, ಎಲ್ಲಾ ಮಾಧ್ಯಮಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ಹುಡುಕುವುದೆಂದರೆ, ಹುಲ್ಲಿನ ಬಣವೆಯಲ್ಲಿ ಸೂಜಿ ಹುಡುಕಿದಂತೆ.

ಇಂದಿನ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗುವ ಸುದ್ದಿಗಳ ಕಡೆ ಗಮನ ಹರಿಸಿದರೆ ಬಹುತೇಕ ವಿಷಯಗಳು ನಗರ ಕೇಂದ್ರಿತ ವಿಷಯಗಳಾಗಿವೆ. ಎಲ್ಲಾ ವರ್ಗದ, ಎಲ್ಲಾ ಧರ್ಮದ ಓದುಗರಿಗೆ, ವೀಕ್ಷಕರಿಗೆ ನಿಷ್ಪಕ್ಷಪಾತವಾಗಿ ಸುದ್ದಿ ರವಾನೆಯಾಗುತ್ತಿದೆಯೆ? ಎಂಬ ಪ್ರಶ್ನೆ ಹಾಕಿಕೊಂಡರೆ, ಅದಕ್ಕೆ ಉತ್ತರ ಇಲ್ಲ ಎಂಬುದೇ ಆಗಿದೆ. ಈ ಹಿಂದೆ ಒಂದು ಸಮುದಾಯದ, ಒಂದು ಸಮಾಜದ ಕನ್ನಡಿಯಂತೆ ವರ್ತಿಸುತ್ತಿದ್ದ ಮಾಧ್ಯಮಗಳು, ಇಂದು ಅಭಿಪ್ರಾಯ ರೂಪಿಸುವ ಬದಲು, ತಮ್ಮದೇ ಅಭಿಪ್ರಾಯ ಹೇರುತ್ತಿವೆ. ವರ್ತಮಾನದಲ್ಲಿ ಚರ್ಚೆಯಾಗಬೇಕಾದ ವಿಷಯಗಳು ಯಾವುವು ಎಂಬುದು ಮೂಲ ಪ್ರಶ್ನೆಯಾಗಿದೆ. ಅದರ ಜೊತೆಗೆ ನಮ್ಮ ಬದುಕಿನ ಆದ್ಯತೆಗಳೇನು ಎಂಬುದು ನಿರ್ಧಾರವಾಗಬೇಕಿದೆ.

ಇಪ್ಪತ್ತೊಂದನೇ ಶತಮಾನದ ಬಲಾಢ್ಯ ಆರ್ಥಿಕ ರಾಷ್ಟ್ರವಾಗಿ ಭಾರತ ಹೊರ ಹೊಮ್ಮುತ್ತಿದೆ ಎಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಸದಾ ಸುದ್ದಿಯಲ್ಲಿರುವ ಈ ದೇಶದ ಆಂತರಿಕ ಸ್ಥಿತಿಗತಿ ಶೋಚನೀಯವಾಗಿದೆ. ಭಾರತದ ಆತ್ಮ ಎಂದು ಕರೆಸಿಕೊಂಡ ಹಳ್ಳಿಗಳು ಇಂದು ನರಕ ಸದೃಶವಾಗಿ, ವೃದ್ಧರ-ಅಂಗವಿಕಲರ-ಅಸಹಾಯಕರ ನಿರಾಶ್ರಿತ ಶಿಬಿರಗಳಂತೆ ಗೋಚರಿಸುತ್ತಿವೆ. ಅಭಿವೃದ್ಧಿಯೆಂದರೆ ನಗರಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಎಂಬ ಪರಿಕಲ್ಪನೆ ಹುಟ್ಟುಹಾಕಿದ ನಮ್ಮ ರಾಜಕೀಯ ನಾಯಕರ ಬೌದ್ಧಿಕ ದಿವಾಳಿತನದಿಂದ ಹಳ್ಳಿಗಳು ಅನಾದಾರಕ್ಕೆ ತುತ್ತಾದವು. ಕುಡಿಯುವ ನೀರು, ರಸ್ತೆ ಸಂಪರ್ಕ, ಶಿಕ್ಷಣ, ಆರೋಗ್ಯ ಈ ಎಲ್ಲಾ ಸೇವೆಗಳು ಖಾಸಗೀಕರಣಗೊಳ್ಳುತ್ತಾ ಬಡವರ ಬದುಕನ್ನು ಅಸಹನೀಯಗೊಳಿಸಿದವು. ಬಡವರ ಹಾಗೂ ಹಳ್ಳಿಗರ ಉದ್ದಾರ ಈಗ ಪ್ರತಿ ವರ್ಷ ಚಂಡಮಾರುತದಂತೆ ಅಪ್ಪಳಿಸುತ್ತಿರುವ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಪ್ರಣಾಳಿಕೆಯ ವಸ್ತುಗಳಾಗಿ ಉಳಿದುಬಿಟ್ಟಿವೆ.

ಕ್ರಿಕೆಟ್, ಸಿನಿಮಾ, ರಾಜಕೀಯವೇ ಸುದ್ದಿಯ ಕೇಂದ್ರ ಬಿಂದುಗಳಾಗಿ, ಸಾಮಾಜಿಕ ಸಮಸ್ಯೆಗಳೆಲ್ಲಾ ನಗಣ್ಯವಾದವು. ಕಳೆದ ಡಿಸೆಂಬರ್‌ನಲ್ಲಿ ತುಮಕೂರು ಜಿಲ್ಲೆಯ ದೇವರಾಯ ದುರ್ಗದ ಕೊಳದಲ್ಲಿ ಬಿದ್ದು ವೃದ್ಧ ದಂಪತಿಗಳಿಬ್ಬರು ಆತ್ಮಹತ್ಯೆ ಮಾಡಿಕೊಂಡರು. ಮೂವರು ಗಂಡು ಮಕ್ಕಳಿದ್ದು ಅವರಿಂದ ತಿರಸ್ಕರಿಸಲ್ಪಟ್ಟ ಈ ದಂಪತಿಗಳ ಸಾವು ಒಂದು ಸಾಮಾನ್ಯ ಸುದ್ದಿಯಾಯಿತೇ ಹೊರತು, ಇಡೀ ಸಮಾಜ ತಲೆ ತಗ್ಗಿಸುವ ವಿಷಯವೆಂಬಂತೆ ಚರ್ಚೆ ಆಗಲಿಲ್ಲ. ರೈತರ, ಜನಸಾಮಾನ್ಯರ ಆತ್ಮಹತ್ಯೆ ಈಗ ಗಂಭೀರ ವಿಷಯವಲ್ಲವೇನೊ ಎಂಬಂತಿದೆ.

ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಾಧ್ಯಮಗಳ ಮೂಲಕ ನಡೆಯುತ್ತಿದ್ದ ಚರ್ಚೆ ಈಗ ಸ್ಥಗಿತಗೊಂಡಂತಿದೆ. ಈಗ ಏನಿದ್ದರೂ ಜನರನ್ನು ಪ್ರಚೋದಿಸುವ, ಕೆರಳಿಸುವಂತಹ ವಿಷಯಗಳಿಗೆ ಆದ್ಯತೆ. ಆದ್ದರಿಂದಲೇ "ಸುದ್ದಿ ಎಂಬುದು ಮಾರಾಟದ ಸರಕು, ಯಾರು ಬೇಕಾದರೂ ಕೊಳ್ಳಬಹುದು" ಎಂಬ ನುಡಿಗಟ್ಟು ಈಗ ಚಾಲ್ತಿಗೆ ಬಂದಿದೆ. ನಮ್ಮ ದೇಶಿ ಜ್ಞಾನ ಪರಂಪರೆಯ ಯೋಗ, ಧ್ಯಾನ, ಆಹಾರ ಪದ್ಧತಿ, ಆಯುರ್ವೇದ ಔಷದ ಪದ್ಧತಿ ಇವೆಲ್ಲವು ಮಾರಾಟದ ಸರಕುಗಳಾಗಿ ಪರಿವರ್ತನೆಗೊಂಡಿವೆ.

> **ನಮ್ಮ ಮಾಧ್ಯಮಗಳಿಗೆ ಡಾ.ರಾಜಕುಮಾರ್ ಇಲ್ಲದ ಮೂರು ವರ್ಷದ ಕರ್ನಾಟಕದ ನೆನಪಾಗುತ್ತದೆ. ಆದರೆ ಕುವೆಂಪು ಇಲ್ಲದ, ಕಾರಂತರಿಲ್ಲದ, ತೇಜಸ್ವಿ, ಲಂಕೇಶ್, ಪ್ರೊ.ನಂಜುಂಡ ಸ್ವಾಮಿ ಇಲ್ಲದ ಕರ್ನಾಟಕ ನೆನಪಾಗುವುದಿಲ್ಲ. ಸಂಸ್ಕೃತಿ ಎಂದರೆ ಬರಿ ನಾಟಕ, ಸಿನಿಮಾ ಮಾತ್ರವಲ್ಲ. ಇಲ್ಲಿನ ನೀರು, ಮಣ್ಣು, ಗಿಡ, ಮರ, ಗಾಳಿ, ಜನರ ಬದುಕು, ಅವರ ಉಡುಪು, ಆಹಾರ ಇವೆಲ್ಲವೂ ಸಂಸ್ಕೃತಿಯ ಪ್ರತೀಕ ಎಂಬುದನ್ನು ಸಮೂಹ ಮಾಧ್ಯಮಗಳು ಮನಗಾಣಬೇಕು. ವರ್ತಮಾನದ ದುರಂತವೆಂದರೆ ಮಾಧ್ಯಮ ರಂಗದಲ್ಲಿ ಉಂಟಾದ ತಂತ್ರಜ್ಞಾನದ ಕ್ರಾಂತಿಯಿಂದಾಗಿ, ಜಗತ್ತೆಲ್ಲವೂ ಬೆರಳತುದಿಗೆ ಬಂದಿತು. ಇದರ ಪರಿಣಾಮ ಮನುಷ್ಯ ಲೋಕದ ನಡುವೆ ಇದ್ದ ಸಂವಹನ ಜಗತ್ತೊಂದು ಕಳೆದು ಹೋಯಿತು.**

ಇದೇ ನಾಡಿನಲ್ಲಿ ಮೂಢ ನಂಬಿಕೆ, ಅಂಧಶ್ರದ್ಧೆಗಳು, ಕಂದಾಚಾರಗಳ ಬಗ್ಗೆ ದೊಡ್ಡ ಕ್ರಾಂತಿಯಾಗಿತ್ತು. ಇಂದು ಬೆಳಗಿನ ವೇಳೆ ಯಾವ ಚಾನಲ್ ಹಾಕಿದರೂ ಜ್ಯೋತಿಷಿಗಳು, ರಸ್ತೆ ಬದಿ ಗಿಣಿಶಾಸ್ತ್ರ ಹೇಳುವವರು, ಕವಡೆ ಬಿಡುತ್ತಿದ್ದವರೆಲ್ಲಾ ಟಿ.ವಿ. ತೆರೆಯನ್ನು ಆಕ್ರಮಿಸಿಕೊಂಡಿರುವುದನ್ನು ಕಾಣಬಹುದು. ಇದರ ಜೊತೆಗೆ ಕಳಸವಿಟ್ಟಂತೆ ಹೀಗೂ ಉಂಟೆ, ನಿಗೂಢ ಜಗತ್ತು ಎಂಬ ಹಲವು ಬಗೆ ಹೆಸರಿನಿಂದ ಹಳ್ಳಿಗಳಲ್ಲಿ ನಡೆಯುವ ಕಂದಾಚಾರಗಳನ್ನು ಪ್ರತಿಬಿಂಬಿಸುವುದು, ಈ ರೀತಿಯ ಸಮೂಹ ಮಾಧ್ಯಮಗಳ ಹೊಣೆಗೇಡಿತನವನ್ನು ಗಮನಿಸಿದಾಗ, ನಾವು 21ನೇ ಶತಮಾನದ ವೈಜ್ಞಾನಿಕ ಯುಗದಲ್ಲಿದ್ದೇವೆಯೊ ಅಥವಾ 18ನೇ ಶತಮಾನದ ಕಂದಾಚಾರಗಳ ಯುಗದಲ್ಲಿದ್ದೇವೆಯೊ ಎಂಬ ಸಂಶಯ ಉಂಟಾಗುತ್ತಿದೆ.

ಸಮಕಾಲೀನ ರಾಜಕೀಯ ದುರಂತಗಳನ್ನು, ವಿಪರ್ಯಾಸಗಳನ್ನು ಜನ ಸಾಮಾನ್ಯರ ಬಳಿ ಕೊಂಡೊಯ್ಯುವಲ್ಲಿ ಎಷ್ಟರ ಮಟ್ಟಿಗೆ ಹೊಣೆಗಾರಿಕೆಯನ್ನು ನಿಭಾಯಿಸುತ್ತಿದ್ದೇವೆ ಎಂಬುದನ್ನು ಸಮೂಹ ಮಾಧ್ಯಮಗಳು ತಮ್ಮ-ತಮ್ಮ ಆತ್ಮಸಾಕ್ಷಿಯನ್ನು ಮುಂದಿಟ್ಟು ಪರೀಕ್ಷಿಸಿ ಕೊಳ್ಳಬೇಕಾಗಿದೆ.

ಈ ನಾಡಿನ ಮುಖ್ಯಮಂತ್ರಿ ಅದೂ ಜನರ ನಡುವೆ ನೇರ ಆಯ್ಕೆಯಾದ ವ್ಯಕ್ತಿ ನಾನು ಮಠಾಧೀಶರುಗಳ ಆಶೀರ್ವಾದದಿಂದ ಮುಖ್ಯಮಂತ್ರಿಯಾದೆ ಎಂಬ ಹೇಳಿಕೆ ನೀಡುತ್ತಾನೆ. ಅದೇ ಸಚಿವ ಸಂಪುಟದ ಮತ್ತೊಬ್ಬ ಮಂತ್ರಿ ನನ್ನ ಜಾತಿಯ ಬೆಂಬಲದಿಂದ ಮಂತ್ರಿಯಾದೆ ಎಂದು ನೀಡಿದ ಅಸಂಬದ್ಧ ಹೇಳಿಕೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಎಸಗಿದ ದ್ರೋಹ ಎಂದು ಮಾಧ್ಯಮದ ಮಂದಿಗೆ ಏಕೆ ಅನಿಸುತ್ತಿಲ್ಲ. ರಾಜಕೀಯ ಅಪವಿತ್ರ ಮೈತ್ರಿ, ಪಕ್ಷಾಂತರ ನಿಷೇದದಿಂದ ಪಾರಾಗಲು ಜನಪ್ರತಿನಿಧಿಗಳು ಶಾಸಕ ಸ್ಥಾನಕ್ಕೆ ನೀಡುತ್ತಿರುವ ರಾಜಿನಾಮೆ, ನಡೆಯುತ್ತಿರುವ ಉಪಚುನಾವಣೆಗಳು, ಇದಕ್ಕಾಗಿ ಪೋಲಾಗುತ್ತಿರುವ ಸಾರ್ವಜನಿಕರ ಹಣ, ಸಾರ್ವತ್ರಿಕರಣ ಗೊಂಡಿರುವ ಭ್ರಷ್ಟಾಚಾರ, ಅಧಿಕಾರಿಗಳ ಹೊಣೆಗೇಡಿತನ, ಮಾಡಿದ 3 ತಿಂಗಳಿಗೆ ಕಿತ್ತು ಹೋಗುವ ರಾಷ್ಟ್ರೀಯ ಹೆದ್ದಾರಿಯ ಸಿಮೆಂಟ್ ರಸ್ತೆ, ವರ್ಷದಲ್ಲಿ ನಾಲ್ಕು ಬಾರಿ ಒಡೆದು ಹೋಗುವ ತುಂಗಭದ್ರಾ ಎಡ ಮತ್ತು ಬಲದಂಡ ನಾಲೆ ಹಾಗೂ ನಾರಾಯಣಪುರ ಅಣೆಕಟ್ಟಿನ ಕಾಲುವೆಗಳು, ಇವುಗಳ ಬಗ್ಗೆ ಮಾಧ್ಯಮಗಳಲ್ಲಿ ಎಷ್ಟರ ಮಟ್ಟಿಗೆ ಗಂಭೀರ ಚರ್ಚೆಗಳು ನಡೆದಿವೆ?

ನಮ್ಮ ಮಾಧ್ಯಮಗಳಿಗೆ ಡಾ.ರಾಜಕುಮಾರ್ ಇಲ್ಲದ ಮೂರು ವರ್ಷದ ಕರ್ನಾಟಕದ ನೆನಪಾಗುತ್ತದೆ. ಆದರೆ ಕುವೆಂಪು ಇಲ್ಲದ, ಕಾರಂತರಿಲ್ಲದ, ತೇಜಸ್ವಿ, ಲಂಕೇಶ್, ಪ್ರೊ.ನಂಜುಂಡಸ್ವಾಮಿ ಇಲ್ಲದ ಕರ್ನಾಟಕ ನೆನಪಾಗುವುದಿಲ್ಲ. ಸಂಸ್ಕೃತಿ ಎಂದರೆ ಬರಿ ನಾಟಕ, ಸಿನಿಮಾ ಮಾತ್ರವಲ್ಲ. ಇಲ್ಲಿನ ನೀರು, ಮಣ್ಣು, ಗಿಡ, ಮರ, ಗಾಳಿ, ಜನರ ಬದುಕು, ಅವರ ಉಡುಪು, ಆಹಾರ ಇವೆಲ್ಲವೂ ಸಂಸ್ಕೃತಿಯ ಪ್ರತೀಕ ಎಂಬುದನ್ನು ಸಮೂಹ ಮಾಧ್ಯಮಗಳು ಮನಗಾಣಬೇಕು.

ವರ್ತಮಾನದ ದುರಂತವೆಂದರೆ ಮಾಧ್ಯಮ ರಂಗದಲ್ಲಿ ಉಂಟಾದ ತಂತ್ರಜ್ಞಾನದ ಕ್ರಾಂತಿಯಿಂದಾಗಿ, ಜಗತ್ತೆಲ್ಲವೂ ಬೆರಳತುದಿಗೆ ಬಂದಿತು. ಇದರ ಪರಿಣಾಮ ಮನುಷ್ಯಲೋಕದ ನಡುವೆ ಇದ್ದ ಸಂವಹನ ಜಗತ್ತೊಂದು ಕಳೆದುಹೋಯಿತು. ಆ ಜಗತ್ತಿನಲ್ಲಿ ಮನುಷ್ಯನಿಗೆ ಒಂಟಿತನ ನೀಗಲು, ಬೇಸರ ಕಳೆಯಲು ಅವರದೇ ಜನಪದ ಕಲೆಗಳಾದ ಹಾಡುಗಳು, ನಾಟಕಗಳು, ನೃತ್ಯಗಳಿದ್ದವು. ಹಬ್ಬ, ಉತ್ಸವ, ಭಜನೆ ಮುಂತಾದ ಹಲವಾರು ಪ್ರಕಾರಗಳಿದ್ದವು. ಇವುಗಳ ಫಲವಾಗಿ ಜನರು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿತ್ತು. ಈಗಿನ ಮಾಧ್ಯಮಗಳ ನೆರಳಲ್ಲಿ ವಿಶೇಷವಾಗಿ ದೃಶ್ಯಮಾಧ್ಯಮಗಳು ಕಟ್ಟಿಕೊಡುವ ಭ್ರಾಮಕ ಜಗತ್ತಿನಲ್ಲಿ ತೇಲುವ ಮನಸ್ಸುಗಳು ವಿಕಾರವಗಿರಲು ಸಾಧ್ಯವೆ ಹೊರತು ಪರಿಶುದ್ಧ ಹಾಗೂ ಪಾರದರ್ಶಕವಾಗಿರಲು ಸಾಧ್ಯವಿಲ್ಲ.

ಸಾಮಾಜಿಕ ಹೊಣೆಗಾರಿಕೆಯ ಪ್ರಶ್ನೆ ಬಂದಾಗ ಮಾಧ್ಯಮದ ದೊರೆಗಳು ಇತ್ತೀಚೆಗೆ ನೀಡುತ್ತಿರುವ ಉತ್ತರ, ನಾವು ಸೇವೆ ಮಾಡಲು ಬಂದಿಲ್ಲ. ಸಮೂಹ ಮಾಧ್ಯಮ ನಮ್ಮ ಪಾಲಿಗೆ ಉದ್ದಿಮೆ ಎಂಬುದು.

ಅಕ್ಷರ ಸಂಸ್ಕೃತಿಯ ಹೆಸರಿನಲ್ಲಿ ಲಾಭ ಮಾಡಲು ಈ ರಂಗವೇ ಬೇಕಿತ್ತೆ ಎನ್ನುವುದು ನನ್ನ ಪ್ರಶ್ನೆ.

ಒಟ್ಟಾರೆ ಸಾಮಾಜಿಕ ಹೊಣೆಗಾರಿಕೆಯ ಪರಿಕಲ್ಪನೆಯೇ ಇಲ್ಲದೆ, ಬೀಗುತ್ತಾ ನಡೆದಿರುವ ಈ ಸಮೂಹ ಮಾಧ್ಯಮ ಅಕ್ಷರವನ್ನು ವ್ಯವಹಾರದ ಹೆಸರಿನಲ್ಲಿ ವ್ಯಭಿಚಾರಕ್ಕೆ ಇಳಿಸಿರುವುದು ಪ್ರತಿಯೊಬ್ಬ ಪ್ರಜ್ಞಾವಂತನಿಗೂ ಕಾಡುತ್ತಿರುವ ಆತಂಕ. ಇದು ಹೇಳಿಕೊಳ್ಳಲಾರದ, ಅನುಭವಿಸಲಾಗದ ಸ್ಥಿತಿ. ಅಲ್ಲಮಪ್ರಭುವಿನ ವಚನದ ಸಾಲೊಂದು ಈ ಸಂದರ್ಭದಲ್ಲಿ ನೆನಪಾಗುತ್ತಿದೆ.

ಕಂಗಳಲ್ಲಿ ನೆಟ್ಟ ಗಾಯವನಾರಿಗೆ ತೋರಬಹುದಯ್ಯಾ? ಇದೇ ಸ್ಥಿತಿ ನನ್ನದು ಕೂಡ. □

ಅಲೆಮಾರಿಗಳಾಗಿ ಮುದಗಲ್ಲಿನ ದಕ್ಕಲರು ಮತ್ತು ಅವರ ಸಂಸ್ಕೃತಿ

ಮಹಾದೇವಪ್ಪ ನಾಗರಹಾಳ

> ಕರ್ನಾಟಕದಲ್ಲಿ ಕಂಡು ಬರುವ ಹಲವಾರು ಜಾತಿ ಬುಡುಕಟ್ಟುಗಳ ಬಗ್ಗೆ ನಾಡಿನ ಖ್ಯಾತನಾಮ ವಿದ್ವಾಂಸರು ಇದುವರೆಗೂ ನಡೆಸಿದ ಅಧ್ಯಯನಗಳು, ಒಂದು ಅಲೆಮಾರಿ ವರ್ಗವಾದ ದಕ್ಕಲರನ್ನು ಮುಖ್ಯವಾಹಿನಿಗೆ ತರುವ ಯತ್ನವನ್ನು ಮಾಡಿವೆಯೆಂದರೆ ಅಲೆಶಯೋಕ್ತಿಯೇನಲ್ಲ. ಜಾತಿ ಬುಡಕಟ್ಟುಗಳ ಬಗ್ಗೆ ಇದುವರೆಗೂ ನಡೆಸಿದ ಸಮೀಕ್ಷೆಯಿಂದ ದಕ್ಕಲರ ಒಳಪಂಗಡ ಹೊರಪಂಗಡಗಳು ಇರುವಿಕೆಯ ಬಗ್ಗೆ ನಮಗೆ ತಿಳಿದುಬರುತ್ತದೆ. ಇದುವರೆಗೆ ಹಲವಾರು ಪಂಗಡ-ಒಳಪಂಗಡ-ಹೊರಪಂಗಡಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಅಧ್ಯಯನದಿಂದ ಕರ್ನಾಟಕದಲ್ಲಿನ ಜಾತಿ, ಬುಡಕಟ್ಟುಗಳ ಆಚರಣೆ ಸಂಪ್ರದಾಯ ನಂಬಿಕೆಗಳ ಕುರಿತು ಹಲವಾರು ವಿದ್ವಾಂಸರು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿರುವುದರಿಂದ ಜಾತಿ-ಉಪ ಜಾತಿಗಳ ಬಗ್ಗೆ ಅರಿಯಲು ಸಾಧ್ಯವಾಗಿದೆ.

ರಾಯಚೂರು ಜಿಲ್ಲೆಯ ಲಿಂಗುಸಗೂರು ತಾಲ್ಲೂಕಿನ ಮುದಗಲ್ಲ ಪರಿಸರದಲ್ಲಿ ಕಂಡುಬರುವ ದಕ್ಕಲರು ಅರೆ-ಅಲೆಮಾರಿ ವರ್ಗದವರು[1] ನಮ್ಮ ಈಗಿನ ಲೆಕ್ಕದ ಪ್ರಕಾರ ಕರ್ನಾಟಕದ ಅಲೆಮಾರಿ ಜನಾಂಗಗಳೆಂದರೆ ಸುಡುಗಾಡುಸಿದ್ದರು, ಕವಲೆತ್ತಿನವರು, ದುರುಗ ಮುರಗಿಯರು, ಹಾವಾಡಿಗರು, ದೊಂಬಿದಾಸರು, ಕಿಳ್ಳೇಖ್ಯಾತರು, ಬುಡಗ ಜಂಗಾಲರು, ಕಿನ್ನರಿ ಜೋಗಿಗಳು, ಕೊರವರು, ಕುರು ಮಾಮ, ದೊಂಬರು, ರಾಜಗೊಂಡರು ಇತ್ಯಾದಿ[2]. ಇವರೆಲ್ಲರಿಗಿಂತಲೂ ವಿಭಿನ್ನ ಸಂಸ್ಕೃತಿ ಸಂಪ್ರದಾಯ ಆಚರಣೆಗಳನ್ನು ರೂಢಿಸಿಕೊಂಡು ಬದುಕಿತ್ತಿರುವವರು ದಕ್ಕಲರು. ಶ್ರೇಣಿಕೃತ ವರ್ಣ ವ್ಯವಸ್ಥೆಯಲ್ಲಿ ಅತ್ಯಂತ ಕೆಳಸ್ತರದವರೆನಿಸಿಕೊಂಡ ಮಾದಿಗರ ಮಕ್ಕಳೆಂದು ಕರೆದುಕೊಳ್ಳುವ ಒಂದು ಅರೆ-ಅಲೆಮಾರಿ ಜನಾಂಗದವರು ಇವರು.

ಆಧುನಿಕ ಯುಗದಲ್ಲಿ ನಗರಪ್ರದೇಶದಲ್ಲಿ ನೆಲೆನಿಂತು ಜೀವನ ಸಾಗಿಸುತ್ತಿರುವ ದಕ್ಕಲರು ತಮ್ಮ ವಿಶಿಷ್ಟ ಸಂಸ್ಕೃತಿಯೊಂದನ್ನು ಉಳಿಸಿಕೊಂಡು ಬಂದವರಾಗಿದ್ದಾರೆ. ಕರ್ನಾಟಕದಲ್ಲಿ ಕಂಡುಬರುವ ದಕ್ಕಲರೆಲ್ಲರ ಮೂಲ ಆಂದ್ರಪ್ರದೇಶ, ರಾಯಚೂರು, ಬೀದರ್, ಗುಲಬರ್ಗಾ, ಬಳ್ಳಾರಿ, ಬೆಳಗಾಂ, ಚಿತ್ರದುರ್ಗ ಇನ್ನಿತರ ಜಿಲ್ಲೆಯಲ್ಲಿ ಕಂಡುಬರುವ ದಕ್ಕಲರ ಮೂಲ ವೃತ್ತಿ ಭಿಕ್ಷಾಟಣೆ. ಎಲ್ಲಾ ಅಲೆಮಾರಿಗಳು ಭಿಕ್ಷಾಟನೆ ಮಾಡುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಆದರೆ ದಕ್ಕಲರು ಅಧಿಕಾರ ಚಲಾಯಿಸಿ ತಮಗೆ ಒಡೆಯರೆನಿಸಿರುವ ಮಾದಿಗರಿಂದ ಭಿಕ್ಷೆ ಪಡೆಯುತ್ತಾರೆ. ದೇಶದಲ್ಲಿ ಶಿಕ್ಷಣ, ರಾಜಕೀಯ, ಆರ್ಥಿಕ ಸ್ಥಿತ್ಯಂತರ ಚಲನಶೀಲವಾಗಿದೆ. ಸಾಮಾಜಿಕ ಪರಿವರ್ತನೆ ಬಲವಾದ ರೀತಿಯಲ್ಲಿ ಆಗುತ್ತದೆ. ಜಂಗಮ ರೂಪಿಗಳಾದ ದಕ್ಕಲರು ವಾಸ್ತವಕ್ಕೆ ಹೊಂದಿಕೊಂಡು ಇಂದು ತಮ್ಮ ಜೀವನ ಕ್ರಮವನ್ನು ಬದುಕಿನ ವಿಧಾನವನ್ನು ಪರಿವರ್ತಸಿಕೊಳ್ಳುತ್ತಿದ್ದಾರೆ.

ಸ್ಥಿರವಾದ ಒಂದು ನೆಲೆಯಲ್ಲಿ ಉಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. "ಸಮಕಾಲಿನ ಸಂದರ್ಭದಲ್ಲಿ ಅಲೆಮಾರಿಗಳ ಸ್ಥಿತಿ-ಗತಿಯನ್ನು ಅವಲೋಕಿಸಿದಾಗ ಅವರಲ್ಲಿ ಇನ್ನೂ ಅಲೆಮಾರಿತನದ ಉಳಿದು ಜೊಂಡಿದೆ ಎಂದು ತಿಳಿದುಬರುತ್ತದೆ. ಯಾವುದೇ ಒಂದು ಸಮೂಹ ಅಭಿವೃದ್ಧಿ ಹೊಂದಬೇಕಾದರೆ ನಿಶ್ಚಿತವಾದ ನೆಲೆ, ಆರ್ಥಿಕವಾದ ಅವಲಂಬನೆ ಸಾಮಾಜಿಕವಾದ ಭದ್ರತೆ ಮುಖ್ಯವಾಗಿಬೇಕು. ಇದ್ಯಾವುದು ಇಲ್ಲದಿದ್ದಾಗ ಅಂತಹ ಸಮೂಹ ಅಲೆಮಾರಿಯಾಗಿ ಕಾಣುತ್ತದೆ."[3] ಮುದಗಲ್ಲ ನಗರದ ಅಂಬೇಡ್ಕರ ಕಾಲೋನಿಯಲ್ಲಿ ನೆಲೆಸಿರುವ ದಕ್ಕಲರು ಅಲೆಮಾರಿ ಜೀವನದಿಂದ ಸ್ಥಿರವಾಗಿರುವ ಬದುಕನ್ನು ಕಟ್ಟಿಕೊಳ್ಳಲು ಯತ್ನಿಸುತ್ತಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ ತೀರ ಹಿಂದುಳಿದವರಾಗಿದ್ದಾರೆ. ಒಂದು ಸಂತೋಷದ ಸಂಗತಿಯೆಂದರೆ ಮೂಲ ಸೌಕರ್ಯಗಳಿಂದ ವಂಚಿತರಾದರೂ ನಾಕರಿಕತ್ವ ಪಡೆದಿದ್ದಾರೆ. ಬೇರೆ ಅಲೆಮಾರಿಗಳು ಭಾರತೀಯ ಪೌರತ್ವವನ್ನು ಪಡೆಯದೇ ಸಾಮಾಜಿಕ, ಶೈಕ್ಷಣಿಕ ವ್ಯವಸ್ಥೆಯಿಂದ ಇಂದಿಗೂ ದೂರವೇ ನಿಂತಿದ್ದಾರೆ. ದಕ್ಕಲರು ಸಾಮಾಜಿಕವಾಗಿ ಕೆಳಸ್ತರದ ಜಾತಿಯೆಂದು ಕರೆಸಿಕೊಂಡರೂ ಆಧುನಿಕತೆಯ ಸಂದರ್ಭದಲ್ಲಿ ಸಾಮಾಜಿಕವಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ.

ಕರ್ನಾಟಕದಲ್ಲಿ ಕಂಡುಬರುವ ಹಲವಾರು ಜಾತಿ ಬುಡುಕಟ್ಟುಗಳ ಬಗ್ಗೆ ನಾಡಿನ ಖ್ಯಾತನಾಮ ವಿದ್ವಾಂಸರು ಇದುವರೆಗೂ ನಡೆಸಿದ ಅಧ್ಯಯನಗಳು, ಒಂದು ಅಲೆಮಾರಿ ವರ್ಗವಾದ ದಕ್ಕಲರನ್ನು ಮುಖ್ಯವಾಹಿನಿಗೆ ತರುವ ಯತ್ನವನ್ನು ಮಾಡಿವೆಯೆಂದರೆ ಅಲೆಶಯೋಕ್ತಿಯೇನಲ್ಲ. ಜಾತಿ ಬುಡಕಟ್ಟುಗಳ ಬಗ್ಗೆ ಇದುವರೆಗೂ ನಡೆಸಿದ ಸಮೀಕ್ಷೆಯಿಂದ ದಕ್ಕಲರ ಒಳಪಂಗಡ ಹೊರಪಂಗಡಗಳು ಇರುವಿಕೆಯ ಬಗ್ಗೆ ನಮಗೆ ತಿಳಿದುಬರುತ್ತದೆ. ಇದುವರೆಗೆ ಹಲವಾರು ಪಂಗಡ-ಒಳಪಂಗಡ-ಹೊರಪಂಗಡಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಅಧ್ಯಯನದಿಂದ ಕರ್ನಾಟಕದಲ್ಲಿನ ಜಾತಿ, ಬುಡಕಟ್ಟುಗಳ ಆಚರಣೆ ಸಂಪ್ರದಾಯ ನಂಬಿಕೆಗಳ ಕುರಿತು ಹಲವಾರು ವಿದ್ವಾಂಸರು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿರುವುದರಿಂದ ಜಾತಿ-ಉಪ ಜಾತಿಗಳ ಬಗ್ಗೆ ಅರಿಯಲು ಸಾಧ್ಯವಾಗಿದೆ. ಅಲ್ಲದೇ ಯಾವುದೇ ಜನಾಂಗದ ಸಂಸ್ಕೃ



ತಿಯ ಮೂಲ ರಚನೆಯನ್ನು ತಿಳಿಯಲು ಇಂತಹ ಅಧ್ಯಯನಗಳು ನೆರವಾಗಿದೆ. ಅಧ್ಯಯನದ ಮೂಲಕ ಇತರ ಜಾತಿ-ಜನಾಂಗಗಳ ಸಂಸ್ಕೃತಿಯೊಡನೆ ಇರುವ ಸೌಮ್ಯವನ್ನು ಅರ್ಥಮಾಡಿಕೊಂಡು ಭಾರತದಂತಹ ಹಲವು ಜಾತಿ ಧರ್ಮಗಳ ಸಂಕೀರ್ಣ ವ್ಯವಸ್ಥೆಯ ದೇಶದಲ್ಲಿ ಜಾತಿ ವ್ಯವಸ್ಥೆಯ ಹಾಗೂ ಅದರ ಕಾರ್ಯ ವಿಧಾನವನ್ನು ತಿಳಿಯಲು ಅನುಕೂಲವಾಗಿದೆ.

ಅನುಸೂಚಿತ ಪರಿಶಿಷ್ಟ ಜಾತಿಗೆ ಸೇರಿದ ಮಾದಿಗರಲ್ಲಿನ ಒಂದು ಉಪಪಂಗಡವೆಂದು ಗುರುತಿಸಲ್ಪಟ್ಟ 'ದಕ್ಕಲರು' ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ್ದಾರೆ. ಸಮಾಜ ಜಾಗತೀಕರಣದ ಸುಳಿಗೆ ಸಿಲುಕಿ ಸಾಮಾನ್ಯನ ಜೀವನಕ್ಕೆ ಸಂಚಕಾರಹೊಡ್ಡಿರುವ ಇಂದು ಪ್ರತಿ ಪ್ರಜೆಯ ಬದುಕು ಕಷ್ಟಕರವಾಗಿದೆ. ಆಧುನಿಕ ಸಂದರ್ಭದಲ್ಲಿ ತಮ್ಮ ಮೂಲ ಸಂಸ್ಕೃತಿಯೊಂದನ್ನು ತಮ್ಮೊಂದಿಗೆ ಹೊತ್ತೊಯ್ಯುತ್ತಿರುವ ಇಂದಿನ ದಕ್ಕಲರು ಸಾಮಾಜಿಕ ಮನ್ವಂತರಕ್ಕೆ ಇನ್ನು ತೆರೆದುಕೊಂಡಿಲ್ಲ. ದಕ್ಕಲರು ಯಜಮಾನ ಸಂಸ್ಕೃತಿಯನ್ನು ಗೌರವಿಸುವವರು. ಭಾರತದಂತ ದೊಡ್ಡ ರಾಷ್ಟ್ರದಲ್ಲಿ ಜಾತ್ಯಾತೀತ ಸಿದ್ಧಾಂತದ ನೆಲೆಯಲ್ಲಿ "ಮೂಲಭೂತವಾಗಿ ಮನುಷ್ಯನಿಗೆ ಬೇಕಾಗಿರುವುದು ರೊಟ್ಟಿ, ಬಟ್ಟೆ, ತಲೆಯ ಮೇಲೊಂದಿಷ್ಟು ಸೂರು" ಇಂತಹ ಮೂಲಭೂತ ಅವಶ್ಯಕತೆಗಳು ದಕ್ಕಲರು ಪಡೆದವರು ಇದ್ದಾರೆ, ಇವೆಲ್ಲವನ್ನು ನೋಡದವರಿದ್ದಾರೆ.

"ಮೂಲ ಜಾತಿಯೊಂದರಿಂದ ಬೇರೆಗೊಂಡ ಉಪಜಾತಿಯವರಾದ ದಕ್ಕಲರು ತಮ್ಮ ಮೂಲಜಾತಿಯವರೊಡನೆ ಹೊಂದಿರುವ ಸಂಬಂಧ ಅನನ್ಯವಾದುದು. ತಮ್ಮ ಮೂಲ ಜಾತಿಯವರಿಂದಲೇ ತಮಗೆ ಬೇಕಾದುದನ್ನು ಪಡೆಯುವ, ಕೊಡಲೇಬೇಕು ಎಂದು ಅಧಿಕಾರ ಚಲಾಯಿಸುವ ಹಿನ್ನಲೆಯಲ್ಲಿ ಈ ಜನಾಂಗ ಮಾದಿಗರೊಡನೆ ಹೊಂದಿರುವ ಸಂಬಂಧವನ್ನು ತಿಳಿಯಬಹುದಾಗಿದೆ"[4]. ಮಾದಿಗರನ್ನೇ ನಂಬಿ ಜೀವನ ಸಾಗಿಸುತ್ತಿದ್ದ ಕಾಲವೊಂದಿತ್ತು. ಇಂದಿನ ಪೀಳಿಗೆ ಹಿರಿಯರು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸದಿದ್ದರೂ, ಮಾದಿಗರನ್ನು ಕೃತಜ್ಞತೆಯಿಂದ ತಮ್ಮ ಗೌಡರೆಂದು ಅವರು ತಮ್ಮ ಧಣಿಯವರೆಂದು ಕರೆಯಲು ಮರೆಯಲಾರರು. "ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಅದರಲ್ಲೂ ಆಂಧ್ರ-ಕರ್ನಾಟಕ ಹಾಗೂ ಮಹಾರಾಷ್ಟ್ರ-ಕರ್ನಾಟಕದ ಗಡಿ ಪ್ರದೇಶಗಳಲ್ಲಿ ದಕ್ಕಲರು ಹೆಚ್ಚಾಗಿ ನೆಲೆಸಿರುವುದು ಕಂಡುಬರುತ್ತದೆ. ದಕ್ಕಲರು ಮೂಲತಃ ಆಂಧ್ರಪ್ರದೇಶದಿಂದ ವಲಸೆ ಬಂದವರೆಂದು ತಿಳಿದುಬರುತ್ತದೆ"[5]. ಆಂಧ್ರದಿಂದ ವಲಸೆ ಬಂದ ದಕ್ಕಲರು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ್ದಾರೆ.

ಕರ್ನಾಟಕದಲ್ಲಿ ಕಂಡುಬರುವ ದಕ್ಕಲರನ್ನು ಆಂಧ್ರದ ತೆಲಾಂಗಣ ವಿಭಾಗದಲ್ಲಿ ದಕ್ಕಲ, ದೊಕ್ಕಲ್ವರ ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ದಕ್ಕಲಿಗ, ದಕ್ಕಾಲ, ದಕ್ಕಲ್ವಾರ, ದಕ್ಕಲೇರು ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ದಕ್ಕಲರು ತಮ್ಮ ವಂಶದ ಹಿರಿಯನೆಂದು ಹೇಳುವ "ದಕ್ಕಲ ಮುನಿ"ಯಿಂದಾಗಿ ಇವರಿಗೆ 'ದಕ್ಕಲ' ಎಂಬ ಹೆಸರು ಬಂದಿರುವುದುದಾಗಿ ತಿಳಿದುಬರುತ್ತದೆ. ಮಾದಿಗ ಮೂಲ ಜಾತಿಯ ಉಪಜಾತಿಯಾದ ದಕ್ಕಲರು ಹಲವಾರು ಸಂಪ್ರದಾಯ, ಆಚರಣೆ, ನಂಬಿಕೆಗಳನ್ನು ಎಲ್ಲಾ ವರ್ಗದಂತೆ ಇವರು ರೂಢಿಸಿಕೊಂಡು ಬಂದಿದ್ದಾರೆ.

ಮುದಗಲ್ಲ ನಗರದಲ್ಲಿ ನೂರರಿಂದ ನೂರೈವತ್ತು ಜನಸಂಖ್ಯೆ ಹೊಂದಿರುವ ದಕ್ಕಲರು ತಮ್ಮನ್ನು ಮಾದಿಗರ ಮಕ್ಕಳು, ಮಾದಿಗರೇ ತಮಗೆ ಒಡೆಯರು, ಗೌಡರು ಎಂದು ಕರೆದುಕೊಳ್ಳುತ್ತಾರೆ. ಯಾರತಂಟೆಗೂ ಹೋಗದೆ, ಮಾದಿಗರನ್ನು ಹೊರತುಪಡಿಸಿ ಬೇರೆಯಾವ ಜಾತಿಯವರಿಂದಲೂ ಸಹಾಯವನ್ನು ಬೇಡದ ಮಾದಿಗರ ನಿಷ್ಠರಾದ ಇವರು ನಾವು ಮಾದಿಗ ಗೌಡರ ಮಕ್ಕಳೆಂದು ತಮ್ಮನ್ನು ಕರೆದುಕೊಳ್ಳುತ್ತಾರೆ. ಮಾದಿಗರನ್ನೇ ನಂಬಿ ಬದುಕುವ ಇವರು ಮಾದಿಗರೊಂದಿಗಿನ ತಮ್ಮ ಸಂಬಂಧದದ ಹಿನ್ನಲೆಯನ್ನು ಕುರಿತು ಪೌರಾಣಿಕ ಕಥೆಯನ್ನು ಹೇಳುತ್ತಾರೆ.

ಈ ಭೂಮಂಡಲ ಹುಟ್ಟುವದಕ್ಕೆ ಮೊದಲು ಈ ಸಮಸ್ತ ಲೋಕವೂ ಜಲಮಯವಾಗಿತ್ತು. ಅಂತಹ ಜಲಮಯವಾದ ಅಂಧಕಾರದಲ್ಲಿ ಬ್ರಹ್ಮನು ಆದಿಯುಗದಲ್ಲಿ ಹುಟ್ಟಿದನು. ನಿರಾಕಾರ, ನಿರಾಮಯ, ನಿರಕಲ್ಪಿತ, ನಿರ್ವಿಜ್ಞತೆ ಜ್ಯೋತಿರ್ಮಯ ಸರೋವರವಾಗಿತ್ತು. ತನ್ನ ಆತ್ಮದಲ್ಲಿ ತಾನೆ ಜಲವನ್ನು ಹೆಪ್ಪು ಮಾಡಬೇಕೆಂದು ಯೋಚಿಸಿ ತನ್ನ ಕರ್ಣದಲ್ಲಿ ಬೆರಳಿಟ್ಟು ಆದಿಜಾಂಬಮುನಿ ಆ ನದಿ ಜಾಗದಲ್ಲಿ ಹುಟ್ಟಿದನು. ಜಾಂಬವಂತನಿಗೆ ಪರಬ್ರಹ್ಮನ ಜಲವನ್ನೆಲ್ಲಾ ಹೆಪ್ಪು ಮಾಡಿ ಭೂಮಂಡಲವನ್ನು ಸೃಷ್ಟಿಸಿ ಅದಕ್ಕೆ ಜಾಂಬೂದ್ವೀಪವೆಂದು ಸೂಚಿಸಿದನಂತೆ. ಬ್ರಹ್ಮನ ಮಾತಿಗೆ ಜಾಂಬುವಂತನು ಆದಿಶಕ್ತಿಯು ಹುಟ್ಟಬೇಕೆಂದು ಉಪದೇಶಿಸಿದನು. ಜಾಂಬುವಂತನ ಮಂತ್ರೋಪದೇಶದಿಂದ ಆಳಂದರ ಯುಗದಲ್ಲಿ ಆದಿಶಕ್ತಿ ಹುಟ್ಟಿದಳು. ಹೀಗೆ ಹುಟ್ಟಿದ ಆದಿಶಕ್ತಿ ಒಂದು ಬೀಜ ರೂಪವಾಗಿ ಶಿವ-ಬ್ರಹ್ಮ-ವಿಷ್ಣು ಶಕ್ತಿಯು ರೂಪತಾಳಲು ಕಾರಣಳಾದಳು. ಮುಂದೆ "[6]ಆದಿಶಕ್ತಿಯು ಬ್ರಹ್ಮಸ್ವರೂಪವಾಗಿ ವಾರೆಗಣ್ಣಿಂದ ಜಾಂಬು ಮುನಿಯನ್ನು ನೋಡಲು ಜಾಂಬುವಂತನ ಬಲ ದೊಡೆಯು ಭಾದವಾಯಿತು. ಜಾಂಬುವಂತನು ಆ ಶಕ್ತಿಯನ್ನು ಕೇಳಲು "ಓ ಶಕ್ತಿ, ನೀನು ಬಂದ ಕಾಲದಲ್ಲಿ ನನ್ನ ಕಾಲು ಭಾದಾವಾಯಿತು. ಆದಕಾರಣ ಈ ಕಾಲಿನಲ್ಲಿ ಏನು ಇರುವುದೋ ನೋಡಿ ಹೋಗಬೇಕೆಂದು ಆದಿಶಕ್ತಿಯನ್ನು ಕೇಳಲು, ಅತ್ತ ಆದಿಶಕ್ತಿಯು "ಓ ಜಾಂಬುವಂತ ಮುನಿಗಳೇ, ಆದರೆ ಅದನ್ನು ನಿಮ್ಮ ಬಲಗೈ ಕಿರುಬೆರಳಿನ ಬೆಳ್ಳುಗುರಿನಿಂದ ಗೀರಾಕಿ ನೋಡಬಹುದು"[6] ಎಂದು ಆದಿ ಶಕ್ತಿ ಹೇಳಿದಳು. ಹೀಗೆಂದ ತಕ್ಷಣ ಜಾಂಬು ಮುನಿಯು ತನ್ನ ಉಗುರಿನಿಂದ ಸೀಳಲು, ರಕ್ತವೂ ಇಲ್ಲ, ಕೀವೂ ಇಲ್ಲ, ಅದರಲ್ಲಿ ಛನ್ನಜಾಯುಗದಲ್ಲಿ ಏಳುಮಂದಿ ಮಕ್ಕಳು ಹುಟ್ಟಿದರು"[7] ಹೀಗೆ ಹುಟ್ಟಿದ ಜಾನ ಮುನಿ, ಯುಗಮುನಿ, ಜಗತ್ತುಮುನಿ, ಹೆಪ್ಪಮುನಿ, ರಕ್ತಮುನಿ, ಇರಮುನಿ, ಹಾಗೂ ಗುರಪ್ಪ ಎಂದು ಹೆಸರಿಡಲಾಯಿತು. ಹೆಪ್ಪಮುನಿ, ರಕ್ತಮುನಿ, ಇರಮುನಿ ಈ ಮೂವರು ತ್ರಿಮೂರ್ತಿಗಳಿಂದ ಭೂಮಿಯ ನಿರ್ಮಾಣವಾಯಿತು.

ಜಗತ್ತಿನ ಪ್ರಯೋಜನಕ್ಕೆ ಉಪಕಾರಕ್ಕಾಗಿ ಆದಿ ಜಾಂಬಮುನಿ ಇರಮುನಿಯನ್ನು ಬೇಧಿಸಿ ಅವನ ಅಂಗಾಂಗಳಿಂದ ಆಭರಣ ತಯಾರಿಸಿದನು. ಹೀಗೆ ದೇಹದ ಪ್ರಮುಖ ಭಾಗಗಳನ್ನು ಬಳಸಿ ಉಳಿದ ಬೆನ್ನು ಮೂಳೆಯ ಶರೀರವನ್ನು ಶಿವಪಾರ್ವತಿಯರು ನೋಡಿ ಅಮುಕಂಪ ಮೂಡಿ ಮತ್ತೆ ಜೀವಕಳೆ ತುಂಬಿದರು. ಹೀಗೆ ಮರುಜೀವ ಪಡೆದ ಇರಮುನಿಯನ್ನು 'ದಕ್ಕಲ' ಮಹಾಮುನಿ ಎಂದು ಶಿವನು ಹೆಸರಟ್ಟನು. ಹೀಗೆ ಜಗತ್ತು ನಿರ್ಮಾಣ ಮಾಡಲು ಸೂಕ್ತ ಸಮಯವನ್ನು ಅದ್ಯ ತಂದೆಯಾದ ಆದಿಜಾಂಬಮುನಿಯ ಮಗನಾದ ದಕ್ಕಲ ಮುನಿಯನ್ನು ಗುರುತಿಸಲಾಗದೆ ನೀನು ಮಾದಿಗರ ಮನೆಮನೆಯಲ್ಲಿ ಭಿಕ್ಷೆ ಬೇಡಿ ಬದುಕು ಎಂದು ಹೇಳಿಕಳಿಸಿದನು. ಹೀಗೆ ದಕ್ಕಲನ ಉದಯವಾಯಿತು. ಮಾದಿಗರ ಮತ್ತು ದಕ್ಕಲರ ಸಂಬಂಧ ಅನ್ಯೋನ್ಯವಾಗಿ ಬೆಳೆದುಬಂದಿದೆ.

ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕಂಡುಬರುವ "ದಕ್ಕಲರು" ಮಾದಿಗರ ಮನೆಯಲ್ಲಿ ಭಿಕ್ಷೆ ಬೇಡಿ ಬದುಕುತ್ತಿದ್ದಾರೆ. ಭಾರತೀಯ ವರ್ಣವ್ಯವಸ್ಥೆಯಲ್ಲಿ ಶೂದ್ರರಿಗಿಂತಲೂ ತಮ್ಮದು ಕೆಳಜಾತಿಯೆಂದು ಭಾವಿಸಿರುವ ದಕ್ಕಲರು ತಾವು ಕೀಳರಿಮೆಯಿಂದ ಹೊರಬರಲು ಯತ್ನಿಸುತ್ತಿದ್ದಾರೆ. ಮುದಗಲ್ಲ ಪ್ರದೇಶದಲ್ಲಿ ನೆಲೆಸಿರುವ ದಕ್ಕಲರು ತಮ್ಮ ಹುಟ್ಟಿನ ಹಿನ್ನಲೆಯನ್ನು ತಮ್ಮ ಪೂರ್ವಜರು ತಮಗೆ ಹೇಳಿಕೊಟ್ಟ ಕತೆಯನ್ನು ಹೇಳುತ್ತಾರೆ. ಸಾಮಾಜಿಕ ಬದುಕಿನಲ್ಲಿ ಅತ್ಯಂತ ಕೆಳಸ್ತರದ ಜಾತಿಯವರೆಂದು, ಮಾದಿಗರ ಮನೆಮಕ್ಕಳಾಗಿ ಮಾದಿಗರ ಕೇರೆಯಿಂದ ತುಸು ದೂರದಲ್ಲಿಯೇ ವಾಸಿಸುತ್ತಾರೆ. ಮೂಲತಃ ಅಲೆಮಾರಿಗಳಾದ ಇವರು ನೂರು ವರ್ಷಗಳಿಂದ ಮುದಗಲ್ಲಿನಲ್ಲಿ ನೆಲೆಸಿದ್ದಾರೆ. ತಮ್ಮದು ಎನ್ನುವುದಕ್ಕೆ ಅಂಗೈ ಅಗಲದ ಕೃಷಿ ಭೂಮಿಯು ಇವರಿಗಿಲ್ಲ ಮಾದಿಗರಿಂದ ಬಂದ ಭಿಕ್ಷೆಯನ್ನು ಎಲ್ಲಾ ಕುಟುಂಬಗಳು ಸಮಾನವಾಗಿ ಹಂಚಿಕೊಳ್ಳುತ್ತವೆ.

ಬದಲಾದ ಆಧುನಿಕತೆಯ ಸಂದರ್ಭದಲ್ಲಿ ತಮ್ಮ ಮೂಲ ಕಸುಬಾದ ಭಿಕ್ಷಾಟನೆಯನ್ನು ಬಿಟ್ಟು, ಮನಕಟ್ಟುವ ಕೆಲಸ, ರಿಕ್ಷಾ ಹೊಡೆಯುವುದು, ಕಟ್ಟಿಗೆ ಕಡೆಯುವುದು, ಪ್ಲಾಸ್ಟಿಕ್ ಚಂದಿ ಆಡಿಸುವುದು, ಹೆಣ್ಣು ಮಕ್ಕಳು ಚಾಪೆ ಹೆಣೆಯುವದು, ಬೇರೆ ಬೇರೆ ವ್ಯಾಪಾರವನ್ನು ಮಾಡುತ್ತಿದ್ದಾರೆ. ಭಾರತದ ಸಾಮಾಜಿಕ ವ್ಯವಸ್ಥೆ ಎಷ್ಟು ಸಂಕೀರ್ಣವೋ, ಆ ವ್ಯವಸ್ಥೆಯ ಅಂತರ್ಗತ ಭಾಗವಾಗಿರುವ ಅಲೆ ಮಾರಿಗಳು ರೂಪಗೊಳ್ಳುವುದಕ್ಕೆ ಕಾರಣವಾಗಿರುವ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಸಂಗತಿಗಳೂ ಸಹ ಅಷ್ಟೇ ಸಂಕೀರ್ಣವಾಗಿದೆ. ಶ್ರೇಣೀಕರಣದ ಕಾರಣಕ್ಕಾಗಿ ಇಂಡಿಯಾದಲ್ಲಿ ಬದುಕುತ್ತಿರುವ ದುಡಿವ ಕೆಳಜಾತಿ ಸಮುದಾಯಗಳು ಯಾವ ಹಂತಗಳನ್ನು ದಾಟಿ ಬಂದಿರುವರೋ ಆ ಎಲ್ಲಾ ಹಂತಗಳನ್ನು ಅಲೆಮಾರಿಗಳೂ ಸಹ ಹಾದು ಬಂದಿದ್ದಾರೆ. ದಕ್ಕಲರು ಇದಕ್ಕೆ ಹೊರತಾಗಿಲ್ಲ.

ಅನುಸೂಚಿತ ಪರಿಶಿಷ್ಟ ಜಾತಿಗೆ ಸೇರಿದ ಮಾದಿಗರಲ್ಲಿನ ಒಂದು ಉಪಪಂಗಡವೆಂದು ಗುರುತಿಸಲ್ಪಟ್ಟ 'ದಕ್ಕಲರು' ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ್ದಾರೆ. ಸಮಾಜ ಜಾಗತೀಕರಣದ ಸುಳಿಗೆ ಸಿಲುಕಿ ಸಾಮಾನ್ಯನ ಜೀವನಕ್ಕೆ ಸಂಚಕಾರಹೊಡ್ಡಿರುವ ಇಂದು ಪ್ರತಿ ಪ್ರಜೆಯ ಬದುಕು ಕಷ್ಟಕರವಾಗಿದೆ. ಆಧುನಿಕ ಸಂದರ್ಭದಲ್ಲಿ ತಮ್ಮ ಮೂಲ ಸಂಸ್ಕೃತಿಯೊಂದನ್ನು ತಮ್ಮೊಂದಿಗೆ ಹೊತ್ತೊಯ್ಯುತ್ತಿರುವ ಇಂದಿನ ದಕ್ಕಲರು ಸಾಮಾಜಿಕ ಮನ್ವಂತರಕ್ಕೆ ಇನ್ನು ತೆರೆದುಕೊಂಡಿಲ್ಲ. ದಕ್ಕಲರು ಯಜಮಾನ ಸಂಸ್ಕೃತಿಯನ್ನು ಗೌರವಿಸುವವರು.

ಮಾದಿಗರ ಮನೆಯ ಮಕ್ಕಳೆಂದು ಕರೆಸಿಕೊಂಡರೂ ಇಂದಿನ ಬದುಕಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮುದಗಲ್ಲಿನ ದಕ್ಕಲರು ತಮ್ಮ ಹುಟ್ಟಿನ ಹಿನ್ನಲೆಯನ್ನು ತಮ್ಮ ಪೂರ್ವಜರು ತಮಗೆ ಹೇಳಿದ ಕತೆಯಿಂದ ತಿಳಿದು "ಆದಿಜಾಂಬ ಮುನಿಯು ತನ್ನ ಮಗನಾದ ದಕ್ಕಲ ಮುನಿಯನ್ನು ಗುರುತಿಸಲಾಗದೆ ನೀನು ಮಾದಿಗರ ಮನೆಯಲ್ಲಿ ಭಿಕ್ಷೆ ಬೇಡಿ ಬದುಕು" ಎಂದು ಹೇಳಿದ್ದನ್ನು ಇಂದು ಚಾಚು ತಪ್ಪದೇ ಅದನ್ನೇ ರೂಢಿಸಿಕೊಂಡ ವಿಭಿನ್ನ ಸಂಸ್ಕೃತಿಯ ಹುಟ್ಟಿಗೆ ಕಾರಣರಾಗಿದ್ದಾರೆ. ಅಲೆಮಾರಿ ಸಂಕೋಲೆಯನ್ನು ಕಳಚಿಕೊಂಡಿರುವ ಇಂದಿನ ದಕ್ಕಲರು ಸಮಾಜಿಕ ಬದುಕಿನಲ್ಲಿ ಹೊಸತನವನ್ನು ಕಂಡುಕೊಳ್ಳಲು ಎಡೆಬಿಡದೆ ಯತ್ನಿಸುತ್ತಿದ್ದಾರೆ. ಕೂಲಿನಾಲಿಯಿಂದ ಬಂದ ಹಣವನ್ನು ಮಧ್ಯ, ಮಾಂಸ, ಬೀಡಿ ಸಿಗರೇಟ ನಂತಹ ಕೆಟ್ಟ ಚಟಗಳಿಗೆ ವ್ಯಯಿಸುತ್ತಿದ್ದಾರೆ. ಉಳಿದ ಹಣದಿಂದ ಜೀವನ ನಡೆಸುತ್ತಾರೆ. ತಮ್ಮ ಅಜ್ಜ ತಂದೆಯವರು ಒಂದೂರಿನಿಂದ ಇನ್ನೊಂದು ಊರಿಗೆ ವಲಸೆ ಹೋಗಿ ಮಾದಿಗರ ಕೇರಿಯ ತುಸು ದೂರದಲ್ಲಿ ಬಿಡಾರ ಹೂಡಿ ಅವರಿಂದ ಅನ್ನ-ನೀರು ಪಡೆದು ಕಾಲಕಳೆಯುತ್ತಿದ್ದರು. ಅಕ್ಷರ ಜ್ಞಾನದಿಂದ ದೂರವಿರುವ ದಕ್ಕಲರು ಹಿಂದಿನ ಸಂಸ್ಕೃತಿಗೆ ಬದ್ಧರಾಗಿದ್ದಾರೆ.

ಆದಿ ಜಾಂಬವ ಕುಲದವರಾದ ಮಾದಿಗರು ದುಡಿವ ವರ್ಗದವರೇ ಶತಮಾನಗಳಿಂದ ಶೋಷಿತರಾಗಿ ಅಲ್ಪಸಂಖ್ಯಾತ ಆಳುವ ವರ್ಗದ ಕಪಿಮುಷ್ಠಿಯಲ್ಲಿ ಬಂದಿಯಾಗಿ ಸಾಮಾಜಿಕ ಪರಿವರ್ತನೆಯನ್ನು ಕಾಣದ ಮಾದಿಗರು ದಕ್ಕಲರಿಗೆ ಭಿಕ್ಷೆ ನೀಡುವುದು ಈ ದೇಶದ ಸಂಸ್ಕೃತಿಯ ವಿಸ್ಮಯವನ್ನು ಹರಸುತ್ತದೆ. ದಲಿತ ಕುಟುಂಬದೊಂದಿಗೆ ದಕ್ಕಲರ ಸಂಬಂಧ ಅನನ್ಯವಾದದು. ದಕ್ಕಲರು-ಮಾದಿಗರು ಶೋಷಿತ ವರ್ಗದವರು, ಮಾದಿಗರ ಸಮಾಜದಲ್ಲಿ ಕೆಳಸ್ತರದಲ್ಲಿ ಬದುಕಿದರೂ ತಮ್ಮ ಉಪ ಜಾತಿಯವರಾದ ದಕ್ಕಲರೊಂದಿಗೆ ಹಂಚಿ ತಿನ್ನುವುದು ಮಾನವೀಯ ಮೌಲ್ಯಗಳ ಆಗರವಾಗಿದೆ.

ಆಧುನಿಕತೆ ಮತ್ತು ದಕ್ಕಲರು :-

ಜಗತ್ತನ್ನೇ ಮುಷ್ಟಿಯಲ್ಲಿ ಹಿಡಿದಾಡಬಹುದಾದ ಈ ದಿನಗಳಲ್ಲಿ ಅಲೆಮಾರಿಗಳಾದ ದಕ್ಕಲರು ಹೊರ ಜಗತ್ತನ್ನು ಅರಿಯದವರು ತಮ್ಮ ಕುಲಕಸುಬು ಭಿಕ್ಷಾಟಣೆಯಿಂದ ಈ ಯುಗಕ್ಕೆ ಹೊಂದಿಕೊಂಡು ಹೋಗಲು ಆಗದೆಂಬುದನ್ನು ಅರಿತಂತಿದೆ. ಹೀಗಾಗಿ ನವ ಬದುಕಿಗಾಗಿ ಹೋರಾಟ ನಡೆಸಲೇಬೇಕಾದ ಅನಿವಾರ್ಯತೆ ದಕ್ಕಲರಲ್ಲಿಯೂ ಮನೆ ಮಾಡಿದೆ. ಬದಲಾದ ಸಂಕೀರ್ಣ ವ್ಯವಸ್ಥೆಯಲ್ಲಿ ತಮ್ಮ ಆರ್ಥಿಕತೆಯನ್ನು ಹೆಚ್ಚಿಸಿಕೊಳ್ಳಲು ಸ್ವಾವಲಂಬನೆಯತ್ತ ಮುಖಮಾಡಿದ್ದಾರೆ. ಇಂದು ಸ್ವಾವಲಂಬಿಗಳಾಗಿ ಆಧುನಿಕ ಯುಗಕ್ಕೆ ಹೊಂದಿಕೊಂಡು ಬದುಕುತ್ತಿದ್ದಾರೆ. ಕೆಲ ಕುಟುಂಬಗಳು ಊರಿನೊಂದಿಗೆ ಸಂತೆ ವ್ಯಾಪಾರದಲ್ಲಿ ತೊಡಗಿದೆ. ಇನ್ನೂ ಕೆಲವರು, ಮನೆಕೆಲಸ, ಮನೆ ಕಟ್ಟುವ ಕೆಲಸ, ಟೇಲರಿಂಗ್ ಇನ್ನಿತರ ಕೆಲಸಗಳಲ್ಲಿ ತೊಡಗಿದ್ದಾರೆ. ಮುಂದುವರೆದ ಕುಟುಂಬಗಳು ಟಿ.ವಿ., ಮೊಬೈಲ್, ರೇಡಿಯೋಗಳನ್ನು ಹೊಂದಿದ್ದಾರೆ, ಇನ್ನೂ ಕೆಲವರು ಸೂರೇ ಕಾಣದೇ ಬದುಕುತ್ತಿದ್ದಾರೆ. ತಮ್ಮ ಮೂಲ ವೃತ್ತಿಯಿಂದ ಬದಲಾವಣೆ ಬಯಸಿರುವ ದಕ್ಕಲರು ಆಧುನಿಕತೆಯ ಸಂದರ್ಭದಲ್ಲಿ ತಮ್ಮ ಸರಿಕರೊಂದಿಗೆ ಬದುಕಲು ಯತ್ನಿಸುತ್ತಿದ್ದಾರೆ. ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಇವರು ನಂಬಿಕೊಂಡು ಬಂದಿರುವ ಕ್ರೂರ ಆಚರಣೆಗಳು, ನಂಬಿಕೆಗಳು ಸಂಪ್ರದಾಯಗಳು, ಮರೆಯಾಗುತ್ತಿವೆ. ಅವುಗಳಿಂದ ಯಾವ ಪ್ರಯೋಜನವೂ ಇಲ್ಲವೆಂಬ ನಿಲುವು ತಾಳಿದ್ದಾರೆ. ಬದಲಾದ ಸಾಮಾಜಿಕ ಸ್ಥಿತ್ಯಂತರದಲ್ಲಿ ತಮ್ಮ ಜೀವನ ಶೈಲಿಯನ್ನು ಬದಲಾಗಿಸಿದ್ದಾರೆ. ಮೊಬೈಲ್ ಬಳಕೆ, ಧಾನ್ಯ ಸಂಗ್ರಹ, ಹಣ ಸಂಗ್ರಹ, ಬ್ಯಾಂಕ್ ವ್ಯವಹಾರ, ಕೋರ್ಟ-ಕಛೇರಿ, ವ್ಯಾಪಾರ ಹೀಗೆ ಅವರ ಜೀವನವೂ ಬದಲಾಗುತ್ತಿದೆ.

ದಕ್ಕಲರು ಮತ್ತು ಶಿಕ್ಷಣ :-

ಶಿಕ್ಷಣ ಕೊರತೆಯಿಂದ ನರಳುತ್ತಿರುವ ದಕ್ಕಲರು ಸಾಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೂರರಿಂದ ನೂರೈವತ್ತು ಜನಸಂಖ್ಯೆ ಹೊಂದಿರುವ ಇವರಲ್ಲಿ ಸಾಮಾನ್ಯವಾಗಿ ಕಲಿತವರು ಬಹಳ ಕಡಿಮೆ. ಕೇಂದ್ರ-ರಾಜ್ಯ ಸರ್ಕಾರಗಳು ಶಿಕ್ಷಣದ ಕ್ಷಿಪ್ರಕ್ರಾಂತಿಯನ್ನು ಉಂಟುಮಾಡಿವೆ. ಶಿಕ್ಷಣ ಕ್ರಾಂತಿಯಿಂದ ಬಿಸಿಯೂಟ, ಬಟ್ಟೆ, ಪುಸ್ತಕ, ಎಲ್ಲವೂ ಉಚಿತವಾಗಿ ವಿತರಿಸಲಾಗುತ್ತದೆ. ಹದಿನಾಲ್ಕು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಕಡ್ಡಾಯ. ಪ್ರಾಥಮಿಕ ಶಿಕ್ಷಣ ಸಿಗಬೇಕು ಎಂಬುದು ಸರ್ಕಾರದ ಕಾಯ್ದೆಯಾಗಿದೆ. ಅಲೆಮಾರಿಗಳಾಗಿ ಒಂದು ಸ್ಥಿರ ನೆಲೆಯನ್ನು ಕಂಡುಕೊಂಡರೂ ಸಹ ಸರ್ಕಾರದ ಯೋಜನೆಗಳು ಇವರಿಗೆ ತಲುಪುತ್ತಿಲ್ಲ. ಅಜ್ಞಾನದ ಕೊರತೆಯಿಂದಗಿ ದಕ್ಕಲರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಅವರಿಗೆ ತಿಳುವಳಿಕೆ ಮೂಡಿಸುವ ಯತ್ನ ಮಾಡಬೇಕಾಗಿದೆ. ಹತ್ತನೇ ತರಗತಿ ಓದಿದವರು 4 ರಿಂದ5 ಜನ, ಪಿ.ಯು.ಸಿ. ಓದಿದವರು 2ರಿಂದ 3 ಜನ. ಪದವಿಧರರಂತೂ ಇಲ್ಲವೇ ಇಲ್ಲ. ಅನುಸೂಚಿತ ಜಾತಿಗೆ ಸೇರಿದ ದಕ್ಕಲರಿಗೆ ಸರ್ಕಾರದ ವಿವಿಧ ಸವಲತ್ತುಗಳಿವೆ. ಆದರೆ ಇವೆಲ್ಲವೂ ಅವರಿಗೆ ಸಿಗುತ್ತಿಲ್ಲ. ಒಟ್ಟಾರೆಯಾಗಿ ಶಿಕ್ಷಣವೆಂಬುದು ಇವರಿಗೆ ಕೈಗೆಟಕದ ಮಾಣಿಕ್ಯ.

> **ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಹಾಗೂ ಇನ್ನಿತರ ಪ್ರದೇಶದಿಂದ ಬಂದ ದಕ್ಕಲರು ಮುದಗಲ್ಲ ನಗರದಲ್ಲಿ ಸುಮರು ನೂರು ವರ್ಷಗಳಿಂದ ನೆಲೆಯೂರಿದ್ದಾರೆ. ನಿರಕ್ಷರಿಗಳಾದ ಮಹಿಳೆಯರು, ಪುರುಷರು ತಲಾಂತರದಿಂದ ಬಂದ ಆಚಾರ-ವಿಚಾರ-ಸಂಪ್ರದಾಯವನ್ನು ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ತಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ರೂಢಿಸಿಕೊಂಡಿದ್ದಾರೆ. ತಾವು ಮಾದಿಗರ ಮಕ್ಕಳು, ಮಾದಿಗರು ನಮ್ಮ ಗೌಡ್ರು ಎಂದು ಹೇಳುವ ದಕ್ಕಲರು ದಕ್ಷಬ್ರಹ್ಮ ತಮ್ಮ ಕುಲದೇವರೆಂದು ಹೇಳುತ್ತಾರೆ. ಇವರ ಕೇರಿಯಲ್ಲಿ ಸುಂಕಲಮ್ಮ, ದುರಗಮ್ಮ, ಮಾರಿ ದೇವರುಗಳಿವೆ. ಮಹಾನವಮಿಗಿಂತ ಮುಂಚೆ ಇಲ್ಲಿ ಪ್ರಾಣಿ ಬಲಿಕೊಡುತ್ತಾರೆ. ಅದೇ ಕೇರಿಯಲ್ಲಿ ಚನ್ನಬಸವೇಶ್ವರ ದೇವಸ್ಥಾನವೂ ಇದೆ.**

ನೈರ್ಮಲ್ಯತೆ ಮತ್ತು ದಕ್ಕಲರು :-

ಮುದಗಲ್ಲ ನಗರ ಪುರಸಭೆ ಹೊಂದಿದೆ. ಪ್ರತಿ ಹಂತದಲ್ಲಿಯೂ ದಕ್ಕಲರುಬೇಕು. ಆದರೆ ಇವರ ವಾರ್ಡ್‌ಗಳು ಅಭಿವೃದ್ಧಿಯಿಂದ ಮಾತ್ರ ಹಿಂದುಳಿದಿವೆ. ನಿರ್ಮಲ ಜೀವನದ ಪರಿಜ್ಞಾನವೂ ಇರದ ದಕ್ಕಲರು ಕೊಳೆಗೇರಿಯಲ್ಲಿಯೇ ಬದುಕುತ್ತಿದ್ದಾರೆ.

ದಕ್ಕಲರ, ಆಚಾರ-ವಿಚಾರ-ಸಂಪ್ರದಾಯ :-

ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಹಾಗೂ ಇನ್ನಿತರ ಪ್ರದೇಶದಿಂದ ಬಂದ ದಕ್ಕಲರು ಮುದಗಲ್ಲ ನಗರದಲ್ಲಿ ಸುಮರು ನೂರು ವರ್ಷಗಳಿಂದ ನೆಲೆಯೂರಿದ್ದಾರೆ. ನಿರಕ್ಷರಿಗಳಾದ ಮಹಿಳೆಯರು, ಪುರುಷರು ತಲಾಂತರದಿಂದ ಬಂದ ಆಚಾರ-ವಿಚಾರ-ಸಂಪ್ರದಾಯವನ್ನು ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ತಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ರೂಢಿಸಿಕೊಂಡಿದ್ದಾರೆ. ತಾವು ಮಾದಿಗರ ಮಕ್ಕಳು, ಮಾದಿಗರು ನಮ್ಮ ಗೌಡ್ರು ಎಂದು ಹೇಳುವ ದಕ್ಕಲರು ದಕ್ಷಬ್ರಹ್ಮ ತಮ್ಮ ಕುಲದೇವರೆಂದು ಹೇಳುತ್ತಾರೆ. ಇವರ ಕೇರಿಯಲ್ಲಿ ಸುಂಕಲಮ್ಮ, ದುರಗಮ್ಮ, ಮಾರಿ ದೇವರುಗಳಿವೆ. ಮಹಾನವಮಿಗಿಂತ ಮುಂಚೆ ಇಲ್ಲಿ ಪ್ರಾಣಿ ಬಲಿಕೊಡುತ್ತಾರೆ. ಅದೇ ಕೇರಿಯಲ್ಲಿ ಚನ್ನಬಸವೇಶ್ವರ ದೇವಸ್ಥಾನವೂ ಇದೆ. ಶ್ರಾವಣ ಮಾಸದಲ್ಲಿ ಒಂದು ವಾರ ಕಾಲ ಭಜನೆ ಮಾಡುತ್ತಾರೆ. ಪ್ರಸ್ತಾವನ್ನು (ಪ್ರಸಾದ) ನೆರವೇರಿಸುತ್ತಾರೆ. ಮೂಲ ಕಸುಬಿನಿಂದ ಪರಿವರ್ತನೆಯಾದರೂ ತಮ್ಮ ನಡೆ-ನುಡಿಯನ್ನು ಬದಲಾಯಿಸಿಕೊಂಡಿಲ್ಲ.

ಸಾಮಾನ್ಯವಾಗಿ ಎಲ್ಲಾ ವರ್ಗದವರಂತೆ ಇವರಲ್ಲೂ ಮದುವೆ ಏರ್ಪಾಟು ನಡೆಯುತ್ತದೆ. ಮದುವೆಯ ಸಂದರ್ಭದಲ್ಲಿ ಐನೋರು (ಸ್ವಾಮಿಗಳು) ಬೇಕೆಬೇಕೆಂದು ತಿಳಿಸುತ್ತಾರೆ. ಐನೋರು ಇಲ್ಲದೆ ಮದುವೆ-ಮುಂಜಿ ನಡೆಯಲಾರದು. ಮದುವೆಯ ಸಂದರ್ಭದಲ್ಲಿ ಇಳಿಸೀರೆ, ಅರಿಶಿಣ ಸೀರೆ, ನೀರಮನಿ ಸೀರೆ, ತಾಯಿ ಉಟಿಗೆ ಸೀರೆ, ಮೆರವಣಿಗೆ ಸೀರೆ ಹೀಗೆ ಒಟ್ಟು ಐದು ಸೀರೆಗಳು ಬೇಕು. ಸಾಲಾವಳಿಯಲ್ಲಿ ಗಂಡಿನ ಬೆಡಗ ಹೆಣ್ಣಿನ ಬೆಡಗ ಭಿನ್ನವಾಗಿರಬೇಕು. ಇನ್ನೂ ತೆರವು (ವಧುದಕ್ಷಿಣೆ) ಪದ್ಧತಿ ಇದೆ. ಸುರಿಗೆ ಸುತ್ತಲು ಐದು ಮಂದಿ ಮುತ್ತೈದೆಯರು ಇರುತ್ತಾರೆ. ಕಾಲ ಬದಲಾಗಿದೆ, ಈಗೇನೋ ಒಂದೆರಡು ದಿನದಲ್ಲಿ ಮದುವೆ ಮುಗಿಯುತ್ತದೆ. ಹಿಂದಿನ ಸಂಪ್ರದಾಯ ಆಚರಣೆಗಳು ಇಂದಿಲ್ಲ. ಹಿಂದೆ ಹದಿನೈದು ದಿನಗಳ ಕಾಲ ಮದುವೆ ನಡೆಯುತ್ತಿತ್ತು. ತಾಳಿ ಮುಗಿದ ನಂತರ ಬಂದ ಬೀಗರಿಗೆಲ್ಲಾ ಕುಕ್ಕಡೆ ಬೇಟೆ (ಬಾಡಾ) ಕೊಡುವ ಪದ್ಧತಿ ಇತ್ತು. ಕುಕ್ಕಡೆ ಬೇಟೆ-ಮದುವೆಗೆ ಬಂದ ಎಲ್ಲಾ ಬಂಧುಗಳಿಗೆ ಮದುವೆಯಾದ ಮರುದಿನ 'ಬಾಡ' ಊಟ ನೀಡುವ ಪದ್ಧತಿಯಿತ್ತು.

ಬಾಲ್ಯವಿವಾಹ ಪದ್ಧತಿ ರೂಢಿಯಲ್ಲಿದ್ದ ಕಾಲದಲ್ಲಿ ಮದುವೆಯ ಹೆಣ್ಣು ಮೈ ನೆರೆತಾಗ ಮನೆಯವರು ಬಂಗಾರ, ಸೀರೆ ಕೊಟ್ಟು ಹೂ ಮುಡಿಸಿ ಕೊಡುವ ಸಂಪ್ರದಾಯವಿತ್ತು. ಇಲ್ಲಿನ ದಕ್ಕಲರು ಬೆಳಗಾವಿ ಜಿಲ್ಲೆಯ ರಾಮದುರ್ಗ, ಕೊಡೆಕಲ್, ಬಾಗಲಕೋಟ ಜಿಲ್ಲೆಯ ಮಹಾಲಿಂಗಪೂರ, ಕನ್ನೂರು, ಕೊಪ್ಪಳ ಜಿಲ್ಲೆಯ ಸಿದ್ದಾಪೂರ, ಗುಲಬರ್ಗಾ ಜಿಲ್ಲೆಯ ಶಿರವಾಳ, ಚಿಕ್ಕಮಗಳಗೇರಿ ಹಾಗೂ ಬಾದಾಮಿ ತಾಲ್ಲೂಕಿನ ಇನ್ನಿತರ ಕಡೆಯಲ್ಲಿ ಸಂಬಂಧಗಳನ್ನು ಬೆಳೆಸಿದ್ದಾರೆ.

ದಕ್ಕಲರ ಮಾತೃಭಾಷೆ ತೆಲುಗು. ಮನೆಮಂದಿಯಲ್ಲಾ

ತಮ್ಮ ಮಾತೃ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಭಾರತೀಯ ವರ್ಣ ವ್ಯವಸ್ಥೆಯಲ್ಲಿ ಶೂದ್ರರಾಗಿ ಬದುಕುತ್ತಿರುವ ಇವರು ಮೇಲ್ಜಾತಿಯ ಜನರಿಂದ ದೂರವಿರುತ್ತಾರೆ. ಇತರೆ ಮೇಲ್ಜಾತಿಯವರ ಮನೆ-ಮಠಗಳ ಸಮೀಪಕ್ಕೂ ಹೋಗುವ ಹಕ್ಕು ಇವರಿಗಿಲ್ಲ. ಊರಿನ ಗುಡಿಕಲ್ಲು (ಬುಡೆ ಕಲ್ಲು) ದಾಟಿ ಊರಿನ ಒಳಗೆ ಬರುವಂತಿಲ್ಲ. ಹಾಗೂ ತಮ್ಮ ಬಾಂಧವರೆಂದು ಹೇಳಿಕೊಳ್ಳುವ ಮಾದಿಗರ ಕೇರಿಗಳಿಗೂ ಹೋಗುವಂತಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿ ಬದುಕುತ್ತಿರುವ ದಕ್ಕಲರು ಮಾದಿಗರ ಮನೆಗಳಿಂದಲ್ಲದೆ ಬೇರವ ಜಾತಿಯವರಿಂದಲೂ ಊಟೋಪಚಾರ ಪಡೆಯುವಂತಿಲ್ಲ ಎಂದು ವಿಚಿತ್ರ ನಿಯಮಗಳು ಇವರಲ್ಲಿ ಕಂಡುಬಂದರೂ ಕರ್ನಾಟಕ ಸಾಮಾಜಿಕ ಸಂದರ್ಭದಲ್ಲಿ ಇವರು ಪರಿಶಿಷ್ಟ ಜಾತಿಗಳಲ್ಲಿ ಅತೀ ಕೇಳಸ್ತರದಲ್ಲಿವರೆಂದು ಗುರುತಿಸಲ್ಪಟ್ಟಿದ್ದಾರೆ.[8] ಹೀಗೆ ಕೆಳಸ್ತರದಲ್ಲಿ ಜೀವನ ನಡೆಸುತ್ತಿರುವ ದಕ್ಕಲರು ಈಚಲು ಪೊರಕೆಯಿಂದ ಚಾಪೆ ಹೆಣೆದು ಅವುಗಳನ್ನು ಮಾರಾಟಮಾಡಿ ತಮ್ಮ ಜೀವನೋಪಾಯಕ್ಕೆ ಬಂದ ಹಣವನ್ನು ಬಳಸಿಕೊಳ್ಳುತ್ತಾರೆ.

ಸ್ವಾವಲಂಬಿಗಳಾಗಲು ಯತ್ನಿಸುತ್ತಿರುವ ದಕ್ಕಲರು ಇಂದಿಗೂ ತಮ್ಮ ಮೂಲವೃತ್ತಿ ಭಿಕ್ಷೆ ಬೇಡುವುದನ್ನು ಮರೆತಿಲ್ಲ. ಕಾಲ ಬದಲಾಗಿದೆ ತಮ್ಮ ಮೂಲ ವೃತ್ತಿಯನ್ನೇ ಅವಲಂಬಿಸಿ ಕುಳಿತರೆ ಬದುಕು ಸಾಗಿಸುವುದು ಕಷ್ಟವೆನಿಸುತ್ತದೆ. ಹೀಗಾಗಿ ಪರ್ಯಾಯ ಕೆಲಸಗಳನ್ನು ಆರಿಸಿ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಬೆಂಗಳೂರು, ಗೋವಾ, ಮುಂಬೈ, ಪೂಣೆಯಂತಹ ದೊಡ್ಡ ದೊಡ್ಡ ನಗರಗಳಿಗೆ ಕೈಗೆ ಕೆಲಸವನ್ನರಿಸಿ ಹೋಗುತ್ತಾರೆ. ಹಬ್ಬ ಹರಿದಿನಗಳಲ್ಲಿ ಮತ್ತೆ ವಲಸೆ ಹೋದ ಎಲ್ಲರೂ ಒಂದೆಡೆ ಸೇರುತ್ತಾರೆ.

ಮುದಗಲ್ಲಿನಲ್ಲಿ ವಾಸವಿರುವ ದಕ್ಕಲರು ಒಂದೊಂದು ಕುಟುಂಗಳಿಗೆ ಇಂತಿಷ್ಟು ಜನರಿಗೆ ಇಂತಿಷ್ಟು ಹಳ್ಳಿಗಳೆಂದು ಹಂಚಿಕೊಂಡಿದ್ದಾರೆ. ಸುಗ್ಗಿಯ ದಿನಗಳಲ್ಲಿ ತಾವು ಗೌಡರೆಂದೇ ಸಂಭೋಧಿಸುವ ಮಾದಿಗರಿಂದ ಭಿಕ್ಷೆಯನ್ನು ಪಡೆಯುತ್ತಾರೆ. ಭೀಮಪ್ಪ, ಲಕ್ಷ್ಮಣ ಎನ್ನುವ 65 ವರ್ಷದ ವಯೋವೃದ್ಧ ತಮ್ಮ ಮೂಲಕಸಬನ್ನು ಬಿಟ್ಟು ಕೊಡಲು ತಯಾರಿಲ್ಲ. ಮಾದಿಗ ಗೌಡರ ಅನ್ನದ, ನೀರಿನ ಋಣ ನಮ್ಮ ಮೇಲೆ ಇದೆ ಎಂದು ಸ್ಮರಿಸುತ್ತಾನೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕೋಣಚಪ್ಪಳಿ, ದಂಡಂಬಳಿ, ನಗರಗುಂಡ, ಅರಿಶಿಣಗಿ, ಬೆಣಕಲ್ಲು, ಗೋಪಾಳಪುರ ಮುಂತಾದ ಹಳ್ಳಿಗಳು ತನ್ನ ಪಾಲಿಗೆ ಬಂದಿದ್ದು. ನಮ್ಮ ಹಿರಿಯರು ನಮಗೆ ನೀಡಿದ ಬಳುವಳಿಯಾಗಿದೆ. ಸುಗ್ಗಿಯ ಕಾಲದಲ್ಲಿ ಮಾದಿಗರ ಕೇರಿಯ ಹತ್ತಿರ ಬಿಡಾರ ಹಾಕಿ 'ಅಮ್ಮ ಹಸಿವು' ಎಂದು ಕೂಗಿ ಅನ್ನ, ನೀರನ್ನು ಪಡೆಯುತ್ತೇವೆ ಕೊಡದಿದ್ದರೆ ಅಧಿಕಾರ ಚಲಾಯಿಸುತ್ತೇವೆ. ಅವರ ಮಕ್ಕಳು ನಾವು ಎನ್ನುತ್ತಾರೆ, ಅಧಿಕಾರ ಚಲಾಯಿಸಿ ಒತ್ತಾಯದಿಂದ ದವಸಧಾನ್ಯ, ಹಣವನ್ನು ಪಡೆಯುತ್ತೇವೆ, ಕೊಡದಿದ್ದರೆ ಸಿಟ್ಟಾಗುತ್ತೇವೆ. ಹೀಗೆ ಪ್ರತಿ ಮಾದಿಗರ ಕುಟುಂಬಕ್ಕೆ ಇಂತಿಷ್ಟು ಹಣವೆಂದು ಚಂದಾ ರೂಪದಲ್ಲಿ ಪಡೆಯುತ್ತೇವೆ. ಮುದಗಲ್ಲ ಸುತ್ತಲಿನ ಹಳ್ಳಿಗಳನ್ನು ಇವರು ಹಂಚಿಕೊಂಡಿದ್ದಾರೆ.

ಭಾರತದ ಸಮಾಜದ ಪ್ರಧಾನ ಲಕ್ಷಣವೆಂದರೆ ಜಾತಿ ವ್ಯವಸ್ಥೆ. ಜಾತಿ ವ್ಯವಸ್ಥೆಯ ಮುಖ್ಯ ಉದ್ದೇಶ ಸಮಾಜದ ಒಟ್ಟು ರಾಜಕೀಯಾರ್ಥಿಕ ಸ್ಥಿತಿಯನ್ನು ಸಾಮಾಜಿಕ ಶ್ರೇಣಿಕರಣದ ಮೂಲಕ ಸಮರ್ಥಿಸುವುದು. ಬಹುಸಂಖ್ಯಾತ ದುಡಿವ ವರ್ಗದ ಜನರ ಶ್ರಮವನ್ನು ಬಂಡವಾಳವನ್ನಾಗಿಸಿಕೊಂಡು ಬದುಕುವ ಅಲ್ಪ ಸಂಖ್ಯಾತ ಆಳುವ ವರ್ಗ ಯಾವುದೋ ಮಾಯೆಯ ಮೂಲಕ ಅಸಮಾನತೆಯನ್ನು ಚಿರಂತನಗೊಳಿಸಲು ಶ್ರೇಣೀಕರಣವನ್ನು ಸಮರ್ಥಿಸುವ ಪ್ರಯತ್ನಗಳು ಭಾರತದ ಸಮಾಜದ ಚರಿತ್ರೆಯಲ್ಲಿ ನಿರಂತರವಾಗಿ ನಡೆದಿದೆ. ಜಾತಿ ವ್ಯವಸ್ಥೆ ದುಡಿವವರ ಮತ್ತು ದುಡಿಸಿಕೊಳ್ಳುವವರ ಮಧ್ಯೆ ಒಂದು ಅಸಹಜ ಸಾಮಾಜಿಕ ಸಂಬಂಧವಾಗಿ ಏರ್ಪಟ್ಟಿತು.[9]

> **ದಕ್ಕಲರ ಮಾತೃಭಾಷೆ ತೆಲಗು. ಮನೆ ಮಂದಿಯಲ್ಲಾ ತಮ್ಮ ಮಾತೃ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಭಾರತೀಯ ವರ್ಣ ವ್ಯವಸ್ಥೆಯಲ್ಲಿ ಶೂದ್ರರಾಗಿ ಬದುಕುತ್ತಿರುವ ಇವರು ಮೇಲ್ಜಾತಿಯ ಜನರಿಂದ ದೂರವಿರುತ್ತಾರೆ. ಇತರೆ ಮೇಲ್ಜಾತಿಯವರ ಮನೆ-ಮಠಗಳ ಸಮೀಪಕ್ಕೂ ಹೋಗುವ ಹಕ್ಕು ಇವರಿಗಿಲ್ಲ. ಊರಿನ ಗುಡಿಕಲ್ಲು ದಾಟಿ ಊರಿನ ಒಳಗೆ ಬರುವಂತಿಲ್ಲ. ಹಾಗೂ ತಮ್ಮ ಬಾಂಧವರೆಂದು ಹೇಳಿಕೊಳ್ಳುವ ಮಾದಿಗರ ಕೇರಿಗಳಿಗೂ ಹೋಗುವಂತಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿ ಬದುಕುತ್ತಿರುವ ದಕ್ಕಲರು ಮಾದಿಗರ ಮನೆಗಳಿಂದಲ್ಲದೆ ಬೇರವ ಜಾತಿಯವರಿಂದಲೂ ಊಟೋಪಚಾರ ಪಡೆಯುವಂತಿಲ್ಲ**

ದಕ್ಕಲರ ಬೆಡಗಗಳು :-

ಪ್ರತಿಯೊಂದು ಜಾತಿಯಲ್ಲಿ ಕಂಡುಬರುವಂತೆ ಇವರಲ್ಲಿಯೂ ಬೆಡಗಗಳಿವೆ. ಈ ಬೆಡಗಗಳನ್ವಯ ಸಂಬಂಧಗಳು ಏರ್ಪಡುತ್ತವೆ. ಬೆಡಗಗಳು ಒಂದೆ ತೆರನಾಗಿದ್ದರೆ ಹೆಣ್ಣು ತೆಗೆದುಕೊಳ್ಳಲು ಬರುವದಿಲ್ಲ. ಬೆಡಗಗಳು ಬೇರೆ ಬೇರೆಯಾದಾಗ ಸಂಬಂಧಗಳನ್ನು ಬೆಳೆಸಬಹುದು. ದಕ್ಕಲರಲ್ಲಿ ಒಟ್ಟು ಹದಿಮೂರು ಬೆಡಗಗಳಿವೆ.

1. ಕಂಬಳೇರು (ಕಟ್ಟಿಮನಿ)
2. ಐಹೊಳೇರು
3. ಕೆಂಗೇರ
4. ಟಗರಿನೋರು
5. ಮ್ಯಾಕಲರು (ತೆಲಗು)
6. ಡಾಕೂರೋರ
7. ಬಾಣಲೋರ
8. ನೆಲ್ಲಪೋಗಲರ
9. ಕಸ್ತೂರಿಯವರು
10. ಕಮರಿಯವರು
11. ಇರಿಗವರು
12. ಗಾಯಕವಾಡ
13. ಡವಾಣಿರು.

ಇಂದು ಸಾಮಾನ್ಯ ಜನರಂತೆಯೇ ಬದುಕುತ್ತಿರುವ ದಕ್ಕಲರು ಆಚಾರ-ವಿಚಾರಗಳಲ್ಲಿ ಭಿನ್ನವಾದ ಸಂಸ್ಕೃತಿಯೊಂದನ್ನು ಹೊಂದಿದ್ದಾರೆ. ಭಾಷೆಯಲ್ಲಿಯೂ ಇವರು ಪ್ರವೀಣರು ದ್ವಿಭಾಷಾ ಬಲ್ಲವರು. ಗುಪ್ತ ಭಾಷೆಯನ್ನು ತಿಳಿದವರು. ದಕ್ಕಲರು ಜಾಂಬುಮುನಿಯ ಶಾಪದಿಂದ ಮಾದಿಗರ ಮನೆಯಲ್ಲಿ ಭಿಕ್ಷೆ ಬೇಡುವಂತಾದದ್ದು, ಪೌರಾಣಿಕ ಯುಗದ ಆ ನಂಬಿಕೆ ಇಂದಿಗೂ ಅವರಲ್ಲಿ ಬೇರೂರಿದೆ. ತಾವೂ ಎಷ್ಟೇ ಎತ್ತರಕ್ಕೆ ಬೆಳೆದರೂ ಮಾದಿಗರ ಅನ್ನದ ಋಣದ ಮಾತು ಅವರ ನಾಲಿಗೆಯಿಂದ ಹೊರಬರುತ್ತಲೇ ಇರುತ್ತದೆ. ಮಾನವೀಯ ಸಂಬಂಧಗಳು ಗಾಢವಾದವು. ಅಲೆಮಾರಿಗಳಾದ ದಕ್ಕಲರು ಇನ್ನೂ ಬದಲಾಗಬೇಕಿದೆ. ಸರ್ಕಾರದ ಯೋಜನೆಗಳು ಇವರಿಗೆ ನೇರವಾಗಿ ತಲುಪಬೇಕು. ಅಲೆಮಾರಿಗಳಲ್ಲಿ ವಿಶಿಷ್ಟ ಸಂಪ್ರದಾಯ, ಆಚರಣೆಯನ್ನು ಇವರು ಸಾಂಸ್ಕೃತಿಕ ಕ್ಷೇತ್ರದ ರಾಯಭಾರಿಗಳು.

ಅಂತಿಮವಾಗಿ, ಅಲೆಮಾರಿಗಳಾಗಿ ಸಂಚರಿಸುವ ದಕ್ಕಲರು ಸಾಮಾಜಿಕ ವ್ಯವಸ್ಥೆಯಲ್ಲಿ ಕಟ್ಟಕಡೆಯವರಾಗಿ ಜೀವನ ಸಾಗಿಸುತ್ತಿದ್ದಾರೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಕೊನೆಯವಾಗಿರುವ ಇವರು, ಸಾಮಾಜಿಕನ್ಯಾಯದಿಂದ ವಂಚಿತರಾಗಿದ್ದಾರೆ. ಅನುಸೂಚಿತ ಜಾತಿಯಲ್ಲಿ ಬರುವ ದಕ್ಕಲರು ಮಾದಿಗರ ಉಪಪಂಗಡದವರು. ಪ್ರಸ್ತುತ ಸಂವಿಧಾನ ಬದ್ಧವಾಗಿ ಮೀಸಲಾತಿಗೆ ಒಳಪಟ್ಟ ಪ.ಜಾತಿಯ ಮಾದಿಗರು ಒಳಮಿಸಲಾತಿಗಾಗಿ ದಶಕದಿಂದಲೂ ಹೋರಾಟ ನಡೆಸುತ್ತಿದ್ದಾರೆ. ಮಾದಿಗರ ಉಪ ಪಂಗಡವಾದ ದಕ್ಕಲರು ನ್ಯಾಯಯುತವಾಗಿ ಒಳಮೀಸಲಾತಿಗೆ ಒಳಪಡಬೇಕಾಗಿದೆ. ಸಂವಿಧಾನದಲ್ಲಿ ತಿದ್ದುಪಡಿ ತಂದು ಅತೀ ಕೆಳಸ್ತರದಲ್ಲಿ ಬದುಕುತ್ತಿರುವ ದಕ್ಕಲರನ್ನು ಅನುಸೂಚಿತ ಜಾತಿಯಲ್ಲಿ ಗುರುತಿಸಿ, ಒಳಮೀಸಲಾತಿ ಜಾರಿಗೊಳಿಸಿದ್ದಲ್ಲಿ ಅವರೂ ಸಹ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಆಂತರಿಕವಾಗಿ ಆಧುನಿಕ ಯುಗದಲ್ಲಿ ದಕ್ಕಲರು ತಾವು ಕೀಳೆಂಬುದನ್ನು ಮೈಗಂಟಿಸಿಕೊಂಡು ನರಳುತ್ತಿರುವ ಅವರು ಅನುಸರಿಸುತ್ತಿರುವ ತಮ್ಮ ಸಾಂಸ್ಕೃತಿಕ ಬದುಕನ್ನು ಹೊಸ ಆಯಾಮದಲ್ಲಿ ನಿರೂಪಿಸಿಕೊಳ್ಳಬೇಕಾಗಿದೆ. ಪ್ರಸ್ತುತ ಭಾರತೀಯ ಬದುಕು ಐಡೆಂಟಿಟಿಯ ಮೂಲಕ ತಾರತಮ್ಯವನ್ನು ಅನುಭವಿಸುತ್ತದೆ. ಆದರೆ ಈ ಐಡೆಂಟಿಟಿಯ ರಾಜಕಾರಣದಲ್ಲಿ ಆರೋಗ್ಯಕರ ಕೊಳು-ಕೊಡಿಗೆ ಇದ್ದಲ್ಲಿ ಅಲ್ಲಿ ನ್ಯಾಯಯುತ ಅವಕಾಶಗಳು ಪ್ರಜಾಪ್ರಭುತ್ವದಲ್ಲಿ ಸಾಧ್ಯವಾಗುತ್ತದೆ.

ಆಕರ ಗ್ರಂಥಗಳು :

1. ದಕ್ಕಲರ ಸಂಸ್ಕೃತಿ – ಚಲುವರಾಜ, ಕರ್ನಟಕ ಸಾಹಿತ್ಯ ಅಕಾಡೆಮಿ
2. ಅಲೆಮಾರಿಗಳ ಸ್ಥಿತಿಗತಿ– ಸಂಪಾದಕರು –ಡಾ॥ ಸ.ಚಿ. ರಮೇಶ, ಪ್ರಸಾರಂಗ-ಕನ್ನಡ ವಿಶ್ವವಿದ್ಯಾಲಯ ಹಂಪಿ
3. ಕರ್ನಾಟಕ ಜನಪದ ಕಲೆಗಳ ಕೋಶ– ಸಂಪಾದಕರು – ಹಿ.ಚಿ. ಬೋರಲಿಂಗಯ್ಯ
4. ಮ್ಯಾಸ್ತೀಕರ ಸಂಸ್ಕೃತಿ– ಲಕ್ಷ್ಮೀಪತಿ ಕೋಲಾರ, ಕರ್ನಾ ಟಕ ಸಾಹಿತ್ಯ ಅಕಾಡೆಮಿ
5. ಡಾ॥ ಹೆಚ್.ಟಿ.ಪೋತೆ – ಹೈದ್ರಾಬಾದ್ ಕರ್ನಾ ಟಕದ ಜನಪದ ಪ್ರದರ್ಶನ. ಕಲೆಗಳು: ''ಅಂಬು ಪ್ರಕಾಶನ' ಸ್ನಾತಕೋತ್ತ ಕೇಂದ್ರ, ರಾಯಚೂರು
6. 'ಗಿರಿಜನ ಸಿರಿ' ಡಾ॥ ಪಿ.ಕೆ.ಖಂಡೋಬಾ ಅಭಿನಂದನ ಸಂಪುಟ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ
7. ಸಂಶೋಧನೆ: ಸಂಪಾದಕರು ಲಕ್ಷ್ಮಣ ತೆಲಗಾವಿ
8. ಸುಡುಗಾಡು ಸಿದ್ದರು ಸಂಸ್ಕೃತಿ: ಖಂಡೋಬಾ ಪಿ.ಕೆ. ಕರ್ನಾಟಕ ಸಾಹಿತ್ಯ ಅಕಾಡೆಮಿ.

ಕೆಲವು ಗೊಂದಲಗಳು:

ಬಹು ಭಾಷಿಕತೆ ಮತ್ತು ಶಿಕ್ಷಣ

ಮೇಟಿ ಮಲ್ಲಿಕಾರ್ಜುನ

ಕರ್ನಾಟಕದಲ್ಲಿ ಎಷ್ಟೋ ಭಾಷೆಗಳು ಬಳಕೆಯಲ್ಲಿವೆ. ಈ ಭಾಷಾ ಬಳಕೆಯು ಅತ್ಯಂತ ಸೀಮಿತ ವಲಯಗಳಿಗೆ ಮಾತ್ರ ಮೀಸಲಾಗಿದೆ. ಇದಕ್ಕೆ ಮುಖ್ಯ ಕಾರಣ ಆ ಭಾಷಿಕರಲ್ಲ ಅನ್ನುವುದು ಗಮನಾರ್ಹ. ಹಾಗಾದರೆ, ಯಾರು ಇದಕ್ಕೆ ಹೊಣೆಗಾರರು? ನಮ್ಮ ಭಾಷಾನೀತಿ ಹಾಗೂ ಯೋಜನೆಗಳೇ ಈ ಸನ್ನಿವೇಶಕ್ಕೆ ಕಾರಣ. ಅಂದರೆ, ಇದಕ್ಕೆ ಸರಕಾರವೇ ಹೊಣೆ ಅನ್ನುವುದು ಸ್ಪಷ್ಟ. ಕರ್ನಾಟಕದಲ್ಲಿ ಶತಮಾನಗಳಿಂದ ನೆಲೆ ನಿಂತಿರುವ ತುಳು, ಕೊಡವ, ಕೊಂಕಣಿ, ಬ್ಯಾರಿ, ಉರ್ದು, ಕೊಳಗೇರಿ ಭಾಷೆಗಳು ಹಾಗೂ ಆದಿವಾಸಿಗಳ ಭಾಷೆ ಮತ್ತು ಭಾಷಿಕರ ಸಾಂಸ್ಕೃತಿಕ-ಶೈಕ್ಷಣಿಕ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಮ್ಮ ಭಾಷಾ ನೀತಿ ಹಾಗೂ ಯೋಜನೆಗಳು ರೂಪುಗೊಂಡ ಬಗ್ಗೆ ಯಾವುದೇ ಪುರಾವೆಗಳು ಇಲ್ಲ. ಇದಕ್ಕೆ ಭಾಷಿಕ ಅಧಿಕಾರ ಮತ್ತು ಧೋರಣೆಗಳೇ ಕಾರಣ.

ಇಂದು ಶಿಕ್ಷಣ ಕ್ಷೇತ್ರ ಸಮಸ್ಯೆಗಳ ಆಗರವೇ ಆಗಿದೆ. ಈ ಸಮಸ್ಯೆಗಳಿಗೆ ಇತ್ತೀಚಿನ ತಿಳುವಳಿಕೆ ಪ್ರಕಾರ ಜಾಗತೀಕರಣವೇ ಕಾರಣ ಅನ್ನುವ ವಾದಗಳು ಮುಂಚೂಣಿಗೆ ಬಂದಿವೆ. ಇದು ಅಕ್ಷರಶ ಸತ್ಯವೆಂದು ಒಪ್ಪಿಕೊಳ್ಳುವುದು ಅಸಾಧ್ಯವಾಗಿದೆ. ಭಾರತದ ಸಂದರ್ಭಕ್ಕೆ ಸೀಮಿತಗೊಳಿಸಿ ಚರ್ಚಿಸಿದರೆ ಇವತ್ತಿನ ಶಿಕ್ಷಣ ಎದುರಿಸುತ್ತಿರವ ಸಮಸ್ಯೆಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಬಹುದು. ಒಂದೇ ಪಟ್ಟಿನಲ್ಲಿ ಆ ಎಲ್ಲ ಸಮಸ್ಯೆಗಳನ್ನು ಕುರಿತು ಚರ್ಚಿಸುವುದು ಅಸಾಧ್ಯವಾದುದು. ಶಿಕ್ಷಣದ ಇವತ್ತಿನ ಈ ಎಲ್ಲ ಸವಾಲು ಹಾಗೂ ಸಮಸ್ಯೆಗಳಿಗೆ ನಮ್ಮ ಶಿಕ್ಷಣ ನೀತಿಗಳು, ಆ ಕುರಿತ ಧೋರಣೆಗಳೇ ಕಾರಣ ಎನ್ನುವುದು ಗಮನಾರ್ಹ.

ವಸಾಹತುಶಾಹಿ ಪ್ರಭುತ್ವವು ರೂಪಿಸಿದ ಶೈಕ್ಷಣಿಕ ನೀತಿ, ಯೋಜನೆ ಹಾಗೂ ಪಠ್ಯಕ್ರಮ ಮಾದರಿಗಳ ಯಥೇಚ್ಛ ಮುಂದುವರೆಕೆಯೂ ಇವತ್ತಿನ ಶಿಕ್ಷಣದ ಈ ಸ್ಥಿತಿಗೆ ಕಾರಣವಾಗಿದೆ. ಜಾಗತೀಕರಣ ಪ್ರಕ್ರಿಯೆಯು ಸೃಷ್ಟಿಸಿದ ಆರ್ಥಿಕ ಮೂಲದ ಬೇಡಿಕೆಗಳು ಕಾರಣೀಭೂತವಾಗಿವೆ. ಹಾಗಾಗಿ, ಶೈಕ್ಷಣಿಕ ನೀತಿ, ಯೋಜನೆ ಹಾಗೂ ಪಠ್ಯಕ್ರಮಗಳನ್ನು ಪುನರ್ರೂಪಿ ಸುವ ಮಾದರಿಗಳು ಮತ್ತೇ ಬಂಡವಾಳಶಾಹಿ ಮಾರುಕಟ್ಟೆಗೆ ಅನುಗುಣವಾಗಿ ಹೊರಹೊಮ್ಮುತ್ತಿವೆ. ನಿಜ, ಆದರೆ ಇದು ಕೂಡ ಅರ್ಧ ಸತ್ಯವೇ ಹೊರತು ಪೂರ್ಣಸತ್ಯವಲ್ಲ. ಶಿಕ್ಷಣ ಕ್ಷೇತ್ರವು ಏಕಮುಖಿ ಪ್ರಕ್ರಿಯೆ ಅಲ್ಲ. ಇದು ಬಹುಮುಖಿಯಾದುದು. ಇಲ್ಲಿ ಸಾಮಾಜಿಕ-ರಾಜಕೀಯ ಹಾಗೂ ಭಾಷಿಕ ಆಯಾಮಗಳನ್ನು ಒಳಗೊಂಡು ಚರ್ಚಿಸುವ ಅಗತ್ಯವಿದೆ. ಈ ಟಿಪ್ಪಣಿ ಶಿಕ್ಷಣ ಹಾಗೂ ಭಾಷೆಯ ನಡುವಿನ ಕೆಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ. ಶಿಕ್ಷಣ ಸಂದರ್ಭದಲ್ಲಿ ಭಾಷೆಯ ಪಾತ್ರ ಅಗಾಧವಾದುದು ಎನ್ನುವುದನ್ನು ಯಾರು ಅಲ್ಲಗಳೆಯಲಾರರು.

ಕರ್ನಾಟಕದಲ್ಲಿ ಎಷ್ಟೋ ಭಾಷೆಗಳು ಬಳಕೆಯಲ್ಲಿವೆ. ಈ ಭಾಷಾ ಬಳಕೆಯು ಅತ್ಯಂತ ಸೀಮಿತ ವಲಯಗಳಿಗೆ ಮಾತ್ರ ಮೀಸಲಾಗಿದೆ. ಇದಕ್ಕೆ ಮುಖ್ಯ ಕಾರಣ ಆ ಭಾಷಿಕರಲ್ಲ ಅನ್ನುವುದು ಗಮನಾರ್ಹ. ಹಾಗಾದರೆ, ಯಾರು ಇದಕ್ಕೆ ಹೊಣೆಗಾರರು? ನಮ್ಮ ಭಾಷಾನೀತಿ ಹಾಗೂ ಯೋಜನೆಗಳೇ ಈ ಸನ್ನಿವೇಶಕ್ಕೆ ಕಾರಣ. ಅಂದರೆ, ಇದಕ್ಕೆ ಸರಕಾರವೇ ಹೊಣೆ ಅನ್ನುವುದು ಸ್ಪಷ್ಟ. ಕರ್ನಾಟಕದಲ್ಲಿ ಶತಮಾನಗಳಿಂದ ನೆಲೆ ನಿಂತಿರುವ ತುಳು, ಕೊಡವ, ಕೊಂಕಣಿ, ಬ್ಯಾರಿ, ಉರ್ದು, ಕೊಳಗೇರಿ ಭಾಷೆಗಳು ಹಾಗೂ ಆದಿವಾಸಿಗಳ ಭಾಷೆ ಮತ್ತು ಭಾಷಿಕರ ಸಾಂಸ್ಕೃತಿಕ-ಶೈಕ್ಷಣಿಕ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಮ್ಮ ಭಾಷಾನೀತಿ ಹಾಗೂ ಯೋಜನೆಗಳು ರೂಪಗೊಂಡ ಬಗ್ಗೆ ಯಾವುದೇ ಪುರಾವೆಗಳು ಇಲ್ಲ. ಇದಕ್ಕೆ ಭಾಷಿಕ ಅಧಿಕಾರ ಮತ್ತು ಧೋರಣೆಗಳೇ ಕಾರಣ

ಪ್ರಸ್ತುತ ಸಂದರ್ಭದಲ್ಲಿ ಭಾಷಾ ಹಕ್ಕುಗಳು ಕುರಿತ ಜಾಗೃತಿ ಬಹಳ ಪ್ರಮುಖವಾದದ್ದು. ಕಾರಣವೆನಂದರೆ, ಈ ಭಾಷಿಕ ಹಕ್ಕು ಗಳ ಅಸ್ತಿತ್ವವು ಈ ಜಗತ್ತಿನ ದರ್ಬಲ ಭಾಷೆ ಹಾಗೂ ವರ್ಗಗಳ ಮೇಲೆ ನಡೆದ ಅನ್ಯಾಯ ಅಥವಾ ಶೋಷಣೆಯ ನಿನ್ನೆ ಹಾಗೂ ಇಂದುಗಳ ಇತಿಹಾಸವನ್ನು ಪ್ರಕಟಿಸುತ್ತದೆ. ಇಂತಹ ಸಂದರ್ಭದಲ್ಲಿ ಬುದ್ಧಿಜೀವಿಗಳ ಆದ್ಯ ಕರ್ತವ್ಯವೆನಂದರೆ ಇಂತಹ ಸಾಮಾಜಿಕ ಸನ್ನಿ ವೇಶಗಳನ್ನು ಬಹಳ ಸೂಕ್ಷ್ಮವಾಗಿ ಪರಿಭಾವಿಸಿ, ಭಾಷಿಕ ಹಕ್ಕುಗಳ ಸ್ವರೂಪ ಹಾಗೂ ಅವುಗಳ ಪರಿಣಾಮಗಳನ್ನು ಕುರಿತು ಶೋಧಿಸಬೇಕಾಗಿದೆ. ಈ ಶೋಧನೆಯು ಪ್ರತಿ ನಾಗರಿಕನ ಭಾಷಿಕ ಪ್ರಜ್ಞೆಯನ್ನು ವಿಸ್ತರಿಸುವ ಕ್ರಮವೂ ಆಗಬೇಕಾದ ಅಗತ್ಯವಿದೆ.

ಇಂದು ಭಾಷಿಕ ಹಕ್ಕುಗಳು ಭಾಷೆಯ ಬಳಕೆ ಮತ್ತು ಅದರ ಸ್ಥಾನಮಾನವನ್ನಾಧರಸಿ ನಿರ್ಧಾರಗೊಳ್ಳುತ್ತವೆ. ಭಾರತ ಸಂವಿಧಾನವು ಮಾತೃ ಭಾಷೆಯಲ್ಲಿ ಅಥವಾ ಪ್ರತಿಯೊಬ್ಬ ಪ್ರಜೆ ತಾನು ಇಚ್ಛಿಸಿದ ಭಾಷೆ

ಯಲ್ಲಿ ಶಿಕ್ಷಣ ಪಡೆಯುವ ಹಕ್ಕನ್ನು ಒದಗಿಸಿದೆ. ಇವರು ತಮ್ಮ ಎಲ್ಲ ಹಂತದ ಶಿಕ್ಷಣವನ್ನು ತಮಗೆ ಬೇಕಾದ ಭಾಷೆಯಲ್ಲಿ ಪಡೆಯಬಹುದಾಗಿದೆ. ಆದರೆ, ಇದಕ್ಕೆ ಅಡ್ಡಿಯಾಗುವ ಮುಖ್ಯ ಸಮಸ್ಯೆ ಏನೆಂದರೆ, ಭಾರತದ ಪ್ರತಿ ನಾಗರಿಕ ಅಪೇಕ್ಷಿಸುವ ಭಾಷೆಯ ಮುಖೇನ ತನ್ನ ಶೈಕ್ಷಣಿಕ ಆಶೋತ್ತರಗಳನ್ನು ಪೂರೈಸಿಕೊಳ್ಳುವ ಅವಕಾಶವನ್ನು ನಮ್ಮ ಪ್ರಭುತ್ವ ಎಷ್ಟರಮಟ್ಟಿಗೆ ಒದಗಿಸಿದೆ ಅನ್ನುವುದೇ ಇವತ್ತಿನ ಸವಾಲು. ಸಂವಿಧಾನದ ಶಾಸನ ಅಥವಾ ಅನುಚ್ಛೇದದ ಪ್ರಕಾರ ಕಛೇರಿ ಆದೇಶಗಳು ಯಾವಾಗಲೂ ಸಾಮಾಜಿಕ ಅಸಮತೋಲನಗಳನ್ನು ಸರಿಪಡಿಸುವ ಸ್ವರೂಪದಲ್ಲಿ ಪ್ರತ್ಯಕ್ಷಗೊಳ್ಳುತ್ತವೆ. ಆದರೆ ಅವುಗಳ ಆಚರಣೆಯಲ್ಲಿ ತಾರತಮ್ಯದ ಧೋರಣೆಗಳು ಸಾಮಾಜಿಕ-ಶೈಕ್ಷಣಿಕ ಅನ್ಯಾಯದ ಯತಾ ಸ್ಥಿತಿಯನ್ನು ಹಾಗೇ ಕಾಪಾಡುವ ಕರ್ತವ್ಯಕ್ಕೆ ಯಾವತ್ತೂ ಚ್ಯುತಿ ಬಾರದಂತೆ ನಡೆಯುತ್ತವೆ.

ಭಾರತದಂತಹ ಬಹುಭಾಷಿಕ/ಸಾಂಸ್ಕೃತಿಕ ಸಂದರ್ಭದಲ್ಲಿ, ಬಹು/ದ್ವಿಭಾಷಿಕ ಶಿಕ್ಷಣ ನೀತಿಯನ್ನು ಸಾಮಾಜಿಕ-ಶೈಕ್ಷಣಿಕ ಕಂಟಕವೆಂದು ಪರಿಭಾವಿಸುವ ನಿದರ್ಶನಗಳೇ ಹೆಚ್ಚು. ಹಾಗಾಗಿ, ಶೈಕ್ಷಣಿಕ ನೀತಿಗಳು, ಭಾಷಿಕ ವೈವಿಧ್ಯತೆಯ ಸವಾಲುಗಳನ್ನು ಬಗೆಹರಿಸುವ ಬಗೆಯಾಗಿ ನಮಗೆ ಎಂದಿಗೂ ದಕ್ಕಲಾರವು. ಕೊಳಗೇರಿ, ಆದಿವಾಸಿ, ವಲಸಿಗರು ಹಾಗೂ ವಲಸಿಗರ ಮಕ್ಕಳಿಗೆ ಸಂಬಂಧಿಸದ ಶಿಕ್ಷಣದ ಅವಕಾಶವನ್ನು ಕುರಿತು ಚರ್ಚಿಸುವ ಪ್ರಶ್ನೆಯೇ ಇಲ್ಲಿ ಉದ್ಭವಿಸದು. ಭಾರತ ಸಂವಿಧಾ ನವು ಕಲ್ಪಸಿರುವ ಮೂಲಭೂತ ಹಕ್ಕುಗಳ ಹೆಚ್ಚುಗಾರಿಕೆ ಏನು? ಎನ್ನುವುದೇ ಈ ಶತಮಾನದ ದೊಡ್ಡ ಸವಾಲು. ಬಹುಭಾಷಿಕ ಸನ್ನಿವೇಶ ಹಾಗೂ ಅದರ ಸಂಕೀರ್ಣ ಆಯಾಮಗಳು ಮತ್ತು ಒಳಸುಳಿಗಳನ್ನು ಶೋಧಿಸುವ ಅಗತ್ಯದ ತೀವ್ರತೆ ಅರ್ಥವಾಗದೇ ಇರುವುದು ಸ್ಪಷ್ಟವಾಗಿ ಕಣ್ಣಿಗೆ ರಾಚುತ್ತದೆ.

ಬೆಂಗಳೂರಿನಂತ ಮೆಟ್ರೊಪಾಲಿಟನ್ ನಗರಗಳು ಏಕಭಾಷಾ ಧೋರಣೆಯ ಶಿಕ್ಷಣತಜ್ಞರಿಗೆ ಹಾಗೂ ಭಾಷಾ ನೀತಿಯನ್ನು ರೂಪಿಸುವರಿಗೆ ಗಂಭೀರ ಸವಾಲುಗಳನ್ನು ಒಡ್ಡುತ್ತವೆ. ಅರ್ಧಶತಮಾನ ಕಾಲ ನಮ್ಮ ಸಂವಿಧಾನವು ಜಪಿಸಿದ ಆದರ್ಶ ಮಂತ್ರವಾಗಿದ್ದ "ಮೂಲಭೂತ ಹಾಗೂ ಗುಣಮಟ್ಟ ಶಿಕ್ಷಣ ಪಡೆಯುವುದು ಪ್ರತಿಯೊಬ್ಬ ನಾಗರಿಕನ ಆ ಜನ್ಮಸಿದ್ಧ ಹಕ್ಕು" ಎನ್ನುವುದು ಕೇವಲ ಘೋಷಣೆ ಮಾತ್ರವಾಗಿಯೇ ಉಳಿದಿರುವುದು ನಮ್ಮ ಪ್ರಜಾಪ್ರಭುತ್ವದ ವಿಪರ್ಯಾಸವೇ ಸರಿ. ವಲಸಿಗ ಹಾಗೂ ಕೊಳಗೇರಿ ಸಮುದಾಯದ ಮಕ್ಕಳು ಶೈಕ್ಷಣಿಕ ಅವಕಾಶಗಳಿಂದ ವಂಚಿತರಾಗಲು ಈ ಮೇಲೆ ಸೂಚಿಸಿದ ಕಾರಣಗಳೇ ಮುಖ್ಯವಾಗಿವೆ. ನಿಜ, ಇದು ಕೇವಲ ಶಿಕ್ಷಣತಜ್ಞರ ಜವಾಬ್ದರಿ ಮಾತ್ರ ಅಲ್ಲ ಅನ್ನುವುದು ಮೇಲ್ನೋಟಕ್ಕೆ ಕಾಣುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದ ಪ್ರತಿಯೊಬ್ಬರು ಶಿಕ್ಷಣವನ್ನು, ಎಂಟು ಜನ ಕುರುಡರು ಆನೆಯನ್ನು ತಮ್ಮ ಗ್ರಹಿಕೆಗೆ ದಕ್ಕಿದ್ದ ಷ್ಟನ್ನೇ 'ಆನೆ'ಯಾಗಿ ಪರಿಭಾವಿಸಿಕೊಂಡು ವ್ಯಾಖ್ಯಾನಿಸಿದಂತೆ ಇವರು ಶಿಕ್ಷಣವನ್ನು ವ್ಯಾಖ್ಯಾನಿಸುತ್ತಾರೆ. ಇದರ ಅಪಾಯಗಳು ಹಿಂದೂಳಿದ, ಅಲ್ಪಸಂಖ್ಯಾತರ, ವಲಸಿಗರ ಹಾಗೂ ಆದಿವಾಸಿಗಳ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವ ಅವಕಾಶದಿಂದ ವಂಚಿತರನ್ನಾಗಿ ಮಾಡಿದೆ. ಆದರೆ ಮೇಲ್‌ವರ್ಗಗಳ ಪ್ರಾಬಲ್ಯ ಮತ್ತು ಯಜಮಾನ್ಯದ ಭಾಷೆಗಳು ಮೇಲುಗೈ ಸಾಧಿಸುತ್ತವೆ. ಆದ್ದರಿಂದಲೇ ಇಂದೂ ಕನ್ನಡ ವರ್ಸಸ್ ಇಂಗ್ಲಿಶ್ ಕಾನೂನು ಶಿಕ್ಷಾಟಗಳಿಗೆ ಕೊನೆಯಿಲ್ಲದಾಗಿದೆ. ಈ ಎರಡು

ಭಾರತದಂತಹ ಬಹುಭಾಷಿಕ/ಸಾಂಸ್ಕೃತಿಕ ಸಂದರ್ಭದಲ್ಲಿ, ಬಹು/ದ್ವಿಭಾಷಿಕ ಶಿಕ್ಷಣ ನೀತಿಯನ್ನು ಸಾಮಾಜಿಕ-ಶೈಕ್ಷಣಿಕ ಕಂಟಕವೆಂದು ಪರಿಭಾವಿಸುವ ನಿದರ್ಶನಗಳೇ ಹೆಚ್ಚು. ಹಾಗಾಗಿ, ಶೈಕ್ಷಣಿಕ ನೀತಿಗಳು, ಭಾಷಿಕ ವೈವಿಧ್ಯತೆಯ ಸವಾಲುಗಳನ್ನು ಬಗೆಹರಿಸುವ ಬಗೆಯಾಗಿ ನಮಗೆ ಎಂದಿಗೂ ದಕ್ಕಲಾರವು. ಕೊಳಗೇರಿ, ಆದಿವಾಸಿ, ವಲಸಿಗರು ಹಾಗೂ ವಲಸಿಗರ ಮಕ್ಕಳಿಗೆ ಸಂಬಂಧಿಸದ ಶಿಕ್ಷಣದ ಅವಕಾಶವನ್ನು ಕುರಿತು ಚರ್ಚಿಸುವ ಪ್ರಶ್ನೆಯೇ ಇಲ್ಲಿ ಉದ್ಭವಿಸದು. ಭಾರತ ಸಂವಿಧಾನವು ಕಲ್ಪಸಿರುವ ಮೂಲಭೂತ ಹಕ್ಕುಗಳ ಹೆಚ್ಚುಗಾರಿಕೆ ಏನು? ಎನ್ನುವುದೇ ಈ ಶತಮಾನದ ದೊಡ್ಡ ಸವಾಲು. ಬಹುಭಾಷಿಕ ಸನ್ನಿವೇಶ ಹಾಗೂ ಅದರ ಸಂಕೀರ್ಣ ಆಯಾಮಗಳು ಮತ್ತು ಒಳಸುಳಿಗಳನ್ನು ಶೋಧಿಸುವ ಅಗತ್ಯದ ತೀವ್ರತೆ ಅರ್ಥವಾಗದೇ ಇರುವುದು ಸ್ಪಷ್ಟವಾಗಿ ಕಣ್ಣಿಗೆ ರಾಚುತ್ತದೆ.

ಭಾಷೆಗಳಿಗೆ ಸಂವಿಧಾನ ಹಾಗೂ ಸಾಂಸ್ಥಿಕ ಬೆಂಬಲ ಇರೊದರಿಂದ, ಇದು ಕೇವಲ ಭಾಷಾನೀತಿಯ ಪ್ರಶ್ನೆಯಾಗಿ ಉಳದಿಲ್ಲ. ಇದೊಂದು ಸಾಮಾಜಿಕ ಮತ್ತು ರಾಜಕೀಯ ಪ್ರತಿಷ್ಠೆಯ ಸವಾಲು ಮಾತ್ರವಾಗಿದೆ.

ಇಲ್ಲಿ ಭಾಷಿಕ ಹಕ್ಕುಗಳು ಕೇವಲ ನೆಪ ಮಾತ್ರ. ಕರ್ನಾಟಕವೆಂದರೆ ಕೇವಲ ಕನ್ನಡವಲ್ಲ ಅನ್ನುವ ಸತ್ಯವನ್ನು ಮರೆತು 'ಕನ್ನಡ ಕಡ್ಡಾಯ' ಅನ್ನುವ ಶಾಸನಬದ್ಧ ಆದೇಶಗಳು ನಿರಂತರವಾಗಿ ಜಾರಿಗೊಳ್ಳುತ್ತವೆ. ಆದರೆ ಈ ಆದೇಶಗಳು 'ಕನ್ನಡವು ಸರಕಾರಿ ಶಾಲೆಗಳಲ್ಲಿ ಮಾತ್ರ ಕಡ್ಡಾಯ' ಅನ್ನುವದನ್ನು ಪರೋಕ್ಷವಾಗಿ ಸೂಚಿಸುತ್ತದೆ. ಯಾಕಂದರೆ, ಇದೇ ಪ್ರಭುತ್ವವು ಖಾಸಗಿ[ಇಂಗ್ಲಿಶ್] ಶಾಲೆಗಳಿಗೆ ಶಾಸನಬದ್ಧ ಅನುದಾನ ಕೊಟ್ಟಿರುತ್ತದೆ. ಇಂತಹ ಕಾನೂನುಗಳ ದಬ್ಬಾಳಿಕೆಯಿಂದ ಹಿಂದೂಳಿದ ಸಮುದಾಯಗಳು ನಿರಂತರವಾಗಿ ಬಲಿಪಶುಗಳಾಗುತ್ತವೆ. ಇವತ್ತೀನ ಆರ್ಥಿಕತೆಯೊಂದಗಿನ ಇಂಗ್ಲಿಶ್‌ನ ಈ ನಂಟು ಇದನ್ನು ಇನ್ನಷ್ಟು ಇಮ್ಮಡಿಗೊಳಿಸಿದೆ.

ಈ ಸವಾಲುಗಳಿಗೆ ಪರಿಣಾಮಕಾರಿ ಪ್ರತಿಕ್ರಿಯೆಗಳು ಮೇಲೆ ಸೂಚಿಸಿದ ಹಿಂದೂಳಿದ ಸಮುದಾಯಗಳ ಸಾಂಸ್ಕೃತಿಕ, ಭಾಷಿಕ,ರಾಜಕೀಯ ಹಾಗೂ ಆರ್ಥಿಕ ಸನ್ನಿವೇಶಗಳಿಂದಲೇ ರೂಪಗೊಳ್ಳುವ ಜರೂರಿದೆ. ಪರಿಣಾಮವಾಗಿ, ಸಾಮಾಜಿಕ ಜವಾಬ್ದರಿಯ ಭಾಷಿಕ-ಶೈಕ್ಷಣಿಕ ನೀತಿಗಳು ರೂಪಗೊಂಡು, ಈ ಸಾಮಾಜಿಕ-ಭಾಷಿಕ ಅಸಮತೋಲನವನ್ನು ಸರಿಪಡಿಸುವ ಕ್ರಮಗಳು ಸಿಗುತ್ತವೆ. ಇವು ಶೈಕ್ಷಣಿಕ ನೀತಿ ಹಾಗೂ ಸಾಮಾಜಿಕ ನ್ಯಾಯವನ್ನು ಗಮನದಲ್ಲಿಟ್ಟುಕೊಳ್ಳುವದು ಗಮನಾರ್ಹ. ಆವಾಗ, ಬಹುಸಾಂಸ್ಕೃತಿಕ ಸಂದರ್ಭದ ಶೈಕ್ಷಣಿಕ ಸಾಮಾಜಿಕ-ರಾಜಕೀಯ ಸನ್ನಿವೇಶಗಳ ಬಹುತ್ವತೆಯನ್ನು ದೃಢೀಕರಿಸಲೂ ಸಾಧ್ಯ. ಈ ಮಾದರಿಯೂ ಭಾಷೆ, ಶಿಕ್ಷಣ ಹಾಗೂ ಅನನ್ಯತೆಯ ಸ್ಪಷ್ಟ ನೆಲೆಗಳನ್ನು ರೂಪಿಸುತ್ತದೆ ಹಾಗೂ ಅವುಗಳನ್ನು ನಿರಂತರ ನೆಲೆಗೊಳಿಸುತ್ತದೆ.

ಹೆಚ್ಚಾಗಿ, ಭಾರತದಲ್ಲಿ ಬುಡಕಟ್ಟು ಜನರ ಶಿಕ್ಷಣವು ಅವರದಲ್ಲದ ಭಾಷೆಯಲ್ಲಿ ನಡೆಯುತ್ತದೆ. ಇದು ಅವರ ಶೈಕ್ಷಣಿಕ ಅವಕಾಶಕ್ಕೆ ಹಿನ್ನಡೆಯನ್ನುಂಟು ಮಾಡುತ್ತದೆ. ಇಂತಹ ಪ್ರಕ್ರಿಯೆಯು ಭಾಷಾ ನಾಶವನ್ನು ಮಾಡುವ ಪ್ರಯತ್ನವೇ ಆಗಿರುತ್ತದೆ. ಯಾವುದೆ ಪ್ರಾಬಲ್ಯ ಹೊಂದಿದ ಭಾಷಾ ಮಾಧ್ಯದಲ್ಲಿ ಶಿಕ್ಷಣ ಪಡೆಯುವ ಪ್ರಕ್ರಿಯೆಯು ಶೈಕ್ಷಣಿಕ, ಭಾಷಿಕ, ಮಾನಸಿಕ ಹಾಗೂ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತದೆ. ಇದು ಮಾನವನ ಶೈಕ್ಷಣಿಕ ಹಕ್ಕಿನ ಉಲ್ಲಂಘನೆಯಾಗಿರುತ್ತದೆ. ಯಾವಗಲೂ ಬಹುಭಾಷಿಕ ಸಂದರ್ಭದಲ್ಲಿ ಯಾವುದೇ ಯಜಮಾನ್ಯ ಭಾಷೆಯು ತನ್ನೊಟ್ಟಿಗಿರುವ ಎಲ್ಲ ಭಾಷೆಗಳ ಸಾಂಸ್ಕೃತಿಕ-ಶೈಕ್ಷಣಿಕ ಅಸ್ತಿತ್ವವನ್ನೇ ಸರ್ವನಾಶ ಮಾಡುತ್ತದೆ. ಪ್ರಾಯಶಃ ಸಣ್ಣ-ಪುಟ್ಟ ಭಾಷೆಗಳು ಜೀವಂತವಾಗಿದ್ದರೆ, ಅತೀ ಸೀಮಿತ ವಲಯಗಳಲ್ಲಿ ಅವು ಚಲನಶೀಲವಾಗಿರುತ್ತವೆ ಉದಾ: ಮನೆ ಹಾಗೂ ಕೌಟುಂಬಿಕ ಅಂತರ್‌ವಲಯಗಳಲ್ಲಿ ಮಾತ್ರ ಬಳಕೆಯಲ್ಲಿರುತ್ತವೆ.

ಯಾವ ಪರಿಸರದಲ್ಲಿ ಒಂದು ಭಾಷೆಯನ್ನು ಮಾತಾಡುತ್ತಾರೋ, ಅದು ಆ ಭಾಷೆಯ ರಚನೆ ಹಾಗೂ ಅದರ ಅರ್ಥ[ಜಾಲ]ದ ನೆಲೆಗಳನ್ನು ರೂಪಿಸುತ್ತದೆ. ಆದ್ದರಿಂದಲೇ, ಸಪಿರ್-ವೂರ್ಫ್ ಪ್ರಮೇಯು ವಿಶದೀಕರಿಸುವ ಹಾಗೆ, ಲೋಕದೃಷ್ಟಿಯ [ಪರಿ]ಕಲ್ಪನಾತ್ಮಕ ವಿಭಜನೆಯು ಆ ಪರಿಸರದ ಭಾಷಾ ರಚನೆಯನ್ನು ಅವಲಂಬಿಸಿಕೊಂಡಿರುತ್ತೆ [ಸಾಕಷ್ಟು ತಕರಾರುಗಳ ಮಧ್ಯೆಯೂ ಈ ವಾದವನ್ನು ಅಲ್ಲ ಗಳೆಯುವಂತಿಲ್ಲ]. ಇಲ್ಲಿ ಉದ್ಭವಿಸುವ ಮುಖ್ಯ ಪ್ರಶ್ನೆ ಏನಂದರೆ, ಪ್ರತಿ ಭಾಷೆಯ ರಚನೆಯು ಮತ್ತೊಂದು ಭಾಷೆಯ ರಚನೆಯಿಂದ ಭಿನ್ನವಾಗಿರುವಂತೆ, ಆ ಭಾಷೆಯ ಗ್ರಹಿಕೆಯ ವಿಭಜನೆಯ ಕ್ರಮಗಳೂ ಭಿನ್ನವಾಗಿರುತ್ತವೆ. ಆದ್ದರಿಂದಲೇ ಎರಡು ಪರಿಕಲ್ಪನೆಗಳ ನಡುವಿನ ಅಂತರವನ್ನು, ಆ ಭಾಷೆಗಳ ಲೋಕಗ್ರಹಿಕೆಯ ನೆಲೆಗಳು ಒಳಗೊಂಡಿರುವ ಅಂತರದ ಪರಿಚಯವಿಲ್ಲದೆ ಅರ್ಥೈಸುವುದು ಕಷ್ಟಸಾಧ್ಯ. ಈ ವಾದವು ಬಹುಭಾಷಿಕ ಸಂದರ್ಭದ ಸವಾಲುಗಳನ್ನು ಹೇಗೆ ನಿಭಾಯಿಸುತ್ತೆ? ಅನ್ನುವುದು ಗಮನಾರ್ಹ.

ತಮ್ಮದಲ್ಲದ ಭಾಷೆಯೊಂದಿಗೆ ವ್ಯವಹರಿಸುವ ಪ್ರತಿಯೊಬ್ಬನು ಎದುರಿಸುವ ಬಿಕ್ಕಟ್ಟುಗಳಿಗೆ ಪರಿಹಾರ ಯಾವುದು? ಯಾಕಂದರೆ, ಬಹುಭಾಷಿಕ ಸನ್ನವೇಶವು ಯಾವುದೇ ಒಂದು ಪ್ರಭಲ ಅಥವಾ ಅಧಿಕಾರ ಭಾಷೆಯ ನಿಯಂತ್ರಣದಲ್ಲಿರುತ್ತೆ. ಆದಿವಾಸಿ ಅಥವಾ ಯಾವುದೇ ಅಲ್ಪಸಂಖ್ಯಾತ ಭಾಷಾ ಸಮುದಾಯಗಳ ಭಾಷಿಕರು ತಮ್ಮ ಶೈಕ್ಷಣಿಕ ಸಂದರ್ಭದಲ್ಲಿ ಇಂತಹ ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಗುತ್ತೆ. ಹಾಗಾಗಿ, ಭಾಷೆಯೂ ಕೇವಲ ಶಿಕ್ಷಣ ಮಾಧ್ಯಮದ ಪ್ರಶ್ನೆಯಾಗಿಯೋ? ಅಥವಾ ಒಂದು ಭಾಷೆಯ ಆಯ್ಕೆಯ ಪಶ್ನೆಯಾಗಿಯೋ? ಇದನ್ನು ಚರ್ಚಿಸುವ ಬದಲಾಗಿ, ಆ ಭಾಷಿಕರ ಅಸ್ತಿತ್ವ ಹಾಗೂ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅರ್ಥೈಸಿಕೊಳ್ಳುವ ಅಗತ್ಯವಿದೆ. ಕರ್ನಾಟಕದಲ್ಲಿ ಕನ್ನಡ ವರ್ಸಸ್ ಇಂಗ್ಲಿಶ್‌ನ

ಕಾನೂನು ಕಾದಾಟವು ಯಾರ ಪರ? ಹಾಗೂ ಯಾರ ವಿರುದ್ಧ? ಅನ್ನುವುದು ಮುಖ್ಯವಾದರೇ ಯಾರಿಗೆ ಯಾವ ಭಾಷೆಯಲ್ಲಿ ಶಿಕ್ಷಣವನ್ನು ಕೊಡಬೇಕು ಅನ್ನುವುದೂ ಅಷ್ಟೇ ಮುಖ್ಯ. ದಲಿತ ಹಾಗೂ ಹಿಂದುಳಿದ ಸಮುದಾಯದವರಿಗೆ ಯಾವುದೆ ಬಂಡವಾಳಶಾಹಿ ಅಥವಾ ರಾಜಕೀಯ ಬೆಂಬಲದ ಕೊರತೆ ಇರುವುದರಿಂದ, ಅವರು ತಮ್ಮ ಮಾತೃಭಾಷಾ ಶಿಕ್ಷಣದಿಂದಲೂ ಹಾಗೂ ಇಂಗ್ಲಿಶ್ ಶಿಕ್ಷಣದಿಂದಲೂ ವಂಚಿತರಾಗುತ್ತಾರೆ. ಇದು ಅವರನ್ನು ಮತ್ತೆ ಅಕ್ಷರ-ವಂಚಿತರನ್ನಾಗಿಯೇ ಇಡುತ್ತೆ.

ಶಿಕ್ಷಣವು ಭಾಷೆಯ ಸಂಗೋಪನೆಗೆ ಅತ್ಯಂತ ಮುಖ್ಯ ಆಯಾಮವಾಗಿದೆ. ಯಾವುದೇ ಪ್ರಾಬಲ್ಯ ಹೊಂದಿದ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವ ಆದಿವಾಸಿ ಅಥವಾ ಅಲ್ಪಸಂಖ್ಯಾತ ಭಾಷಾ ಸಮುದಾಯದ ಮಕ್ಕಳು, ಕಾಲಕ್ರಮೇಣ ತಮ್ಮ ತಾಯ್ನುಡಿಯನ್ನು ಕಳಕೊಳ್ಳುವ ಸಾಧ್ಯತೆಗಳೇ ಹೆಚ್ಚು. ಈ ಬಗೆಯ ಶೈಕ್ಷಣಿಕ ಪ್ರಕ್ರಿಯೆಯು, ಇಂತಹ ಚಿಕ್ಕ-ಪುಟ್ಟ ಸಮುದಾಯಗಳ ಮಕ್ಕಳು ತಮ್ಮ ತಾಯ್ನುಡಿಯನ್ನು ಒತ್ತಾಯದಿಂದ ಕಳಕೊಳ್ಳುವ ಈ ಕ್ರಮವು ಭಾಷಿಕ-ಸಾಂಸ್ಕೃತಿಕ ವಿಸ್ಮೃತಿಯನ್ನು ಸೃಷ್ಟಿಸುತ್ತದೆ. ಈ ಪರಕೀಯ ಅಸ್ಮಿತಿಯು ಒಂದೆರಡು ಶತಮಾನಗಳಲ್ಲಿ, ಯಾವುದೇ ಭಾಷಿಕ ಅಥವಾ ಸಾಂಸ್ಕೃತಿಕ ಅವಶೇಷಗಳನ್ನೂ ಬಿಡದೆ ಆ ಸಮುದಾಯಗಳ ಚಹರೆಗಳನ್ನೇ ನಾಶ ಮಾಡುತ್ತದೆ.

ನಿಜ, ಇಂತಹ ಅಪಾಯಗಳು ಏಷ್ಯಾದ ದೇಶಗಳಲ್ಲಿ ಅಷ್ಟೊಂದು ತೀವ್ರವಾಗಿರಲಿಲ್ಲ. ಆದರೆ ಇಂತಹ ಸಮುದಾಯ ಭಾಷೆಗಳು ಶೈಕ್ಷಣಿಕ ಅವಕಾಶಗಳಿಂದ ವಂಚಿಸಲ್ಪಟ್ಟಿದ್ದವು. ಆದಾಗ್ಯೂ, ಈ ಭಾಷೆಗಳು ತಮ್ಮದೇ ಆದ ಹಲವಾರು ಅಂತರ್‌ವಲಯಗಳಲ್ಲಿ ಚಲನಶೀಲವಾಗಿದ್ದವು. ಆದರೆ, ಆಧುನಿಕತೆ, ಇವತ್ತಿನ ಜಾಗತೀಕರಣ ಪ್ರಕ್ರಿಯೆಯ ದುಷ್ಪರಿಣಾಮಗಳು, ತಾರತಮ್ಯ ನೆಲೆಯ ಭಾಷಾನೀತಿಗಳು ಹಾಗೂ 'ಕನ್ನಡ ಕಡ್ಡಾಯ' ಮತ್ತು 'ಇಂಗ್ಲಿಶ್ ಮಾತ್ರ' ಎನ್ನುವ ಯಜಮಾನ್ಯ ಧೋರಣೆಗಳು 'ಭಾಷಾ ನಾಶ' ಪ್ರಕ್ರಿಯೆಗೆ ಹೆಚ್ಚು ಉತ್ತೇಜನ ಕೊಟ್ಟಿವೆ ಅನ್ನುವುದು ಸ್ಪಷ್ಟ. ಇದಕ್ಕೆ ಹಲವಾರು ನಿದರ್ಶನಗಳು ನಮ್ಮ ಭಾರತದಲ್ಲಿಯೇ ಸಿಗುತ್ತವೆ ಉದಾ: ಆಧುನಿಕತೆಯ ಅಭಿವೃದ್ಧಿ ಪ್ರಯೋಗಗಳಾದ ಆಣೆಕಟ್ಟುಗಳ ನಿರ್ಮಾಣವು ಬುಡಕಟ್ಟು ಸಮುದಾಯಗಳನ್ನು ಚದುರಿಸಿವೆ. ಈ ಚದುರುವಿಕೆಯು, ಆ ಸಮುದಾಯಗಳ ಪುನರ್‌ವಸತಿಯ ನೆಪದಲ್ಲಿ ಪರಕೀಯತೆಯನ್ನೇ ಸೃಷ್ಟಿಸಿದೆ.

ಒಂದು ಪ್ರಬಲ ಸಮುದಾಯದ ಅಭಿವೃದ್ಧಿಗೆ ಮತ್ತೊಂದು ಅಬಲ ಸಮುದಾಯದ ಸಾಮೂಹಿಕ ಪ್ರಜ್ಞೆ ಮತ್ತು ಅಸ್ಮಿತಿಯನ್ನು ನಿರ್ನಾಮ ಮಾಡುವ ಬಗೆ ಯಾವ ಪುರುಷಾರ್ಥದ ಅಭಿವೃದ್ಧಿ. ಇಂತಹ ಆಕ್ರಮಣಕಾರಿ ಅಧಿಕಾರವು ಮಾನವೀಯತೆ ವಿರುದ್ಧ ನಿರಂತರ ನಡೆಯುವ ಘೋರ ಅಪರಾಧವೇ ಹೊರತು ಬೇರೆನೂ ಅಲ್ಲ. ಈ ಅಪರಾಧವು ಕೇವಲ ಭಾಷಿಕ-ಸಾಂಸ್ಕೃತಿಕ ವೈವಿಧ್ಯತೆಗೆ ಮಾತ್ರ ಸೀಮಿತವಾಗದೆ, ಇಡೀ ಮನುಕುಲದ ಜೀವವೈವಿಧ್ಯತೆಯ ಸರ್ವನಾಶಕ್ಕೆ ಕಾರಣವಾಗಿದೆ. ಹಾಗಾಗಿ ಈಗ ಭಾರತದಲ್ಲಿಯೂ ಕೂಡ ಅನ್ನ ಬೆಳೆಯುವ ರೈತನ ಭೂಮಿ ಬಂಡವಾಳಶಾಹಿಯ ವ್ಯಾಪಾರದ ಸರಕಾಗಿ ಮಾತ್ರ ಉಳಿದಿದೆ. ಅಂದರೆ, ಅನ್ನ ಬೆಳೆಯುವ ರೈತನ ಭೂಮಿಯಲ್ಲಿ ಎಸ್‌ಜಿಝೆಡ್, ಐಟಿ ಪಾರ್ಕ್ ಹಾಗೂ ಐಷಾರಾಮಿ ಜನರ ಓಡಾಟಕ್ಕೆ ಕಾರಿಡಾರ್‌ನಂತಹ ಬೃಹತ್ತರಸ್ತೆಗಳನ್ನು ನಿರ್ಮಿಸುತ್ತವೆ. ಇವತ್ತಿನ ಆರ್ಥಿಕ ಹಿಂಜರಿತಕ್ಕೂ ಸಾಮಾನ್ಯ ಜನರ ಅನ್ನದ ಬೆಲೆ ಗಗನಕ್ಕೇರಿರುವುದಕ್ಕೂ ಸಂಬಂಧವಿದೆ. ಭಾಷೆ, ಸಂಸ್ಕೃತಿ, ಶಿಕ್ಷಣ ಹಾಗೂ ಸಮಾಜಗಳ ನಡುವಿನ ಸಂಬಂಧವನ್ನು ಮೇಲಸ್ತರದಲ್ಲಿಯೇ ಅರ್ಥೈಸುವುದು ಎಂತಹ ಅಪಾಯಕಾರಿ ಅನ್ನುವದು ಅರಿತುಕೊಳ್ಳುವ ಜರೂರು ಇದೆ. ಜನರ ಏಳ್ಗೆಯ ಹೊಣೆ ಹೊತ್ತ ಪ್ರಭುತ್ವದ ನಿಜವಾದ ಉದ್ದೇಶ ಕೆಲವೇ ಕೆಲವು ಜನರ ಆಶೋತ್ತರಗಳನ್ನು ಮಾತ್ರ ಕಾಪಾಡಬಹುದಾಗಿದಿಯೇ? ಎನ್ನುವ ಪ್ರಶ್ನೆಗೆ ಉತ್ತರಿಸುವರಾರು?



ಪ್ರತಿ ಭಾಷೆಯು ಭಾಷಿಕ ಸ್ವಾಯತ್ತತೆಯನ್ನು ಪಡದಿರುತ್ತದೆ. ಆದರೆ ಈ ಎಲ್ಲ ಭಾಷೆಗಳು ಎಷ್ಟರಮಟ್ಟಿಗೆ ಕಾಲ-ದೇಶಕ್ಕೆ ಅಗತ್ಯವಾದ ತಿಳುವಳಿಕೆಯನ್ನು ಪ್ರಕಟಿಸುವ ಸಿದ್ಧತೆಯನ್ನು ರೂಢಿಸಿಕೊಳ್ಳುತ್ತವೆ ಎನ್ನುವ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಕೊರತೆಯನ್ನು ನೀಗಿಸದೇ ಹೋದರೆ, ಇದು ಆ ಭಾಷೆಯ ನಾಶಕ್ಕೆ ಕಾರಣವಾಗುತ್ತದಿಯೇ? ಇದು ಹೌದಾದರೆ, ಇದಕ್ಕೆ ಯಾರು ಹೊಣೆ? ಅಂದರೆ, ಭಾಷಾ ಯೋಜನೆ ಹಾಗೂ ನೀತಿಯನ್ನು ರೂಪಿಸುವ ಪ್ರಭುತ್ವವೇ ಇದಕ್ಕೆ ಹೊಣೆ ಅನ್ನುವುದು ಸ್ಪಷ್ಟ. ಕನ್ನಡಕ್ಕೂ ಸಂಬಂಧಿಸಿದಂತೆ ಇಂತಹ ಸಾಕಷ್ಟು ಆತಂಕಗಳು ಹುಟ್ಟಿಕೊಂಡಿವೆ. ಎಲ್ಲಾ ಬಗೆಯ ಸಾಂಸ್ಥಿಕ ಬೆಂಬಲವಿರುವ ಕನ್ನಡಕ್ಕೆ ಆತಂಕಗಳಿವೆ ಅಂದರೆ, ಯಾವುದೇ ಸಾಂಸ್ಥಿಕ ಬೆಂಬಲವನ್ನು ಪಡೆಯದ ಆದಿವಾಸಿ ಹಾಗೂ ಅಲ್ಪಸಂಖ್ಯಾತರ ಭಾಷೆಗಳ ಪರಿಸ್ಥಿಯನ್ನು ಯಾರಾದರೂ ಊಹಿಸಬಹುದು.

ನಿಜ, ನಮ್ಮ ಭಾರತೀಯ ಹೆಚ್ಚಿನ ಭಾಷೆಗಳು ತಮ್ಮ ಚರಿತ್ರೆ, ಪುರಾಣ, ಸಾಂಪ್ರದಾಯಕ ಆಚರಣೆಗಳನ್ನು ವಿವರಿಸುವದಕ್ಕೆ ಮಾತ್ರ ಸೀಮಿತಗೊಂಡಿವೆ. ಆಧುನಿಕ ಆವಿಷ್ಕಾರಗಳನ್ನು ಹಾಗೂ ಅವುಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ವಿವರಿಸುವ ಸಾಮಾನ್ಯ ತಿಳುವಳಿಕೆಯನ್ನು ಸಿದ್ಧಿಸಿಕೊಳ್ಳುವಲ್ಲಿ ಹಿಂದೆ ಬಿದ್ದಿವೆ. ಸಂವಿಧಾನದಿಂದ ಮಾನ್ಯತೆ ಮತ್ತು ಸವಲತ್ತುಗಳನ್ನು ಪಡೆಕೊಂಡಿರುವ, ಸಮಾಜದ ಮುಖ್ಯ ವಾಹಿನಿಯಲ್ಲಿರುವ ಭಾಷೆಗಳ ಗತಿಯೇ ಹೀಗಿರುವಾಗ ಆದಿವಾಸಿ ಹಾಗೂ ಅಲ್ಪಸಂಖ್ಯಾತರ ಭಾಷೆಗಳ ಕುರಿತು ಏನನ್ನು ಯೋಚಿಸುವುದಕ್ಕೆ ಅವಕಾಶವೇ ಇಲ್ಲ ಅನ್ನುವ ಅಂತಿಮ ತೀರ್ಮಾನಕ್ಕೆ ಬರುವ ಮುಂಚೆ ಇದರ ಹಿಂದಿನ ಕಾರಣಗಳೇನಿರಬಹುದು ಅನ್ನುವುದನ್ನು ಪತ್ತೆಹಚ್ಚಬೇಕಿದೆ. ನಮ್ಮ ಶೈಕ್ಷಣಿಕ ನೀತಿಗಳನ್ನು ಮರುಪರಿಶೀಲಿಸಬೇಕು. ಅಂದರೆ, ಶಿಕ್ಷಣಮಾಧ್ಯಮ ಹಾಗೂ ಭಾಷಾ ಶಿಕ್ಷಣ ಕುರಿತ ಧೋರಣೆಗಳು ಏಕಪಕ್ಷೀಯವಾಗಿವೆ.

ಸಾಮಾಜಿಕ ಭಾಷಿಕ ವೈವಿಧ್ಯತೆಯನ್ನು ಗ್ರಹಿಸುವ ನಿಲುವುಗಳಲ್ಲಿ ಅಮೂಲಾಗ್ರ ಪರಿವರ್ತನೆ ಆಗಬೇಕಿದೆ. ಕೇವಲ ರಾಜಕೀಯ ರಾಷ್ಟ್ರೀಯತೆಯನ್ನು ರೂಪಿಸುವ ನಿಟ್ಟಿನಲ್ಲಿ ಈ ನಮ್ಮ ಸಾಮಾಜಿಕ-ಭಾಷಿಕ ವೈವಿಧ್ಯತೆಯಲ್ಲಿ ಐಕ್ಯತೆಯನ್ನು ತರುವ ಕುರಿತು ನಿರಂತರ ಪ್ರಯತ್ನಗಳು ನಡೆದಿವೆ. ಆದರೆ ಈ ಸಾಮಾಜಿಕ ಭಾಷಿಕ ವೈವಿಧ್ಯತೆಗಳಲ್ಲಿ ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಸಮಾನತೆಗಳನ್ನು ಕಲ್ಪಿಸುವ ಅಗತ್ಯದ ಬಗ್ಗೆ ಹೋರಾಟಗಳು ನಡೆಬೇಕಿದೆ. ಇದು ಕೇವಲ ರಾಜಕೀಯ ಐಕ್ಯತೆಯ ಪ್ರಶ್ನೆ ಅಲ್ಲ. ಇಲ್ಲಿ

ಶಿಕ್ಷಣವು ಭಾಷೆಯ ಸಂಗೋಪನೆಗೆ ಅತ್ಯಂತ ಮುಖ್ಯ ಆಯಾಮವಾಗಿದೆ. ಯಾವುದೇ ಪ್ರಾಬಲ್ಯ ಹೊಂದಿದ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವ ಆದಿವಾಸಿ-ಅಲ್ಪಸಂಖ್ಯಾತ ಭಾಷಾ ಸಮುದಾಯದ ಮಕ್ಕಳು, ಕಾಲಕ್ರಮೇಣ ತಮ್ಮ ತಾಯ್ನುಡಿಯನ್ನು ಕಳಕೊಳ್ಳುವ ಸಾಧ್ಯತೆಗಳೇ ಹೆಚ್ಚು. ಈ ಬಗೆಯ ಶೈಕ್ಷಣಿಕ ಪ್ರಕ್ರಿಯೆಯು, ಇಂತಹ ಚಿಕ್ಕ-ಪುಟ್ಟ ಸಮುದಾಯಗಳ ಮಕ್ಕಳು ತಮ್ಮ ತಾಯ್ನುಡಿಯನ್ನು ಒತ್ತಾಯದಿಂದ ಕಳಕೊಳ್ಳುವ ಈ ಕ್ರಮವು ಭಾಷಿಕ-ಸಾಂಸ್ಕೃತಿಕ ವಿಸ್ಮೃತಿಯನ್ನು ಸೃಷ್ಟಿಸುತ್ತದೆ. ಈ ಪರಕೀಯ ಅಸ್ಮಿತಿಯು ಒಂದೆರಡು ಶತಮಾನಗಳಲ್ಲಿ, ಯಾವುದೇ ಭಾಷಿಕ ಅಥವಾ ಸಾಂಸ್ಕೃತಿಕ ಅವಶೇಷಗಳನ್ನೂ ಬಿಡದೆ ಆ ಸಮುದಾಯಗಳ ಚಹರೆಗಳನ್ನೇ ನಾಶ ಮಾಡುತ್ತದೆ. ನಿಜ, ಇಂತಹ ಅಪಾಯಗಳು ಏಷ್ಯಾದ ದೇಶಗಳಲ್ಲಿ ಅಷ್ಟೊಂದು ತೀವ್ರವಾಗಿರಲಿಲ್ಲ.

ಸಾಮಾಜಿಕ-ಭಾಷಿಕ ಅಸ್ಮಿತಿಯ ಪ್ರಶ್ನೆಗಳು ಮುಖ್ಯವಾಗುತ್ತವೆ. ಇಂತಹ ಸಾಮಾಜಿಕ ನ್ಯಾಯ ಹಾಗೂ ಸಮಾನತೆಗಳನ್ನು ತರುವ ಪ್ರಯತ್ನಗಳು ಫೆಡರಲ್ ವ್ಯವಸ್ಥೆಯಲ್ಲಿ ಯಾವ ಮಾನದಂಡಗಳನ್ನು ಆಧರಿಸಿಕೊಂಡು ರೂಪತಾಳುತ್ತವೆ ಅನ್ನುವುದು ಮುಖ್ಯ. ಯಾಕಂದರೆ ಇಲ್ಲಿ 'ಸಂಖ್ಯೆ'ಯ ಪಾತ್ರ ಪ್ರಮುಖವಾಗುತ್ತದೆ. ಈ ಸಂಖ್ಯಾ/ಶೇಕಡವಾರು ನೆಲೆಗಳು ಏಕಪಕ್ಷೀಯ ನಿಲುವುಗಳಿಗೆ ಕಾರಣವಾಗುತ್ತವೆ.

ತಾಯ್ನುಡಿಯಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚು ಅವಕಾಶಗಳಿರವ ಸಾಧ್ಯತೆಯು ಯುನಿಸ್ಕೋನ ಸಾಕಷ್ಟು ಸಂಶೋಧನೆಯ ಪಲಿತಗಳಿಂದ ಕಂಡು ಬಂದಿದೆ. ಈ ಬಗ್ಗೆ ಅಂತಿಮ ನಿರ್ಣಯವನ್ನು ನೀಡುವ ಇಂತಹ ಸಂಶೋಧನೆಗಳ ಬಗ್ಗೆ ಸಂಶಯವಿದೆ. ,ಆದರೆ, ಬೇರೆ ಭಾಷಿಕ-ಸಾಂಸ್ಕೃತಿಕ ಕಾರಣಗಳಿಂದ ಈ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅಂದರೆ, ಒಂದು ಪರಿಚಿತ ಭಾಷೆಕ್ಕಿಂತ ಅಪರಿಚಿತ ಭಾಷೆಯಲ್ಲಿ ಗ್ರಹಿಕೆಯ ನೆಲೆಗಳು ಅಷ್ಟು ಸ್ಪಷ್ಟವಾಗಿ ಪಡೆಮೂಡಲಾರವು ಅನ್ನುವುದು ಒಂದು ಸಾಮಾನ್ಯ ತಿಳುವಳಿಕೆ. ಹಾಗಾಗಿ, ಯಾವುದೇ ಹೇರಿಕೆಯ [ಪ್ರಾಬಲ್ಯ ಹೊಂದಿದ] ಭಾಷೆ ಮುಖೇನ ಪಡೆಯುವ ಶಿಕ್ಷಣವು ಪರಿಣಾಮಕಾರಿ ಕಲಿಕೆ/ಬೋಧನೆಗೆ ಅವಕಾಶ ನೀಡದು, ಹೆಚ್ಚಿನ ಬಹುಭಾಷಿಕ ದೇಶದ ಶಿಕ್ಷಣವು ಇದೆ ಮಾದರಿಯಲ್ಲಿರುತ್ತದೆ.

ಯುನಿಸ್ಕೋವು ತಾಯ್ನುಡಿ ಮುಖೇನ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಡುತ್ತದೆ. ಈ ವಾದವನ್ನು ಅದು ನಿರಂತರವಾಗಿ ಪ್ರಚಾರಗೊಳಿಸುತ್ತದೆ. ಇದಕ್ಕೆ ಎರಡು ಸ್ಪಷ್ಟ ಕಾರಣಗಳಿವೆ: ಒಂದು, ಸಾಮಾಜಿಕ-ಭಾಷಿಕ ವೈವಿಧ್ಯತೆ ಹಾಗೂ ಅಸ್ಮಿತಿಯನ್ನು ಕಾಪಾಡುವುದಾಗಿದೆ. ಈ ಪ್ರಕ್ರಿಯೆಯು 'ಭಾಷಾನಾಶ'ದಂತಹ ಅಪಾಯಗಳಿಂದ ದೇಶಿ ಭಾಷೆಗಳನ್ನು ರಕ್ಷಿಸುವ ಕ್ರಮವೂ ಆಗಿದೆ. ಈ ವೈವಿಧ್ಯತೆಯು ಜೀವವೈವಿಧ್ಯತೆಯನ್ನು ಜೀವಂತವಾಗಿಡುತ್ತದೆ. ಎರಡು, ಮಾನವನ ಮೂಲಭೂತ ಹಕ್ಕುಗಳನ್ನು ಅನುಷ್ಠಾನಗೊಳಿಸುವ ಆ ಮೂಲಕ ಭಾಷಿಕ ಹಕ್ಕನ್ನೂ ಕಲ್ಪಿಸುವ ಹಾಗೂ ಸಾಮಾಜಿಕ ಐಕ್ಯತೆಯನ್ನು ರೂಪಿಸುವ ಬಗೆಯೂ ಆಗಿದೆ. ಇದು ಅಷ್ಟು ಸರಳವಾಗಿಲ್ಲ. ಬಹುಭಾಷಿಕ-ಸಾಂಸ್ಕೃತಿಕ ಸಮಾಜವು ತುಂಬಾ ಸಂಕೀರ್ಣವಾಗಿರುತ್ತದೆ. ಇಲ್ಲಿ ಸಾಂಸ್ಕೃತಿಕ-ಭಾಷಿಕ ಅಧಿಕಾರ ಹೊಂದಿದ ಸಮುದಾಯಗಳ ತೀರ್ಮಾನಗಳು ಮೇಲುಗೈ ಸಾಧಿಸುತ್ತವೆ. ಇದಕ್ಕೆ ಸಾಮಾಜಿಕ-ರಾಜಕೀಯ ಪ್ರಾಬಲ್ಯವೇ ಕಾರಣ. ಆದ್ದರಿಂದ ಯುನಿಸ್ಕೋನ Education in a Multilingual World (2003) ಎನ್ನುವ 'ಪೊಸಿಸನ್ ಪತ್ರಿಕೆ' [Position Paper]ಯು, ಈ ಕೆಳ್ಕಂಡಂತೆ ತಾಯ್ನುಯಡಿ ಮೂಲಕ ಶಿಕ್ಷಣದ ಮಹತ್ವವನ್ನು ಸ್ಪಷ್ಟವಾಗಿ ಗುರುತಿಸಿದೆ;

1. ಪ್ರಾಥಮಿಕ ಹಂತದ ಶಿಕ್ಷಣ ಮಾಧ್ಯಮವು ತಾಯ್ನುಡಿಯಲ್ಲಿದಷ್ಟು ಕಲಿಕೆಯ ತೀವ್ರತೆ ಹೆಚ್ಚುತ್ತದೆ. ಸಾಧ್ಯವಾದಷ್ಟು ಇದನ್ನು ಎಲ್ಲಾ ಹಂತದ ಶಿಕ್ಷಣಕ್ಕೂ ಅನುಷ್ಠಾನಗೊಳಿಸಿದರೆ ಉಚಿತ ಎನ್ನುವ ವಾದಗಳು ಪ್ರಚಲಿತದಲ್ಲಿವೆ.

2. ಸಂವಹನ, ಅಭಿವ್ಯಕ್ತಿ ಹಾಗೂ ಗ್ರಹಿಕೆಯ ಸಾಮರ್ಥ್ಯವನ್ನು ಸಿದ್ಧಿಸುವ ಬಗೆಗಳು ತಾಯ್ನುಡಿಯಲ್ಲಿ ಪ್ರಚುರಗೊಳ್ಳುತ್ತವೆ. ಇದರ ಆಧಾರದ ಮೇಲೆ ಇನ್ನಾವುದೇ ಭಾಷೆಯಲ್ಲಿ ಶಿಕ್ಷಣ ಪಡೆಯುವ ಭಾಷಿಕ ಸಾಮರ್ಥ್ಯ ಮಗುವಿಗೆ ದಕ್ಕುತ್ತದೆ ಎನ್ನುವ ವಾದವೂ ಮುಂಚೂಣಿಗೆ ಬಂದಿದೆ.

3. ಲಿಂಗ, ಧರ್ಮ, ಭಾಷೆ, ಜನಾಂಗ, ರಾಷ್ಟ್ರೀಯತೆ ಎಂಬೀತ್ಯಾದಿ ನೆಲೆಗಳ ಆಧಾರದ ಮೇಲೆ ಎಲ್ಲಾ ಹಂತದ ಶಿಕ್ಷಣದಲ್ಲಿ ಉದ್ಭವಿಸಬಹುದಾದ ತಾರತಮ್ಯವನ್ನು ನಿರ್ನಾಮ ಮಾಡುವ ಇರಾಧೆಯನ್ನು ಹೊಂದಿದೆ.

ತಾಯ್ನುಡಿ ಶಿಕ್ಷಣವು ಭಾವನಾತ್ಮಕ ಹಾಗೂ ಗ್ರಹಿಕೆಯ ಮೌಲ್ಯಗಳನ್ನು ಪ್ರಚುರಗೊಳಿಸುತ್ತೆ ಅನ್ನುವ ವಾದಗಳೂ ಮಹತ್ವ ಪಡದಿವೆ. ತಮ್ಮದಲ್ಲದ ಭಾಷೆಯಲ್ಲಿ ಪಡೆಯುವ ಶಿಕ್ಷಣವು ಎರಡು ಬಗೆಯ ಅಪಾಯಗಳನ್ನು ಸೃಷ್ಟಿಸುತ್ತದೆ. ತಮ್ಮ ಮಾತೃಭಾಷೆಯ ಮುಖೇನ ಬೌದ್ಧಿಕ ಯಶಸ್ಸನ್ನು ಪಡೆಯುವುದು ಅಸಾಧ್ಯ ಎನ್ನುವದು ಒಂದು ಬಗೆಯ ಅಪಾಯವಾದರೆ. ಈ ತಮ್ಮ ಮಾತೃಭಾಷೆಯು ನಿಷ್ಪ್ರಯೋಜಕವಾದ್ದು ಎನ್ನುವುದು ಇನ್ನೊಂದು ಬಗೆಯ ಅಪಾಯವಾಗಿದೆ. ಆದ್ದರಿಂದಲೇ, ಯುನಿಸ್ಕೋ ಸಂಸ್ಥೆಯು ಮಾತೃಭಾಷೆಗೆ ಸಂಬಂಧಿಸಿದ ಹಕ್ಕುಗಳನ್ನು ಹೆಚ್ಚು ಜೀವಂತವಾಗಿಡಲು, ಅಂತರಾಷ್ಟ್ರೀಯ ತಾಯ್ನುಡಿ ದಿನಾಚರಣೆಯನ್ನು ಜಾರಿಗೊಳಸಿದ್ದನ್ನು ನೆನಪಿಸಿಕೊಳ್ಳಬಹುದು. ಈ ಮೂಲಕ ಮಾತೃ ಭಾಷೆಯಲ್ಲಿಯೇ ಶಿಕ್ಷಣಕ್ಕೆ ಒತ್ತು ನೀಡುತ್ತದೆ.

ಇದು ಎಂತಹ ಕ್ರೌರ್ಯವೆಂದರೆ, ತಾಯ್ನುಡಿ ಶಿಕ್ಷಣವನ್ನು ನಿರಾಕರಿಸುವ ಮೂಲಕ ಮಕ್ಕಳು ತಮ್ಮ ತಾಯ್ನುಡಿಲ್ಲಿ ತುಂಬಾ ಸರಳವಾಗಿ ಜಗತ್ತನ್ನು ಗ್ರಹಿಸುವ ಸಾಧ್ಯತೆಯನ್ನೂ ನಿರಾಕರಿಸುತ್ತವೆ. ಇದಕ್ಕಿಂತ ಹೇಯ್ಯವಾದ ಕೃತ್ಯವೆನಂದರೆ, ಅವರ ಅಸ್ತಿತ್ವ ಹಾಗೂ ಅನನ್ಯತೆಯನ್ನು ಕೂಡಾ ನಿರಾಕರಿಸುತೇವೆ. ಇದು ಏನನ್ನು ಹೇಳುತ್ತದೆ ಅಂದರೆ, ನಿಮ್ಮ ಭಾಷೆ ಹಾಗೂ ನಿಮ್ಮ ಅನನ್ಯತೆ ನಿಸ್ಪ್ರಯೋಜಕವಾದದ್ದು ಎಂದು. ಅಂದರೆ, ನೀವೇನಾದರೂ ಯೋಗ್ಯರಾಗಬೇಕಂದರೆ, ನಿಮ್ಮದಲ್ಲದ ಭಾಷೆಯನ್ನು ಆಯ್ಕೆ ಮಾಡಿಕೊಂಡು ನಿಮ್ಮ ಸಾಮರ್ಥ್ಯವನ್ನು ರೂಢಿಸಿಕೊಳ್ಳಬೇಕು. ಮಕ್ಕಳಿಗೆ ಇದೊಂದು ತರಹ ಅವ ಮಾನ. ಆದಾಗ್ಯೂ, ಮಕ್ಕಳು ತಮ್ಮದಲ್ಲದ ಭಾಷೆಯನ್ನು ಅಂತರ್ಗತ ಮಾಡಿಕೊಂಡು, ತಮ್ಮ ಭಾಷೆ, ಸಂಸ್ಕೃತಿ, ಜನ, ಚರಿತ್ರೆ ಹಾಗೂ ಒಟ್ಟು ಅವರ ಬದುಕಿನ ಮೌಲ್ಯಗಳಿಗೆ ಅವಮಾನವನ್ನು ಮಾಡುತ್ತಾರೆ. ಈ ಪ್ರಕ್ರಿಯೆಯು ಮಕ್ಕಳನ್ನು ಅವರ ಭಾಷೆಯಿಂದ ಪರಕೀಯರನ್ನಾಗಿ ಮಾಡಿ, ಅವರ ಭಾಷೆಗಳನ್ನು ಹತ್ಯೆಮಾಡಲಾಗುತ್ತದೆ. ಇಂತಹ ಭಾಷೆಗಳಿಗೆ ಸೇರಿದ ಈ ಮಕ್ಕಳು ಅಧಿಕಾರ ಭಾಷೆಗಳಾದ ಕನ್ನಡ ಮತ್ತು ಇಂಗ್ಲಿಶ್‌ಗೆ 'ಭಾಷಾಂತರಿ'ಗಳಾಗುತ್ತಾರೆ.

ದೇಶಿ ಭಾಷೆಗಳನ್ನು ಡೇಟ್ ಬಾರ್‌ಆದ ವಸ್ತುಗಳಂತೆ ಪರಿಗಣಿಸುತ್ತಾರೆ. ಇವು ತಮ್ಮಷ್ಟಕ್ಕೆ ತಾವು ಅವಸಾನ ಹೊಂದುತ್ತವೆ. ಈ ಪ್ರಕ್ರಿಯೆಯು ಸಾಕಷ್ಟು ಅಪಾಯಗಳನ್ನು ಸೃಷ್ಟಿಸುತ್ತದೆ. ಆ ಭಾಷಿಕರ ಸಮುದಾಯ ಪ್ರಜ್ಞೆ, ಅನನ್ಯತೆ, ಲೋಕಗ್ರಹಿಕೆ, ಅವರ ಜಾನಪದ ಆಚರಣೆಗಳು ಎಲ್ಲವೂ ನಾಶವಾಗುತ್ತವೆ. ಈ ಸಮುದಾಯಗಳು ದಕ್ಕಿಸಿಕೊಂಡಿದ್ದ ಪಾರಂಪರಿಕ ವಿವೇಕ, ಔಷದಿ ಸಸ್ಯಗಳು, ಚಿಕಿತ್ಸೆಯ ವಿಧಾನಗಳು, ಆಹಾರ ಪದ್ಧತಿಗಳು, ವೈವಿಧ್ಯಮಯ ಪ್ರಾಣಿಗಳು, ಸಾಮುದಾಯಿಕ ಶಿಕ್ಷಣ ಕ್ರಮಗಳೆಲ್ಲವೂ ಕೂಡಾ ನಾಶವಾಗುತ್ತವೆ. ಇದು ಸಾಂಸ್ಕೃತಿಕ ನಷ್ಟ ಆದರೂ ಸಮುದಾಯಗಳು ಮಾರುಕಟ್ಟೆಯ ಬೇಡಿಕೆಯ ಒತ್ತಡ, ತಮ್ಮ ಭಾಷೆ ಕುರಿತ ಕೀಳಹಿರಮೆ ಹಾಗೂ ಅಧಿಕಾರ ಭಾಷೆಗಳ ಹೇರಿಕೆಯಿಂದ ಇಂತಹ ಆಪತ್ತುಗಳು ಘಟಿಸುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ.

ಬಹುತೇಕ, ಜಗತ್ತೀನ ಭಾಷಿಕ-ಸಾಂಸ್ಕೃತಿಕ ವೈವಿಧ್ಯತೆಯು ಚಿಕ್ಕ-ಪುಟ್ಟ ಸಮುದಾಯಗಳಲ್ಲಿ ಅಡಕವಾಗಿದೆ. ಈ ಸಮುದಾಯಗಳನ್ನು ಕಾಪಾಡುವದಂದರೆ, ಜಗತ್ತಿನ ಸಾಂಸ್ಕೃತಿಕ ಹಾಗೂ ಜೀವವೈವಿಧ್ಯತೆಯನ್ನು ಕಾಪಾಡುವದೆಂದೇ ಅರ್ಥ. ಆದ್ದರಿಂದ, ಈ ಚಿಕ್ಕ-ಪುಟ್ಟ ಸಮುದಾಯಗಳ ಏಳ್ಗೆಯು ಅತೀ ತುರ್ತಿನ ಸವಾಲು ಅನ್ನುವುದು ಮರೆತರೆ, ನಿರೀಕ್ಷಿಸಿಸದ ಇನ್ನೂ ಹೆಚ್ಚು ಅಪಾಯಗಳನ್ನು ನಾವು ಎದುರಿಸಬೇಕಾಗುತ್ತೆ. ಯಾಕಂದರೆ, ಈ ಭಾಷಾನಾಶವು ಜೀವವೈವಿಧ್ಯತೆಯ ತಿಳುವಳಿಕೆ ಮತ್ತು ಅದರ ನಿರ್ವಹಣೆಯ ಕೌಶಲಗಳನ್ನು ನಾಶಪಡಿಸುವ ಮಾದರಿಯಾಗಿದೆ. ಜೀವವೈವಿಧ್ಯತೆಯನ್ನು ನಿರ್ವಹಿಸುವ ತಿಳುವಳಿಕೆ ಇಂತಹ ಭಾಷೆಗಳಲ್ಲಿ ಅಂತರ್ಗತವಾಗಿರುತ್ತೆ. ಈ ಕಳುಕೊಳ್ಳುವಿಕೆಯ ಪ್ರಕ್ರಿಯೆಯು ಮಾನವನು ಭೂಮಿ ಮೇಲೆ ಬದುಕುವ ಮೂಲಭೂತ ಹಕ್ಕನ್ನೇ ಕಳುಕೊಳ್ಳುವದು ಆಗಿರುತ್ತೆ. ಇನ್ನಾದರೂ, ಅವರವರ ದೇಶಿ/ ತಾಯ್ನುಡಿಯಲ್ಲಿ ಶಿಕ್ಷಣ ಪಡೆಯುವ ಶೈಕ್ಷಣಿಕ ಹಾಗೂ ಭಾಷಿಕ ಹಕ್ಕುಗಳನ್ನು ಕಲ್ಪಿಸುವ ಅಗತ್ಯ ಕಂಡುಕೊಳ್ಳಬೇಕು. ಇದು ಒಂದೆ ಭಾಷೆ, ಧರ್ಮ, ದೇಶ ಮತ್ತು ವರ್ಗ ಅನ್ನುವ ಫ್ಯಾಸಿಸ್ಟ್ ಧೋರಣೆಯನ್ನು ನಿಯಂತ್ರಿಸಿ, ಎಲ್ಲರನ್ನೂ ಒಳಗೊಂಡ 'ಬಹುತ್ವತೆ'ಯನ್ನು ಸಹಿಸುವ 'ಸಹನಶೀಲತೆ'ಯ ಮನೋಧರ್ಮಕ್ಕೆ ದಾರಿ ಆಗುತ್ತದೆ. ☐

> **ನಮ್ಮ ಭಾರತೀಯ ಹೆಚ್ಚಿನ ಭಾಷೆಗಳು ತಮ್ಮ ಚರಿತ್ರೆ, ಪುರಾಣ, ಸಾಂಪ್ರದಾಯಕ ಆಚರಣೆಗಳನ್ನು ವಿವರಿಸುವದಕ್ಕೆ ಮಾತ್ರ ಸೀಮಿತಗೊಂಡಿವೆ. ಆಧುನಿಕ ಆವಿಷ್ಕಾರಗಳನ್ನು ಹಾಗೂ ಅವುಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ವಿವರಿಸುವ ಸಾಮಾನ್ಯ ತಿಳುವಳಿಕೆಯನ್ನು ಸಿದ್ಧಿಸಿಕೊಳ್ಳುವಲ್ಲಿ ಹಿಂದೆ ಬಿದ್ದಿವೆ. ಸಂವಿಧಾನದಿಂದ ಮಾನ್ಯತೆ ಮತ್ತು ಸವಲತ್ತುಗಳನ್ನು ಪಡೆದುಕೊಂಡಿರುವ, ಸಮಾಜದ ಮುಖ್ಯ ವಾಹಿನಿಯಲ್ಲಿರುವ ಭಾಷೆಗಳ ಗತಿಯೇ ಹೀಗಿರುವಾಗ ಆದಿವಾಸಿ ಹಾಗೂ ಅಲ್ಪಸಂಖ್ಯಾತರ ಭಾಷೆಗಳ ಕುರಿತು ಏನನ್ನು ಯೋಚಿಸುವುದಕ್ಕೆ ಅವಕಾಶವೇ ಇಲ್ಲ ಅನ್ನುವ ಅಂತಿಮ ತೀರ್ಮಾನಕ್ಕೆ ಬರುವ ಮುಂಚೆ ಇದರ ಹಿಂದಿನ ಕಾರಣಗಳೇನಿರಬಹುದು ಅನ್ನುವುದನ್ನು ಪತ್ತೆ ಹಚ್ಚಬೇಕಿದೆ. ನಮ್ಮ ಶೈಕ್ಷಣಿಕ ನೀತಿಗಳನ್ನು ಮರುಪರಿಶೀಲಿಸಬೇಕು. ಅಂದರೆ, ಶಿಕ್ಷಣ ಮಾಧ್ಯಮ ಹಾಗೂ ಭಾಷಾ ಶಿಕ್ಷಣ ಕುರಿತ ಧೋರಣೆಗಳು ಏಕಪಕ್ಷೀಯವಾಗಿವೆ.**

ಕೊಂಕಣಿಗಳು ಮತ್ತು ಸಂಘನಿಷ್ಠೆ

ಗುರು ಬಾಳಿಗ

ತುಳುನಾಡಿನ ವ್ಯಾಪಾರದ ಮೇಲೆ ಕೊಂಕಣಿಗಳ ಪ್ರಾಬಲ್ಯ ೧೩ನೇ ಶತಮಾನದ ಪೂರ್ವಾರ್ಧದಿಂದ ಬೆಳೆದು ಬಂದದ್ದು. ಗೋವಾದ ವ್ಯಾಪಾರದಲ್ಲಿ ಗೌಡಸಾರಸ್ವತರ ಪ್ರಾಬಲ್ಯ೧, ಕೊಂಕಣಿಗಳ ಮೇಲೆ ಕೆಳದಿ ಅರಸೊತ್ತಿಗೆಯ ಅಖಂಡ ವಿಶ್ವಾಸ೩ ಮುಂತಾದ ಕಾರಣಗಳು ಅವರೆಗೆ ತುಳುನಾಡಿನಲ್ಲಿ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿದ್ದ ಜೈನ, ಲಿಂಗಾಯತ (ಬಣಜಿಗ) ಮತ್ತು ಆರ್ಯ ವೈಶ್ಯ (ಕೋಮಟಿ ಸೆಟ್ಟಿ) ಸಮುದಾಯಗಳಿಗೆ ಸೇರಿದ ಸೆಟ್ಟಿಕಾರರ ಪ್ರಾಬಲ್ಯವನ್ನು ಕೊನೆಗಾಣಿಸಿ ಕೊಂಕಣಿ ವ್ಯಾಪಾರಿಗಳು ಕರಾವಳಿಯ ವ್ಯಾಪಾರದಲ್ಲಿ ನಿಯಂತ್ರಣ ಸಾಧಿಸಲು ಸಾಧ್ಯವಾದವು೩. ಆದರೆ ಮುಸ್ಲಿಂ ವ್ಯಾಪಾರಿಗಳು ಕ್ರಿ.ಶ. ೭ನೇ ಶತಮಾನದಲ್ಲೇ ತುಳುನಾಡಿನಲ್ಲಿ ನೆಲೆಸಿದ್ದಕ್ಕೆ ಪುರಾವೆಗಳಿವೆ. ಮುಸ್ಲಿಂ ವ್ಯಾಪಾರಗಳ ಒಕ್ಕೂಟವಾದ ಹಂಜಮಾನದ ಉಲ್ಲೇಖವು ತುಳುನಾಡಿನ ಮಧ್ಯಕಾಲೀನ ಶಿಲಾಶಾಸನಗಳಲ್ಲಿ ದೊರಕುತ್ತದೆ.

ಕಳೆದ ಆರು ತಿಂಗಳಲ್ಲಿ ಮಂಗಳೂರಿನ ಸ್ಥಿತ್ಯಂತರಗಳ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ, ವೆಬ್ಸೈಟುಗಳಲ್ಲಿ ಪ್ರಕಟವಾದ ವಿಶ್ಲೇಷಣೆಗಳಲ್ಲಿ ಹಲವು ಬರಹಗಳು ನನ್ನ ಈ ಬರಹವನ್ನು ಪ್ರೇರೇಪಿಸಿದೆ. ಅವುಗಳನ್ನು ಬರಹದ ಮೊದಲಿಗೆ ಉಲ್ಲೇಖಿಸಬಯಸುತ್ತೇನೆ.

1. ಸಂವಾದ ಪತ್ರಿಕೆಯ 2006ರ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಡಾ.ವಿ.ಲಕ್ಷ್ಮೀನಾರಾಯಣ ಅವರ "ಕರಾವಳಿ ಕೋಮು ಸಂಘರ್ಷದ ಸುತ್ತ" ಎನ್ನುವ ಲೇಖನ. ಇದರ ಉಧೃತ ಭಾಗ:

"ಕರ್ನಾಟಕದ ಇತೆರೆಡೆಯ ಮುಸ್ಲಿಮರಂತೆ ಕರಾವಳಿಯ ಮುಸ್ಲಿಮರು ತೀರ ಬಡತನ ಹಾಗೂ ಭೂಹೀನತೆಯಿಂದ ಪರದಾಡುತ್ತಿಲ್ಲ. ತಮ್ಮ ಕುಶಲಕರ್ಮಿಕಾಯಕ ಮತ್ತು ವ್ಯಾಪಾರದಿಂದ ಹಿಂದೂ ವ್ಯಾಪಾರಿಗಳ ಮುಖ್ಯವಾಗಿ ಕೊಂಕಣಿಗಳ ಅಧಿಪತ್ಯಕ್ಕೆ ಸವಾಲೆಸೆದಿರುವುದರಿಂದ ಎರಡೂ ವ್ಯಾಪಾರಿ ಸಮುದಾಯಗಳ ನಡುವೆ ಪೈಪೋಟಿಗಳೇ ಕೋಮುವಾದದ ಮೂಲವಾಗಿ ಪರಿಣಮಿಸಿವೆ."

2. ಮಂಗಳೂರಿನ ಚರ್ಚ್ ದಾಳಿಗಳ ಬಳಿಕ ಚುರುಮುರಿ.ಕಾಮ್‌ನಲ್ಲಿ ಪ್ರಕಟವಾದ ಸಿ.ಎನ್.ಬಿ.ಸಿ. ಟೀವಿ 18ರ ಇಕಾನಮಿಕ್ ಪಾಲಿಸಿ ಎಡಿಟರ್ ಆಗಿರುವ ವಿವಿಯನ್ ಫೆರ್ನಾಂಡಿಸ್‌ರವರ 'The Bajrang Dal doesn't belong in Mangalore' ಎನ್ನುವ ಲೇಖನ. ಈ ಲೇಖನದಲ್ಲಿ ನಾನು ಉಲ್ಲೇಖಲಿಚ್ಛಿಸುವ ಭಾಗ : "While Hindus are the majority in Mangalore, Christians and Muslims have a sizeable strength and peace had held all along, even though the Konka ni-speaking Hindus (more than the Tulu-spe aking ones) have a particular affinity to the RSS."

3. ಪ್ರಜಾವಾಣಿಯ ಪ್ರಖ್ಯಾತ ದೆಹಲಿ ನೋಟ ಅಂಕಣದಲ್ಲಿ ಬರೆಯುವ ಪ್ರಜಾವಾಣಿಯ ದೆಹಲಿ ಪ್ರತಿ ನಿಧಿ ದಿನೇಶ್ ಅಮೀನ್ ಮಟ್ಟು ಮಂಗಳೂರಿನ ಪಬ್ ದಾಳಿಯ ಬಳಿಕ ಪ್ರಕಟವಾದ ತಮ್ಮ "ಕೂಡಿ ಕಟ್ಟಿದ್ದನ್ನು ಒಡೆದು ಮುರಿದರು" ಎಂಬ ಲೇಖನದಲ್ಲಿ ಹೀಗೆ ಬರೆಯುತ್ತಾರೆ. (ಪ್ರಜಾವಾಣಿ ಫೆ. 2009)

"ವ್ಯಾಪಾರ ಎನ್ನುವುದು ಶಕ್ತಿ ಹೇಗೋ, ಅದು ದ.ಕ. ಮಂದಿಯ ದೌರ್ಬಲ್ಯ ಕೂಡ ಹೌದು. ಈ ಸತ್ಯವನ್ನು ಮೊದಲು ಅರಿತುಕೊಂಡವರು ಸಂಘ ಪರಿವಾರದ ನಾಯಕರು. ಒಬ್ಬ ಮುಸ್ಲಿಂ ವ್ಯಾಪಾರಿಯ ದಮನವನ್ನು ಒಬ್ಬ ಹಿಂದೂ ವ್ಯಾಪಾರಿ ಕೇವಲ ಧರ್ಮ ರಕ್ಷಣೆಯ ದೃಷ್ಟಿಯಿಂದಲ್ಲ, ವ್ಯಾಪಾರದ ಲಾಭದ ದೃಷ್ಟಿ ಯಿಂದಲೂ ನೋಡುತ್ತಾನೆ ಎನ್ನುವದು ಅವರಿಗೆ ತಿಳಿದಿತ್ತು. ವ್ಯಾಪಾರದ ಮೂಲಕ ಸಮೃದ್ಧಿಯನ್ನು ಕಂಡ ಕೊಂಕಣಿಗಳು(ಗೌಡ ಸಾರಸ್ವತ ಬ್ರಾಹ್ಮಣರು) ನೀಡುತ್ತಿದ್ದ ದೇಣಿಗೆಯಿಂದಾಗಿ ರಾಜ್ಯ ಸಂಘಟನೆಯ ರಿಮೋಟ್ ಕಂಟ್ರೋಲ್ ಕೂಡ ದ.ಕ.ದಲ್ಲಿಯೇ ಇತ್ತು. ಆದರೆ ಕೊಂಕಣಿ ಬ್ರಾಹ್ಮಣರಿಂದಾಚೆಗೆ ಬೆಳೆಯಲು ಸಂಘಕ್ಕೆ ಸಾಧ್ಯವಾಗಿರ ಲಿಲ್ಲ."

4. ಶಶಿಧರ ಭಟ್ ಬರೆಯುವ "ಕೋಮು ಸಂಘರ್ಷ ವಾದ ಆರ್ಥಿಕ ಸಂಘರ್ಷ" (ಕಡಲತಡಿಯ ತಲ್ಲಣ: ಸೃಷ್ಟಿ ಪಬ್ಲಿ ಕೇಶನ್ಸ್, ಬೆಂಗಳೂರು 2009):

"ಕರ್ನಾಟಕದಲ್ಲಿ ಜನಸಂಘ ಎಲ್ಲೂ ಇರದಿದ್ದಾಗ ಅದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತ್ಯಕ್ಷವಾಗಿತ್ತು. ನಾವು ಸಣ್ಣವರಿದ್ದಾಗೆಲ್ಲ ಜನ ಸಂಘ ಎಂದರೆ ವ್ಯಾಪಾರಿಗಳ ಪಕ್ಷ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಿರಾಣಿ ಅಂಗಡಿಗಳನ್ನಿಟ್ಟುಕೊಂಡವರು ಕೊಂಕಣಿಗಳಾದುದರಿಂದ ಜನ ಸಂಘ ಕೊಂಕಣಿಗಳ ಪಕ್ಷ ಎಂದೇ ನಾವು ತಿಳಿದು ಕೊಂಡಿದ್ದೆವು.

ದಕ್ಷಿಣ ಕನ್ನಡದಲ್ಲಿ ಜನಸಂಘಕ್ಕೆ ಮೊದಲು ಬೆಂಬಲ ನೀಡಿದವರು ವ್ಯಾಪಾರಿಗಳು, ಇವರಿಂದ ರೂಪುಗೊಂಡ ಒಂದು ರಾಜಕೀಯ ಪಕ್ಷ ತುಂಬ ಸಹಜವಾಗಿ ವ್ಯಾಪಾರಿ ಅಜೆಂಡಾವನ್ನು ಹೊಂದಿರಲೇಬೇಕು. ಮತ್ತು ಆ ಪಕ್ಷದ ರಾಜಕೀಯ ಸಿದ್ಧಾಂತ ಮತ್ತು ಹೋರಾಟಕ್ಕೆ ವ್ಯಾಪಾರಿ ಟಚ್ ಇರಲೇಬೇಕು. ಇಲ್ಲಿ ಆದದ್ದು ಇದೇ".

ಈ ಮೇಲಿನ ಬರಹಗಳ ಉಲ್ಲೇಖಗಳು ದಕ್ಷಿಣ ಕನ್ನಡದ ಕೊಂಕಣಿಗಳ ಅಂದರೆ ಗೌಡ ಸಾರಸ್ವತರ ಸಂಘ ನಿಷ್ಠೆಯನ್ನು ಉಲ್ಲೇಖಿಸುತ್ತವೆ. ಜೊತೆಗೆ ತಾರ್ಕಿಕವಾಗಿ ಮತ್ತು ಕೆಲವೊಮ್ಮೆ ನೇರವಾಗಿ ದಕ್ಷಿಣ ಕನ್ನಡದ ಇತ್ತೀಚಿನ ಬೆಳವಣಿಗೆಗಳ ನೈತಿಕ ಹೊಣೆಗಾರಿಕೆಯ ತೋರುಬೆರಳನ್ನು ಕೊಂಕಣಿ ಸಮುದಾಯದತ್ತ ಚಾಚುತ್ತವೆ. ನನಗೆ



ಇದು ಬರೇ ವ್ಯಕ್ತಿಗಳ ವೈಯಕ್ತಿಕ ಅಭಿಪ್ರಾಯದಂತೆ ಕಾಣದೇ ಕೊಂಕ ಣಿಗಳ ಬಗ್ಗೆ ದಕ್ಷಿಣಕನ್ನಡದ ಸಮಾಜದ ಒಟ್ಟು ಅಭಿ ವ್ಯಕ್ತಿಯಾಗಿ ನನಗೆ ಭಾಸವಾಗುತ್ತಿದೆ. ಇದನ್ನು ಒಂದು ಮರುಪೂರಣ (ಫೀಡ್ ಬ್ಯಾಕ್) ಎಂಬ ಧನಾತ್ಮಕ ಭಾವದಿಂದ ಗ್ರಹಿಸಿಕೊಂಡು ಕೊಂಕಣಿ ಸಮುದಾಯ (ಗೌಡ ಸಾರಸ್ವತ) ತನ್ನ ಸಾಮಾಜಿಕ ಬದ್ಧತೆಗಳನ್ನು ಪುನರಾವ ಲೋಕನ ಮಾಡಿಕೊಳ್ಳಬೇಕಾದ ಗಳಿಗೆ ಬಂದಿದೆ.

ಈ ಪುನರಾವಲೋಕನದ ಪೂರ್ವಭಾವಿಯಾಗಿ ನಾನು ನಡೆಸಿದ ಅಧ್ಯಯನದಲ್ಲಿ ಕಂಡುಬಂದ ಕೆಲವೊಂದು ಅಂಶಗಳನ್ನು ಮುನ್ನಡೆ ಯಾಗಿ ಇಟ್ಟುಕೊಂಡು ಮುಂದುವರೆಯಲು ಇಚ್ಛಿಸುತ್ತೇನೆ.

ತುಳುನಾಡಿನ ವ್ಯಾಪಾರದ ಮೇಲೆ ಕೊಂಕಣಿಗಳ ನಿಯಂತ್ರಣ:

ತುಳುನಾಡಿನ ವ್ಯಾಪಾರದ ಮೇಲೆ ಕೊಂಕಣಿಗಳ ಪ್ರಾಬಲ್ಯ 17ನೇ ಶತಮಾನದ ಪೂರ್ವಾರ್ಧದಿಂದ ಬೆಳೆದು ಬಂದದ್ದು. ಗೋವಾದ ವ್ಯಾಪಾರದಲ್ಲಿ ಗೌಡಸಾರಸ್ವತರ ಪ್ರಾಬಲ್ಯ[1], ಕೊಂಕಣಿಗಳ ಮೇಲೆ ಕೆಳದಿ ಅರ ಸೊತ್ತಿಗೆಯ ಅಖಂಡ ವಿಶ್ವಾಸ[2] ಮುಂತಾದ ಕಾರಣಗಳು ಆವರೆಗೆ ತುಳುನಾಡಿ ನಲ್ಲಿ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿದ್ದ ಜೈನ, ಲಿಂಗಾಯತ (ಬಣಜಿಗ) ಮತ್ತು ಆರ್ಯವೈಶ್ಯ(ಕೋಮಟಿ ಸೆಟ್ಟಿ) ಸಮುದಾಯಗಳಿಗೆ ಸೇರಿದ ಸೆಟ್ಟಿಕಾರರ ಪ್ರಾಬಲ್ಯ ವನ್ನು ಕೊನೆಗಾಣಿಸಿ ಕೊಂಕಣಿ ವ್ಯಾಪಾರಿಗಳು ಕರಾವ ಳಿಯ ವ್ಯಾಪಾರದಲ್ಲಿ ನಿಯಂತ್ರಣ ಸಾಧಿಸಲು ಸಾಧ್ಯವಾ ದವು[3]. ಆದರೆ ಮುಸ್ಲಿಂ ವ್ಯಾಪಾರಿಗಳು ಕ್ರಿ.ಶ. 7ನೇ ಶತ ಮಾನದಲ್ಲೇ ತುಳುನಾಡಿನಲ್ಲಿ ನೆಲೆಸಿದ್ದಕ್ಕೆ ಪುರಾವೆಗಳಿವೆ. ಮುಸ್ಲಿಂ ವ್ಯಾಪಾರಗಳ ಒಕ್ಕೂಟವಾದ ಹಂಜಮಾನದ ಉಲ್ಲೇಖವು ತುಳುನಾಡಿನ ಮಧ್ಯಕಾಲೀನ ಶಿಲಾಶಾಸನಗ ಳಲ್ಲಿ ದೊರಕುತ್ತದೆ. ಈ ಉಲ್ಲೇಖವು ಕೊಂಕಣಿಗಳ ಆಗ ಮನಕ್ಕಿಂತ ಮೊದಲೇ ಮುಸ್ಲಿಂ ವ್ಯಾಪಾರಿಗಳು ತುಳುನಾ ಡಿನ ವ್ಯಾಪಾರದ ಪ್ರಮುಖ ಭಾಗವಾಗಿದ್ದರು ಎಂಬುದನ್ನು ಸೂಚಿಸುತ್ತದೆ.

ತುಳುನಾಡಿನಲ್ಲಿ ಮಧ್ಯಕಾಲೀನ ಇತಿಹಾಸದಲ್ಲಿ ಮುಸ್ಲಿಮರ ಬಗ್ಗೆ ಉಲ್ಲೇಖಗಳು:

ಮಂಗಳೂರಿನ ಬಂದರ್ ಪ್ರದೇಶದ ಬೆಲಿಯ ಪಳ್ಳಿ ಎಂದು ಹೆಸರಾಗಿರುವ ಮಸ್ಜಿದ್ ಜೀನತ್ ಬಕ್ಷ್ ಹಿಜರಿ ಶಕ 22 (ಕ್ರಿ.ಶ. 644) ರಲ್ಲಿ ಸ್ಥಾಪನೆಯಾಯಿತು[4]. ಮುಸ್ಲಿಮರು ಆಗಿನಿಂದಲೂ ತುಳು ನಾಡಿನ ವ್ಯಾಪಾರದ ಒಂದು ಪ್ರಮುಖ ಭಾಗವಾಗಿದ್ದರು. ತುಳುನಾಡಿನ ಮಧ್ಯಕಾಲೀನ ಇತಿಹಾಸ ಮಂಗಳೂರಿನ ಮುಸ್ಲಿಮರ ಮತ್ತು ಇತರರ ನಡುವೆ ಆಗಾಗ ನಡೆಯುತ್ತಿದ್ದ ಗಲಭೆಗಳನ್ನು ಉಲ್ಲೇಖಿಸುತ್ತದೆ. ಆ ಹೊತ್ತಿಗೆ ಕೊಂಕಣಿಗಳಿನ್ನೂ ತುಳುನಾಡಿನಲ್ಲಿ ನೆಲೆಯೂರಿರಲಿಲ್ಲ.

ಕ್ರಿ.ಶ. 1325–1354ರ ನಡುವೆ ಮಂಗಳೂರಿಗೆ ಭೇಟಿನೀಡಿದ ಅರಬ್ಬಿ ಪ್ರವಾಸಿ ಇಬ್ನ್ ಬಟೂಟ ಮಂಗಳೂರಿನಲ್ಲಿ 4,000 ಮುಸ್ಲಿಮರ ಒಂದು ಕಾಲನಿ ಇದ್ದು ಸ್ಥಳೀಯರಿಗೂ ಮುಸ್ಲಿಮರಿಗೂ ಆಗಾಗ ಗಲಾಟೆಗಳು ನಡೆಯುತ್ತಿದ್ದವು ಮತ್ತು ದೊರೆ ರಾಮದೇವ ಇದನ್ನು ವ್ಯಾಪಾರದ ಹಿತಾಸಕ್ತಿಯಿಂದ ಮಧ್ಯಪ್ರವೇಶಿಸಿ ಸಂತೈಸುತ್ತಿದ್ದ ಎಂದು ತನ್ನ ಪ್ರವಾಸ ಕಥನದಲ್ಲಿ ಉಲ್ಲೇಖಿಸುತ್ತಾನೆ5 . (ಸೆಲೆಕ್ಷನ್ ಫ್ರಂ ದಿ ಟ್ರಾವೆಲ್ಸ್ ಇನ್ ಏಸಿಯ ಅಂಡ್ ಆಫ್ರಿಕಾ 1325–

> **ಇತರ ಮೇಲ್ವರ್ಗದ ಭೂಮಾಲಿಕರಂತೆ ಪ್ರಭುತ್ವ ನಿಷ್ಠರಾಗಿದ್ದ ಕೊಂಕಣಿಗಳು 19ನೇ ಶತಮಾನದ ಅಂತ್ಯದೊಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಗಣನೀಯ ಪ್ರಮಾಣದಲ್ಲಿ ಪಾಲ್ಗೊಂಡರು. ಮತ್ತು ಅಪ್ಪಟ ಕಾಂಗ್ರೆಸಿಗರಾಗಿ ನಿರ್ಮಾಣಗೊಂಡರು. ಅನೇಕ ಕೊಂಕಣಿಗಳು ಮಹಾತ್ಮಾ ಗಾಂಧಿಯವರ ಸಂದೇಶಕ್ಕೆ ಮಿಡಿದು ಅಸಹಕಾರ ಚಳುವಳಿ ಮತ್ತು ಸ್ವದೇಶಿ ಚಳುವಳಿಯಲ್ಲಿ ತೊಡಗಿಕೊಂಡರು. ಅನೇಕ ಬಟ್ಟೆವ್ಯಾಪಾರಿ ಕೊಂಕಣಿಗಳು ಖಾದಿ ಚಳುವಳಿಯಲ್ಲಿ ತೊಡಗಿಕೊಂಡು ಮಗ್ಗದ ಶಾಲೆಗಳನ್ನು ಸ್ಥಾಪಿಸಿದ ಪುರಾವೆಗಳಿವೆ. ಅನೇಕ ಕೊಂಕಣಿ ವ್ಯಾಪಾರಿಗಳ ಹೊಸ ಪೀಳಿಗೆ ಆಂದೋಲನದಲ್ಲಿ ತೊಡಗಿ ವ್ಯಾಪಾರದಿಂದ ಆ ಕುಟುಂಬಗಳು ಹೊರಬರಬೇಕಾಗಿ ಬಂದ ಹಲವು ಉಲ್ಲೇಖಗಳನ್ನು ನೀಡಬಹುದು. ದಕ್ಷಿಣಕನ್ನಡದಲ್ಲಿ ಕಾಂಗ್ರೆಸ್ ಕಟ್ಟಲು ಮುಂಚೂಣಿಯಲ್ಲಿ ನಿಂತವರು ಇದೇ ಕೊಂಕಣಿ ವ್ಯಾಪಾರಿ ಸಮುದಾಯ. ಕಾಂಗ್ರೆಸ್ ಸಿಧ್ಧಾಂತಗಳಿಂದ ಮತ್ತು ಗಾಂಧಿವಾದದಿಂದ ಪ್ರೇರಿತರಾದ ಹಲವು ಕೊಂಕಣಿಗಳು ಸ್ವಾತಂತ್ರ್ಯೋತ್ತರ ಸಹಕಾರ ಚಳುವಳಿಯಲ್ಲಿ ತೊಡಗಿಕೊಂಡರೆ ನೆಹರೂ ಆಧುನಿಕತೆಯಿಂದ ಪ್ರೇರಿತರಾದ ಕೊಂಕಣಿ ಯುವಕರು ಉದ್ಯಮಗಳಲ್ಲಿ ತೊಡಗಿಕೊಂಡರು.**

1354: ಈಬ್ನ್ ಬಟೂಟ: ಪುಟ ಸಂಖ್ಯೆ 233)

ಮಂಗಳೂರಿನಲ್ಲಿ ದೊರಕಿದ ಕ್ರಿ.ಶ. ಸುಮಾರು 1418ಕ್ಕೆ ಸಂಬಂಧಿಸಿದ ಶಿಲಾಶಾಸನವೊಂದರ ಪ್ರಮುಖ ಭಾಗವೊಂದನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ತಿಂಮಣ ಒಡೆಯನೆಂಬಾತ ಮಂಗಲೂರು ರಾಜ್ಯವನ್ನಾಳುತ್ತಿದ್ದ ಕಾಲದಲ್ಲಿ ಮುಸ್ಲಿಂ ವ್ಯಾಪಾರಿ ಸಂಘವಾದ ಹಂಜಮಾನದವರು ಸಲ್ಲುವ ಸುಂಕಗಳನ್ನು ಕಟ್ಟುತ್ತಿದ್ದರೂ ವಿನಾ ಕಾರಣ ತನ್ನ ಜನರನ್ನು ಕಳಿಸಿ ನಾಲ್ಕೈದು (ನಾಕಯಿದು) ಮಸೀದಿಗಳನ್ನು ಸುಟ್ಟು ಹಾಕಿದಾಗ ತಿಂಮಣ ಒಡೆಯನ ಮೇಲಧಿಕಾರಿಯಾದ ಬಯಿಚದಂಣಾಯಕನು ಬಂದು ಬಂಗರು, ಚೌಟರು, ಅಜಿಲರು ಸಮಸ್ತ ಕಟ್ಟಳೆಯವರು ಕೂಡಿರಲು ಹಂಜಮಾನದವರಿಗೆ ಪರಿಹಾರವನ್ನು ಕೊಡಿಸಿದ ಬಗ್ಗೆ ಈ ಶಾಸನ ವಿವರಿಸುತ್ತದೆ6. (ಶಾಸನ ಸಂ: 182 ಸೌತ್ ಇಂಡಿ ಯನ್ ಇನ್ಸ್ಕ್ರಿಪ್ಷನ್ಸ್ ಸಂಪುಟ: 7)

ಭಟ್ಕಳದಲ್ಲಿ ದೊರೆತ ಕ್ರಿ.ಶ. 1427 ನೇ ಇಸವಿಯ ವೀರಗಲ್ಲೊಂದರಲ್ಲಿ ಹಂಜಮಾನದ ಮುಖ್ಯಸ್ಥ ಕಾಸರಕೋಡಿನ ಉಮರ ಮರಕಾಲ, ಅವನ ಹೆಂಗಸರು ಮತ್ತು ಪರಿವಾರದ ಮೇಲೆ ಶ್ರೀ ಮನ್ಮಹಾಪ್ರಧಾನ ತಿಂಮಣ ಒಡೆಯನೆಂಬಾತ ಮೋಸದಿಂದ ಮುತ್ತಿಗೆ ಹಾಕಿ ಹಲ್ಲೆ ನಡೆಸಲು ಈ ಉಮರ ಮರಕಲನು ನಗಿರೆಯ ಸಂಗಿರಾಯ ಒಡೆಯರ ಬೆಂಬಲ ಕೋರಿದಾಗ ಅವರ ರಕ್ಷಣೆಗಾಗಿ ಸಂಗಿರಾಯ ಕಳುಹಿಸಿದ ಸಾವಿರ ಆಳು ಸೈನ್ಯದ ನಾಯಕನಾದ ಕೋಟೀಶ್ವರ ನಾಯಕನು ಈ ಸಂಬಂಧವಾಗಿ ಕಾಸರಕೋಡಿನಲ್ಲಿ ನಡೆದ ಗಲಭೆಯಲ್ಲಿ ಮೃತಪಟ್ಟದ್ದು ಉಲ್ಲೇಖವಾಗಿದೆ7 . (48, ಕರ್ನಾಟಕ ಇನ್ಸ್ಕ್ರಿಪ್ಷನ್ಸ್ ಸಂಪುಟ).

ಈ ಮೇಲಿನ ಉಲ್ಲೇಖಗಳನ್ನು ಗಮನಿಸಿದಾಗ ಮುಸ್ಲಿಮರ ಬಗ್ಗೆ ಗಣನೀಯ ಪ್ರಮಾಣದ ಸಾಮಾಜಿಕ ಅಸಹನೆಯು ತುಳುನಾಡಿನಲ್ಲಿ ಕೊಂಕಣಿಗಳ ಆಗಮನಕ್ಕಿಂತ ಹಿಂದೆಯೇ ಇತ್ತು ಎನ್ನುವುದನ್ನು ಗ್ರಹಿಸಬಹುದು. ಆದರೆ ತುಳುನಾಡಿನ ವ್ಯಾಪಾರದಲ್ಲಿ ಕೊಂಕಣಿಗಳ ಪ್ರಾಬಲ್ಯದ ಬಳಿಕ ಕೊಂಕಣಿಗಳ ಮತ್ತು ಮುಸ್ಲಿಮರ ನಡುವೆ ಸೌಹಾರ್ದತೆಗೆ ಕೊರತೆಯಿರಲಿಲ್ಲ ಎನ್ನುವುದಕ್ಕೆ ಹಲವು ಪುರಾವೆಗಳನ್ನು ಈ ಲೇಖನದುದ್ದಕ್ಕೂ ವಿವರಿಸಲಾಗಿದೆ. ಈ ಎರಡು ಸಮುದಾಯಗಳ ನಡುವೆ ಕೋಮು ಗಲಭೆಗಳು ಹುಟ್ಟಿಕೊಂಡ ಬಗ್ಗೆ ತುಳುನಾಡಿನ ಇತಿಹಾಸದಲ್ಲಿ ಪುರಾವೆಗಳು ನನಗೆ ಇದುವರೆಗೆ ದೊರಕಿಲ್ಲ.

ತುಳುನಾಡಿನ ವ್ಯಾಪಾರದಲ್ಲಿ ಮುಸ್ಲಿಂ ಮತ್ತು ಕೊಂಕಣಿ ವರ್ತಕರು:

1800ನೇ ಇಸವಿಯ ಹೊತ್ತಿಗೆ ದಕ್ಷಿಣ ಕನ್ನಡದ ವ್ಯಾಪಾರ ವಹಿವಾಟುಗಳಲ್ಲಿ ಕೊಂಕಣಿಗಳು ಮತ್ತು ಮುಸ್ಲಿಮರು, ಈ ಎರಡೇ ಸಮುದಾಯಗಳು ವ್ಯಾಪಕ ನಿಯಂತ್ರಣ ಸಾಧಿಸಿದ್ದರು ಎನ್ನುವುದನ್ನು ಫ್ರಾನ್ಸಿಸ್ ಬುಕಾನನ್ ಬರೆದ "ಅ ಜರ್ನಿ ಫ್ರಂ ಮದ್ರಾಸ್.." ತಿಳಿಸುತ್ತದೆ. ಉಳಿದ ಪಾರಂಪರಿಕ ವ್ಯಾಪಾರಿ ಸಮುದಾಯಗಳಾದ ಹರಿಶೆಟ್ಟಿ ಸಮುದಾಯ, ತೆಲುಗು ಬಣಜಿಗರು ಮತ್ತು ಲಿಂಗಾಯತ ಬಣಜಿಗರು ಕೆಲವು ಕುಟುಂಬಗಳಷ್ಟೆ ಉಳಿದುಕೊಂಡಿದ್ದರೂ ವ್ಯಾಪಾರದಿಂದ ನಿರ್ಗಮನವಾಗಿದ್ದರು. ಆ ಹೊತ್ತಿಗೆ ಇಡೀ ದಕ್ಷಿಣ ಕನ್ನಡದಲ್ಲಿದ್ದ ಗುಜರಾತಿಗಳು[4] ಮನೆಗಳು ಮಾತ್ರ, ಕೊಂಕಣಿಗಳದ್ದು 2434 ಮನೆಗಳಿದ್ದರೆ ಮುಸ್ಲಿಮರದ್ದು 5233 ಮನೆಗಳಿದ್ದವು ಇದರಲ್ಲಿ ಮುಸ್ಲಿಂ ವ್ಯಾಪಾರಿಗಳಾದ ಮೊಪ್ಲಾಗಳದ್ದು 3825 ಮನೆಗಳಾದರೆ ಇತರ ಮುಸಲ್ಮಾನರದ್ದು 1388 ಮನೆಗಳು[8].

ಆ ಹೊತ್ತಿಗೆ ಕೊಂಕಣಿಗಳ ಹದಿನೆಂಟಕ್ಕೂ ಹೆಚ್ಚು ಪೇಟೆಗಳು ತುಳುನಾಡಿನಲ್ಲಿದ್ದವು ಎನ್ನುವುದನ್ನು ಮಂಜೇಶ್ವರಮದ ನಂತೇಶ್ವರ ದೇವಸ್ಥಾನದ 18ನೇ ಶತಮಾನದ ಶಾಸನಗಳು, ಕರಾರುಗಳು ಉಲ್ಲೇಖಿಸುತ್ತವೆ[9] .

ಹೈದರಾಲಿಯ ಆಡಳಿತದಲ್ಲಿ ತುಳುನಾಡಿನ ಪ್ರಮುಖ ವ್ಯಾಪಾರಿ ಸಮುದಾಯಗಳು ಮೋಪ್ಲಾ ಮತ್ತು ಕೊಂಕಣೀಸ್ ಆಗಿದ್ದರೂ ಬ್ರಿಟಿಷರು ತುಳುನಾಡನ್ನು ವಶಪಡಿಸಿಕೊಂಡ ಬಳಿಕ ಸೂರತ್, ಕಛ್, ಬಾಂಬೇ ಮತ್ತು ಇತರ ಉತ್ತರ ಭಾರತದ ಪಟ್ಟಣಗಳಿಂದ ವ್ಯಾಪಾರಿಗಳು ತುಳುನಾಡಿಗೆ ಬಂದು ನೆಲೆಯೂರಿದ್ದರು ಎನ್ನುವುದನ್ನು ಬುಕಾನನ್ ತಿಳಿಸುತ್ತಾನೆ. ಬಂಟ ಸಮುದಾಯದವರೂ ವ್ಯಾಪಾರಕ್ಕಿಳಿಯಲು ಪ್ರಾರಂಭಿಸಿದ್ದಾರೆ ಆದಾಗ್ಯೂ ಹೆಚ್ಚಿನ ವ್ಯಾಪಾರಿಗಳಿನ್ನೂ ಕೊಂಕಣಿಗಳು ಮತ್ತು ಮೋಪ್ಲಾಗಳೇ

[illegible][10].

ಕೊಂಕಣಿಗಳ ಸಂಘನಿಷ್ಠೆಯ ಇತಿಹಾಸ:

ಇತರ ಮೇಲ್ವರ್ಗದ ಭೂಮಾಲಿಕರಂತೆ ಪ್ರಭುತ್ವ ನಿಷ್ಠರಾಗಿದ್ದ ಕೊಂಕಣಿಗಳು 19ನೇ ಶತಮಾನದ ಅಂತ್ಯದೊಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಗಣನೀಯ ಪ್ರಮಾಣದಲ್ಲಿ ಪಾಲ್ಗೊಂಡರು. ಮತ್ತು ಅಪ್ಪಟ ಕಾಂಗ್ರೆಸಿಗರಾಗಿ ನಿರ್ಮಾಣಗೊಂಡರು. ಅನೇಕ ಕೊಂಕಣಿಗಳು ಮಹಾತ್ಮಾ ಗಾಂಧಿಯವರ ಸಂದೇಶಕ್ಕೆ ಮಿಡಿದು ಅಸಹಕಾರ ಚಳುವಳಿ ಮತ್ತು ಸ್ವದೇಶಿ ಚಳುವಳಿಯಲ್ಲಿ ತೊಡಗಿಕೊಂಡರು. ಅನೇಕ ಬಟ್ಟೆವ್ಯಾಪಾರಿ ಕೊಂಕಣಿಗಳು ಖಾದಿ ಚಳುವಳಿಯಲ್ಲಿ ತೊಡಗಿಕೊಂಡು ಮಗ್ಗದ ಶಾಲೆಗಳನ್ನು ಸ್ಥಾಪಿಸಿದ ಪುರಾವೆಗಳಿವೆ. ಅನೇಕ ಕೊಂಕಣಿ ವ್ಯಾಪಾರಿಗಳ ಹೊಸ ಪೀಳಿಗೆ ಆಂದೋಲನದಲ್ಲಿ ತೊಡಗಿ ವ್ಯಾಪಾರದಿಂದ ಆ ಕುಟುಂಬಗಳು ಹೊರಬರಬೇಕಾಗಿ ಬಂದ ಹಲವು ಉಲ್ಲೇಖಗಳನ್ನು ನೀಡಬಹುದು. ದಕ್ಷಿಣಕನ್ನಡದಲ್ಲಿ ಕಾಂಗ್ರೆಸ್ ಕಟ್ಟಲು ಮುಂಚೂಣಿಯಲ್ಲಿ ನಿಂತವರು ಇದೇ ಕೊಂಕಣಿ ವ್ಯಾಪಾರಿ ಸಮುದಾಯ.

ಕಾಂಗ್ರೆಸ್ ಸಿಧ್ಧಾಂತಗಳಿಂದ ಮತ್ತು ಗಾಂಧಿವಾದದಿಂದ ಪ್ರೇರಿತರಾದ ಹಲವು ಕೊಂಕಣಿಗಳು ಸ್ವಾತಂತ್ರ್ಯೋತ್ತರ ಸಹಕಾರ ಚಳುವಳಿಯಲ್ಲಿ ತೊಡಗಿಕೊಂಡರೆ ನೆಹರೂ ಆಧುನಿಕತೆಯಿಂದ ಪ್ರೇರಿತರಾದ ಕೊಂಕಣಿ ಯುವಕರು ಉದ್ಯಮಗಳಲ್ಲಿ ತೊಡಗಿಕೊಂಡರು. ಜೊತೆಯಲ್ಲಿ ತಮ್ಮ ಕುಲಕಸುಬಾದ ವ್ಯಾಪಾರವನ್ನು ಮೊದಲಿನ ಚಾತುರ್ಯಗಳಿಂದಲೇ ಮುಂದುವರೆಸಿದ ಅನೇಕ ಕುಟುಂಬಗಳೂ ಇದ್ದೇ ಇದ್ದವು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ನೆಹರೂ ತೀರಿಕೊಂಡಾಗ ಕಾಂಗ್ರೆಸ್ಸಿನಲ್ಲಿ ಉದ್ಭವವಾದ ನಾಯಕತ್ವದ ಗೊಂದಲಗಳನ್ನು ನಿವಾರಿಸುವಲ್ಲಿ ಸಂಜೀವ ರೆಡ್ಡಿ, ನಿಜಲಿಂಗಪ್ಪ, ಕಾಮರಾಜ್ ನಾಡರ್, ಅತುಲ್ಯ ಘೋಶ್ ಮತ್ತು ಶ್ರೀನಿವಾಸ ಮಲ್ಯ ಈ ಐವರ ಸಿಂಡಿಕೇಟ್ ಪ್ರಧಾನ ಪಾತ್ರವಹಿಸಿತು ಎನ್ನುವುದು ಇಂದು ಇತಿಹಾಸ[11]. ಶ್ರೀನಿವಾಸ ಮಲ್ಯರು ದಕ್ಷಿಣ ಕನ್ನಡದ ಕೊಂಕಣಿ ಸಮುದಾಯ ಕಾಂಗ್ರೆಸ್ ಪಕ್ಷದ ಒಳಗಿನ ಶಕ್ತಿರಾಜಕಾರಣದಲ್ಲಿ ಎಂತಹ ಪಾತ್ರವಹಿಸಿತ್ತು ಎಂಬುದಕ್ಕೆ ಒಂದು ಪುರಾವೆ. ಇದೇ ಸಾಲಿನಲ್ಲಿ ಹೆಚ್.ವಿ.ಕಾಮತ್, ಟಿ.ಎ.ಪೈ, ವೈಕುಂಠ ಬಾಳಿಗ, ಮಣೇಲ್ ಶ್ರೀನಿವಾಸ ನಾಯಕ್, ವೆಂಕಟ್ರಾಯ ಬಾಳಿಗ, ಯು.ಪಿ.ಮಲ್ಯ, ರಂಗನಾಥ ಶೆಣೈ, ಬಂಟ್ವಾಳ ನಾರಾಯಣ ನಾಯಕ್ ಮುಂತಾದ ಕಾಂಗ್ರೆಸ್ ಮುತ್ಸದ್ದಿಗಳನ್ನು ನಾನು ಉಲ್ಲೇಖಿಸ ಬಯಸುತ್ತೇನೆ. ಇವರೆಲ್ಲರೂ ಮತ್ತು ಇನ್ನೂ ಅನೇಕ ಕೊಂಕಣಿಗಳು ದಕ್ಷಿಣ ಕನ್ನಡದಾದ್ಯಂತ ಆ ಹೊತ್ತಿಗೆ ಕಾಂಗ್ರೆಸ್ ಸಂಘಟಿಸಿದವರು.

ಉಳಿದಂತೆ ಕೊಂಕಣಿಗಳು ಜನಸಂಘವನ್ನೂ ಕಟ್ಟಿದರು, ಪ್ರಜಾ ಸೋಷಲಿಸ್ಟ್ ಪಕ್ಷದಲ್ಲೂ (ಉಪೇಂದ್ರ ನಾಯಕ್[12]) ಇದ್ದರು. ಕಮ್ಯುನಿಷ್ಟ್ ಪಕ್ಷದಲ್ಲೂ ಇದ್ದರು (ಎ. ಶಾಂತಾರಾಮ ಪೈ[13]) ಕೊಂಕಣಿಗಳು ಆ ಹೊತ್ತಿಗೆ ಸುಶಿಕ್ಷಿತರೂ, ವೈಚಾರಿಕರೂ ಆಗಿದ್ದುದರಿಂದ ಎಲ್ಲದರಲ್ಲಿಯೂ ಕೈಯಾಡಿಸಿದವರು. ಇದು ಕೊಂಕಣಿಗಳು ಎಲ್ಲಾ ವಿಚಾರಧಾರೆಗಳಿಗೂ ತಮ್ಮನ್ನೊಡ್ಡಿಕೊಂಡಿದ್ದರು ಎನ್ನುವುದನ್ನು ತೋರಿಸುತ್ತದೆ. ಸಮಕಾಲೀನ ಸಾಹಿತ್ಯ ಮತ್ತು ಪತ್ರಿಕೋದ್ಯಮ ಚಟುವಟಿಕೆಗಳಲ್ಲೂ ದಕ್ಷಿಣ ಕನ್ನಡದಲ್ಲಿ ಕೊಂಕಣಿಗಳು ಮುಂಚೂಣಿಯಲ್ಲಿದ್ದುದೂ ಇದನ್ನು ಪುಷ್ಟೀಕರಿಸುತ್ತದೆ. ಆದರೆ ಕೊಂಕಣಿಗಳ ಪ್ರಥಮ ನಿಷ್ಠೆ ಆ ಸಮಯಕ್ಕೆ ಕಾಂಗ್ರೆಸಿನಲ್ಲಿತ್ತು.

ಲೋಕಸಭಾ ಚುನಾವಣೆಗಳಲ್ಲಿ 1951[14],57, 62, 71,77ರಲ್ಲಿ ಉಡುಪಿ ಲೋಕಸಭಾ ಕ್ಷೇತ್ರದಿಂದ ಕೊಂಕಣಿ ಕಾಂಗ್ರೆಸಿಗ ಚುನಾಯಿತನಾಗಿದ್ದ[15]. ಅಂದರೆ ದಕ್ಷಿಣ ಕನ್ನಡದಲ್ಲಿದ್ದ ಎರಡು ಲೋಕಸಭಾ ಸ್ಥಾನಗಳಲ್ಲಿ ಒಂದು ಸ್ಥಾನ ಕೊಂಕಣಿಗಳಿಗೆ ಮೀಸಲೋ ಎಂಬಷ್ಟು ಪ್ರಾಬಲ್ಯವನ್ನು ಕಾಂಗ್ರೆಸ್ಸಿನಲ್ಲಿ ಕೊಂಕಣಿಗರು ಗಳಿಸಿದ್ದರು ಎನ್ನುವುದನ್ನು ಗ್ರಹಿಸಬಹುದು. 1951, 62, 67ರಲ್ಲಿ ತಲಾ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಕೊಂಕಣಿ ಕಾಂಗ್ರೆಸಿಗರು ಶಾಸಕರಾಗಿ ಆರಿಸಿಬಂದಿದ್ದರು. 1957ರಲ್ಲಿ ಒಬ್ಬ ಕೊಂಕಣಿ ಶಾಸಕ ಆಯ್ಕೆ ಆಗಿದ್ದರು[16].

ಅಂಕಿಅಂಶಗಳ ಹೆಚ್ಚಿನ ವಿಶ್ಲೇಷಣೆಗಾಗಿ 1957ರ ಮಂಗಳೂರು 1 ವಿಧಾನಸಭಾ ಚುನಾವಣೆಯ ಫಲಿತಾಂಶಗಳನ್ನು ಗಮನಿಸಬಹುದು[17].

ಕ್ರ	ಅಭ್ಯರ್ಥಿ	ಪಕ್ಷ	ಮತಗಳು	%
1	ವೈಕುಂಠ ಬಾಳಿಗಾ	ಭಾ.ರಾ. ಕಾಂಗ್ರೆಸ್	16,365	48.94%
2.	ಶಾಂತಾರಾಮ್ ಪೈ	ಸಿ.ಪಿ.ಐ.	10,364	30.99%
3.	ಲೌರಾ ಪಾಯಸ್	ನಿರ್ದಲೀಯ	4,766	14.25%
4.	ಪ್ರಭಾಕರ	ಭಾ.ಜನಸಂಘ	1,945	5.82%

ವೈಕುಂಠ ಬಾಳಿಗರು ರಾಜ್ಯ ಸಂಪುಟದಲ್ಲಿ ಸಚಿವರೂ ಆಗಿದ್ದರು ಬಳಿಕ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಆಗಿದ್ದರು. ಟಿ.ಎ.ಪೈಗಳು ಕೇಂದ್ರ ಸಂಪುಟದಲ್ಲಿದ್ದು ಬ್ಯಾಂಕು ರಾಷ್ಟ್ರೀಕರಣ, ಕೃಷಿಸಾಲಗಳ ಮುಕ್ತ ನೀತಿ, ವಿಮಾರಂಗ ಮುಂತಾದ ರಾಷ್ಟ್ರ ಮಟ್ಟದ ಸೇವೆಯನ್ನು ಕಾಂಗ್ರೆಸ್ ನಲ್ಲಿದ್ದುಕೊಂಡು ನೀಡಿದವರು. ಇದರಿಂದ ದಕ್ಷಿಣಕನ್ನಡದ ಕಾಂಗ್ರೆಸ್‌ನಲ್ಲಿ ಕೊಂಕಣಿಗಳ ಗಣನೀಯ ಧ್ವನಿ ಇತ್ತು ಎನ್ನು ವುದನ್ನು ಊಹಿಸಬಹುದು.

ಹಳೆಯ ಕೊಂಕಣಿ ಕಾಂಗ್ರೆಸಿಗರು ತಮ್ಮ ಉತ್ಸಾಹವನ್ನು ಕಳೆದುಕೊಂಡಿದ್ದರು. ಯುವಕರ ಅಭಿಪ್ರಾಯಗಳು ಬದಲಾಗತೊಡಗಿದ್ದವು. ಸಾಮಾಜಿಕ ಪಲ್ಲಟದ ಪರಿಣಾಮವಾಗಿ ಮಧ್ಯಮವರ್ಗಕ್ಕೆ ಕಡೆಗಣಿಸಲ್ಪಟ್ಟಂತಹ ಅಸಹನೆ ಕಾಡಲಾರಂಭಿಸಿತ್ತು. ಈ ಅಸಹನೆ, ಭ್ರಮನಿರಸನ ಒಟ್ಟಾಗಿ ಕೂಡಿ ಪ್ರತಿಭಟನೆಯಾಗಿ ಹೊರಹೊಮ್ಮಲು ಇಂದಿರಾ ಗಾಂಧಿ ಘೋಷಿಸಿದ ತುರ್ತು ಪರಿಸ್ಥಿತಿ ಒಂದು ಭೂಗತ ಚಟುವಟಿಕೆಯ ರಂಗವನ್ನು ನಿರ್ಮಿಸಿತು. ಈ ಭೂಗತ ಚಟುವಟಿಕೆಗಳ ಉತ್ಸಾಹ ರಾಷ್ಟ್ರಪ್ರೇಮದ ಹೊಸ ಉನ್ಮಾದದಂತೆ ಭಾಸವಾಗಿ ರಾ.ಸ್ವ.ಸಂಘ ರಾಷ್ಟ್ರಪ್ರೇಮದ ಹೊಸ ಹರಿಕಾರನಂತೆ ಮುಂದೊತ್ತಿ ಬಂದು ಅಸಂತೃಪ್ತ ಮಧ್ಯಮವರ್ಗವನ್ನು ತೆಕ್ಕೆಗೆ ಸೆಳೆದುಕೊಂಡಿತು.

ಇಂದಿರಾಗಾಂಧಿಯ ಇಪ್ಪತ್ತು ಅಂಶಗಳ ಕಾರ್ಯಕ್ರಮದಡಿಯಲ್ಲಿ ದೇವರಾಜು ಅರಸು ಜಾರಿಗೆ ತಂದ ಭೂಸುಧಾರಣಾ ಕಾಯಿದೆಯಿಂದ ಅನೇಕ ಕೊಂಕಣಿ ಭೂಮಾಲಿಕರು ನೆಲಕಳಕೊಂಡರೂ ಅದಾಗಲೇ ನೆಲೆಯೂರಿ ದೇಶಾದ್ಯಂತ ವಿಸ್ತರಿಸತೊಡಗಿದ್ದ ಕೊಂಕಣಿಗಳೇ ಹುಟ್ಟುಹಾಕಿದ್ದ ಬ್ಯಾಂಕಿಂಗ್ ರಂಗ ಕೊಂಕಣಿ ಯುವಕರಿಗೆ ಆಧಾರವಾಯಿತು.

1967 ಒಂದು ನಿರ್ಣಾಯಕ ಕಾಲಘಟ್ಟ, ಕಾಂಗ್ರೆಸ್ ಎರಡು ಭಾಗವಾಗಿತ್ತು. ಶ್ರೀನಿವಾಸ ಮಲ್ಯರ ನಿಧನವಾಗಿತ್ತು. ಇಂದಿರಾ ಆಡಳಿತ ಹಳೆಯ ಕಾಂಗ್ರೆಸ್ ನಿಷ್ಠಾವಂತರಿಗೆ ಭ್ರಮನಿರಸನವಾಗಿತ್ತು. ಹಿರಿಯ ಕಾಂಗ್ರೆಸಿಗರು ಮೆಲ್ಲನೆ ಹಿಂದೆ ಸರಿಯತೊಡಗಿದ ಕಾಲವದು. ಇಂದಿರಾಗಾಂಧಿ ಬಲಿಷ್ಠರಾಗಿದ್ದರು.

1968ರಲ್ಲಿ ದಕ್ಷಿಣ ಕನ್ನಡ ಕೋಮುಗಲಭೆಯೊಂದಕ್ಕೆ ಸಾಕ್ಷಿಯಾಯಿತು. ಎಪ್ರಿಲ್ 18ರಂದು ಕುದ್ರೋಳಿಯಲ್ಲಿ ಜೂಜಾಟದ ವಿವಾದವೊಂದು 2ದಿನಗಳ ವ್ಯಾಪಕ ಗಲಭೆಗೆ ಕಾರಣವಾಗಿ ಓರ್ವನ ಹತ್ಯೆಗೆ ಕಾರಣವಾಯಿತು[18]. ಇದಕ್ಕೆ ಕಾರಣವಾದದ್ದು ಕೊಂಕಣಿಗಳಲ್ಲ ಎಂಬುದನ್ನು ಉಲ್ಲೇಖಿಸುತ್ತಾ ಈ ಗಲಭೆಯಲ್ಲಿ ಅತೀ ಹೆಚ್ಚು ನಷ್ಟ ಅನುಭವಿಸಿದವರು ವ್ಯಾಪಾರಿಗಳು ಎಂಬುದನ್ನು ನೆನಪಿಸಬಯಸುತ್ತೇನೆ. ಅನೇಕ ಕೊಂಕಣಿ ಮತ್ತು ಮುಸ್ಲಿಂ ಭಂಡಸಾಲೆಗಳು ಸುಟ್ಟು ಹೋಗಿದ್ದವು. ಜೊತೆಗೆ ಇಲ್ಲೊಂದು ಆಸಕ್ತಿಕರ ಅಂಕಿಅಂಶಗಳತ್ತ ಓದುಗರ ಗಮನವನ್ನು ಸೆಳೆಯಬಯಸುತ್ತೇನೆ. ಭಾರತದಲ್ಲಿ 1954ರಿಂದ 1966ರವರೆಗೆ ನಡೆದ ಸರಾಸರಿ ಕೋಮು ಗಲಭೆಗಳ ಸಂಖ್ಯೆ 70.2 ಆದರೆ 1967ರಲ್ಲಿ ದೇಶದಾದ್ಯಂತ ನಡೆದ ಕೋಮು ಗಲಭೆಗಳು 209, 1968ರಲ್ಲಿ 346, 1969ರಲ್ಲಿ 519 ಕೋಮು ಗಲಭೆಗಳು ದೇಶದಾದ್ಯಂತ ನಡೆದವು19. ಆದುದರಿಂದ ಸ್ಥಳೀಯ ಕೋಮು ಗಲಭೆಗಳಿಗೊಂದು ರಾಷ್ಟ್ರೀಯ ಆಯಾಮವಿರುತ್ತದೆ ಎನ್ನುವುದನ್ನು ನಾವು ಅರ್ಥೈಸಿಕೊಳ್ಳಬೇಕು.

1968ರಲ್ಲಿ ನಡೆದ ಕೋಮು ಗಲಭೆಗೆ ಮೊಗವೀರ ಮತ್ತು ಮುಸ್ಲಿಮರ ನಡುವೆ ಸಂಭವಿಸಿದ ಸಣ್ಣ ಗಲಾಟೆಯು[20] ಮೂಲವಾದರೂ ಆ ಬಳಿಕ ಅದು ಸಮಗ್ರ ಸಮಾಜವನ್ನು ಆವರಿಸಿಕೊಳ್ಳುವಾಗ ಮೂಲ ಕಾರಣದಿಂದ ಬೇರೆಯೇ ಆಯಾಮವನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ಯಾವುದಾದರೂ ಒಂದು ಸಮುದಾಯವನ್ನು ಕಾರಣವೆಂದು ಸೂಚಿಸುವುದು ಅಸಮಂಜಸವಾಗುತ್ತದೆ. ಈ ಹಂತದಲ್ಲಿ ಮತ್ತೊಮ್ಮೆ ದಿನೇಶ್ ಅಮೀನ್ ಮಟ್ಟೂ ಅವರ ಬರಹದ ಒಂದು ಭಾಗವನ್ನು ಉಲ್ಲೇಖಿಸಲಿಚ್ಛಿಸುತ್ತೇನೆ.

"ದೇವರಾಜ್ ಅರಸರ ರಾಜಕೀಯ ಕ್ಷೇತ್ರದ ಸೋಷಿಯಲ್ ಇಂಜಿನೀರಿಂಗ್‌ನಿಂದಾಗಿ ಜಿಲ್ಲೆಯಲ್ಲಿ ಬಂಟರು ಮತ್ತು ಬ್ರಾಹ್ಮಣರ ಕೈಯಲ್ಲಿದ್ದ ರಾಜಕೀಯ ಅಧಿಕಾರ ಕೂಡ ಹಿಂದುಳಿದ ಜಾತಿಯ ಬಿಲ್ಲವರು ಮತ್ತು ಅಲ್ಪಸಂಖ್ಯಾತ ಕೋಮುಗಳ ಕಡೆಗೆ ಸರಿದು ಹೋಗಿತ್ತು." (ಅದೇ ಬರಹ: ಪ್ರಜಾವಾಣಿ ಫೆ. 2009)

ಇಲ್ಲಿ ಬ್ರಾಹ್ಮಣರು ಎನ್ನುವದನ್ನು ಕೊಂಕಣಿಗಳು ಎಂದು ಕೂಡ ಓದಿಕೊಳ್ಳಬೇಕು. ಜಿಲ್ಲೆಯ ಮಟ್ಟಿಗೆ ಕಾಂಗ್ರೆಸ್ಸಿನ ಮನಿಬ್ಯಾಗ್ ಎಂದೇ ಪರಿಗಣಿತವಾಗಿದ್ದ ಕೊಂಕಣಿ

ಸಮುದಾಯ ಈ ಸಾಮಾಜಿಕ ಪಲ್ಲಟದಿಂದ ಕಾಂಗ್ರೆಸ್ಸಿನಲ್ಲಿ ಮೆಲ್ಲನೆ ನೇಪಥ್ಯಕ್ಕೆ ಸರಿಯಿತು. ಅದುವರೆಗೆ ಪ್ರತಿ ವಿಧಾನ ಸಭಾ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಕೊಂಕಣಿಗರಿಗೆ ದೊರಕುತ್ತಿದ್ದ ಪ್ರಾತಿನಿಧ್ಯ 72ರ ವಿಧಾನ ಸಭಾ ಚುನಾವಣೆಯಲ್ಲಿ ದೊರಕಲಿಲ್ಲ.

ತುರ್ತು ಪರಿಸ್ಥಿತಿಯ ಭುಗಿಲು:

ಹಳೆಯ ಕೊಂಕಣಿ ಕಾಂಗ್ರೆಸಿಗರು ತಮ್ಮ ಉತ್ಸಾಹವನ್ನು ಕಳೆದುಕೊಂಡಿದ್ದರು. ಯುವಕರ ಅಭಿಪ್ರಾಯಗಳು ಬದಲಾಗತೊಡಗಿದ್ದವು. ಸಾಮಾಜಿಕ ಪಲ್ಲಟದ ಪರಿಣಾಮವಾಗಿ ಮಧ್ಯಮವರ್ಗಕ್ಕೆ ಕಡೆಗಣಿಸಲ್ಪಟ್ಟಂತಹ ಅಸಹನೆ ಕಾಡಲಾರಂಭಿಸಿತ್ತು. ಈ ಅಸಹನೆ, ಭ್ರಮನಿರಸನ ಒಟ್ಟಾಗಿ ಕೂಡಿ ಪ್ರತಿಭಟನೆಯಾಗಿ ಹೊರಹೊಮ್ಮಲು ಇಂದಿರಾ ಗಾಂಧಿ ಘೋಷಿಸಿದ ತುರ್ತು ಪರಿಸ್ಥಿತಿ ಒಂದು ಭೂಗತ ಚಟುವಟಿಕೆಯ ರಂಗವನ್ನು ನಿರ್ಮಿಸಿತು. ಈ ಭೂಗತ ಚಟುವಟಿಕೆಗಳ ಉತ್ಸಾಹ ರಾಷ್ಟ್ರಪ್ರೇಮದ ಹೊಸ ಉನ್ಮಾದದಂತೆ ಭಾಸವಾಗಿ ರಾ.ಸ್ವ.ಸಂಘ ರಾಷ್ಟ್ರಪ್ರೇಮದ ಹೊಸ ಹರಿಕಾರನಂತೆ ಮುಂದೊತ್ತಿ ಬಂದು ಅಸಂತೃಪ್ತ ಮಧ್ಯಮವರ್ಗವನ್ನು ತೆಕ್ಕೆಗೆ ಸೆಳೆದುಕೊಂಡಿತು. ಈ ಸಂದರ್ಭದಲ್ಲಿ ಬರೇ ಕೊಂಕಣಿಗಳಲ್ಲದೇ ಅನೇಕ ಹಿಂದುಳಿದ ವರ್ಗದವರೂ ಸೇರಿದಂತೆ ಗಣನೀಯ ಪ್ರಮಾಣದ ಮೇಲ್ವರ್ಗದವರು ಸಂಘದ ಭೂಗತ ಚಟುವಟಿಕೆಗಳಲ್ಲಿ ತೊಡಗಿಕೊಂಡರು.

1975ರಲ್ಲಿ ಜಯಪ್ರಕಾಶ್ ನಾರಾಯಣ್ ಅವರ ಸತ್ಯಾಗ್ರಹದ ಕರೆಗೆ ಓಗೊಟ್ಟು ತುರ್ತುಪರಿಸ್ಥಿತಿಯ ವಿರುದ್ಧ ಪ್ರತಿಭಟಿಸಿ ದೇಶದ ಎಲ್ಲೆಡೆಯಲ್ಲಿ ಬಂಧಿ ತರಾದ 80,000 ಸತ್ಯಾಗ್ರಹಿಗಳಲ್ಲಿ 15,000 ಸತ್ಯಾಗ್ರಹಿಗಳು ಕರ್ನಾಟಕದಲ್ಲಿ ಬಂಧಿತರಾದವರು. ಈ ಸಂಖ್ಯೆ ಸಾಧ್ಯವಾದದ್ದು ಮಂಗಳೂರಿನಲ್ಲಿ ನಡೆದ ವ್ಯಾಪಕ ಸಂಘಟನೆಯಿಂದ[21].

ಮೊದಲು ಊರಿಗೆ ಊರೇ ಕಾಂಗ್ರೆಸ್ಸಿನ ನಿಷ್ಠಾವಂತ ಮತದಾರರಾಗಿದ್ದ ಕೊಂಕಣಿ ಸಮುದಾಯ ಊರಿಗೆ ಊರೇ ಜನತಾ ಪಾರ್ಟಿಗೆ ಓಟು ಹಾಕುವ ಮೂಲಕ ಒಂದು ವ್ಯಾಪಕ ಸ್ಥಿತ್ಯಂತರಕ್ಕೆ ಕಾರಣವಾಯಿತು. ಬಳಿಕದ ದಿನಗಳಲ್ಲಿ ಕಾಂಗ್ರೆಸ್ ನಿಷ್ಠೆಯಿರುವ ಕೊಂಕಣಿಗರು ಬೆರಳೆಣಿಕೆಯ ಮನೆಗಳಾಗಿ ಉಳಿದುಹೋದವು. ತುರ್ತು ಪರಿಸ್ಥಿತಿಯ ಎರಡು ಮುಖ್ಯ ಪರಿಣಾಮಗಳೆಂದರೆ ತೀವ್ರ ಬಲಪಂಥ (ಸಂಘ) ಮತ್ತು ತೀವ್ರ ಎಡಪಂಥ (ನಕ್ಸಲ್ಬಾರಿ)ಗಳು ಶಕ್ತಿಗಳಿಸಿಕೊಂಡಿದ್ದು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಇದು ದಕ್ಷಿಣ ಕನ್ನಡಕ್ಕೆ ಸೀಮಿತವಾದ ವಿಷಯವಲ್ಲ. ರಾಷ್ಟ್ರ ಮಟ್ಟದ ಒಂದು ಪರಿಣಾಮ.

ಹೀಗೆ ಕಾಂಗ್ರೆಸ್ ನಿಷ್ಠವಾಗಿದ್ದ ಒಂದು ಸಮುದಾಯ ಸಾಮಾಜಿಕ, ರಾಜಕೀಯ ಮತ್ತು ಭಾವನಾತ್ಮಕ ಕಾರಣಗಳಿಂದಾಗಿ ಭಾರತೀಯ ಜನಸಂಘ ಮತ್ತು ಅದರ ಹೊಸ ಅವತರಣಿಕೆ ಭಾರತೀಯ ಜನತಾ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಹೊಸ ಪಕ್ಷವನ್ನು ದಕ್ಷಿಣ ಕನ್ನಡದಾದ್ಯಂತ ಕಟ್ಟುವಲ್ಲಿ ನಿರ್ಣಾಯಕವಾಯಿತು.

ತುರ್ತುಪರಿಸ್ಥಿತಿಯ ಬಳಿಕವೂ 77ರ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ನಲ್ಲಿ ವಿಜಯಿಯಾಗಿದ್ದರೂ ಟಿ.ಎ.ಪೈ ಸಂಜಯಗಾಂಧಿಯೊಂದಿಗಿನ ಭಿನ್ನಾಭಿಪ್ರಾಯದ ಕಾರಣದಿಂದಾಗಿ ತಮ್ಮ ಪದವಿಗೆ ರಾಜೀನಾಮೆ ನೀಡಿದರು ಮತ್ತು 80ರ ಚುನಾವಣೆಯಲ್ಲಿ ಕಾಂಗ್ರೆಸ್ (ಅರಸು) ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತರು[22]. ಆಗ ಅವರ ಸೋಲಿಗೆ ಕಾರಣ, ಇದೇ ಕೊಂಕಣಿಗಳು ಜನತಾ ಪಕ್ಷದ ವಿ.ಎಸ್.

ತುರ್ತುಪರಿಸ್ಥಿತಿಯ ಬಳಿಕವೂ 77ರ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ನಲ್ಲಿ ವಿಜಯಿಯಾಗಿದ್ದರೂ ಟಿ.ಎ.ಪೈ ಸಂಜಯಗಾಂಧಿಯೊಂದಿಗಿನ ಭಿನ್ನಾಭಿಪ್ರಾಯದ ಕಾರಣದಿಂದಾಗಿ ತಮ್ಮ ಪದವಿಗೆ ರಾಜೀನಾಮೆ ನೀಡಿದರು ಮತ್ತು 80ರ ಚುನಾವಣೆಯಲ್ಲಿ ಕಾಂಗ್ರೆಸ್ (ಅರಸು) ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತರು[22]. ಆಗ ಅವರ ಸೋಲಿಗೆ ಕಾರಣ, ಇದೇ ಕೊಂಕಣಿಗಳು ಜನತಾ ಪಕ್ಷದ ವಿ.ಎಸ್. ಆಚಾರ್ಯರಿಗೆ ಮತನೀಡಿದ್ದರಿಂದ ಎಂಬುದನ್ನು ನೆನಪಿಸಿಕೊಳ್ಳಬಹುದು. ಅದು ಟಿ.ಎ.ಪೈ ಸೋಲಿಗೆ ಕಾರಣವಾಯಿತಲ್ಲದೇ ಕಾಂಗ್ರೆಸ್ ಗೆಲುವಿಗೆ ತೊಡಕಾಗಲಿಲ್ಲ ಎಂಬುದು ರುಜುವಾತಾಯಿತು. ಅಲ್ಲಿಗೆ ಕೊಂಕಣಿಗಳ ಕಾಂಗ್ರೆಸ್ ಸಂಬಂಧದ ಎಲ್ಲ ಅಧ್ಯಾಯಗಳೂ ಮುಗಿದವು. ಈ ಒಟ್ಟೂ ಸ್ಥಿತ್ಯಂತರದ ಪರಿಣಾಮವಾಗಿ 83ರ ವಿಧಾನಸಭಾ ಚುನಾವಣೆಯಲ್ಲಿ ಬಿ.ಜೆ.ಪಿ. ಜಿಲ್ಲೆಯ 15ರಲ್ಲಿ ಎಂಟು ಸ್ಥಾನಗಳನ್ನು ಗೆದ್ದುಕೊಂಡಿತಲ್ಲದೆ ಬಿ.ಜೆ.ಪಿ ಬೆಂಬಲಿತ ಮೂವರು ಜನತಾ ಪಕ್ಷದ ಅಭ್ಯರ್ಥಿಗಳೂ ಚುನಾಯಿತರಾದರು.

ಆಚಾರ್ಯರಿಗೆ ಮತನೀಡಿದ್ದರಿಂದ ಎಂಬುದನ್ನು ನೆನಪಿಸಿಕೊಳ್ಳಬಹುದು. ಅದು ಟಿ.ಎ.ಪೈ ಸೋಲಿಗೆ ಕಾರಣವಾಯಿತಲ್ಲದೇ ಕಾಂಗ್ರೆಸ್ ಗೆಲುವಿಗೆ ತೊಡಕಾಗಲಿಲ್ಲ ಎಂಬುದು ರುಜುವಾತಾಯಿತು. ಅಲ್ಲಿಗೆ ಕೊಂಕಣಿಗಳ ಕಾಂಗ್ರೆಸ್ ಸಂಬಂಧದ ಎಲ್ಲ ಅಧ್ಯಾಯಗಳೂ ಮುಗಿದವು. ಈ ಒಟ್ಟೂ ಸ್ಥಿತ್ಯಂತರದ ಪರಿಣಾಮವಾಗಿ 83ರ ವಿಧಾನಸಭಾ ಚುನಾವಣೆಯಲ್ಲಿ ಬಿ.ಜೆ.ಪಿ. ಜಿಲ್ಲೆಯ 15ರಲ್ಲಿ ಎಂಟು ಸ್ಥಾನಗಳನ್ನು ಗೆದ್ದುಕೊಂಡಿತಲ್ಲದೆ ಬಿ.ಜೆ.ಪಿ ಬೆಂಬಲಿತ ಮೂವರು ಜನತಾ ಪಕ್ಷದ ಅಭ್ಯರ್ಥಿಗಳೂ ಚುನಾಯಿತರಾದರು.

ಕೊಂಕಣಿಗಳ ಔದ್ಯಮಿಕ ಮುನ್ನೋಟ:

20ನೇ ಶತಮಾನದ ಪೂರ್ವಾರ್ಧ ಕೊಂಕಣಿಗಳು ದಕ್ಷಿಣ ಕನ್ನಡದ ಸಾಮಾಜಿಕ ನಾಯಕತ್ವವನ್ನು ಸಾಧಿಸಿದ ಒಂದು ಕಾಲಘಟ್ಟ. ದಕ್ಷಿಣ ಕನ್ನಡದ ಪ್ರತೀ ಉದ್ಯಮ ಕ್ಷೇತ್ರದಲ್ಲೂ ಕೊಂಕಣಿಗಳು ಮುಂಚೂಣಿಯಲ್ಲಿದ್ದರು. ಔದ್ಯಮಿಕವಾಗಿ ಮುಂಚೂಣಿಯಲ್ಲಿದ್ದ ಸಮುದಾಯ ಸಹಜ ವಾಗಿ ಎಲ್ಲ ಜಾತಿ ವರ್ಗಗಳವರ ಉದ್ಯೋಗಕ್ಕೂ ಕಾರಣವಾಗಿದ್ದರು. ಇದು ಸಮಾಜದಲ್ಲಿ ಒಂದು ರೀತಿಯ ನಿಯಂತ್ರಣವನ್ನೂ ಅವರಿಗೆ ಕಲ್ಪಿಸಿತು.

ಆದರೆ ಈ ಹೊತ್ತಿಗೆ ಕೊಂಕಣಿ ಸಮಾಜದ ಒಳಗೊಂದು ಸ್ಥಿತ್ಯಂತರ ಆಗಲಾರಂಭಿಸಿತ್ತು. ಆರ್ಥಿಕವಾಗಿ ಬಲಾಢ್ಯರಾಗಿದ್ದ ಕೊಂಕಣಿಗಳ ಮಕ್ಕಳು ಉನ್ನತ ವಿದ್ಯಾಭ್ಯಾಸವನ್ನು ಪಡೆಯಲು ಮತ್ತು ಪಡೆದು ಬಂದ ಬಳಿಕ ನೆಲೆಸಲು ಹೊರನಾಡುಗಳಿಗೆ, ಮಹಾನಗರಗಳಿಗೆ ತೆರಳಲು ಪ್ರಾರಂಭವಾಗಿತ್ತು. ಆರ್ಥಿಕವಾಗಿ ಅಷ್ಟೊಂದು ಸಬಲರಾಗಿರದ ಸಾಮಾನ್ಯ ಕೊಂಕಣಿಗಳು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗವನ್ನು ಗಳಿಸಿಕೊಂಡು ನೌಕರವರ್ಗವಾಗಿ ಬದಲಾಗತೊಡಗಿದ್ದರು. ಚಿಲ್ಲರೆ ವ್ಯಾಪಾರದಲ್ಲಿ ಅಂತದ್ದೊಂದು ಲಾಭದಾಯಕ ಆಕರ್ಷಣೆಯೂ ಇರಲಿಲ್ಲ.

ಕೊಂಕಣಿಗಳ ಉದ್ಯಮಶೀಲತೆಯ ಪ್ರತಿಭಾವಂತ ಯುವಕರು ಭಾರತದಲ್ಲಿ ಅದಾಗ ತಲೆಯೆತ್ತುತ್ತಿದ್ದ ಕಾರ್ಪೋರೆಟ್ ರಂಗದ ಹೊಸ್ತಿಲಲ್ಲಿ ನಿಂತಿದ್ದರು. ಇಂದು ಕಾರ್ಪೋರೇಟ್ ಜಗತ್ತಿನಲ್ಲಿ ಕೇಳಿಬರುತ್ತಿರುವ ಅನೇಕ ಕೊಂಕಣಿಪ್ರಮುಖರ ಹೆಸರುಗಳನ್ನು ಮಂಗಳೂರಿನ ಶಾಲೆಗಳಲ್ಲಿನ ನಾಲ್ಕೈದು ದಶಕಗಳ ಹಿಂದಿನ ದಾಖಲೆಗಳಲ್ಲಿ ಹುಡುಕಿ ತೆಗೆಯಬಹುದು.

ಹಲವು ವ್ಯಾಪಾರಿ ಕುಟುಂಬಗಳು ಹೊಸ ತಲೆಮಾರಿನ ಸದಸ್ಯರ ಹೊರಹೋಗುವಿಕೆಯಿಂದಾಗಿ ತಮ್ಮ ಭಂಡಸಾಲೆಗಳನ್ನು ಮಾರಿದರು. ಅದರಲ್ಲಿ ಹೆಚ್ಚಿನವರು ಮುಸ್ಲಿಮರಿಗೇ ತಮ್ಮ ಭಂಡಸಾಲೆಗಳನ್ನು ಮಾರಿದ್ದರು ಎನ್ನುವುದು ಇಲ್ಲಿ ಗಮನಿಸಬೇಕಾದ ಅಂಶ. ಅದುವರೆಗೆ ಮುಸ್ಲಿಮರ ಮತ್ತು ಕೊಂಕಣಿಗಳ ವ್ಯಾಪಾರಿ ಸ್ಪರ್ಧೆಯು ಆರೋಗ್ಯಕರವಾಗಿದ್ದಿರಬೇಕು ಎಂಬುದನ್ನುಇದರಿಂದ ಊಹಿಸಬಹುದು.

ಮುಸ್ಲಿಂ ಸಮುದಾಯದಲ್ಲಿಯೂ ಒಂದು ಸ್ಥಿತ್ಯಂತರವಾಗಲಾರಂಭಿಸಿತ್ತು. ವ್ಯಕ್ತಿಗತವಾಗಿ ಸಂಪತ್ತನ್ನು ಗಳಿಸುವತ್ತ ನಿಷ್ಠೆಯಿಂದ ದುಡಿಯುವ ಮುಸ್ಲಿಂ ಸಮುದಾಯ, ಗಲ್ಫ್ ರಾಷ್ಟ್ರಗಳಲ್ಲಿ ತೆರೆಯಲಾರಂಭಿಸಿದ ಉದ್ಯೋಗ ಅವಕಾಶಗಳನ್ನು ಗಳಿಸಿಕೊಂಡು ಒಂದು ಹೊಸ ಮನಿಯಾರ್ಡರ್ ಇಕಾನಮಿಗೆ ಕಾರಣರಾದರು. ಈ ಕಾಲಘಟ್ಟವು 70ರ ದಶಕದ ಮಧ್ಯಭಾಗ ಎಂದು ಕೆಲವು ಅಧ್ಯಯನಗಳು ಸೂಚಿಸುತ್ತವೆ[23]. ಮುಸ್ಲಿಮರ ಜೀವನ ಮಟ್ಟ ಸುಧಾರಿಸಲಾರಂಭಿಸಿತು. ಹೊಸ ಬಂಡವಾಳ ಸಮುದಾಯದಲ್ಲಿ ಚಲಾವಣೆಯಾಗತೊಡಗಿತು. ವಿದ್ಯಾಭ್ಯಾಸ ಅವರಲ್ಲಿ ಹೊಸ ಹುರುಪನ್ನೂ ನೀಡಿತ್ತು. ಆದರೆ ಮುಸ್ಲಿಮರಲ್ಲಾದ ಈ ಆರ್ಥಿಕ ಉನ್ನತಿಯಿಂದ ಕೊಂಕಣಿ ಮತ್ತು ಇತರ ಸಮುದಾಯದ ಚಿನ್ನದ ವ್ಯಾಪಾರಕ್ಕೆ ಉತ್ತೇಜನ ನೀಡಿತಲ್ಲದೇ ಮುಸ್ಲಿಮರ ವ್ಯಾಪಾರ ಚಟುವಟಿಕೆಗಳಲ್ಲಿ ಗಣನೀಯ ಬದಲಾವಣೆಯನ್ನು ತರಲಿಲ್ಲ. ಗಲ್ಫ್‌ನಿಂದ ಮರಳಿದ ಎಷ್ಟು ಮಂದಿ ಮುಸ್ಲಿಮರು ವ್ಯಾಪಾರದಲ್ಲಿ ತೊಡಗಿದರು ಎನ್ನುವುದು ಅಧ್ಯಯನಕ್ಕೆ ಅವಕಾಶವಿರುವ ಅಂಶ.

ಇತ್ತ ಕಡೆಯಿಂದ ಒಂದೊಂದಾಗಿ ಭಂಡಸಾಲೆಗಳನ್ನು ಮಾರಿ ತಮ್ಮ ಉದ್ಯಮಶೀಲತೆಯನ್ನು ಕಾರ್ಪೋರೆಟ್ ಮತ್ತು ಇನ್ನಿತರ ವೃತ್ತಿಪರ (ವೈದ್ಯಕೀಯ ಮತ್ತು ಇಂಜಿನಿಯರಿಂಗ್) ರಂಗಗಳತ್ತ ದುಡಿಸತೊಡಗಿದ್ದ ಕೊಂಕಣಿ ಸಮುದಾಯದ ಈ ವ್ಯಾಪಾರದಲ್ಲಿ ಇಳಿಮುಖವಾದ ಉತ್ಸಾಹ ಸಹಜವಾಗಿ ಅನೇಕ ವ್ಯಾಪಾರ ಕ್ಷೇತ್ರಗಳಲ್ಲಿ ಗುಜರಾತಿ, ಮಾರ್ವಾಡಿ ಮುಂತಾದ ಉತ್ತರಭಾರತೀಯ ಸಮುದಾಯಗಳಿಗೂ, ಮುಸ್ಲಿಂ ಸಮುದಾಯಕ್ಕೂ ಉತ್ತುಂಗಕ್ಕೇರಲು ಎಡೆಮಾಡಿಕೊಟ್ಟಿತು.

(ಮುಂದಿನ ಸಂಚಿಕೆಗೆ ಮುಂದುವರಿಯುವುದು...)

ಲೋಕಸಭಾ ಚುನಾವಣೆ ಹಾಗು ಮಿಥ್ಯೆಗಳು

ಭರತ್ ರಾಜ್

ಬಳ್ಳಾರಿಯಂತಹ ಕಡೆಗಳಲ್ಲಿ ಕಳ್ಳಮತದಾನ ಹಾಗು ಸುಳ್ಳು ಎಣಿಕೆಗಳು ನಡೆದಿವೆ ಎಂಬ ಗಂಭೀರ ಆಪಾದನೆಗಳು ಬರುತ್ತಿವೆ. ಕೆಲವು ಕಡೆ ಮತದಾನದ ಹಕ್ಕುಗಳು ಕಾಣೆ ಆಗಿರುವ ದೂರುಗಳು ಇವೆ. ಚುನಾವಣಾ ಆಯೋಗದ ಕಟ್ಟು ನಿಟ್ಟು ಹಾಗು ಮಾಧ್ಯಮಗಳ ಹತ್ತಿರದ ನಿಗಾವಹಿಸುವಿಕೆಗಳ (ಮಾಧ್ಯಮಗಳಲ್ಲಿನ ಕೆಲವರು ತಮ್ಮನ್ನು ಮಾರಿಕೊಂಡಿರುವ ಮಾಹಿತಿಗಳೂ ಬರುತ್ತಿವೆ) ನಡುವೆಯೂ ಸರ್ಕಾರದಲ್ಲಿ ಮಂತ್ರಿಗಳಾಗಿರುವ ರೆಡ್ಡಿಗಳು ಗೂಂಡಾಗಿರಿ ಚನಾಯಿಸುತ್ತಾರೆ. ಅಧಿಕಾರಿಗಳನ್ನು ರಾಜಾರೋಷವಾಗಿ ಖರೀದಿಸುತ್ತಾರೆ ಎಂದಾಯಿತು. ಈ ಬಾರಿ ಮತದಾನ ಒಟ್ಟಾರೆಯಾಗಿ ಹಿಂದೆಂದಿಗಿಂತಲೂ ಅತೀ ಕಡಿಮೆ ಪ್ರಮಾಣದಲ್ಲಿ ಆಗಿದೆ. ಮತದಾನ ಬಹಿಷ್ಕರಿಸಿರುವ ಪ್ರಕರಣಗಳು ಈ ಬಾರಿ ಎಂದಿಗಿಂತಲೂ ಹೆಚ್ಚಾಗಿ ಕಾಣಿಸಿಕೊಂಡಿದೆ. ಕಡಿಮೆ ಮತದಾನ ಈ ಬಾರಿ ಒಂದು ಮುಖ್ಯ ವಿಚಾರವಾಗಿ ಚರ್ಚೆಗೆ ಬಂದಿತು.

ಲೋಕಸಭಾ ಚುನಾವಣೆಗಳು ಮುಗಿದು ಹೊಸ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಭಾವಿ ಪ್ರಧಾನಿ ಎಂದೇ ಬಿಂಬಿಸಲಾಗಿದ್ದ ಬಿ.ಜೆ.ಪಿಯ ಅಡ್ವಾಣಿಯ ಕನಸು ಚೂರಾಗಿ ಹೋಗಿದೆ. ಕಾಂಗ್ರೆಸ್ ಹಾಗೂ ಯು.ಪಿ.ಎ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗು ಪ್ರಧಾನಿ ಮನಮೋಹನ ಸಿಂಗ್ ಈಗ ಹೆಚ್ಚು ಶಕ್ತಿಯನ್ನು ಪಡೆದಿದ್ದಾರೆ. ಪ್ರಾದೇಶಿಕ ಪಕ್ಷಗಳಲ್ಲಿ ಡಿ.ಎಂ.ಕೆ, ತೃಣಮೂಲ ಕಾಂಗ್ರೆಸ್, ಬಿಜು ಜನತಾದಳ ಹೆಚ್ಚಿನ ಸ್ಥಾನಗಳನ್ನು ಗಳಿಸಿ ಅಧಿಕಾರಕ್ಕಾಗಿ ಸಾಪೇಕ್ಷವಾಗಿ ಹೆಚ್ಚು ಚೌಕಾಶಿ ಮಾಡುವ ಶಕ್ತಿಯನ್ನು ಪಡೆದುಕೊಂಡಿವೆ. ಎಡಪಕ್ಷಗಳು ಹಿಂದಿಗಿಂತಲೂ ಬಹಳ ಕಡಿಮೆ ಸ್ಥಾನಗಳನ್ನು ಗಳಿಸಿ ಕೇಂದ್ರದಲ್ಲಿ ಚೌಕಾಶಿ ಮಾಡುವ ತನ್ನ ಅಪೇಕ್ಷೆಯನ್ನು ಈಡೇರಿಸಿಕೊಳ್ಳಲಾರದೆ ಹೋಗಿವೆ. ಕಾಂಗ್ರೆಸ್‌ನಲ್ಲಿ ಗೆಲುವಿನ ರೂವಾರಿಯೆಂದು ರಾಹುಲ್ ಗಾಂಧಿಯನ್ನು ಮುಂಚೂಣಿಗೆ ತರಲಾಗುತ್ತಿದೆ. ಕರ್ನಾಟಕದಿಂದ ಮೂವರು ಕೇಂದ್ರ ಮಂತ್ರಿಗಳು ಆಗಿದ್ದಾರೆ. ಯು.ಪಿ.ಎಯ ಚುನಾವಣಾ ಸಾಧನೆಯನ್ನು ಹಲವು ರೀತಿಗಳಲ್ಲಿ ವಿಶ್ಲೇಷಣೆ ಮಾಡಲಾಗುತ್ತಿದೆ.

ಕಾಂಗ್ರೆಸ್ ಹಾಗು ಯು.ಪಿ.ಎ ಗೆ ದೊರೆತ ಜಯವನ್ನು ಜಾತ್ಯಾತೀತತೆಗೆ ದೊರೆತ ಜಯವೆಂದು, ಬಿ.ಜೆ.ಪಿ ವಿರುದ್ಧದ ಜಯವೆಂದು, ಸ್ಥಿರತೆ ಹಾಗು ಅಭಿವೃದ್ಧಿಗೆ ದೊರಕಿದ ಜನರ ತೀರ್ಪು ಎಂದು ಬಣ್ಣಿಸಲಾಗುತ್ತಿದೆ. ಅಡ್ವಾಣಿಯ ಕೋಮುವಾದಿತನಕ್ಕೆ ಮತ್ತು ಮನಮೋಹನಸಿಂಗ್‌ರ ಮೇಲಿನ ವೈಯಕ್ತಿಕ ಧಾಳಿಗಳಿಗೆ ವಿರುದ್ಧವಾಗಿ ಜನರು ನೀಡಿದ ಮತವೆಂದು ಹಲವು ಲೇಖನಗಳು ಬರುತ್ತಿವೆ. ಜನರು ಪ್ರಭುದ್ಧರರಾಗಿ ಸರ್ಕಾರವನ್ನು ಚುನಾಯಿಸಿದ್ದಾರೆಂದು ಹೇಳಲಾಗುತ್ತಿದೆ. ಮನಮೋಹನ ಸಿಂಗ್ ಜಾರಿಗೆ ತಂದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳು, ಹಾಗು ಅಮೇರಿಕದೊಂದಿಗೆ ಮಾಡಿಕೊಂಡ ಅಣು ಒಪ್ಪಂದವನ್ನು ಜನರು ಮೆಚ್ಚಿ ಮತ ನೀಡಿದ್ದಾರೆಂದು ಒಂದೆಡೆ ಹೇಳಲಾಗುತ್ತಿದೆ. ಆದರೆ ಒಟ್ಟು ಚುನಾವಣೆಯನ್ನು ನೋಡಿದಾಗ ಚಲಾವಣೆಯಾದ ಮತಗಳು ಸರಾಸರಿ ಶೇಕಡ ೪೫ ರಿಂದ ೫೦ ಎನ್ನಬಹುದು. ಬೆಂಗಳೂರಿನಂತಹ ನಗರಗಳಲ್ಲಿ ಚಲಾವಣೆಯಾದ ಮತಗಳು ಶೇಕಡ ೪೨ನ್ನು ದಾಟಿಲ್ಲ. ಅಂದರೆ ಶೇಕಡ ೫೦ ರಿಂದ ೫೫ ರಷ್ಟು ಮತದಾರರು ಎಲ್ಲಾ ರಾಜಕೀಯ ಪಕ್ಷಗಳನ್ನು ಇಲ್ಲವೇ ಚುನಾವಣಾ ಅಭ್ಯರ್ಥಿಗಳನ್ನು ಸಾರಸಗಟಾಗಿ ತಿರಸ್ಕರಿಸಿದ್ದಾರೆಂದಾಯಿತು.

ಬಳ್ಳಾರಿಯಂತಹ ಕಡೆಗಳಲ್ಲಿ ಕಳ್ಳಮತದಾನ ಹಾಗು ಸುಳ್ಳು ಎಣಿಕೆಗಳು ನಡೆದಿವೆ ಎಂಬ ಗಂಭೀರ ಆಪಾದನೆಗಳು ಬರುತ್ತಿವೆ. ಕೆಲವು ಕಡೆ ಮತದಾನದ ಹಕ್ಕುಗಳು ಕಾಣೆ ಆಗಿರುವ ದೂರುಗಳು ಇವೆ. ಚುನಾವಣಾ ಆಯೋಗದ ಕಟ್ಟುನಿಟ್ಟು ಹಾಗು ಮಾಧ್ಯಮಗಳ ಹತ್ತಿರದ ನಿಗಾವಹಿಸುವಿಕೆಗಳ (ಮಾಧ್ಯಮಗಳಲ್ಲಿನ ಕೆಲವರು ತಮ್ಮನ್ನು ಮಾರಿಕೊಂಡಿರುವ ಮಾಹಿತಿಗಳೂ ಬರುತ್ತಿವೆ) ನಡುವೆಯೂ ಸರ್ಕಾರದಲ್ಲಿ ಮಂತ್ರಿಗಳಾಗಿರುವ ರೆಡ್ಡಿಗಳು ಗೂಂಡಾಗಿರಿ ಚನಾಯಿಸುತ್ತಾರೆ.

ಅಧಿಕಾರಿಗಳನ್ನು ರಾಜಾರೋಷವಾಗಿ ಖರೀದಿಸುತ್ತಾರೆ ಎಂದಾಯಿತು. ಈ ಬಾರಿ ಮತದಾನ ಒಟ್ಟಾರೆಯಾಗಿ ಹಿಂದೆಂದಿಗಿಂತಲೂ ಅತೀ ಕಡಿಮೆ ಪ್ರಮಾಣದಲ್ಲಿ ಆಗಿದೆ. ಮತದಾನ ಬಹಿಷ್ಕರಿಸಿರುವ ಪ್ರಕರಣಗಳು ಈ ಬಾರಿ ಎಂದಿಗಿಂತಲೂ ಹೆಚ್ಚಾಗಿ ಕಾಣಿಸಿಕೊಂಡಿದೆ. ಕಡಿಮೆ ಮತದಾನ ಈ ಬಾರಿ ಒಂದು ಮುಖ್ಯ ವಿಚಾರವಾಗಿ ಚರ್ಚೆಗೆ ಬಂದಿತು. ಇದುವರೆಗೂ ಅಧಿಕಾರಕ್ಕೆ ಬಂದ ಯಾವ ಸರ್ಕಾರಗಳೂ

ದೇಶದ ಒಟ್ಟು ಮತದಾರರಲ್ಲಿ ಕನಿಷ್ಠ ಅರ್ದದಷ್ಟೂ ಮತಗಳನ್ನು ಪಡೆದ ಉದಾಹರಣೆ ಇಲ್ಲ. ಇದು ಏಕಪಕ್ಷ ಆಡಳಿತ ಇದ್ದ ಕಾಂಗ್ರೆಸ್ ಸರ್ಕಾರ ಇದ್ದ ಕಾಲದಲ್ಲಾಗಲಿ ನಂತರ ೯೦ರ ದಶಕದಲ್ಲಿ ಆರಂಭವಾದ ಖಿಚಡಿ ಸರ್ಕಾರಗಳಲ್ಲಾಗಲಿ ಸಂಭವಿಸಿಲ್ಲ. ಈ ಬಾರಿಯ ಚುನಾವಣೆಯಲ್ಲಿ ಮೊದಲನೇ ಸ್ಥಾನದಲ್ಲಿರುವ ಕಾಂಗ್ರೆಸಿಗೆ ಒಟ್ಟು ಚನಾವಣೆಯಾದ (ಒಟ್ಟು ಇರುವ ಮತಗಳು ಅಲ್ಲ) ಮತಗಳಲ್ಲಿ ಶೇಕಡ ೨೯ರಷ್ಟು ಮತಗಳು ಸಿಕ್ಕಿದೆ ಎಂದು ವರದಿಗಳು ಹೇಳುತ್ತಿವೆ. ಅಂದರೆ ಚನಾವಣೆಯಾದ ಮತಗಳಲ್ಲೇ ಶೇಕಡ ೭೧ರಷ್ಟು ಮತ ಕಾಂಗ್ರೆಸಿಗೆ ವಿರುದ್ಧವಾಗಿವೆ ಎಂದಾಯಿತು. ಇನ್ನು ಡಿ.ಎಂ.ಕೆ, ತೃಣಮೂಲ ಕಾಂಗ್ರೆಸ್ ಇತ್ಯಾದಿಗಳಿಗೆ ದೊರೆತ ಸ್ಥಾನಗಳು ಕೂಡ ಒಟ್ಟು ಚಲಾವಣೆಯಾದ ಮತಗಳಲ್ಲಿ ಬಹುಮತದ ಕಾರಣದಿಂದಾಗಿ ಸಿಕ್ಕಿದ್ದಲ್ಲ. ಇಲ್ಲೂ ಕೂಡ ಒಟ್ಟು ಇರುವ ಮತಗಳ ಲೆಕ್ಕದಲ್ಲಿ ಬಹು ಮತ ಎಂದು ಹೇಳಲು ಸಾಧ್ಯವೇ ಇಲ್ಲ. ಇವರೆಲ್ಲರ ಶೇಕಡಾವಾರು ಮತಗಳಿಕೆ ಪ್ರಮಾಣವು ಕೂಡ ಬಹುಮತವನ್ನು ಖಾತ್ರಿಗೊಳಿಸುವುದಿಲ್ಲ.

ಚಲಾವಣೆಯಾದ ಮತಗಳಲ್ಲಿ ಡಿ.ಎಂ.ಕೆಗೆ ಶೇಕಡಾ ೧.೯೧ ಹಾಗು ತೃಣಮೂಲ ಕಾಂಗ್ರೇಸಿಗೆ ಶೇಕಡ ೩.೪೩ ರಷ್ಟು ಸಿಕ್ಕಿವೆ. ಅಂದರೆ ಬಹು ಸಂಖ್ಯಾತ ಮತದಾರರು ತಿರಸ್ಕರಿಸಿರುವ ಪಕ್ಷದ ನೇತೃತ್ವದಲ್ಲಿ ಸರ್ಕಾರ ರಚನೆಯಾಗಿದೆ. ಈಗ ಸರ್ಕಾರದ ಭಾಗ ವಾಗಿರುವ ಪಕ್ಷಗಳು ಪಡೆದುಕೊಂಡ ಮತಗಳನ್ನು ಒಟ್ಟು ಗೂಡಿಸಿದರೂ ಚಲಾವಣೆಯಾದ ಮತಗಳ ಶೇಕಡ ೫೫ನ್ನು ತಲುಪುವುದು ಕಷ್ಟ. ಇನ್ನು ಮತಗಳನ್ನೇ ನೀಡದೆ ಇರುವ ಒಟ್ಟು ಇರುವ ಮತದಾರರ ಶೇಕಡ ೪೫ ರಿಂದ ೫೦ ಜನರಲ್ಲಿ ಹೇಗೂ ಚುನಾವಣೆಗಳಲ್ಲಿ ನಂಬಿಕೆ ಕಳ ಕೊಂಡವರು, ರಾಜಕೀಯ ಪಕ್ಷಗಳ ಮೇಲೆ ಭ್ರಮನಿರಸನಗೊಂಡವರು, ತಾವಿರುವ ದಯನೀಯ ಸ್ಥಿತಿಗಳಿಗೆ ಕಾರಣರಾದವರ ಮೇಲೆ ಕ್ರೋಧಗೊಂಡಿರುವವರು, ಅಭ್ಯರ್ಥಿಗಳನ್ನು ತಿರಸ್ಕರಿಸಿದವರು ಹೆಚ್ಚಿನವರಾಗಿದ್ದಾರೆ. ಅಂದರೆ ಒಟ್ಟಾರೆಯಾಗಿ ನೋಡಿದಾಗ ಆಳುವ ಸರ್ಕಾರಕ್ಕೆ ದೇಶದ ಬಹುಸಂಖ್ಯಾತ ಮತದಾರರ ಸಮ್ಮತಿ ಇಲ್ಲ ಎಂದಾಯಿತಲ್ಲ. ಚಲಾವಣೆಯಾದ ಮತಗಳೂ ಕೂಡ ಜಾತಿ, ಮತ, ಹಣ, ಹೆಂಡ, ಬೆದರಿಕೆ, ಆಮಿಷ, ಪ್ರದೇಶ, ವ್ಯಕ್ತಿ, ಸಹಾಯಕತೆ, ಪರ್ಯಾಯ ಇಲ್ಲದಿರುವಿಕೆಗಳ ಲೆಕ್ಕಾಚಾರದಲ್ಲಿ ಹಲವು ಪಕ್ಷಗಳಿಗೆ ಹರಿದು ಹಂಚಿ ಹೋಗಿ ಕೊನೆಗೆ ಅದರಲ್ಲಿ ಯಾರೋ ಒಬ್ಬರು ಗೆದ್ದರು ಎಂದು ಘೋಷಿಸುವುದು, ಇದೇ ತಾನೆ ನಡೆಯುತ್ತಿರುವುದು.

ಕರ್ನಾಟಕದಲ್ಲಿ ಬಿ.ಜೆ.ಪಿಗೆ ೧೯ ಸ್ಥಾನಗಳು ಸಿಗಲು ಜಾತಿ ಲೆಕ್ಕಾಚಾರಗಳೇ ಪ್ರಧಾನ ಕಾರಣ ಎಂದು ಒಂದೆಡೆ ಹೇಳಲಾಗುತ್ತಿದೆ. ಜೊತೆಗೆ ನೀರಿನಂತೆ ಸುರಿದ ಹಣ, ಜನರ ತೆರಿಗೆಯ ಹಣ ಹಾಗೂ ಸರ್ಕಾರಿ ಯಂತ್ರಾಂಗದ ದುರ್ಬಳಕೆಗಳು, ಹೆಂಡ ಮತ್ತು ಹಣಗಳ ಯಥೇಚ್ಛ ವಿತರಣೆಗಳಲ್ಲಿ, ಬೆದರಿಕೆ ಒಡ್ಡುವುದರಲ್ಲಿ, ಕುತಂತ್ರ ಮಾಡುವುದರಲ್ಲಿ ಬಿ.ಜೆ.ಪಿ ಉಳಿದ ಎಲ್ಲಾ ಪಕ್ಷಗಳಿಗಿಂತ ಮುಂದಿತ್ತು ಎಂಬುದು ಸುಳ್ಳೇನಲ್ಲ. ರಾಜ್ಯದ ವಿದಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿ.ಜೆ.ಪಿ ನೀಡಿದ ರೈತರಿಗೆ ಉಚಿತ ನಿರಂತರ ವಿದ್ಯುತ್, ಸಾಲಮನ್ನ, ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯ ವಿತರಣೆ ಮೊದಲಾದ ಬರವಸೆಗಳು ಇನ್ನೂ ಜಾರಿ ಆಗಲೇ ಇಲ್ಲ. ಈ ಭಾರಿಯ ಚುನಾವಣೆಯಲ್ಲಿ ಜನರ ಜ್ವಲಂತ ಸಮಸ್ಯೆಗಳಾದ ಲಕ್ಷಾಂತರ ಸಂಖ್ಯೆಯಲ್ಲಿನ ರೈತರ ಆತ್ಮಹತ್ಯೆಗಳು, ವಿಪರೀತವಾಗಿರುವ ಬೆಲೆ ಏರಿಕೆಗಳು, ಲಕ್ಷಾಂತರ ಸಂಖ್ಯೆಯಲ್ಲಿನ ಒಕ್ಕಲೆಬ್ಬಿಸುವಿಕೆಗಳು, ಸಮಾಜದಲ್ಲಿ ಹೆಚ್ಚುತ್ತಿರುವ ಕೊಲೆ ಸುಲಿಗೆಗಳು ಹಾಗೂ ಅಭದ್ರತೆಗಳು, ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿ ಕೈಗಾರಿಕಾ ಮುಚ್ಚುವಿಕೆಗಳು, ಉದ್ಯೋಗ ಕುಸಿತಗಳು, ದಲಿತರು ಮಹಿಳೆಯರ ಶೋಚನೀಯ ಪರಿಸ್ಥಿತಿಗಳು ಪ್ರಧಾನ ಚುನಾವಣಾ ವಿಷಯಗಳಾಗಲಿಲ್ಲ. ಯಾವ ಪಕ್ಷವೂ ದೇಶಾದ್ಯಂತ ಜನರು ವಿರೋದಿಸುತ್ತಾ ಬರುತ್ತಿರುವದನ್ನು ಗಣನೆಗೆ ತೆಗೆದುಕೊಂಡು ಸ್ಪಂದಿಸಿಲ್ಲ, ಬದಲಿಗೆ ಸಮರ್ಥ ನಾಯಕತ್ವ, ಸ್ಥಿರತೆ, ಮತೋನ್ಮಾದಗಳು ಪ್ರಮುಖ ಚುನಾವಣಾ ವಿಚಾರಗಳಾದವು. ಇವ್ಯಾವುವೂ ಜನರ ಬದುಕಿನೊಂದಿಗೆ ನೇರವಾಗಿ ಸಂಬಂಧಿಸಿದ್ದಲ್ಲ.

ವಾಸ್ತವಸ್ಥಿತಿ ಹೀಗಿರುವಾಗ ಯು.ಪಿ.ಎ ಗೆಲುವು ಕೋಮುವಾದಕ್ಕೆ ವಿರುದ್ದದ ಗೆಲುವು ಇಲ್ಲವೆ ಜಾತ್ಯಾತೀತತೆಗೆ ಸಂದ ಗೆಲುವು ಅದಲ್ಲದಿದ್ದರೆ ಅಭಿವೃದ್ಧಿಗೆ ಸಂದ ಗೆಲುವು ಅದೂ ಅಲ್ಲ ಮನಮೋಹನಸಿಂಗ್ ಅಥವಾ ರಾಹುಲ್ ಗಾಂಧಿಗೆ ದೊರೆತ ಜನಾಭಿಪ್ರಾಯ, ಅಡ್ವಾನಿ ಹಾಗು ಮೋದಿಗೆ ಆದ ಸೋಲು ಎಂದೆಲ್ಲಾ ವಿಶ್ಲೇಷಣೆ ಮಾಡಲು ಹೇಗೆ ಸಾಧ್ಯ? ಆದರೆ ಬಹುಸಂಖ್ಯಾತ ಮತದಾರರ ಸೋಲಂತೂ ಅಲ್ಲವೆನ್ನಲು ಸಾಧ್ಯವಿಲ್ಲ. □

ಕಾಂಗ್ರೆಸ್ ಹಾಗು ಯು.ಪಿ.ಎ ಗೆ ದೊರೆತ ಜಯವನ್ನು ಜಾತ್ಯಾತೀತತೆಗೆ ದೊರೆತ ಜಯವೆಂದು, ಬಿ.ಜೆ.ಪಿ ವಿರುದ್ದದ ಜಯವೆಂದು, ಸ್ಥಿರತೆ ಹಾಗು ಅಭಿವೃಧ್ಧಿಗೆ ದೊರಕಿದ ಜನರ ತೀರ್ಪು ಎಂದು ಬಣ್ಣಿಸಲಾಗುತ್ತಿದೆ. ಅಡ್ವಾಣಿಯ ಕೋಮುವಾದಿತನಕ್ಕೆ ಮತ್ತು ಮನಮೋಹನಸಿಂಗ್‌ರ ಮೇಲಿನ ವೈಯಕ್ತಿಕ ಧಾಳಿಗಳಿಗೆ ವಿರುದ್ದವಾಗಿ ಜನರು ನೀಡಿದ ಮತವೆಂದು ಹಲವು ಲೇಖನಗಳು ಬರುತ್ತಿವೆ. ಜನರು ಪ್ರಭುದ್ದರರಾಗಿ ಸರ್ಕಾರವನ್ನು ಚುನಾಯಿಸಿದ್ದಾರೆಂದು ಹೇಳಲಾಗುತ್ತಿದೆ. ಮನಮೋಹನ ಸಿಂಗ್ ಜಾರಿಗೆ ತಂದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳು, ಹಾಗು ಅಮೇರಿಕದೊಂದಿಗೆ ಮಾಡಿಕೊಂಡ ಅಣು ಒಪ್ಪಂದವನ್ನು ಜನರು ಮೆಚ್ಚಿ ಮತ ನೀಡಿದ್ದಾರೆಂದು ಒಂದೆಡೆ ಹೇಳಲಾಗುತ್ತಿದೆ. ಆದರೆ ಒಟ್ಟು ಚುನಾವಣೆಯನ್ನು ನೋಡಿದಾಗ ಚಲಾವಣೆಯಾದ ಮತಗಳು ಸರಾಸರಿ ಶೇಕಡ ೪೫ ರಿಂದ ೫೦ ಎನ್ನಬಹುದು. ಬೆಂಗಳೂರಿನಂತಹ ನಗರಗಳಲ್ಲಿ ಚಲಾವಣೆಯಾದ ಮತಗಳು ಶೇಕಡ ೪೨ನ್ನು ದಾಟಿಲ್ಲ.



ನಿನ್ನ ಬಯಸಿತು ಕವಿತೆ ಹುಟ್ಟಿದ ಮೇಲೆ
ತಟ್ಟುವುದೆಂತು ಹೇಳು
ನಿನ್ನಲಿರಬೇಕು ಆತ್ಮ– ನನ್ನ ನಿವೇದನೆಗೆ
ಶಮನವಾಗುತ್ತಿಲ್ಲ ನೋವು.

ನೀ ಕೊಟ್ಟ ನೆನಪು ಹಚ್ಚಿದ ದೀಪ
ಮಿಟುಕಿ ಉಳಿದಂತೆ ಕಿಡಿಯೊರತೆ
ಇಲಲಿ ರೆಪ್ಪೆಗಿಲ್ಲ ಶಾವು
ಮಿಸುಕಾಡದಿದೆ ಕಳ್ಳ ಹಗಲು.

ನಿನ್ನಂತೆ ಅಮಲು ತರಿಸಿತು ಸಾಲು
ನಡೆದಷ್ಟು ದೂರ ಬಿದ್ದ ಮೇಲೂ
ಸಾಧ್ಯತೆಯ ನೆನೆದು, ಮೈಮರೆತು
ಮತ್ತೆ ಹೊರಟಿತು ದೀನ ಕವಿತೆ!

ಎಲ್ಲಿತ್ತೆ ಕವಿತೆ ವಾಸ್ತವದಲ್ಲಿ ನೀನು
ಮತ್ತೇನ ಹೇಳುವೆನೆ ಇಂದು
ಇಂಥ ಬಾಗಿಲುಗಳಲ್ಲಿ ನಾನು–
ಅವೂ ತೆರೆದಾವು ಮತ್ತೆ ಕವಿತೆಯಂತೆ!

❍ ಶಿವಕುಮಾರ ಸಾಯ

ಚುನಾವಣೆಯ ಪಾಠಗಳು



ಡಾ. ಟಿ.ಆರ್. ಚಂದ್ರಶೇಖರ್

ಮುಕ್ತ ಮಾರುಕಟ್ಟೆಯು ಎಷ್ಟು ಅಪಾಯಕಾರಿಯಾಗಬಹುದೆಂಬುದನ್ನು ಕಳೆದ ೧೫ ತಿಂಗಳ ಅವಧಿಯಲ್ಲಿ ಜಾಗತಿಕ ಮಟ್ಟದಲ್ಲಿ ಸಂಭವಿಸುತ್ತಿರುವ ಆರ್ಥಿಕ ಕುಸಿತ ಮತ್ತು ಬ್ಯಾಂಕುಗಳ ದಿವಾಳಿ, ಬೇಡಿಕೆಯಲ್ಲಿನ ಹಿಂಜರಿತ ಮುಂತಾದವು ತೋರಿಸಿಕೊಟ್ಟಿವೆ. ಆರ್ಥಿಕ ಸುಧಾರಣೆಯೇ ಎಲ್ಲವೂ ಅಲ್ಲ. ಅಥವಾ ಅದನ್ನು ಕುರುಡು ಕುರುಡಾಗಿ ವಿರೋಧಿಸುವದೇ ರಾಜಕೀಯ ಪಕ್ಷಗಳ ಕಾಯಕವಾಗಬಾರದು. ಎಡ ಪಕ್ಷಗಳು ಕಳೆದ ನಾಲ್ಕೂವರೆ ವರ್ಷಗಳಿಂದ ಸರ್ಕಾರದ ವಿವೇಚನಾ ರಹಿತ ಅರ್ಥಿಕ ಸುಧಾರಣಾ ಕಾರ್ಯನೀತಿಗೆ ತಡೆ ಹಾಕುತ್ತಾ ಬಂದಿದ್ದರಿಂದ ಇಂದು ನಮ್ಮ ಉದ್ದಿಮೆ ಹಾಗೂ ಬ್ಯಾಂಕಿಂಗ್ ವಲಯಗಳು ಆರೋಗ್ಯಕರವಾಗಿ ಉಳಿದಿವೆ. ಎಡಪಕ್ಷಗಳ ಬಗ್ಗೆ ಇಂದು ಯಾರು ಎಷ್ಟೇ ಟೀಕೆಯ ಮಳೆ ಸುರಿಸಿದರೂ ಆ ಶಕ್ತಿಯು ಭಾರತವನ್ನು ಆರ್ಥಿಕ ಕುಸಿತದಿಂದ ಮತ್ತು ಬ್ಯಾಂಕಿಂಗ್ ವೈಫಲ್ಯಗಳಿಂದ ಸ್ವಲ್ಪ ಮಟ್ಟಿಗಾದರೂ ರಕ್ಷಿಸಿದೆ ಎಂಬುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ.

ಪ್ರಸ್ತಾವನೆ

ಹದಿನ್ನೈದನೆಯ ಲೋಕಸಭೆಗೆ ನಡೆದ ಚುನಾವಣೆಯು ಅನೇಕ ದೃಷ್ಟಿಯಿಂದ ಮಹತ್ವದ್ದಾಗಿದೆ. ದೇಶದ ಆಡಳಿತದ ಚುಕ್ಕಾಣಿ ಹಿಡಿಯಲು ಪ್ರಯತ್ನಿಸಿದ್ದ ಎರಡೂ ಪಕ್ಷಗಳು ಮತ್ತು ಇತರೆ ಪಕ್ಷಗಳೂ ಇದರಿಂದ ಪಾಠ ಕಲಿಯಬೇಕಾದುದು ಬೇಕಾದಷ್ಟಿದೆ. ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಕಲಿಯಬೇಕಾದ ಪಾಠಗಳು ಬೇರೆ ಬೇರೆಯಾಗಿವೆ. ಈ ದೇಶದ ಮತದಾರರು ತಾವೆಷ್ಟು ಪ್ರೌಢರು ಮತ್ತು ವಿವೇಕಿಗಳು ಎಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದ್ದಾರೆ. ಈ ಚುನಾವಣೆಯು ಹೊಸ ರಾಜಕೀಯ ನಾಯಕತ್ವ ಅರಳುತ್ತಿರುವುದನ್ನು ಸೂಚಿಸುತ್ತಿದೆ. ಇನ್ನು ಮೇಲೆ ಯುವ ಪಡೆಯು ನಮ್ಮ ರಾಜಕಾರಣವನ್ನು ಪೂರ್ಣವಾಗಿ ಹಿಡಿತಕ್ಕೆ ತೆಗೆದುಕೊಳ್ಳುವ ಸಾಧ್ಯತೆಯಿದೆ. ನಮ್ಮ ರಾಜಕಾರಣಕ್ಕೆ ಬಂದಳಿಕೆಯಂತೆ ನೇತು ಬಿದ್ದಿದ್ದ ಅನೇಕ ವಯೋವೃದ್ಧರಿಗೆ ಪ್ರಸ್ತುತ ಚುನಾವಣೆಯು ವಾನಪ್ರಸ್ಥಕ್ಕೆ ದಾರಿ ತೋರಿಸಿದೆ (ಉದಾಹರಣೆಗೆ ಅರ್ಜುನ್‌ಸಿಂಗ್). ಆರ್ಥಿಕ ನೀತಿಯ ದೃಷ್ಟಿಯಿಂದಲೂ ಇಲ್ಲಿ ಕಲಿಯಬೇಕಾದ ಅನೇಕ ಪಾಠಗಳಿವೆ.

ಮುಕ್ತ ಮಾರುಕಟ್ಟೆಯು ಎಷ್ಟು ಅಪಾಯಕಾರಿಯಾಗಬಹುದೆಂಬುದನ್ನು ಕಳೆದ 15 ತಿಂಗಳ ಅವಧಿಯಲ್ಲಿ ಜಾಗತಿಕ ಮಟ್ಟದಲ್ಲಿ ಸಂಭವಿಸುತ್ತಿರುವ ಆರ್ಥಿಕ ಕುಸಿತ ಮತ್ತು ಬ್ಯಾಂಕುಗಳ ದಿವಾಳಿ, ಬೇಡಿಕೆಯಲ್ಲಿನ ಹಿಂಜರಿತ ಮುಂತಾದವು ತೋರಿಸಿಕೊಟ್ಟಿವೆ. ಆರ್ಥಿಕ ಸುಧಾರಣೆಯೇ ಎಲ್ಲವೂ ಅಲ್ಲ. ಅಥವಾ ಅದನ್ನು ಕುರುಡು ಕುರುಡಾಗಿ ವಿರೋಧಿಸುವದೇ ರಾಜಕೀಯ ಪಕ್ಷಗಳ ಕಾಯಕವಾಗಬಾರದು. ಎಡ ಪಕ್ಷಗಳು ಕಳೆದ ನಾಲ್ಕೂವರೆ ವರ್ಷಗಳಿಂದ ಸರ್ಕಾರದ ವಿವೇಚನಾ ರಹಿತ ಅರ್ಥಿಕ ಸುಧಾರಣಾ ಕಾರ್ಯನೀತಿಗೆ ತಡೆ ಹಾಕುತ್ತಾ ಬಂದಿದ್ದರಿಂದ ಇಂದು ನಮ್ಮ ಉದ್ದಿಮೆ ಹಾಗೂ ಬ್ಯಾಂಕಿಂಗ್ ವಲಯಗಳು ಆರೋಗ್ಯಕರವಾಗಿ ಉಳಿದಿವೆ. ಎಡಪಕ್ಷಗಳ ಬಗ್ಗೆ ಇಂದು ಯಾರು ಎಷ್ಟೇ ಟೀಕೆಯ ಮಳೆ ಸುರಿಸಿದರೂ ಆ ಶಕ್ತಿಯು ಭಾರತವನ್ನು ಆರ್ಥಿಕ ಕುಸಿತದಿಂದ ಮತ್ತು ಬ್ಯಾಂಕಿಂಗ್ ವೈಫಲ್ಯಗಳಿಂದ ಸ್ವಲ್ಪ ಮಟ್ಟಿಗಾದರೂ ರಕ್ಷಿಸಿದೆ ಎಂಬುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಈ ಚುನಾವಣೆಯು ನಮಗೆ ಈ ಎಲ್ಲ ವಿಷಯಗಳ ಬಗ್ಗೆ ಅಧ್ಯಯನ ಯೋಗ್ಯವಾದ ಸೂಕ್ಷ್ಮ ಒಳನೋಟಗಳನ್ನು ತೆರೆದಿಟ್ಟಿದೆ.

ಪ್ರಸ್ತುತ ಲೇಖನದಲ್ಲಿ 2009 ರಲ್ಲಿ ನಡೆದ ಲೋಕಸಭೆಯ ಹದಿನ್ನೈದನೆಯ ಚುನಾವಣೆಯನ್ನು ಕುರಿತಂತೆ ಚರ್ಚೆ ಮಾಡಲಾಗಿದೆ. ಇಲ್ಲಿ ಕರ್ನಾಟಕವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ. ಈ ಚುನಾವಣೆಯು ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಎಷ್ಟು ಮಹತ್ವದ್ದೋ ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೂ ಅಷ್ಟೇ ಮಹತ್ವದ್ದಾಗಿದೆ. ಹಾಗೆ ನೋಡಿದರೆ ಸಂಸ್ಕೃತಿ ಅಧ್ಯಯನದ ವಿದ್ಯಾರ್ಥಿಗಳೂ ಇದರ ಬಗ್ಗೆ ಅಧ್ಯಯನ ಕೈಗೊಳ್ಳಬಹುದಾಗಿದೆ. ಅದಕ್ಕೆ ಬೇಕಾದ ಗ್ರಾಸವನ್ನು ಪ್ರಸ್ತುತ ಚುನಾವಣೆಯು ಒದಗಿಸಿಕೊಟ್ಟಿದೆ. ಪಿಲಿಬಿಟ್‌ನಲ್ಲಿ ವರುಣ ಗಾಂಧಿ ಮಾಡಿದ ವಿಷಕಾರಿ-ವಿದ್ವೇಷಕಾರಿ ಭಾಷಣವನ್ನು ಕೇವಲ ರಾಜಕೀಯ ನೆಲೆಯಿಂದ ಅಥವಾ ಮಾನವೀಯ ನೆಲೆಯಿಂದ ನೋಡಿದರೆ ಮಾತ್ರ ಸಾಕಾಗುವುದಿಲ್ಲ. ಅದನ್ನು ನಮ್ಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪರಿಭಾವಿಸಿಕೊಳ್ಳಬೇಕಾಗಿದೆ.

ಭಾಗ-1

ಅದ್ವಾನಿಯವರು ಮಾಡಿಕೊಂಡ ಅವಘಡಗಳು

ಪ್ರಧಾನಮಂತ್ರಿಯಾಗುವ ಕನಸಿಟ್ಟುಕೊಂಡಿದ್ದ 81 ವರ್ಷದ ಲಾಲ್‌ಕೃಷ್ಣ ಅದ್ವಾನಿ ಅವರನ್ನು ವಯೋವೃದ್ಧರೆಂದು ಕರೆಯಬಹುದೋ ಇಲ್ಲವೋ ಎಂಬುದರ ಬಗ್ಗೆ ಚರ್ಚೆ ಮಾಡಬಹುದು. ಅದು ಬೇರೆಯೇ ವಿಷಯ. ಆದರೆ ಅವರು ರಾಜಕಾರಣದಲ್ಲಿ 'ಹೆಣಭಾರ'ವಾಗಿರಲಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ(ಹೆಣಭಾರವಾಗಿರುವ ಅನೇಕ ವಯೋವೃದ್ಧ ರಾಜಕಾರಣಿಗಳು ನಮ್ಮ ಸಂದರ್ಭದಲ್ಲಿದ್ದಾರೆ). ದೇಶದ ಪ್ರಧಾನಿಗಿರಬೇಕಾದ ಎಲ್ಲ ಅರ್ಹತೆಗಳು ಅವರಲ್ಲಿದ್ದವು. ಆದರೆ ಪ್ರಸ್ತುತ ಚುನಾವಣೆಯಲ್ಲಿನ ಕೆಲವು ಸಂದಿಗ್ಧ ಮತ್ತು ನಿರ್ಣಾಯಕ ಸಂದರ್ಭಗಳಲ್ಲಿ, ಉದಾಹರಣೆಗೆ ವರುಣ ಗಾಂಧಿಯ ವಿಷಕಾರಿ ಭಾಷಣದ ಸಂದರ್ಭದಲ್ಲಿ, ಒರಿಸ್ಸಾದ ಕಂದಮಲ್‌ನಲ್ಲಿನ ಮಾರಣಹೋಮದ ಬಗ್ಗೆ ಮತ್ತು ಸಾಸ್ಕೃತಿಕ ಪೊಲೀಸರ ಬಗ್ಗೆ ಅವರು ಮುತ್ಸದ್ಧಿತನವನ್ನು ತೋರುವುದಕ್ಕೆ ಪ್ರತಿಯಾಗಿ ರಾಜಕೀಯ ಅವಸರದ ಅಪಾಯಕಾರಿಯಾದ ತೀರ್ಮಾನವನ್ನು ತೆಗೆದುಕೊಂಡು ಬಿಟ್ಟರು. ಒರಿಸ್ಸಾದಲ್ಲಿನ ಕಂದಮಲ್‌ನಲ್ಲಿನ ಅಸಹಾಯಕರ, ಮುಗ್ಧರ, ಮಹಿಳೆಯರ ಮಾರಣಹತ್ಯೆಯ ಬಗ್ಗೆ ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದಂತೆ ಅವರು ಸುಮ್ಮನಿದ್ದುಬಿಟ್ಟರು. ಅವರ ಈ ಎಲ್ಲ ತಪ್ಪು ತೀರ್ಮಾನಗಳ ಫಲವಾಗಿ ಅವರ ಜೀವಮಾನದ ಉದ್ದೇಶವಾದ ಪ್ರಧಾನಿ ಗದ್ದುಗೆ ಶಾಶ್ವತವಾಗಿ ಕೈತಪ್ಪಿಹೋಯಿತು. ಅವರನ್ನು ತಮ್ಮ ಪ್ರಧಾನಿ ಹುದ್ದರಿಯೆಂದು ಚುನಾವಣೆಗೆ ಮುಂಚೆಯೇ ಘೋಷಿಸಿದ್ದ ಪಕ್ಷವು ಒಳಗೊಳಗಿಂದಲೇ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರನ್ನು ಮುಂದಿನ ಪ್ರಧಾನಿಯೆಂದು ಮುಗುಮ್ಮಾಗಿ ಘೋಷಿಸುವುದರ ಮೂಲಕ ಎಡಬಿಡಂಗಿತನವನ್ನು ಅದು ಮೆರೆದುಬಿಟ್ಟಿತು. ಅದರ ಫಲವಾಗಿ ಅದು ಅನೇಕ ಸ್ಥಾನಗಳನ್ನು ಚುನಾವಣೆಯಲ್ಲಿ ಕಳೆದುಕೊಂಡಿತು.

ಪ್ರಧಾನಿ ಮನಮೋಹನಸಿಂಗ್ ಬಗ್ಗೆ ಅದ್ವಾನಿಯವರು ಮಾಡಿದ ಟೀಕೆಗಳೆಲ್ಲ ಅವರಿಗೆ ಮುಳುವಾಗಿ ಬಿಟ್ಟವು. ಅದ್ವಾನಿಯವರ ಬಾಯಿ ಜೋರಾಗುತ್ತ ಹೋದಂತೆ ಸಿಂಗ್ ಅವರ ತಣ್ಣಗಿನ ಪ್ರತಿಕ್ರಿಯೆಗಳು ಅವರಿಗೆ ಪ್ಲಸ್ ಪಾಯಿಂಟುಗಳಾಗಿ ಪರಿಣಮಿಸಿಬಿಟ್ಟವು. ಸಿಂಗ್ ಪರಾವಲಂಬಿ ಎಂಬ ಅದ್ವಾನಿಯವರ ಟೀಕೆಯನ್ನು ಒಮ್ಮೆ ಒಪ್ಪಿಕೊಂಡರೂ ಉಳಿಯುವ ಪ್ರಶ್ನೆಯೆಂದರೆ ಅದ್ವಾನಿಯವರು ಎಷ್ಟರಮಟ್ಟಿಗೆ ಸ್ವತಂತ್ರರು? ಅವರು ಆರ್‌ಎಸ್‌ಎಸ್‌ನಿಂದ ಆದೇಶ ಪಡೆದುಕೊಳ್ಳುತ್ತಿಲ್ಲವೇ? ಮತ್ತೊಬ್ಬರನ್ನು ಟೀಕಿಸುವುದಕ್ಕೆ ಮುಂಚೆ ತಾವೆಷ್ಟು ಸ್ವತಂತ್ರರು ಎಂಬುದನ್ನು ಅದ್ವಾನಿಯವರು ಯೋಚಿಸಲಿಲ್ಲ. ಹಾಗೆ ನೋಡಿದರೆ ಸಿಂಗ್ ಪರಾವಲಂಬಿಯಾದರೆ ಅದ್ವಾನಿ ಅವರು ಸೂತ್ರದ ಗೊಂಬೆ. ಆ ಸೂತ್ರದ ಮೂಲ ನಾಗಪುರವೆಂಬುದು ಜನರಿಗೆ ತಿಳಿದಿಲ್ಲವೆಂದು ಅವರು ಭಾವಿಸಿರುವಂತ

ಕಾಣುತ್ತದೆ. ದ್ವಿಸದಸ್ಯತ್ವದ ಬಗ್ಗೆ ಬೆಜೆಪಿಯು ಎಂದಿಗೂ ರಾಜಿ ಮಾಡಿಕೊಳ್ಳಲ್ಲಿಲ್ಲ, ಏಕೆ?. ಕಾಂಗ್ರೇಸಿನ ಅಧಿಕಾರದ ಉಭಯತನದ ಬಗ್ಗೆ ಅದ್ವಾನಿಯು ವರು ಮಾತ ನಾಡುವ ಸಂಧರ್ಭದಲ್ಲಿ ತಮ್ಮ ಪಕ್ಷದಲ್ಲಿನ ದ್ವಿಸದಸ್ಯತ್ವ ಕುರಿತಂತೆ ಮೌನವನ್ನು ವಹಿಸಿದ್ದು ಏಕೆ? ಈ ಬಗ್ಗೆ ಅವರು ಆರ್‌ಎಸ್‌ಎಸ್‌ನಿಂದ ಆದೇಶವನ್ನು ಪಡೆಯುತ್ತಾರೆಂಬುದು ಜನರಿಗೆ ತಿಳಿಯದ ವಿಷಯವೇನಲ್ಲ. ಅದನ್ನು ಜನರು ತಪ್ಪೆಂದು ಭಾವಿಸುತ್ತಿಲ್ಲ. ಅದರೆ ಅದ್ವಾನಿಯವರು ಮತ್ತೆ ಮತ್ತೆ ಸಿಂಗ್ ಅವರನ್ನು 'ದುರ್ಬಲ ಪ್ರಧಾನಿ', '10 ರೇಸ್ ಕೋರ್ಸ್ ರೋಡಿನಿಂದ' ಆದೇಶ ಪಡೆಯುವವರು ಎಂಬ ಟೀಕೆಗಳನ್ನು ಯದ್ವಾತದ್ವಾ ಮಾಡ ತೊಡಗಿದಾಗ ಜನರು ಅವರ ಬಗ್ಗೆ ಮರುಚಿಂತಿಸ ತೊಡಗಿದರು.

ಅದ್ವಾನಿ ಮತ್ತು ಅವರ ಪಕ್ಷದ ಚುನಾವಣಾ ವೈಫಲ್ಯದ ನೆಲೆ ಎಲ್ಲಿದೆಯೆಂಬುದನ್ನು ಗುರುತಿಸುವುದು ಕಷ್ಟವಾಗಬಾರದು. ಚುನಾವಣಾ ವಿಶ್ಲೇಷಣಾಕಾರರು ಗುರುತಿಸಿರುವಂತೆ ಅದ್ವಾನಿ ಮತ್ತು ಅವರ ಪಕ್ಷ ನಮ್ಮ ದೇಶದ ಯುವ ಜನತೆಯೊಂದಿಗೆ ಗುರುತಿಸಿಕೊಳ್ಳಲಿಲ್ಲ. ಖಾಸಗಿಯಾಗಿ ಸುತ್ತುತ್ತಿರುವ ಸಂಗತಿಯೆಂದರೆ ಅದ್ವಾನಿ ಅವರ ಪಕ್ಷದ ಅನೇಕ ಹಿರಿಯ ನಾಯಕರುಗಳು ಎದುರಿಸುತ್ತಿರುವ ಸಮಸ್ಯೆಯೆಂದರೆ ಅವರ ಮಕ್ಕಳೇ ಆ ಪಕ್ಷದ ಜೊತೆ ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಿದ್ಧವಿಲ್ಲವೆಂದು ಹೇಳಲಾಗಿದೆ. ಎಲ್ಲಿಯವರೆಗೆ ಅದು ತನ್ನ ಕೂಪ ಮಂಡೂಕತನದಿಂದ ದೂರ ಸರಿಯುವುದಿಲ್ಲವೋ ಅಲ್ಲಿಯವರೆಗೆ ಅದಕ್ಕೆ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವುದು ಕಷ್ಟಸಾಧ್ಯವಾಗುತ್ತದೆ.

ಅರುಣ್‌ಶೌರಿ, ಯಶವಂತಸಿನ್ಹ, ಅರುಣಜೈಟ್ಲಿ ಮುಂತಾದ ಬಿಜೆಪಿ ಹಿರಿಯ ಕಾರ್ಯಕರ್ತರು ಮುಂದು ಮಾಡುತ್ತಿರುವ ನಾಯಕ ನರೇಂದ್ರಮೋದಿ ದೇಶದ ಚುಕ್ಕಾಣಿ ಹಿಡಿಯುವುದು ಸಾಧ್ಯವಿಲ್ಲ. ಏಕೆಂದರೆ, ಕೋಮು ಪ್ರಶ್ನೆಯನ್ನು ಒಂದು ಪಕ್ಕಿಟ್ಟುಕೊಂಡೂ, ಸಾವಿರಾರು ಮಹಿಳೆಯರ, ಪುರುಷರ, ಮಕ್ಕಳ ಮಾರಣಹೋಮದ ಬಗ್ಗೆ ಪರಿತಾಪವನ್ನಾಗಲಿ ಅಥವಾ ಪಶ್ಚಾತ್ತಾಪವನ್ನಾಗಲಿ ಅವರು ವ್ಯಕ್ತಪಡಿಸಬಹುದಾಗಿತ್ತು. ಆದರೆ ಮೋದಿಯು ಅಂತಹ ಕ್ರಮಕ್ಕೆ ಸಿದ್ಧವಿಲ್ಲ. ಸಾವಿರಾರು ಮಹಿಳೆಯರು, ಮಕ್ಕಳು ಮತ್ತು ವಯೋವೃದ್ಧರು ಹತ್ಯೆಗೊಳಗಾಗಿದ್ದಾರೆ. ಅದಕ್ಕೆ ವಿಷಾದವನ್ನು (ನ್ಯಾಯ ಒದಗಿಸಿಕೊಡುವುದು ಆ ಮೇಲಿನ ಮಾತು) ವ್ಯಕ್ತ ಪಡಿಸದ ನರೇಂದ್ರಮೋದಿ ಯಾವ ಬಗೆಯ ಪ್ರಧಾನ ಮಂತ್ರಿಯಾಗಬಹುದು ಎಂಬುದನ್ನು ಊಹಿಸಿಕೊಳ್ಳದಿರುವುದೇ ವಾಸಿ. ಅದಕ್ಕೆ ವಿಷಾದವನ್ನು ವ್ಯಕ್ತಪಡಿಸುವ ಅಗತ್ಯವಿಲ್ಲವೆಂದು ಮೋದಿ ಮತ್ತು ಅವರ ಪಕ್ಷ ಪ್ರತಿಪಾದಿಸುತ್ತಿದೆ. ಇಂತಹ ವ್ಯಕ್ತಿ ದೇಶದ ನಾಯಕನಾಗುವುದು ಸಾಧುವಲ್ಲ. ಆದರೆ ಬಿಜೆಪಿಯ ಕೆಲವು ಸದಸ್ಯರು ಅವನನ್ನು ಮುಂದು ಮಾಡುತ್ತಿದ್ದಾರೆ. ಅದು ಯಶಸ್ವಿಯಾಗುವುದು ಸಾಧ್ಯವಿಲ್ಲ. ಇಂತಹ ವ್ಯಕ್ತಿಯನ್ನು ನಮ್ಮ ಮುಂದಿನ ಪ್ರಧಾನಮಂತ್ರಿಯೆಂದು ಬಿಂಬಿಸಬೇಕೆಂದು ಒತ್ತಾಯಿಸುತ್ತಿರುವ ರಾಜಕಾರಿಣಿಗಳ ವ್ಯಕ್ತಿತ್ವದ ನಿಜವಾದ ಬಣ್ಣ ಇದೀಗ ಬಯಲಾಗುತ್ತಿದೆ.

ಭಾಗ–2

ಸಂಯಮಶೀಲ ಮತ್ತು ಸಮಚಿತ್ತದ ನಾಯಕರು

ಅದ್ವಾನಿ ಮತ್ತು ಅವರ ಪಕ್ಷದವರ ಅರಚಾಟ–ಕಿರುಚಾಟ ಮತ್ತು ಅವರ ಅನುಯಾಯಿಗಳ ವಿದ್ವೇಶಕಾರಿ ಭಾಷಣ ಒಂದು ಕಡೆಗಿದ್ದರೆ, ಇನ್ನೊಂದು ಕಡೆ ಕಾಂಗ್ರೇಸಿನಲ್ಲಿ ಅದಕ್ಕೆ ವಿರುದ್ಧವಾಗಿ ಸಂಯಮವನ್ನೇ ಮೈಗೂಡಿಸಿಕೊಂಡಂತಿರುವ ಸೋನಿಯಾಗಾಂಧಿ, ರಾಹುಲಗಾಂಧಿ, ಪ್ರಿಯಾಂಕಗಾಂಧಿ, ಮನಮೋಹನಸಿಂಗ್, ಶೀಲಾದೀಕ್ಷಿತ್, ದಿಗ್ವಿಜಯ್‌ಸಿಂಗ್ ಮುಂತಾದವರ ಅನುಕರಣೀಯ ನಡವಳಿಕೆಯಿದೆ. ಈ ಎರಡು ಪಕ್ಷಗಳ ನಾಯಕತ್ವದ ನಡುವೆ ಯುದ್ಧ ಪಿಪಾಸೆ, ಕದನ ಕುತೂಹಲ, ವೈರತ್ವ, ವಿದ್ವೇಶಗಳಿಗೆ ಸಂಬಂಧಿಸಿದಂತೆ ಕಂಡು ಬಂದ ಭಿನ್ನತೆಯು ಕಾಂಗ್ರೇಸಿಗೆ ಅಪಾರ ಮತಗಳನ್ನು ತಂದು ಕೊಟ್ಟಿರಬಹುದು. ಯಾವ ಹಂತದಲ್ಲೂ ಕಾಂಗ್ರೆಸ್ಸಿನ ಮುಂಚೂಣಿಯಲ್ಲಿನ ನಾಯಕರು ತಮ್ಮ ತಾಳ್ಮೆಯನ್ನು ಕಳೆದುಕೊಳ್ಳಲಿಲ್ಲ. ತಲೆ ತಿರುಗಿದವರಂತೆ ಮಾತನಾಡಲಿಲ್ಲ. ಸೊಕ್ಕಿನಿಂದ ಮೆರೆಯಲಿಲ್ಲ ಮತ್ತು ವಿಷವನ್ನು ಕಾರಲಿಲ್ಲ. ಯುದ್ಧೋತ್ಸಾಹವನ್ನು ಪ್ರದರ್ಶಿಸಲಿಲ್ಲ.

ಸೋನಿಯಾ, ಪ್ರಿಯಾಂಕ ಮತ್ತು ರಾಹುಲ–ಇವರು ಚುನಾವಣೆಯ ಸಂದರ್ಭದಲ್ಲಿ ನಡೆದುಕೊಂಡ ರೀತಿಯಿಂದ ನಮ್ಮ ಜನಪ್ರತಿನಿಧಿಗಳು ಪಾಠ ಕಲಿತುಕೊಳ್ಳಬೇಕು. ಚುನಾವಣೆಯ ನಂತರವೂ ಅವರೆಲ್ಲರೂ ಪ್ರಜ್ಞಾಪೂರ್ವಕವಾಗಿ ಅಧಿಕಾರಕ್ಕೆ ಆಸೆಪಟ್ಟವರೆಂಬ ಭಾವನೆ ಬಾರದಂತೆ ನಡೆದುಕೊಳ್ಳುತ್ತಿರುವ ರೀತಿ ನಿಜಕ್ಕೂ ಅಸಾಧಾರಣವಾದುದು. ಸೋನಿಯಾಗಾಂಧಿ ತನ್ನ ಪ್ರಧಾನಿ ಪಟ್ಟದ ಆಕಾಂಕ್ಷೆಯನ್ನು ಸುಷ್ಮಾ ಸ್ವರಾಜ್‌ರಂತವರ ಅವಿವೇಕಿತನದ ವರ್ತನೆಯಿಂದ ಬೇಸತ್ತು ತ್ಯಾಗ ಮಾಡಿರಬಹುದು(ಸೋನಿಯಾಗಾಂದಿ ಪ್ರಧಾನಮಂತ್ರಿಯಾದರೆ ತನ್ನ ತಲೆ ಬೋಳಿಸಿಕೊಂಡು, ಬಿಳಿ ಸೀರೆಯುಟ್ಟುಕೊಂಡು ತಿರುಗಾಡುತ್ತೇನೆಂದು ಅನಾಗರಿಕ ರೀತಿಯಲ್ಲಿ ಸುಷ್ಮಾ ಸ್ವರಾಜ್ ಅಂದು ಶಪಥ ಮಾಡಿದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು). ರಾಹುಲ್ ಗಾಂಧಿಯು ಮುಂದೆ ತನಗೆ ಪ್ರಧಾನಿ ಪಟ್ಟ ಬಂದೇ ಬರುತ್ತದೆಯೆಂಬ ಖಚಿತ ನಂಬಿಕೆಯಿಂದಾಗಿ ಈಗ ಅದನ್ನು ತ್ಯಾಗ ಮಾಡುತ್ತಿರಬಹುದು. ಹಾಗೆ ನೋಡಿದರೆ ಸಚಿವ ಸಂಪುಟ ಮಂತ್ರಿಗಿರಿಯನ್ನು ಆತ ಒಪ್ಪಿಕೊಳ್ಳುತ್ತಿಲ್ಲ. ಒಟ್ಟಾರೆ ತಾಯಿ–ಮಗ ಇಬ್ಬರೂ ಭಾರತೀಯ ಸಂಸ್ಕೃತಿಯನ್ನು ಗುತ್ತಿಗೆ ಹಿಡಿದವರಂತೆ ಹಗಲು–ಇರುಳು ಬೊಬ್ಬೆ ಹಾಕುತ್ತಿರುವವರಿಗೆ ಪಾಠ ಹೇಳಿಕೊಡುವ ರೀತಿಯಲ್ಲಿ ರಾಜಕೀಯ ಮುತ್ಸದ್ಧಿತನವನ್ನು ಮೆರೆಯುತ್ತಿದ್ದಾರೆ. ಜನರು ಆಶಾಢಭೂತಿತನ ಮತ್ತು ಆದರ್ಶಗಳ ನಡುವಿನ ಭಿನ್ನತೆಯನ್ನು ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದಾರೆ.

ಪ್ರಿಯಾಂಕಗಾಂಧಿ ನಡೆದುಕೊಳ್ಳುತ್ತಿರುವ ಪರಿಯಂತೂ ರಾಜಕೀಯವಾಗಿ 'ಎನಿಗ್ಮ' ವಾಗಿ ಬಿಟ್ಟಿದೆ. ತನ್ನ ಅಜ್ಜಿ–ತಂದೆ–ತಾಯಿ–ಅಣ್ಣ–ಇವರುಗಳ ಬಗ್ಗೆ ಆಕೆ ಇಟ್ಟುಕೊಂಡಿರುವ ವಸ್ತುನಿಷ್ಟ ನಿಲವು ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ತನ್ನ ತಂದೆಯ ಕೊಲೆಗಾರರ ಗುಂಪಿನ ನಳಿನಿ ಬಗ್ಗೆ ಆಕೆ ನಡೆದುಕೊಂಡಿರುವ ರೀತಿ ಅನುಕರಣೀಯವಾದುದಾಗಿದೆ. ಅದು ಕೇವಲ ಭಾವನಾತ್ಮಕವಾದುದಾಗಿರಲಿಲ್ಲ. ತನ್ನ ರಾಜಕೀಯ ಆಕಾಂಕ್ಷೆ ಬಗ್ಗೆ ಆಕೆಯ ಸ್ಪಷ್ಟವಾದ ನಿಲವು ನಮ್ಮ ಅನೇಕ ಕುಟುಂಬವಾದಿ ರಾಜಕಾರಿಣಿಗಳಿಗೆ ಪಾಠವಾಗಬೇಕು. ಆಕೆ ರಾಜಕೀಯ ರಂಗವನ್ನು ಪ್ರವೇಶಿಸುವುದರ ವಿರುದ್ಧವಾಗಿಲ್ಲ. ಆದರೆ ಅದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ತಾನಿಟ್ಟುಕೊಂಡಿದ್ದಾಳೆ. ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ, ತಮ್ಮನ್ನು ತಾವು ಭಾರತೀಯ ಸಂಸ್ಕೃತಿಯ ಪ್ರತಿನಿಧಿಗಳೆಂದು ದಿನ ಬೆಳಗಾದರೆ ಅರಚಿಕೊಳ್ಳುತ್ತಿರುವ ಮಂದಿ ಈಕೆಯ ವರ್ತನೆಯಿಂದ ಪಾಠ ಕಲಿಯಬೇಕಾಗಿದೆ.

ಮಂತ್ರಿಗಿರಿಗಾಗಿ ಕರ್ನಾಟಕದಲ್ಲಿ ಮಂದಿ ಏನೆಲ್ಲ ನಾಟಕವಾಡುತ್ತಿದ್ದಾರೆ, ತಮ್ಮ ಮಕ್ಕಳನ್ನು ಯಾವ ರೀತಿಯಲ್ಲಿ ರಾಜಕಾರಣಕ್ಕೆ ದೂಡುತ್ತಿದ್ದಾರೆ ಎಂಬುದಕ್ಕೆ ದಂಡಿಯಾಗಿ ಉದಾಹರಣೆಗಳು ದೊರೆಯುತ್ತವೆ. ಸೋನಿಯಾಗಾಂಧಿ ಮಾಡಿರುವ ತ್ಯಾಗ ದೊಡ್ಡದು. ಆಕೆಯ ನಡತೆಯಲ್ಲಿನ ಪ್ರೌಢತನದಿಂದ ಆಕೆ ಜನರ ಕಣ್ಮಣಿಯಾಗಿ ಬಿಟ್ಟಿದ್ದಾಳೆ. ಪ್ರಿಯಾಂಕಗಾಂಧಿ ಮನಸ್ಸು ಮಾಡಿದ್ದರೆ ಎಂದೋ ಎಂ.ಪಿ.ಯಾಗಬಹುದಿತ್ತು. ಕಾಂಗ್ರೇಸಿಗೆ ನಿರಾಯಾಸವಾಗಿ ಒಂದು ಹೆಚ್ಚಿನಸ್ಥಾನ ಲೋಕಸಭೆಯಲ್ಲಿ ಸಿಗುತ್ತಿತ್ತು. ಆದರೆ ಆಕೆ ಈ ಬಗ್ಗೆ ದುಡುಕುತ್ತಿಲ್ಲ. ಆಕೆಯ ಇಚ್ಚಾಶಕ್ತಿಯು ಬಹಳ ದೊಡ್ಡದು. ಅಧಿಕಾರದ ಅಮಿಷಕ್ಕೆ ಒಳಗಾಗುತ್ತಿಲ್ಲ.

ಭಾಗ–3

ಜನಾದೇಶವೆಂಬುದು ಅಖಂಡವಾದುದೇನಲ್ಲ!

ಈಗ ರಾಜ್ಯದಲ್ಲಿ ಅತಿ ಹೆಚ್ಚು ಲೋಕಸಭಾ ಸ್ಥಾನಗಳನ್ನು ಗೆದ್ದಿದ್ದೇವೆಂದು ಬೀಗುತ್ತಿರುವ ಪಕ್ಷವು ತಿಳಿದುಕೊಳ್ಳಬೇಕಾಗಿರುವ ಸಂಗತಿಯೆಂದರೆ ಅದು ಚುನಾವಣೆಯಲ್ಲಿ ಪಡೆದ ಮತಗಳ ಪ್ರಮಾಣ ಕೇವಲ ಶೇ 42.33. ಉಳಿದೆಲ್ಲ ಪಕ್ಷಗಳಿಗಿಂತ ಅದು ಪಡೆದುಕೊಂಡ ಮತಗಳ ಪ್ರಮಾಣ ಅಧಿಕವಿರಬಹುದು. ಅದು ತಾನು ಕಳೆದ ಚುನಾವಣೆಯಲ್ಲಿ ಪಡೆದ ಮತಗಳ ಪ್ರಮಾಣಕ್ಕಿಂತ ಪ್ರಸ್ತುತ ಹೆಚ್ಚು ಪಡೆದುಕೊಂಡಿರಬಹುದು. ಆದರೆ ನಮ್ಮ ನಾಡಿನ

ಪ್ರಿಯಾಂಕಗಾಂಧಿ ನಡೆದುಕೊಳ್ಳುತ್ತಿರುವ ಪರಿಯಂತೂ ರಾಜಕೀಯವಾಗಿ 'ಎನಿಗ್ಮ' ವಾಗಿ ಬಿಟ್ಟಿದೆ. ತನ್ನ ಅಜ್ಜಿ–ತಂದೆ–ತಾಯಿ–ಅಣ್ಣ–ಇವರುಗಳ ಬಗ್ಗೆ ಆಕೆ ಇಟ್ಟುಕೊಂಡಿರುವ ವಸ್ತುನಿಷ್ಟ ನಿಲವು ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ತನ್ನ ತಂದೆಯ ಕೊಲೆಗಾರರ ಗುಂಪಿನ ನಳಿನಿ ಬಗ್ಗೆ ಆಕೆ ನಡೆದುಕೊಂಡಿರುವ ರೀತಿ ಅನುಕರಣೀಯವಾದುದಾಗಿದೆ. ಅದು ಕೇವಲ ಭಾವನಾತ್ಮಕವಾದುದಾಗಿರಲಿಲ್ಲ. ತನ್ನ ರಾಜಕೀಯ ಆಕಾಂಕ್ಷೆ ಬಗ್ಗೆ ಆಕೆಯ ಸ್ಪಷ್ಟವಾದ ನಿಲವು ನಮ್ಮ ಅನೇಕ ಕುಟುಂಬವಾದಿ ರಾಜಕಾರಿಣಿಗಳಿಗೆ ಪಾಠವಾಗಬೇಕು. ಆಕೆ ರಾಜಕೀಯ ರಂಗವನ್ನು ಪ್ರವೇಶಿಸುವುದರ ವಿರುದ್ದವಾಗಿಲ್ಲ. ಆದರೆ ಅದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ತಾನಿಟ್ಟುಕೊಂಡಿದ್ದಾಳೆ. ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ, ತಮ್ಮನ್ನು ತಾವು ಭಾರತೀಯ ಸಂಸ್ಕೃತಿಯ ಪ್ರತಿನಿಧಿಗಳೆಂದು ದಿನ ಬೆಳಗಾದರೆ ಅರಚಿಕೊಳ್ಳುತ್ತಿರುವ ಮಂದಿ ಈಕೆಯ ವರ್ತನೆಯಿಂದ ಪಾಠ ಕಲಿಯಬೇಕಾಗಿದೆ.

...ನರೆಲ್ಲರೂ ದೇವಾಲಯ ಕಟ್ಟುವುದರ ಪರವಾಗಿಲ್ಲ. ಅವರು ಒಟ್ಟಾಗಿ ಜನಸಮುದಾಯಗಳನ್ನು ಒಡೆಯುವುದರ ಪರವಾಗಿಲ್ಲ. ಅದಕ್ಕೆ ವಿರುದ್ಧವಾದ ವಿಚಾರವಿಟ್ಟುಕೊಂಡಿ ಬಯಸುವವರು ಇದ್ದಾರೆ. ಒಂದು ಕೋಮಿನ ಮತಗಳೇ ಸಾಕೆನ್ನುವ ಜನರಿದ್ದಂತೆ ಎಲ್ಲರ ಮತಗಳೂ ಬೇಕೆನ್ನುವ ಜನರೂ ಇದ್ದಾರೆ. ಅವರ ಪ್ರಮಾಣವೇನು ಕಡಿಮೆಯಿಲ್ಲ. ರಾಜ್ಯದಲ್ಲಿ ಎಲ್ಲ ವಿರೋಧ ಪಕ್ಷಗಳು ಕೂಡಿ ಪಡೆದ ಮತಗಳ ಪ್ರಮಾಣ ಶೇ57.67 (ಜೆಡಿಎಸ್- ಶೇ17.01, ಕಾಂಗ್ರೆಸ್- ಶೇ37.92, ಬಿಎಸ್‌ಪಿ ಮತ್ತು ಇತರೆ- ಶೇ 2.74). ಅಂದರೆ ಆಳುವ ಪಕ್ಷಕ್ಕೆ ವಿರುದ್ಧವಾಗಿ ನೀಡಿರುವ ಮತಗಳ ಪ್ರಮಾಣ ಅರ್ಧಕ್ಕಿಂತ ಹೆಚ್ಚು. ಜನರು ತಮಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದಾರೆಂದು ಆಳುವ ಪಕ್ಷವು ಬೀಗಬೇಕಾಗಿಲ್ಲ. ರಾಜ್ಯದಲ್ಲಿ ಆಳುವ ಪಕ್ಷಕ್ಕೆ ನೀಡಿದ ಮತಗಳಿಗಿಂತ ಹೆಚ್ಚು ಮತಗಳನ್ನು ಜನರು ವಿರೋಧ ಪಕ್ಷಗಳಿಗೆ ನೀಡಿದ್ದಾರೆ.

ಜನಾದೇಶದ ಬಗ್ಗೆ ಕೆಲವು ಪಕ್ಷಗಳು ಯಾವಾಗಲೂ ಮಾತನಾಡುತ್ತಿರುತ್ತವೆ. ಆದರೆ ನಮ್ಮ ಸಂದರ್ಭದಲ್ಲಿ ಅಥವಾ ಎಲ್ಲ ಪ್ರಜಾಸತ್ತಾತ್ಮಕ ವ್ಯವಸ್ಥೆಗಳಲ್ಲಿಯೂ ಜನಾದೇಶವೆಂಬುದು ಅಖಂಡವಾಗಿರುವುದಿಲ್ಲ. ಆದ್ದರಿಂದ ಸರ್ಕಾರಗಳು ಜನರ ಪರವಾಗಿರಬೇಕೇ ವಿನಾ ಒಂದು ಕೋಮಿನ ಪರವಾಗಿ ಅಥವಾ ಒಂದು ಧೋರಣೆಯ ಪರವಾಗಿ ನಿಲ್ಲಬಾರದು. ಅತ್ಯಂತ ದುರದೃಷ್ಟದ ಸಂಗತಿಯೆಂದರೆ ನಮ್ಮ ರಾಜ್ಯದಲ್ಲಿ 'ಒಂದು ಕೋಮಿನ ಓಟುಗಳೇ' ಸಾಕು ಎಂಬ ವಿಷಕಾರಿ ಮಾತುಗಳು ಚುನಾವಣಾ ಕಾಲದಲ್ಲಿ ಕೇಳಿಬಂದವು. ಜನತಂತ್ರದಲ್ಲಿ ಇದು ಸಲ್ಲ. ಜನರನ್ನು ಒಳಗೊಳ್ಳುವ ರಾಜಕಾರಣದ ಬಗ್ಗೆ ನಾವು ಇಂದು ಮಾತನಾಡಬೇಕಾಗಿದೆ. ನಮ್ಮ ಪರಂಪರೆಯು ಸಾರಾಸಗಟಾಗಿ ಜನರನ್ನು ಒಳಗೊಳ್ಳುವ ಸ್ವರೂಪದ್ದಲ್ಲ. ಇದನ್ನು ಒಪ್ಪಿಕೊಳ್ಳಬೇಕು. ಪರಂಪರೆಯ ವೈಭವೀಕರಣದಿಂದ ಜನರ ಬದುಕು ಉತ್ತಮವಾಗಿಬಿಡುವುದಿಲ್ಲ. ಪರಂಪರೆಯ ಬಗ್ಗೆ ಅನುಮಾನವಾದಿಗಳಾಗಿರಬೇಕು(sceptic). ಪರಂಪರೆಯ ವೈಭವೀಕರಣವು ಅತಿಯಾದಾಗ ಏನಾಗುತ್ತದೆ ಎಂಬುದಕ್ಕೆ ನಮ್ಮ ಲೋಕಸಭೆಗೆ ನಡೆದ ಹದಿನೈದನೆಯ ಮಹಾ ಚುನಾವಣೆಯೇ ಸಾಕ್ಷಿ. ಪರಂಪರೆಯನ್ನು ಬಂಡವಾಳವನ್ನಾಗಿ ಮಾಡಿಕೊಂಡು ಎಷ್ಟು ದಿನ ನೀವು ರಾಜಕಾರಣ ನಡೆಸಬಲ್ಲಿರಿ?. ಈ ಚುನಾವಣೆಯಿಂದ ಪಾಠ ಕಲಿಯುವುದಾದರೆ ಅದು ತನ್ನ ಕೋಮುವಾದಿತನ ವನ್ನು ಮತ್ತು ಪರಂಪರೆಯ ಕುರುಡು ವೈಭವೀಕರಣವನ್ನು ಬಿಟ್ಟುಕೊಡಬೇಕಾಗುತ್ತದೆ. ಪ್ರಚಲಿತ ಸಂಗತಿಗಳ ಬಗ್ಗೆ ಗಮನ ನೀಡಬೇಕಾಗುತ್ತದೆ. ಈ ಕುರಿತಂತೆ ರಾಜ್ಯದಲ್ಲಿ ಅದರ ವೈಫಲ್ಯವನ್ನು ಭಾಗ-6ರಲ್ಲಿ ಚರ್ಚಿಸಲಾಗಿದೆ.

ಭಾಗ-4

ಲಿಂಗಾಯತರ ಪಕ್ಷ

ಕರ್ನಾಟಕದಲ್ಲಿ ಆಳುವ ಪಕ್ಷವು ತನ್ನಷ್ಟಕ್ಕೆ ತಾನೆ ಲಿಂಗಾಯತರ ಪಕ್ಷವಾಗುತ್ತಿದೆ. ಲಿಂಗಾಯತರು ಅದನ್ನು ಕೈಬಿಟ್ಟರೆ ಅದು ರಾಜ್ಯದಲ್ಲಿ ಇನ್ನಿಲ್ಲದಂತೆ ಧೂಳಿಪಟವಾಗಿ ಬಿಡುತ್ತದೆ. ಆದರೆ ಲಿಂಗಾಯತರಿಗೆ ಬಿಜೆಪಿಯನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳಲು ಎರಡು ಸಮಸ್ಯೆಗಳಿವೆ. ಮೊದಲನೆಯದು ಲಿಂಗಾಯತರ ವಚನ ಸಂವಿಧಾನಕ್ಕೂ ಬಿಜೆಪಿಯ ವಿಚಾರ ಪ್ರಣಾಳಿಕೆಗೂ ಅಜಗಜಾಂತರ ವ್ಯತ್ಯಾಸವಿದೆ. ಅಲ್ಲಿ ಸಹಯೋಗ ಸಾಧ್ಯವಿಲ್ಲ. ಎರಡನೆಯದಾಗಿ ಅದಕ್ಕೆ ಬಿಜೆಪಿಯನ್ನು ಬೆಂಬಲಿಸುವುದು ಅನಿವಾರ್ಯವಾಗಿದೆ ವಿನಾ ಆಯ್ಕೆಯಾಗಿಲ್ಲ. ಕಾಂಗ್ರೆಸಿನಲ್ಲಿ ಅವರಿಗೆ ಸರಿಯಾದ ಸ್ಥಾನ ದೊರೆಯುತ್ತಿಲ್ಲವೆಂಬ ಒಂದೇ ಕಾರಣಕ್ಕೆ ಅವರು ಇಂದು ಆಳುವ ಪಕ್ಷದ ಹಿಂದೆ ಬಿದ್ದಿದ್ದಾರೆ. ಅಲ್ಲಿ ಅವರು ಉಸಿರು ಕಟ್ಟುವ ವಾತಾವರಣದಲ್ಲಿದ್ದಾರೆ. ಲಿಂಗಾಯತರು ತಾತ್ವಿಕವಾಗಿ ಬಿಜೆಪಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ.

ಇಂದು ಕಾಂಗ್ರೆಸು ಲಿಂಗಾಯತರನ್ನು ಕೈಬಿಟ್ಟಿರುವಂತೆ ಕಾಣುತ್ತಿದೆ. ಲಿಂಗಾಯತರು ಇಂದಿನ ಆಳುವ ಪಕ್ಷದ ಹಿಂದೆ ಬೀಳಲು ಕಾರಣವಾಗಿರುವ ಮತ್ತೊಂದು ಸಂಗತಿಯೆಂದರೆ ಕೆಲವು ಲಿಂಗಾಯತ ಸ್ವಾಮಿಗಳು ಅದನ್ನು ಬ್ರಾಹ್ಮಣಶಾಹಿಯ ಪದತಲದಲ್ಲಿ ಕೊಳೆಹಾಕಲು ಪ್ರಯತ್ನಿಸುತ್ತಿದ್ದಾರೆ. ಲಿಂಗಾಯತರೊಳಗಿರುವ ಪುರೋಹಿತಶಾಹಿ ಶಕ್ತಿಗಳು ಬಸವಣ್ಣನ ಸಂವಿಧಾನವನ್ನು ತಿರಸ್ಕರಿಸುವ ಸಲುವಾಗಿ ಬಿಜೆಪಿಯನ್ನು ಓಲೈಸುತ್ತಿರುವ ಹಾಗೆ ಕಾಣುತ್ತದೆ. ಆದರೆ ನಾವು ತಿಳಿದುಕೊಳ್ಳಬೇಕಾಗಿರುವುದೇನೆಂದರೆ ಪುರೋಹಿತಶಾಹಿಯ ಜೊತೆಗಿನ ಸಹಯೋಗದಿಂದ ಲಾಭ ಬ್ರಾಹ್ಮಣಶಾಹಿಗಾಗುತ್ತದೆ ವಿನಾ ಲಿಂಗಾಯತರಿಗಾಗುವುದಿಲ್ಲ. ಇಲ್ಲಿ ಲಿಂಗಾಯತರು ಪಡೆದುಕೊಳ್ಳುವುದಕ್ಕಿಂತ ಕಳೆದುಕೊಳ್ಳುವುದು ಜಾಸ್ತಿ. ಅದು ತನ್ನ ಮೂಲ ಬಸವ ಮಂತ್ರವನ್ನು ಅಲ್ಲಿ ಬಿಟ್ಟುಕೊಡಬೇಕಾಗುತ್ತದೆ. ಮುಂದೆ ಭಾಗ-5 ರಲ್ಲಿ ಹೇಳಿರುವಂತೆ ವೇದ-ಶಾಸ್ತ್ರಗಳನ್ನು ಪವಿತ್ರವೆಂದು ಒಪ್ಪಿಕೊಳ್ಳುವ ಪಕ್ಷ ಒಂದು ಕಡೆಗಿದ್ದರೆ ವೇದಾಗಮಗಳನ್ನು ತಿರಸ್ಕರಿಸುವ ಧೋರಣೆ ಮತ್ತೊಂದು ಕಡೆಗಿದೆ. ಇಲ್ಲಿ ಸಾಮರಸ್ಯ ಸಾಧ್ಯವಿಲ್ಲ. ವೈಯುಕ್ತಿಕ ಸ್ವಾರ್ಥಕ್ಕಾಗಿ ಆಳುವ ಪಕ್ಷದ ಮಡಿಲಲ್ಲಿ ಲಿಂಗಾಯತ ಮುಖಂಡರು ಮುಗಿಬಿದ್ದಿರಬಹುದು. ಈ ಎಲ್ಲ ಸಂಕೀರ್ಣತೆಯನ್ನು ನಮ್ಮ ಸಂದರ್ಭದಲ್ಲಿ ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ನಿಜಕ್ಕೂ ವಚನ ಸಂವಿಧಾನದಲ್ಲಿ ನಂಬಿಕೆಯಿರುವವರೆಲ್ಲರೂ ಇಲ್ಲಿ ಶೂದ್ರ ಶಕ್ತಿಯನ್ನು ಅತಿಶೂದ್ರ ಶಕ್ತಿಯನ್ನು ಸಂಯೋಜಿಸಿ ನಾಡಿನಲ್ಲಿ ಹೊಸ ಪಕ್ಷವೊಂದನ್ನು ಕಟ್ಟುವ ಅಗತ್ಯವಿದೆ. ಆ ಮೂಲಕ ಕಳೆದುಕೊಂಡಿರುವ ಘನತೆ-ಸ್ವಾಭಿಮಾನ-ಗೌರವವನ್ನು ಪಡೆದುಕೊಳ್ಳಲು ಲಿಂಗಾಯತವು ಪ್ರಯತ್ನಿಸಬಹುದಾಗಿದೆ.

ಕರ್ನಾಟಕದಲ್ಲಿ ಆಳುವ ಪಕ್ಷವು ತನ್ನಷ್ಟಕ್ಕೆ ತಾನೆ ಲಿಂಗಾಯತರ ಪಕ್ಷವಾಗುತ್ತಿದೆ. ಲಿಂಗಾಯತರು ಅದನ್ನು ಕೈಬಿಟ್ಟರೆ ಅದು ರಾಜ್ಯದಲ್ಲಿ ಇನ್ನಿಲ್ಲದಂತೆ ಧೂಳಿಪಟವಾಗಿ ಬಿಡುತ್ತದೆ. ಆದರೆ ಲಿಂಗಾಯತರಿಗೆ ಬಿಜೆಪಿಯನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳಲು ಎರಡು ಸಮಸ್ಯೆಗಳಿವೆ. ಮೊದಲನೆಯದು ಲಿಂಗಾಯತರ ವಚನ ಸಂವಿಧಾನಕ್ಕೂ ಬಿಜೆಪಿಯ ವಿಚಾರ ಪ್ರಣಾಳಿಕೆಗೂ ಅಜಗಜಾಂತರ ವ್ಯತ್ಯಾಸವಿದೆ. ಅಲ್ಲಿ ಸಹಯೋಗ ಸಾಧ್ಯವಿಲ್ಲ. ಎರಡನೆಯದಾಗಿ ಅದಕ್ಕೆ ಬಿಜೆಪಿಯನ್ನು ಬೆಂಬಲಿಸುವುದು ಅನಿವಾರ್ಯವಾಗಿದೆ ವಿನಾ ಆಯ್ಕೆಯಾಗಿಲ್ಲ. ಕಾಂಗ್ರೆಸಿನಲ್ಲಿ ಅವರಿಗೆ ಸರಿಯಾದ ಸ್ಥಾನ ದೊರೆಯುತ್ತಿಲ್ಲವೆಂಬ ಒಂದೇ ಕಾರಣಕ್ಕೆ ಅವರು ಇಂದು ಆಳುವ ಪಕ್ಷದ ಹಿಂದೆ ಬಿದ್ದಿದ್ದಾರೆ. ಅಲ್ಲಿ ಅವರು ಉಸಿರು ಕಟ್ಟುವ ವಾತಾವರಣದಲ್ಲಿದ್ದಾರೆ. ಲಿಂಗಾಯತರು ತಾತ್ವಿಕವಾಗಿ ಬಿಜೆಪಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ.

ಅವಕಾಶವಾದಿತ್ವಕ್ಕೆ ತಕ್ಕ ಪಾಠ

ಮುಲಾಯಮ್‌ಸಿಂಗ್‌ಯಾದವ್, ಅಮರಸಿಂಗ್, ಲಾಲುಪ್ರಸಾದ್‌ಯಾದವ್, ದೇವೇಗೌಡ, ಅರ್ಜುನ್‌ಸಿಂಗ್, ಚೌಟಾಲ, ಶೆಖಾವತ್, ಕರುಣಾಕರನ್, ಭಜನ್‌ಲಾಲ್ ಮುಂತಾದವರಿಗೂ ಪ್ರಸ್ತುತ ಚುನಾವಣೆಯು ಪಾಠ ಕಲಿಸಿದೆ. ಇವರ ರಾಜಕೀಯ ಪಾಳೆಗಾರಿಕೆಯನ್ನು ಅದು ನುಚ್ಚುನೂರು ಮಾಡಿದೆ. ಕರ್ನಾಟಕದಲ್ಲಿ ಎಲ್ಲ ರೀತಿಯ ನಾಟಕಗಳನ್ನೂ ಆಡುತ್ತಿರುವ ಜೆಡಿಎಸ್ ಈಗ ಅದರ ಮೂಲಸ್ವರೂಪಕ್ಕೆ ತಕ್ಕಂತೆ 'ತಂದೆ-ಮಗ-ಸೊಸೆ' ಪಕ್ಷವಾಗಿ ನೆಲಕಚ್ಚಿಬಿಟ್ಟಿದೆ. ತನಗೆ ಅನುಕೂಲವಾಗುವುದಾದರೆ ಜಾತ್ಯತೀತತೆಯ ಅರ್ಥದ ಬಗ್ಗೆ ಈ ಪಕ್ಷ ಪ್ರಶ್ನೆಗಳನ್ನು ಕೇಳುತ್ತದೆ ಮತ್ತು ಅದರ ಪರವಾದ ನಿಲವು ತನಗೆ ಅನುಕೂಲವಾಗುವುದಾದರೆ ಅದರ ಅಂಗರಕ್ಷಕನಂತೆ ಅದು ವರ್ತಿಸುತ್ತದೆ. ಕೋಮುವಾದಿ ಪಕ್ಷದ ಜೊತೆ ಸರ್ಕಾರ ನಡೆಸುತ್ತಿದ್ದಾಗ ಶ್ರೀಎಚ್.ಡಿ.ಕುಮಾರಸ್ವಾಮಿ ಅವರು ಜಾತ್ಯತೀತತೆ ಬಗ್ಗೆ ಏನು ಹೇಳುತ್ತಿದ್ದರು ಮತ್ತು ಈಗ ಅಧಿಕಾರ ಇಲ್ಲದಿದಾಗ ಅವರು ಅದರ ಬಗ್ಗೆ ಏನು ಧೋರಣೆ ತಳೆದಿದ್ದಾರೆನ್ನುವುದು ಜನರಿಗೆ ತಿಳಿಯದ ಸಂಗತಿಯೇನಲ್ಲ. ನಮಗೆಲ್ಲರಿಗೂ ಗೊತ್ತಿರುವಂತೆ ದೇವೇಗೌಡರ 'ಕುಟುಂಬ ರಾಜಕಾರಣ'ವಿಲ್ಲದಿದ್ದರೆ ಕೋಮುವಾದಿ ಪಕ್ಷವೊಂದು ಕರ್ನಾಟಕದಲ್ಲಿ ಅಡಳಿತಕ್ಕೆ ಬರಲು ಸಾಧ್ಯವಿರಲಿಲ್ಲ.

ಇಡೀ ದಕ್ಷಿಣ ಭಾರತದ ಯಾವ ರಾಜ್ಯಗಳಲ್ಲೂ ಅದಕ್ಕೆ ತಳಸಿಗುತ್ತಿಲ್ಲ. ಆದರೆ ನಮ್ಮಲ್ಲಿ ಜಾತ್ಯತೀತತೆಗೆ ಕಟಿಬದ್ಧರಾಗಿದ್ದೇವೆಂದು ಹೇಳಿಕೊಳ್ಳುತ್ತಿದ್ದವರೆ ಅವರು ಅಧಿಕಾರ ಹಿಡಿಯುವುದಕ್ಕೆ ನಿಚ್ಚಳಿಕೆಯಾಗಿಬಿಟ್ಟರು. ಆದರೆ ಈಗ ದೇವೇಗೌಡರು ಕೋಮುವಾದಿ ಶಕ್ತಿಗಳನ್ನು ಸೋಲಿಸಬೇಕೆಂದು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಕೆಲವರನ್ನು ಎಲ್ಲ ಕಾಲಕ್ಕೂ ಮೋಸ ಮಾಡಬಹುದು ಮತ್ತು ಕೆಲವು ಕಾಲ ಎಲ್ಲರನ್ನು ಮೋಸ ಮಾಡಬಹುದು ಎಂಬ ನಾಣ್ಣುಡಿಯೊಂದಿದೆ. ಈ ನಾಣ್ಣುಡಿಯ ಒಳಮರ್ಮವನ್ನು ರಾಜಕೀಯವನ್ನೇ ಹಗಲೂ-ಇರುಳೂ ಉಸಿರಾಡುವ ನಮ್ಮ ವಯೋವೃದ್ಧ ಮತ್ತು ಪರಮೋಚ್ಚ ನಾಯಕರಾದ ಎಚ್.ಡಿ ದೇವೇಗೌಡರು ತಿಳಿದುಕೊಳ್ಳಬೇಕು. ಅವರನ್ನು ಮಾಧ್ಯಮಗಳು ದಕ್ಷಿಣ ಕರ್ನಾಟಕದ ನಾಯಕರೆಂದು ಬಣ್ಣಿಸುತ್ತವೆ. ಅವರನ್ನು ಒಕ್ಕಲಿಗರ ರಾಜಕಾರಿಣಿಯೆಂದು ವರ್ಣಿಸಲಾಗುತ್ತದೆ (ಅವರ ಪಕ್ಷ ಈಗ ಗೆದ್ದಿರುವ ಮೂರು ಎಂ.ಪಿ.ಗಳೂ ಒಕ್ಕಲಿಗರಾಗಿರುವುದು ಕಾಕತಾಳೀಯವೆ?). ಅವರನ್ನು ಕುಟುಂಬವಾದಿಯೆಂದು ಹೇಳಲಾಗುತ್ತಿದೆ. ಇವೆಲ್ಲವೂ ಪೂರ್ಣ ಸತ್ಯವಲ್ಲದಿದ್ದರೂ ಅವುಗಳಲ್ಲಿ ತಥ್ಯವಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಈಗಂತೂ

ಅವರದು ಕುಟುಂಬ ಪಕ್ಷವೆನ್ನುವುದಂತೂ ಸಿದ್ಧವಾಗಿಬಿಟ್ಟಿದೆ ಅವರ ಕಾರ್ಯಕ್ಷೇತ್ರ 'ರಾಮನಗರ-ಮಂಡ್ಯ-ಹಾಸನ'ಗಳಿಗೆ ಸೀಮಿತವಾಗಿಬಿಟ್ಟಿದೆ.

ಭಾಗ-5

ಕೋಮುವಾದಿತನದ ಮತ್ತೊಂದು ರೂಪ

ಸಂಸ್ಕೃತ ವಿಶ್ವವಿದ್ಯಾಲಯವನ್ನು ಭಾಷೆ-ಸಾಹಿತ್ಯದ ದೃಷ್ಟಿಯಿಂದ ಸ್ವಾಗತಿಸಬಹುದು. ನಮ್ಮ ರಾಜ್ಯದಲ್ಲಿ ಆರಂಭದಲ್ಲಿ ಅದನ್ನು ಭಾಷಾ ವಿಶ್ವವಿದ್ಯಾಲಯವಾನ್ನಾಗಿಯೇ ಪರಿಭಾವಿಸಿಕೊಳ್ಳಲಾಗಿತ್ತು. ಅದಕ್ಕಿರುವ ಸಮರ್ಥನೆ ಕೇವಲ ಭಾಷೆಯ ನೆಲೆಯದ್ದಾಗಿದೆ ಮತ್ತು ಸಾಹಿತ್ಯದ ನೆಲೆಯದ್ದಾಗಿದೆ. ಆದರೆ ಮುಗುಮ್ಮಾಗಿ ಈಗ ಅದನ್ನು ಸರ್ಕಾರವು 'ಸಂಸ್ಕೃತದ ಜೊತೆಗೆ ವೇದವನ್ನು ಸೇರಿಸಿದ ವಿಶ್ವವಿದ್ಯಾಲಯವನ್ನಾಗಿ ಮಾಡಿಬಿಟ್ಟಿದೆ. ಇಂದು ನಾವು ಜನರನ್ನು ಒಳಗೊಳ್ಳುವ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಸರ್ಕಾರವು ಸಮಾಜದ ಕೆಲವೇ ಕೆಲವು ಕೋಮುಗಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ 'ವೇದ'ಗಳನ್ನು ಅಧ್ಯಯನ ಮಾಡುವ ಸಂಸ್ಥೆಯನ್ನು ಸ್ಥಾಪಿಸುತ್ತಿದೆ. ಸಂಸ್ಕೃತವು ಜನರನ್ನು ಒಳಗೊಳ್ಳುವ ಭಾಷೆಯಾಗಿದೆ. ಅದರ ಸಾಹಿತ್ಯವು ಸಾರ್ವತ್ರಿಕವಾದುದಾಗಿದೆ. ಆದರೆ ವೇದಗಳು ಜನರನ್ನು ಒಳಗೊಳ್ಳುವ ಸಂಗತಿಗಳಾಗಿಲ್ಲ. ಅವು ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಪಾದಿಸುವ ಪ್ರಣಾಳಿಕೆಯೇನಲ್ಲ. ಅವುಗಳನ್ನು ನಮ್ಮ ಎಲ್ಲ ಸಮುದಾಯಗಳು ಒಪ್ಪಿಕೊಂಡಿಲ್ಲ. ಅವುಗಳ ವಿರುದ್ಧವೇ ಬುದ್ಧ, ಬಸವ, ಅಂಬೇಡ್ಕರ್ ಹೋರಾಟ ಮಾಡಿದ್ದು. ವೇದ ವಿಶ್ವವಿದ್ಯಾಲಯವನ್ನು ಮಾಡುವ ಮೂಲಕ ಸರ್ಕಾರವು ವೇದಾಗಮಗಳನ್ನು ತಿರಸ್ಕರಿಸಿದ ಜನಸಮುದಾಯಗಳಿಗೆ ಅವಮಾನ ಮಾಡುತ್ತಿದೆ. ಶೂದ್ರರಿಗೆ ಮತ್ತು ಅತಿಶೂದ್ರರಿಗೆ ಅವಮಾನ ಮಾಡುತ್ತಿದೆ. ಏಕೆಂದರೆ ಅವುಗಳಲ್ಲಿರುವ ಅನೇಕ ವಿಚಾರಗಳು, ಮೌಲ್ಯಗಳು ಜೀವ ವಿರೋಧಿಯಾಗಿವೆ.

ನಾಡಿನ ಜನಸಂಖ್ಯೆಯ ಶೇಕಡ ನಾಲ್ಕರಿಂದ ಐದರಷ್ಟಿರುವ ಸಮುದಾಯಕ್ಕೆ ಪೂಜ್ಯವಾದ ವೇದಗಳಿಗೆ ಒಂದು ವಿಶ್ವವಿದ್ಯಾಲ ಯವಾಗುವುದಾದರೆ ಅವೈದಿಕ ವಿಚಾರ ಪ್ರಣಾಳಿಕೆಯನ್ನು ನಂಬಿರುವ ರಾಜ್ಯದ ಜನಸಂಖ್ಯೆಯ ಶೇ 60 ರಿಂದ 70 ರಷ್ಟಿರುವ ಶೂದ್ರ-ಅತಿಶೂದ್ರರ ಸಂಸ್ಕೃತಿಯ ಅಧ್ಯಯನಕ್ಕೆ ವಿಶ್ವವಿದ್ಯಾಲಯಗಳನ್ನೇಕೆ ಸ್ಥಾಪಿಸಬಾರದು?. ಸಂಸ್ಕೃತ ವಿಶ್ವ ವಿದ್ಯಾಲಯಕ್ಕೆ ವೇದಗಳನ್ನು ತಳುಕುಹಾಕಿದ ಮಹಾತಜ್ಞರಿಗೆ ನಮ್ಮ ನಾಡಿನಲ್ಲಿ ವೇದಾಗಮಗಳಿಗೆ ವಿರುದ್ಧವಾದ ವಿಚಾರ ಪ್ರಣಾಳಿಕೆಗಳಲ್ಲಿ ನಂಬಿಕೆಯಿರುವ ಜನಸಮುದಾಯಗಳಿಬೆಯೆಂಬುದು ಏಕೆ ಹೊಳೆಯಲಿಲ್ಲವೋ ತಿಳಿಯುತ್ತಿಲ್ಲ. ಅವರು ನಿಜವಾದ ಅರ್ಥದಲ್ಲಿ ತಜ್ಞರಾಗಿದ್ದರೆ ಅದು ಹೊಳೆಯಬೇಕಾಗಿತ್ತು. ನಮ್ಮ ನಾಡಿನ ಲಿಂಗಾಯತರು ವೇದಗಳನ್ನು ನಂಬುವುದಿಲ್ಲ. ವೇದಾಧ್ಯಯನಕ್ಕೆ ಒಂದು ವಿಶ್ವವಿದ್ಯಾಲಯವಾಗುವುದಾದರೆ ವಚನ ಸಂಸ್ಕೃತಿಯನ್ನು ಕುರಿತಂತೆ ವಿಶ್ವವಿದ್ಯಾಲಯವೊಂದನ್ನು ಸರ್ಕಾರ ಸ್ಥಾಪಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ನಾಡಿನ ಸರಿಸುಮಾರು ಒಂದೂಕಾಲು ಕೋಟಿಯಷ್ಟಿರುವ ದಲಿತರ ಪ್ರಾತಿನಿಧಿಕ ಸಂಸ್ಥೆಯಾಗಿ ದಲಿತ ಸಂಸ್ಕೃತಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕಾಗುತ್ತದೆ.

ಸರ್ಕಾರವು ಅನೇಕ ವಿಷಯಗಳಲ್ಲಿ ಸಾಮಾಜಿಕ ಪಾರದರ್ಶಕತೆಯನ್ನು ಪಾಲಿಸುತ್ತಿಲ್ಲ. ಕನ್ನಡ ವಿಶ್ವವಿದ್ಯಾಲಯವು ಅರಂಭವಾಗಬೇಕಾದರೆ ಅದು ಬೇಕೋ ಬೇಡವೋ ಎಂಬುದರ ಬಗ್ಗೆ ಸಾರ್ವಜನಿಕವಾಗಿ ಸಾಕಷ್ಟು ಚರ್ಚೆಯಾಗಿತ್ತು. ಅಂದು ನಮ್ಮ ಅನೇಕ ಬುದ್ಧಿಜೀವಿಗಳು ಕನ್ನಡ ವಿಶ್ವವಿದ್ಯಾಲಯದ ಪ್ರಸ್ತುತತೆ ಬಗ್ಗೆ ಪ್ರಶ್ನೆ ಮಾಡಿದ್ದರು. ಆದರೆ ಇಂದು ಯಾವುದೇ ಸಾರ್ವಜನಿಕ ಚರ್ಚೆಗಳಿಲ್ಲದೆ ವಿಶ್ವವಿದ್ಯಾಲಯಗಳನ್ನು ಸರ್ಕಾರ ಸ್ಥಾಪಿಸುತ್ತಿದೆ. ಅದರಲ್ಲೂ ಒಂದು ಕೋಮಿನ ಹಿತವನ್ನು ರಕ್ಷಿಸುವುದಕ್ಕಾಗಿ ಕಟಿಬದ್ಧವಾಗಿರುವಂತೆ ಅದು ವರ್ತಿಸುತ್ತಿದೆ. ಸಂಸ್ಕೃತ ವಿಶ್ವವಿದ್ಯಾಲಯವನ್ನು ಭಾಷಾ ವಿಶ್ವವಿದ್ಯಾಲಯವನ್ನಾಗಿ ಮಾತ್ರ ಮಾಡಬೇಕು. ಅದಕ್ಕೆ ವೇದಗಳ ಅಧ್ಯಯನವನ್ನು ತಳುಕುಹಾಕಬಾರದು. ಸಂಸ್ಕೃತಕ್ಕೆ ಭಾಷೆ ಮತ್ತು ಸಾಹಿತ್ಯದ ನೆಲೆಯಿಂದ ಮಾತ್ರ ಮನ್ನಣೆ ನೀಡಬಹುದೇ ವಿನಾ ವೇದಗಳನ್ನು ಸೇರಿಸಿಕೊಂಡಂತೆ ಅದನ್ನು ಸಮರ್ಥಿಸುವುದು ಸಾಧ್ಯವಿಲ್ಲ. ಈ ಬಗ್ಗೆ ಸರ್ಕಾರವು ಮರುಚಿಂತನೆ ಮಾಡಬೇಕು.

ಸರ್ಕಾರವು ಅನೇಕ ವಿಷಯಗಳಲ್ಲಿ ಸಾಮಾಜಿಕ ಪಾರದರ್ಶಕತೆಯನ್ನು ಪಾಲಿಸುತ್ತಿಲ್ಲ. ಕನ್ನಡ ವಿಶ್ವವಿದ್ಯಾಲಯವು ಅರಂಭವಾಗಬೇಕಾದರೆ ಅದು ಬೇಕೋ ಬೇಡವೋ ಎಂಬುದರ ಬಗ್ಗೆ ಸಾರ್ವಜನಿಕವಾಗಿ ಸಾಕಷ್ಟು ಚರ್ಚೆಯಾಗಿತ್ತು. ಅಂದು ನಮ್ಮ ಅನೇಕ ಬುದ್ಧಿಜೀವಿಗಳು ಕನ್ನಡ ವಿಶ್ವವಿದ್ಯಾಲಯದ ಪ್ರಸ್ತುತತೆ ಬಗ್ಗೆ ಪ್ರಶ್ನೆ ಮಾಡಿದ್ದರು. ಆದರೆ ಇಂದು ಯಾವುದೇ ಸಾರ್ವಜನಿಕ ಚರ್ಚೆಗಳಿಲ್ಲದೆ ವಿಶ್ವವಿದ್ಯಾಲಯಗಳನ್ನು ಸರ್ಕಾರ ಸ್ಥಾಪಿಸುತ್ತಿದೆ. ಅದರಲ್ಲೂ ಒಂದು ಕೋಮಿನ ಹಿತವನ್ನು ರಕ್ಷಿಸುವುದಕ್ಕಾಗಿ ಕಟಿಬದ್ಧವಾಗಿರುವಂತೆ ಅದು ವರ್ತಿಸುತ್ತಿದೆ. ಸಂಸ್ಕೃತ ವಿಶ್ವವಿದ್ಯಾಲಯವನ್ನು ಭಾಷಾ ವಿಶ್ವವಿದ್ಯಾಲಯವನ್ನಾಗಿ ಮಾತ್ರ ಮಾಡಬೇಕು. ಅದಕ್ಕೆ ವೇದಗಳ ಅಧ್ಯಯನವನ್ನು ತಳುಕುಹಾಕಬಾರದು. ಸಂಸ್ಕೃತಕ್ಕೆ ಭಾಷೆ ಮತ್ತು ಸಾಹಿತ್ಯದ ನೆಲೆಯಿಂದ ಮಾತ್ರ ಮನ್ನಣೆ ನೀಡಬಹುದೇ ವಿನಾ ವೇದಗಳನ್ನು ಸೇರಿಸಿಕೊಂಡಂತೆ ಅದನ್ನು ಸಮರ್ಥಿಸುವುದು ಸಾಧ್ಯವಿಲ್ಲ. ಈ ಬಗ್ಗೆ ಸರ್ಕಾರವು ಮರುಚಿಂತನೆ ಮಾಡಬೇಕು.

ವಚನಕಾರರು ವೇದಗಳನ್ನು ಕುರಿತಂತೆ ತೀವ್ರವಾಗಿ ಟೀಕೆ ಮಾಡಿದ್ದಾರೆ. ಬಸವಣ್ಣ 'ವೇದಕ್ಕೆ ಒರೆಯ ಕಟ್ಟುವೆ' ಎಂದು ಒಂದು ಕಡೆ ಹೇಳಿದರೆ 'ವೇದ ಶಾಸ್ತ್ರದವರ ಹಿರಿಯರೆನ್ನೆ' ಎಂದು ಮತ್ತೊಂದು ಕಡೆ ಹೇಳಿದ್ದಾನೆ. 'ವೇದ ಘನವೆಂಬನೆ? ಪ್ರಾಣವಧೆಯ ಹೇಳುತ್ತಿದೆ' ಎಂದು ಮತ್ತೆ ಹೇಳುತ್ತಾನೆ. ಸಿದ್ದರಾಮನು 'ವೇದ ಪ್ರಿಯನಲ್ಲಯ್ಯ ನೀನು' ಎಂದು ಕಪಿಲ ಸಿದ್ಧಮಲ್ಲಿಕಾರ್ಜುನನನ್ನು ಕುರಿತು ಹೇಳುತ್ತಾನೆ. ಅಲ್ಲಮಪ್ರಭುವು 'ವೇದ ಪ್ರಮಾಣವಲ್ಲ, ಶಾಸ್ತ್ರ ಪ್ರಮಾಣವಲ್ಲ'ವೆಂದು ಒಂದು ಕಡೆ ಹೇಳಿ ಮತ್ತೊಂದೆಡೆ 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ' ಎಂದು ಹೇಳಿ ಅವುಗಳನ್ನು ತಿರಸ್ಕರಿಸುತ್ತಾನೆ. ಬಸವಣ್ಣ ಕೂಡಲಸಂಗಮದೇವನನ್ನು 'ವೇದಾತೀತ'ನೆಂದು ಕರೆಯುತ್ತಾನೆ. ಬಸವಣ್ಣ ಅತ್ಯಂತ ಸ್ಪಷ್ಟವಾಗಿ ಮತ್ತು ಸಾಮಾಜಿಕ ನೆಲೆಯಿಂದ ವೇದಾಗಮಗಳನ್ನು ತಿರಸ್ಕರಿಸಿದ್ದಾನೆಂಬುದಕ್ಕೆ ಅವನ ಕೆಳಗಿನ ವಚನ ಉದಾಹರಣೆಯಾಗಬಲ್ಲದು. ಇಲ್ಲಿ ಅವನು ವೈದಿಕದ ತಾತ್ವಿಕ ನೆಲೆಯ ಬಗ್ಗೆ ಮತ್ತು ಅದರ ಆಚರಣೆಗಳ ಬಗ್ಗೆ ಪ್ರಚ್ಛನ್ನವಾಗಿ ಟೀಕೆ ಮಾಡುತ್ತಿದ್ದಾನೆ. ಅಸ್ಪೃಶ್ಯತೆಯಂತಹ ಆಚರಣೆಯ ಬಗ್ಗೆ ಇಲ್ಲಿ ಸೂಚನೆ ನೀಡುತ್ತಿದ್ದಾನೆ. ಮಾದಾರ ಚನ್ನಯ್ಯನ ಮನೆಯಲ್ಲಿ ಉಂಡ ಕಾರಣಕ್ಕೆ ವೇದವೇಕೆ ನಡುಗಬೇಕು?. ಇಲ್ಲಿರುವ ಸೂಕ್ಷ್ಮವನ್ನು ನಾವು ಬಿಡಿಸಿ ಅರ್ಥಮಾಡಿಕೊಳ್ಳಬೇಕು. ಬಸವಣ್ಣನ ವಚನದ ಪಾಠ ಹೀಗಿದೆ:

'ವೇದ ನಡುನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ!
ಆಗಮ ಹೆರತೊಲಗಿ ಅಗಲಿತ್ತಯ್ಯಾ!
ನಮ್ಮ ಕೂಡಲಸಂಗಯ್ಯನು
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ'.

ಇದು ಬಹಳ ಮುಖ್ಯವಾದ ವಚನ. ಆದರ ಇಂಗಿತಾರ್ಥವನ್ನು ನಾವು ಗುರುತಿಸಬೇಕು. ಮಾದಾರ ಚನ್ನಯ್ಯನನ್ನು ಕಂಡು ವೇದ ನಡುಗುತ್ತಿದೆ. ಇಲ್ಲಿ ಬಸವಣ್ಣ ಪ್ರಚ್ಛನ್ನವಾಗಿ ವೈದಿಕವನ್ನು, ಅದರ ವಿಚಾರ ಪ್ರಣಾಳಿಕೆಯನ್ನು ಟೀಕಿಸುತ್ತಿದ್ದಾನೆ ಮತ್ತು ಅದನ್ನು ತಿರಸ್ಕರಿಸುತ್ತಿದ್ದಾನೆ. ಏಕೆಂದರೆ ಅದು ಮಾದಾರ ಚನ್ನಯ್ಯನಂತಹರಿಗೆ ವಿರೋಧವಾಗಿತ್ತು. ಮಾದರ ಚನ್ನಯ್ಯನ ಮನೆಯಲುಂಡ ಕಾರಣಕ್ಕೆ ವೇದ ನಡುಗುವಂತಾಗಿ ಬಿಟ್ಟಿದೆ. ಯಾಕೆ ಹೀಗಾಗಿದೆ?. ಆದರೆ ಕೂಡಲಸಂಗಮದೇವ ಮಾತ್ರ ಮಾದರ ಚನ್ನಯ್ಯನ ಮನೆಯಲ್ಲಿ ಊಟಮಾಡಬಹುದು. ವೇದಾಗಮಕ್ಕೆ ಮಾತ್ರ ಇದು ಸಲ್ಲದು!

ಮಾದರ ಚನ್ನಯ್ಯನ ಮನೆಯಲ್ಲುಣ್ಣುವ ಸಂಗತಿ ಇಲ್ಲಿ ಚರ್ಚೆಯ ವಿಷಯವಾಗಿದೆ. ಅವನ ಮನೆಯಲುಣ್ಣುವ ಸಂಗತಿ ಯಾಕೆ ಚರ್ಚೆಯ ವಸ್ತುವಾಗಬೇಕು? ಮಾದಾರ ಚನ್ನಯ್ಯನನ್ನು ಮತ್ತು ವೇದಾಗಮಗಳನ್ನು ಒಂದು ನೆಲೆಯಲ್ಲಿಡುವುದರ ಮೂಲಕ ಬಸವಣ್ಣ ವೈದಿಕ ಸಂಸ್ಕೃತಿಯು ಪ್ರತಿಪಾದಿಸುತ್ತಿರುವ ಅಮಾನವೀಯ ಮತ್ತು ಅಸಮಾನತೆಯ ನೆಲೆಗಳನ್ನು ತೋರಿಸುತ್ತಿದ್ದಾನೆ. ಸಂಸ್ಕೃತ ವಿಶ್ವವಿದ್ಯಾಲಯವು ಕೇವಲ ಭಾಷೆ ಮತ್ತು ಸಾಹಿತ್ಯದ ವಿಶ್ವವಿದ್ಯಾಲಯವಾಗಬೇಕು. ಅಲ್ಲಿ ಸಂಸ್ಕೃತ ಭಾಷೆ ಮತ್ತು ಭಾಷೆಯಲ್ಲಿರುವ ಸಾಹಿತ್ಯವನ್ನು ಕುರಿತಂತೆ ಅಧ್ಯಯನಗಳಾಗಬೇಕು. ಅದು ಕರ್ಮಕಾಂಡವನ್ನು ಬೋಧಿಸುವ ಸಂಸ್ಥೆಯಾಗಿಬಿಡಬಾರದು. ಯಜ್ಞ-ಯಾಗಗಳನ್ನು ಆಚರಿಸುವುದರ ಬಗ್ಗೆ ಪಾಠ ಹೇಳಿಕೊಡುವ ಸಂಸ್ಥೆಯಾಗಬಾರದು.

ಭಾಗ-6

ಪ್ರಾದೇಶಿಕ ಅಸಮಾನತೆಯ ವಿರಾಟ್ ದರ್ಶನ!

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿದೆ. ನಿರೀಕ್ಷಿಸಿದಂತೆ ಗುಲಬರ್ಗಾ ವಿಭಾಗ ಜಿಲ್ಲೆಗಳಲ್ಲಿ ಫಲಿತಾಂಶ ಅತ್ಯಂತ ಕೆಳ

(45ನೇ ಪುಟಕ್ಕೆ)

ಓಗರವಿಲ್ಲದೆ ಪ್ರಸಾದವಿಲ್ಲ...

ಡಾ. ಎಸ್. ನಟರಾಜ್ ಬೂದಾಳು

ನಮ್ಮ ನಡುವಿನ ಸಾಂಸ್ಕೃತಿಕ ರಾಜಕಾರಣದೊಳಗಿನ ತಾತ್ವಿಕ ಸೆಣಸಾಟಗಳು ಅತ್ಯಂತ ಆಳವಾದವು; ಬಹಳ ಸಾರಿ ಮರಣಾಂತಿಕವಾದವು. ಅವುಗಳನ್ನು ತೀವ್ರವಾಗಿ ಪರಿಭಾವಿಸದೆ ಪ್ರತಿಕ್ರಿಯಿಸಲು ಸಾಧ್ಯವಾಗುವುದಿಲ್ಲ. ರಸ-ಧ್ವನಿ-ಔಚಿತ್ಯ-ಆನಂದಗಳನ್ನೇ ಆತ್ಯಂತಿಕವಾದ ಪರಿಕಲ್ಪನೆಗಳೆಂದುಕೊಂಡ 'ಭಾರತೀಯ' ಕಾವ್ಯಮೀಮಾಂಸೆಗೆ ವಚನಗಳ ಅನುಸಂಧಾನ ಸಾಧ್ಯವಾಗದೆ ಸ್ತಬ್ಧವಾಗುತ್ತದೆ. ಯಾವ ವಚನಕಾರನ ಯಾವ ವಚನವೂ ರಸ-ಧ್ವನಿ-ಆನಂದಗಳ ಅಭಿವ್ಯಕ್ತಿಯಲ್ಲವೆಂಬುದು ಅರಿವಾದಾಗ ಗೊಂದಲಗೊಳ್ಳುತ್ತದೆ. ಅದಕ್ಕೆ 'ನಡೆ-ನುಡಿ' ಸಿದ್ಧಾಂತವನ್ನು ಎದುರಾಗುವುದು ತುಂಬಾ ಪೇಚಿನ ಸಂಗತಿ. 'ದುಃಖದ ಅನುಸಂಧಾನವೇ ಕಾವ್ಯ ಕಲೆಗಳ ಉದ್ಯೋಗ'ವೆಂಬ ಮಾತು ವಚನಗಳಿಗೆ ಸರಿಯಾಗಿ ಒಪ್ಪುತ್ತದೆ. ವಚನಗಳು ಅನುಸಂಧಾನ ಮಾಡಿದ್ದು ದುಃಖವನ್ನೇ ಹೊರತು ಆನಂದವನ್ನಲ್ಲ.

ಇಂದಿಗೂ ಕನ್ನಡಿಗರಿಂದ ಅತ್ಯಂತ ಹೆಚ್ಚು ಓದಿಸಿಕೊಳ್ಳುತ್ತಿರುವ ಕಾವ್ಯವೆಂದರೆ ಚಿದಾನಂದಾವಧೂತನ 'ದೇವಿ ಮಹಾತ್ಮೆ' ಎಂಬ ಷಟ್ಪದಿ ಕಾವ್ಯ. ನಮ್ಮ ಅಕೆಡೆಮಿಕ್ ವಲಯಕ್ಕೆ ಮಾತ್ರ ಈ ಕೃತಿಯ ಪರಿಚಯ ಅಷ್ಟಾಗಿ ಇದ್ದಂತಿಲ್ಲ. ಇದರ ಬದಲಿಗೆ, ಅತ್ಯಂತ ಹೆಚ್ಚು ಓದಿಸಿಕೊಳ್ಳುವ ಕಾವ್ಯವೆಂದರೆ ಅದು ಕುಮಾರವ್ಯಾಸನ 'ಗದುಗಿನ ಭಾರತ' ವೆಂದು ಯಾರೋ ಹೇಳಿಕೊಟ್ಟ ಮಾತನ್ನು ತುಂಬಾ ನಿಷ್ಠೆಯಿಂದ ನಮ್ಮ ಕಾಲೇಜು/ವಿಶ್ವವಿದ್ಯಾಲಯಗಳ ಕೆಲವು ಅಧ್ಯಾಪಕರು ಸುಮಾರು ಐವತ್ತು ವರ್ಷಗಳಿಂದ ಹೇಳುತ್ತ ಬಂದಿದ್ದಾರೆ. ಇದು ಕೇವಲ ಆಕಸ್ಮಿಕವಾಗಿ ಸಂಭವಿಸುತ್ತಿರುವ ಸಂಗತಿಯಲ್ಲ. ಇದರ ಹಿಂದಿನ ಸಾಂಸ್ಕೃತಿಕ ರಾಜಕಾರಣಕ್ಕೆ ಅನೇಕ ಮುಖಗಳಿವೆ.

ಮೊದಲನೆಯದಾಗಿ ವೈದಿಕೇತರ ಶಾಕ್ತಪಂಥದ ಪ್ರಾತಿನಿಧಿಕವೆನ್ನಬಹುದಾದ ಕೃತಿಯೊಂದನ್ನು ಶತಾಯಗತಾಯ ಕತ್ತಲೆಗೆ ತಳ್ಳುವ ಹುನ್ನಾರವಿದೆ. ಎರಡನೆಯದಾಗಿ 'ಸ್ತ್ರೀಮತವನು ಅತ್ಯಂದ ಧ್ವನಿ ಪೂರ್ಣವಾಗಿ ಉತ್ತರಿಸಿದ' ದೇವಿಮಹಾತ್ಮೆ ಕಾವ್ಯವನ್ನು ಪುರುಷಾಧಿಕಾರವೆಂತೂ ಸೈರಿಸುವುದಿಲ್ಲ. ಶೂದ್ರಕವಿಯೊಬ್ಬನ ಕಾವ್ಯವನ್ನು ಪ್ರಧಾನ ಕಾವ್ಯವನ್ನಾಗಿ ಒಪ್ಪಿಕೊಳ್ಳದ ಹಠಮಾರಿತನದ ಜೊತೆಗೆ ಅದು ಮುಂದಿಡುತ್ತಿರುವ ಭಿನ್ನ ಕಾವ್ಯಮೀಮಾಂಸೆಯೂ ಸಮಸ್ಯೆಯನ್ನೊಡ್ಡುತ್ತದೆ. ಭಿನ್ನ ಕಾವ್ಯಮೀಮಾಂಸೆಯನ್ನು ಮುಂದಿಡುವ ಎಲ್ಲ ಕೃತಿಗಳಿಗೂ, ಪ್ರಕಾರಕ್ಕೂ ಇದೇ ಗತಿಯಾಗಿದೆ. ಇಡಿಯಾಗಿ ವಚನ ಸಾಹಿತ್ಯವನ್ನು ಯಾವ ಪ್ರಕಾರದ ಕಾವ್ಯವೂ ಅಲ್ಲವೆಂಬ ತೀರ್ಮಾನದೊಡನೆ ತೀರಾ ಇತ್ತೀಚಿನವರೆಗೆ ಆಚೆಗಿಡಲಾಗಿತ್ತು. ಯಾಕೆ ಹೀಗೆ?

ನಮ್ಮ ನಡುವಿನ ಸಾಂಸ್ಕೃತಿಕ ರಾಜಕಾರಣದೊಳಗಿನ ತಾತ್ವಿಕ ಸೆಣಸಾಟಗಳು ಅತ್ಯಂತ ಆಳವಾದವು; ಬಹಳ ಸಾರಿ ಮರಣಾಂತಿಕವಾದವು. ಅವುಗಳನ್ನು ತೀವ್ರವಾಗಿ ಪರಿಭಾವಿಸದೆ ಪ್ರತಿಕ್ರಿಯಿಸಲು ಸಾಧ್ಯವಾಗುವುದಿಲ್ಲ. ರಸ-ಧ್ವನಿ-ಔಚಿತ್ಯ-ಆನಂದಗಳನ್ನೇ ಆತ್ಯಂತಿಕವಾದ ಪರಿಕಲ್ಪನೆಗಳೆಂದುಕೊಂಡ 'ಭಾರತೀಯ' ಕಾವ್ಯಮೀಮಾಂಸೆಗೆ ವಚನಗಳ ಅನುಸಂಧಾನ ಸಾಧ್ಯವಾಗದೆ ಸ್ತಬ್ದವಾಗುತ್ತದೆ. ಯಾವ ವಚನಕಾರನ ಯಾವ ವಚನವೂ ರಸ-ಧ್ವನಿ-ಆನಂದಗಳ ಅಭಿವ್ಯಕ್ತಿಯಲ್ಲವೆಂಬುದು ಅರಿವಾದಾಗ ಗೊಂದಲಗೊಳ್ಳುತ್ತದೆ. ಅದಕ್ಕೆ 'ನಡೆ-ನುಡಿ' ಸಿದ್ಧಾಂತವನ್ನು ಎದುರಾಗುವುದು ತುಂಬಾ ಪೇಚಿನ ಸಂಗತಿ. 'ದುಃಖದ ಅನುಸಂಧಾನವೇ ಕಾವ್ಯ ಕಲೆಗಳ ಉದ್ಯೋಗ'ವೆಂಬ ಮಾತು ವಚನಗಳಿಗೆ ಸರಿಯಾಗಿ ಒಪ್ಪುತ್ತದೆ.



ವಚನಗಳು ಅನುಸಂಧಾನ ಮಾಡಿದ್ದು ದುಃಖವನ್ನೇ ಹೊರತು ಆನಂದವನ್ನಲ್ಲ. ಭಾರತೀಯ ಕಾವ್ಯಮೀಮಾಂಸೆಯನ್ನು ಆಳುತ್ತಿರುವುದು 'ರಸ'ವೇ ಎನ್ನುವುದನ್ನು ಬಹುಪಾಲು ತಾತ್ವಿಕರು ಒಪ್ಪುತ್ತಾರೆ. ರಸಕ್ಕೂ ಸಂಭೋಗಕ್ಕೂ ಇರುವ ಹತ್ತಿರದ ನಂಟನ್ನು ಇತರ ಮೀಮಾಂಸಾ ಪ್ರಸ್ಥಾನಗಳೂ ಪರಿಗಣಿಸಿವೆ. ಅನ್ನದಿಂದ ಸಂಭೋಗದವರೆಗೆ ಜೀವನದ ಪ್ರತಿ ನಡೆಯಲ್ಲೂ ಹಾಸುಹೊಕ್ಕಾಗಿರುವ ರಸವನ್ನು ಪಕ್ಕಕ್ಕಿರಿಸಿ ಕಾವ್ಯ-ಕಲೆಗಳ ಬಗೆಗೆ ಮಾತನಾಡುವುದು ಕಷ್ಟ. ಆದರೆ ರಸದ ಮುಂದಿನ ನಡೆಯನ್ನು ಗುರುತಿಸುವುದರಲ್ಲಿ ವೈದಿಕ ಮತ್ತು ವೈದಿಕೇತರ ಪ್ರಸ್ಥಾನಗಳು ನಿರ್ಣಾಯಕವಾಗಿ ಬೇರೆ ಬೇರೆ ದಾರಿ ಹಿಡಿಯುತ್ತವೆ. ರಸದ ಮುಂದಿನ ಪರಿಣಾಮವನ್ನು ಆನಂದದ ಮೂಲಕ 'ಪರಾವಾಕ್ಕು, ಪರಬ್ರಹ್ಮವೆಂದು' ವೈದಿಕ ಮೀಮಾಂಸೆಯು ನಿರ್ಣಯಿಸಿದರೆ, 'ಕರುಣಾ-ಮೈತ್ರಿಯೇ' ಪರಿಣಾಮವೆಂದು ಬೌದ್ಧ ಮತ್ತು ಇತರ ಶ್ರಮಣಧಾರೆಗಳು ನಿರ್ಣಯಿಸುತ್ತವೆ. ಒಂದು 'ಪರ'ದ ದಾರಿ ಹಿಡಿದರೆ ಇನ್ನೊಂದು 'ಇಹ'ದ ನಡುವಿಗೇ ಬಂದು ತೊಡಗಿಕೊಳ್ಳುತ್ತದೆ. ಭಾರತೀಯ ಬದುಕನ್ನೇ ನಿರ್ಧರಿಸಿರುವ ಸಂಗತಿ ಇದು.

ಬುದ್ಧ ಗುರುವು ಮುಂದಿಟ್ಟ ನಾಲ್ಕು ಶ್ರೇಷ್ಠ ಸತ್ಯಗಳು ಕೂಡ ದುಃಖ ಮತ್ತು ಅದರ ಪರಿಹಾರವನ್ನು ಕುರಿತವೇ ಆಗಿವೆ. ಹುಟ್ಟಿನಿಂದಲೇ ಆರಂಭವಾಗುವ ದುಃಖಕ್ಕೆ ಸರಿಯಾದ ಕಾರಣವನ್ನು ಹುಡುಕಿಕೊಟ್ಟವರಲ್ಲಿ ಬುದ್ಧಗುರು ಮೊದಲಿಗನು. ಸದಾ ಚಲನಶೀಲವಾದ ಈ ಲೋಕವನ್ನು ಪ್ರತಿಕ್ಷಣವೂ ಸ್ಥಗಿತವೆಂದು ಭಾವಿಸಿ ಪ್ರವರ್ತಿಸುವುದರಿಂದ ದುಃಖದ ಉಗಮವಾಗುತ್ತದೆ. ಬೇರಾವ ದರ್ಶನವಾಗಲೀ, ಧರ್ಮವಾಗಲೀ ಈ ಸಂಗತಿಯನ್ನು ಮುಂದಿಡುವುದಿಲ್ಲ. ಬುದ್ಧಗುರು ಮೊಟ್ಟಮೊದಲಿಗೆ ಇದನ್ನು ಅರಿತು ತಿಳಿಸಿಕೊಟ್ಟನು. ಸಾಮಾನ್ಯಮಾನವಮತಿ ನಿರಂತರ ಚಲನಶೀಲವಾದ ಲೋಕವನ್ನು ಸ್ಥಿತವೆಂದು ಭಾವಿಸಿ ವ್ಯವಹರಿಸುತ್ತದೆ. ಇದು ಉಂಟುಮಾಡುವ ಸಂಘರ್ಷ ದುಃಖಕಾರಣವಾಗಿ ಮಾರ್ಪಡುತ್ತದೆ. ಇಂದಿನ ಲೋಕಸಂಗತಿಗಳನ್ನು ಸ್ಥಿತವೆಂದು ನೋಡಿದಾಗ ಉಂಟಾಗುವ ಮೋಹವನ್ನು ಅಥವಾ ತಿರಸ್ಕಾರವನ್ನು 'ತೃಷ್ಣಾ' ಎನ್ನುತ್ತಾರೆ. ಇದು ಹೀಗೇ ಇರಲಿ, ಇದು ಹೀಗೆ ಆಗದಿರಲಿ ಎನ್ನುವ ಬಯಕೆಗೆ ಜೋತುಬೀಳುವುದೇ ದುಃಖಕ್ಕೆ ಕಾರಣವಾಗುತ್ತದೆ. ಬುದ್ಧಗುರು 'ಆಸೆಯೇ ದುಃಖಕ್ಕೆ ಮೂಲ' ಎಂದು ಎಲ್ಲಿಯೂ ಹೇಳಿಲ್ಲ. ಬದಲಿಗೆ 'ತೃಷ್ಣೆ' (ಹಿಂದಿಯಲ್ಲಿ 'ತನ್ಹಾ') ಅಂದರೆ ಬದಲಾವಣೆಯನ್ನು ಒಪ್ಪದೆ, ಇರುವುದು ಹೀಗೇ ಇರಲಿ ಎಂದು ಅದಕ್ಕೇ ಅಂಟಿಕೊಂಡಿರುವುದೇ ದುಃಖದ ಕಾರಣ ಎಂದು ಗುರುತಿಸಲಾಗಿದೆ.

ತೃಷ್ಣೆ ಪದವನ್ನು ಕನ್ನಡಕ್ಕೆ ಅನುವಾದಿಸುವಾಗ 'ಆಸೆ' ಎಂದು ತಪ್ಪಾಗಿ ಅನುವಾದಿಸಿದುದರಿಂದ ಇಂತಹ ಪ್ರಮಾದ ಸಂಭವಿಸಿದೆ. ಇದು ಗ್ರಹಿಸುತ್ತಿರುವ ವಸ್ತುವನ್ನು ಕುರಿತದ್ದಾದರೆ ಗ್ರಹಿಸುತ್ತಿರುವವನು ಕೂಡ ತನ್ನನ್ನು ಸ್ವತಂತ್ರ ಅಸ್ತಿತ್ವವುಳ್ಳವನ್ನು ಎಂದು ಕೊಳ್ಳುವುದರಿಂದ ದುಃಖವು ಇಬ್ಬಗೆಯದಾಗುತ್ತದೆ. ಬುದ್ಧಗುರುವು ಇದನ್ನು ಮೊದಲಿಗೆ ಗುರುತಿಸಿ ಪ್ರವಾಹರೂಪದಲ್ಲಿ ನಿರಂತರ ಬದಲಾಗುತ್ತಿರುವ ಅದರ 'ಧರ್ಮವನ್ನು' ಅರಿವುದೇ ಬಿಡುಗಡೆಯ ಮಾರ್ಗವೆಂದು ತೋರಿಸಿಕೊಟ್ಟನು.

ಲಾವ್ ತ್ಸು ವಿನ 'ತಾವೋ' ತಾತ್ವಿಕತೆ ಕೂಡಾ ಲೋಕಸಂಗತಿಗಳನ್ನು ಸದಾ 'ಆಗುತ್ತಿರುವ' ಪ್ರಕ್ರಿಯೆ ಎಂದು ವಿವರಿಸುತ್ತದೆ. ಪಾಶ್ಚಿಮಾತ್ಯ ಚಿಂತಕರಲ್ಲಿ ಈ ಪ್ರಕ್ರಿಯಾ ಮೀಮಾಂಸೆಯನ್ನು ಮುಂದಿಟ್ಟ

ಮೊದಲ ಚಿಂತಕನೆಂದರೆ ಗ್ರೀಕ್ ದೇಶದ ಹೆರಾಕ್ಲೀಟಸ್. ಆದರೆ ನಂತರ ಬಂದ ಪ್ಲೇಟೋ, ಅರಿಸ್ಟಾಟಲ್ ಮುಂತಾದವರ ಚಿಂತನೆಗಳು ಹೆರಾಕ್ಲೀಟಸ್‌ನ ಪ್ರಕ್ರಿಯಾ ಮೀಮಾಂಸೆಯನ್ನು ದಿಕ್ಕು ತಪ್ಪಿಸುವಲ್ಲಿ ಯಶಸ್ವಿಯಾದವು. ಪಾಶ್ಚಾತ್ಯ ಕಾವ್ಯಮೀಮಾಂಸೆಯನ್ನು ಅಧ್ಯಯನ ಮಾಡುವಾಗ ಪ್ಲೇಟೋ ಮತ್ತು ಅರಿಸ್ಟಾಟಲ್ ನಡುವಿನ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ತುಂಬಾ ಗಂಭೀರವಾಗಿ ನೋಡುವ ಅಕೆಡೆಮಿಕ್ ವಲಯವು, ಈ ಇಬ್ಬರೂ ಸೇರಿ ಲೋಕವನ್ನು ದಿಕ್ಕು ತಪ್ಪಿಸಿದುದನ್ನು ಇಂದಿಗೂ ಗಂಭೀರವಾಗಿ ನೋಡುತ್ತಿಲ್ಲ. ಹೆರಾಕ್ಲೀಟಸ್ ಲೋಕವನ್ನು 'ಆಗುವಿಕೆ' ಎಂದು ವಿವರಿಸಿದರೆ, ಪ್ಲೇಟೋ–ಅರಿಸ್ಟಾಟಲ್ ಲೋಕವನ್ನು 'ಇರುವಿಕೆ' ಎಂದು ವಿವರಿಸಿದರು; ಅನಿತ್ಯಕ್ಕೆ ಬದಲಾಗಿ ನಿತ್ಯವನ್ನು ಮುಂದಿಟ್ಟರು.

ಎರಡು ಶತಮಾನಗಳಿಂದ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮೀಮಾಂಸೆಗಳೆರಡೂ ಈ ಪ್ಲೇಟೋ ಪ್ರಣೀತ 'ಇರುವಿಕೆಯ' ತಾತ್ವಿಕತೆಯಿಂದಾಗಿ ದಾರಿತಪ್ಪಿದವು. 'ಭಾರತೀಯ' ಕಾವ್ಯಮೀಮಾಂಸೆಯೂ 'ಆಗುವಿಕೆಗೆ' ಬದಲು 'ಇರುವಿಕೆಯನ್ನೇ' ಬಲವಾಗಿ ಪ್ರತಿಪಾದಿಸಿದೆ. 'ದೈವವಾದದ' ಪ್ರಮಾಣದೊಡನೆ ಮತ್ತೊಂದನ್ನು ಯೋಚಿಸದ ಹಾಗೆ ಮಾಡಿದ 'ಭಾರತೀಯ' ಕಾವ್ಯಮೀಮಾಂಸೆಯೇ ನಮ್ಮ ಊನಗೊಂಡ ಬದುಕಿಗೆ ಹೊಣೆಗಾರನಾಗಬೇಕಾಗುತ್ತದೆ. ನಮ್ಮ ಅಕೆಡೆಮಿಕ್ ಸಂಸ್ಥೆಗಳ 'ಏಕನಿಷ್ಠೆ' ಈ ಮಿಥ್ಯಾಮಾರ್ಗವನ್ನು ಹೆದ್ದಾರಿಯಾಗಿಸುವಲ್ಲಿ, ನಮ್ಮ ಜೀವನ ಮೀಮಾಂಸೆಯನ್ನು, ಕಾವ್ಯಮೀಮಾಂಸೆಯನ್ನು ಭ್ರಷ್ಟಗೊಳಿಸುವಲ್ಲಿ ದೊಡ್ಡ ಕೊಡುಗೆಯನ್ನು ನೀಡಿದೆ. ಅಪಾರವಾದ ಶ್ರದ್ಧೆ ನಿಷ್ಠೆಗಳಿಂದ 'ಪಾಠ ಹೇಳುವ' ವಿದ್ವಾಂಸರುಗಳಿಗೆ ಇಲ್ಲಿನ ಭಿನ್ನಮೀಮಾಂಸೆಗಳು ಕಾಣಿಸಲೇ ಇಲ್ಲ. ಈ ದೈವವಾದವನ್ನಾಧರಿಸಿದ ತಾತ್ವಿಕತೆಯನ್ನು ಬೌದ್ಧ ಧರ್ಮದ ಹೊರತಾಗಿ ಬಹುತೇಕ ಎಲ್ಲ ಧರ್ಮಗಳೂ ಪೋಷಿಸುತ್ತಾ ಬಂದವು.

ಈ ತಾತ್ವಿಕತೆಗೆ ಚ್ಯುತಿ ಬರಲು ಪ್ರಾರಂಭವಾದದ್ದು, ಸಾಪೇಕ್ಷತಾ ಸಿದ್ಧಾಂತ, ಕ್ವಾಂಟಮ್ ಸಿದ್ಧಾಂತ ಮತ್ತು ಅನಿಶ್ಚಿತತೆಯ ಸಿದ್ಧಾಂತಗಳು, ಈ ನಿಲುವನ್ನು ಬಲ ವಾಗಿ ಅಲುಗಾಡಿಸಿದಾಗ. ಪಾಶ್ಚಿಮಾತ್ಯರಲ್ಲಿ ಇತ್ತೀಚಿನ ಆಧುನಿಕೋತ್ತರವಾದ ಮತ್ತು ಸಂರಚನೋತ್ತರವಾದಗಳ (ಹೈಡೆಗರ್, ವೈಟ್ ಹೆಡ್, ಬರ್ಗ್‌ಸನ್ ಮುಂತಾದವರ) ಕಾರಣದಿಂದಾಗಿ ಈ ಚಿಂತನೆಯ ಧಾಟಿ ಬದಲಾಗಿದೆ. ನಿತ್ಯತೆಯ ಬದಲಿಗೆ ಅನಿತ್ಯತೆಯನ್ನು, ಇರುವಿಕೆಯ ಬದಲಿಗೆ ಆಗುವಿಕೆಯನ್ನು ಮುಂದಿಡಲಾರಂಭಿಸಿವೆ. ಲೋಕವನ್ನು ಚಲನಶೀಲ ಪ್ರವಾಹವನ್ನಾಗಿ ನೋಡುವ ಕ್ರಮ ಅಲ್ಲಿಯೂ ಚಾಲ್ತಿಗೆ ಬರುತ್ತಿದೆ.

ಪ್ರಕ್ರಿಯಾ ಮೀಮಾಂಸೆಯನ್ನು ಮುಂದಿಟ್ಟ ಬೌದ್ಧ ಮೀಮಾಂಸೆಯು ಈ 'ಆಗುವಿಕೆಯ' ಆಳವಾದ ಶೋಧನೆಯನ್ನು ಮುಂದುವರಿಸಿತು. ಗೋಚರವಾಗುತ್ತಿರುವ ಸಂಗತಿಗಳ 'ಧರ್ಮವೇ' ಶೂನ್ಯತೆಯಾಗಿರುವುದರಿಂದ, ಅಸ್ತಿವಾದ (ಎಲ್ಲವೂ ಇದೆ) ಮತ್ತು ನಾಸ್ತಿವಾದ (ಯಾವುದೂ ಇಲ್ಲ)ಗಳೆರಡೂ ನಿರಾಕರಣೆಗೊಂಡವು. ಶೂನ್ಯತೆಯು ಇದೆ ಅಥವಾ ಇಲ್ಲವೆಂದು ವಿವರಿಸುವ ಪರಿಕಲ್ಪನೆ ಅಲ್ಲ ಅದು ಇರುವುದರ ವಿರುದ್ಧವೂ ಅಲ್ಲ ಇಲ್ಲದುದರ ವಿರದ್ಧವೂ ಅಲ್ಲ. ಅದು ಶಾಶ್ವತ ವಸ್ತುವೆಂಬುದನ್ನೂ ಮಾನ್ಯಮಾಡುವುದಿಲ್ಲ ಮತ್ತು ವಸ್ತುರಹಿತತೆಯನ್ನೂ ಅಂದರೆ ವಸ್ತುವನ್ನು ಇಲ್ಲವಾಗಿಸುವುದೂ ಇಲ್ಲ. ವಚನಕಾರರು ಇದಕ್ಕೆ 'ಬಯಲು' ಎಂಬ ಸಂವಾದೀ ಪರಿಕಲ್ಪನೆಯನ್ನು ರೂಪಿಸಿಕೊಂಡರು. ಬಯಲೆಂದರೆ ಏನೂ ಇಲ್ಲದಿರುವ ಖಾಲಿಯಲ್ಲ. ಬದಲಿಗೆ ಎಲ್ಲವನ್ನೂ ಧರಿಸಬಲ್ಲ 'ಗರ್ಭ'.

ಲೋಕವನ್ನು ಸರಿಯಾಗಿ ವಿವರಿಸಿಕೊಳ್ಳುವುದರಿಂದ ಉಂಟಾಗುವ ಪರಿಣಾಮಗಳೆಂದರೆ ಮೊದಲನೆಯದಾಗಿ ನಮ್ಮ ಕಾವ್ಯ ಮೀಮಾಂಸೆ ಮತ್ತು ಜೀವನ ಮೀಮಾಂಸೆಗಳು ಆಮೂಲಾಗ್ರವಾಗಿ ಬದಲಾಗುತ್ತವೆ. ಎರಡನೆಯದಾಗಿ ಅದು ಕಾವ್ಯ ಮತ್ತು ಕಲೆಗಳ ಉದ್ದೇಶವನ್ನು ಬದಲಿಸುತ್ತದೆ. ಭಾರತೀಯ ಕಾವ್ಯ ಮೀಮಾಂಸೆಯು ಕಾವ್ಯಕಲೆಗಳ ಆತ್ಯಂತಿಕ ಉದ್ದೇಶ ಆನಂದ ಎಂದರೆ ಬೌದ್ಧ ಮೀಮಾಂಸೆಯು ದುಃಖದ ಅನುಸಂಧಾನವೆನ್ನುತ್ತದೆ. ಇವೆರಡರ ನಡುವೆ ಅಗಾಧವಾದ ವ್ಯತ್ಯಾಸವಿದೆ. ಆನಂದವು ವ್ಯಕ್ತಿಗತವಾದುದು, ಆತ್ಮವಾದಿಗೆ ಮಾತ್ರ ಸಾಧ್ಯ ವಾಗುವಂಥದ್ದು. ಪ್ರಕ್ರಿಯಾ ಮೀಮಾಂಸೆಯು ಅನಾತ್ಮವಾದವನ್ನು ಮುಂದಿಡುವುದರಿಂದ ಅಲ್ಲಿ ಬಿಡುಗಡೆಗೊಳ್ಳಬೇಕಾದ ಸ್ವತಂತ್ರ ಆತ್ಮವೆನ್ನುವುದೇ ಇರುವುದಿಲ್ಲ. ಈ ಲೋಕಸಮಸ್ತದ ಭಾಗವಾಗಿ ಚಲನೆಯಲ್ಲಿರುವ ವ್ಯಕ್ತಿಗೆ ಅದರ ಅರಿವು ಸಹಜವಾಗಿ ಲೋಕದ ಬಗೆಗೆ ಕರುಣೆ–ಮೈತ್ರಿಯನ್ನು ಪ್ರಚೋದಿಸುತ್ತದೆ. ಎಲ್ಲದರ ಬಿಡುಗಡೆಯನ್ನು ಅದು ಬಯಸುತ್ತದೆ. ಹೀನಯಾನ ಮತ್ತು ಮಹಾಯಾನಗಳ ನಡುವಿನ ವ್ಯತ್ಯಾಸವು ಪ್ರಮುಖವಾಗಿ ಇದೇ ಆಗಿದೆ.

'ಇರು ವಿಕೆಯು' ಸ್ಥಗಿತವಾದುದು, ಸೀಮಿತವಾದುದು, ಏಕಾಕಿಯಾದುದು ಮತ್ತು ಶೂನ್ಯತೆಯನ್ನು ಒಳಗೊಳ್ಳಲಾರದ ಅವಸ್ಥೆ. ಆದರೆ ಶೂನ್ಯತೆಯು ಪರಿವರ್ತನಶೀಲವಾದುದು, ಸಮಸ್ತವನ್ನೂ ಒಳಗೊಳ್ಳಬಲ್ಲ ಗರ್ಭರೂಪಿಯಾದುದು. ಅದು ಕಟ್ಟುವಿಕೆ ಮತ್ತು ನಿರಸನ ಎರಡೂ ಸಾಧ್ಯವಾಗುವ ಬಯಲು. ಈ ಪ್ರಕ್ರಿಯಾ ಮೀಮಾಂಸೆಯನ್ನು ಬುದ್ಧನ ಉಪದೇಶಗಳನ್ನಾಧರಿಸಿ ಮೊದಲಿಗೆ ಪ್ರಸ್ತುತಪಡಿಸಿದವನು ಕರ್ನಾಟಕದ ಬೌದ್ಧ ದಾರ್ಶನಿಕ ನಾಗಾರ್ಜುನ (ಕ್ರಿ.ಶ. 2ನೆ ಶತಮಾನ). ಅವನು ಗೋಚರಿಸುವ ವಸ್ತುರೂಪವನ್ನು ನಿರಾಕರಿಸುವ ಮೂಲಕ ಶೂನ್ಯತೆಯನ್ನು ಪಡೆಯಲು ಸಾಧ್ಯವಿಲ್ಲ ಬದಲಿಗೆ ವಸ್ತುವಿನ ಗುಣವೇ ಶೂನ್ಯತೆಯೆಂದು ವಿವರಿಸಿಕೊಟ್ಟನು.

ಲೋಕವನ್ನು ಸರಿಯಾಗಿ ವಿವರಿಸಿಕೊಳ್ಳುವುದರಿಂದ ಉಂಟಾಗುವ ಪರಿಣಾಮಗಳೆಂದರೆ ಮೊದಲನೆಯದಾಗಿ ನಮ್ಮ ಕಾವ್ಯ ಮೀಮಾಂಸೆ ಮತ್ತು ಜೀವನಮೀಮಾಂಸೆಗಳು ಆಮೂಲಾಗ್ರವಾಗಿ ಬದಲಾಗುತ್ತವೆ. ಎರಡನೆಯದಾಗಿ ಅದು ಕಾವ್ಯ ಮತ್ತು ಕಲೆಗಳ ಉದ್ದೇಶವನ್ನು ಬದಲಿಸುತ್ತದೆ. ಭಾರತೀಯ ಕಾವ್ಯಮೀಮಾಂಸೆಯು ಕಾವ್ಯಕಲೆಗಳ ಆತ್ಯಂತಿಕ ಉದ್ದೇಶ ಆನಂದ ಎಂದರೆ ಬೌದ್ಧ ಮೀಮಾಂಸೆಯು ದುಃಖದ ಅನುಸಂಧಾನವೆನ್ನುತ್ತದೆ. ಇವೆರಡರ ನಡುವೆ ಅಗಾಧವಾದ ವ್ಯತ್ಯಾಸವಿದೆ. ಆನಂದವು ವ್ಯಕ್ತಿಗತವಾದುದು, ಆತ್ಮವಾದಿಗೆ ಮಾತ್ರ ಸಾಧ್ಯವಾಗುವಂಥದ್ದು. ಪ್ರಕ್ರಿಯಾ ಮೀಮಾಂಸೆಯು ಅನಾತ್ಮವಾದವನ್ನು ಮುಂದಿಡುವುದರಿಂದ ಅಲ್ಲಿ ಬಿಡುಗಡೆಗೊಳ್ಳಬೇಕಾದ ಸ್ವತಂತ್ರ ಆತ್ಮವೆನ್ನುವುದೇ ಇರುವುದಿಲ್ಲ. ಈ ಲೋಕಸಮಸ್ತದ ಭಾಗವಾಗಿ ಚಲನೆಯಲ್ಲಿರುವ ವ್ಯಕ್ತಿಗೆ ಅದರ ಅರಿವು ಸಹಜವಾಗಿ ಲೋಕದ ಬಗೆಗೆ ಕರುಣೆ–ಮೈತ್ರಿಯನ್ನು ಪ್ರಚೋದಿಸುತ್ತದೆ. ಎಲ್ಲದರ ಬಿಡುಗಡೆಯನ್ನು ಅದು ಬಯಸುತ್ತದೆ.

ಹೀನಯಾನ ಮತ್ತು ಮಹಾಯಾನಗಳ ನಡುವಿನ ವ್ಯತ್ಯಾಸವು ಪ್ರಮುಖವಾಗಿ ಇದೇ ಆಗಿದೆ. ಹೀನಯಾನವು ಸರ್ವಾಸ್ತಿವಾದಿ ನಿಲುವನ್ನು ಮುಂದಿಟ್ಟುದುದರಿಂದ ಅಲ್ಲಿ ವೈಯಕ್ತಿಕ ಬಿಡುಗಡೆಯೇ ಪ್ರಮುಖವಾಯಿತು. ಮಹಾಯಾನವು ಶೂನ್ಯತೆಯನ್ನು ಮುಂದಿಟ್ಟುದುದರಿಂದ ಲೋಕಸಮಸ್ತದ ಬಿಡುಗಡೆಗೆ ಅದು ಹಂಬಲಿಸುತ್ತದೆ. ಹಾಗಾಗಿ ಬುದ್ಧಗುರು ತೋರಿಸಿಕೊಟ್ಟ ಕರುಣಾ ಮೈತ್ರಿಯ ಮಾರ್ಗವು ನಾವು ಲೋಕವನ್ನು ಸರಿಯಾಗಿ ಅರಿತು ಅದರ ಜೊತೆಗೆ ಸ್ಥಾಪಿಸಿಕೊಳ್ಳಬೇಕಾಗಿರುವ ಸರಿಯಾದ ಸಂಬಂಧದ ಫಲರೂಪಿಯಾಗಿರಬೇಕೇ ಹೊರತು, ಕೇವಲ ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ □ ಎಂಬ ಘೋಷಣೆಯಂತೆ ಆಗಬಾರದು.

ಹೀಗೆ ಲೋಕವನ್ನು ಸರಿಯಾಗಿ ಅರಿತುಕೊಳ್ಳುವ ಮಾರ್ಗ ಮುಕ್ತಮಾರ್ಗವಾಗಿದ್ದು ಅದು ಹೊಸ ತಿಳುವಳಿಕೆಯನ್ನು ಸ್ವೀಕರಿಸಲು ಸದಾ ಸಿದ್ಧವಾಗಿರುವುದರಿಂದ, ಬೌದ್ಧ ಧರ್ಮಕ್ಕೆ ಮಾತ್ರ ಆಧುನಿಕ ವಿಜ್ಞಾನದ ಜೊತೆಗೆ ಪ್ರಾಮಾಣಿಕ ಅನುಸಂಧಾನ ಸಾಧ್ಯವಾಗುತ್ತದೆ. ಉಳಿದ ಧರ್ಮಗಳೆಲ್ಲ, ವಿಜ್ಞಾನವನ್ನು ಅಲಾಯಿದ ಇಟ್ಟು ನೋಡುವ ಅಪ್ರಮಾಣಿಕತೆಯನ್ನು ಯಶಸ್ವಿಯಾಗಿ ರೂಢಿಸಿಕೊಂಡಿರುವುದನ್ನು ಕಾಣಬಹುದು. ಹಿಂದೂ ಧರ್ಮವಂತೂ ಈ ವಿಷಯದಲ್ಲಿ ಮುಂದಿರುವ ಸಂಗತಿ ವಾದಾತೀತವಾದುದು.

ಭಾರತೀಯ ಕಲಾಮೀಮಾಂಸೆಯ ಮೂಲ ಪರಿಕರಗಳಲ್ಲೇ, ಆಲೋಚನಾ ಕ್ರಮದಲ್ಲೇ ಮೂಲತಃ ದೋಷವಿದೆ ಎಂಬ ನಿಲುವು ಇಂದು ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿಯಾಗಿದೆ. ನಮಗಿರುವ ದೀರ್ಘಕಾಲೀನ ಚರಿತ್ರೆಯೇ ನಮಗೆ ಸಮಸ್ಯೆಯೂ ಹೌದು. ಯಾವ ಬದಲಾವಣೆಯೂ ಇಲ್ಲಿ ದೊಡ್ಡ ನಿರಸನವನ್ನೇ ನಿರೀಕ್ಷಿಸುತ್ತದೆ. ಅಳಿಸಬೇಕಾದ ದೀರ್ಘದಾರಿ ಕಷ್ಟಗಳನ್ನೊಡ್ಡುತ್ತದೆ. ಹಾಗಾಗಿ ಕವಿಗಳಿಗೆ ಮತ್ತು ಕಲಾವಿದರಿಗೆ ಸವಾಲುಗಳು ಗಂಭೀರವಾಗಿಯೇ ಇರುತ್ತವೆ. ಬ್ರಹ್ಮದ ಮತ್ತು ಆತ್ಮದ ಕಲ್ಪನೆಗಳು ನಮ್ಮನ್ನು ನಿರ್ಣಾಯಕವಾಗಿ ಬಂಧಿಸಿವೆ. ಅವುಗಳನ್ನು ದಾಟುವ ಮತ್ತು ಸಮೂಹವನ್ನು ದಾಟಿಸುವ ಜವಾಬ್ದಾರಿಯನ್ನು ಅವರು ಹೊರಬೇಕಾಗಿದೆ. ಅಂತಹ ಪ್ರಯತ್ನಗಳನ್ನು ಭಾರತೀಯ ಶ್ರಮಣಧಾರೆಗಳು ಮಾಡುತ್ತಲೇ ಬಂದಿವೆ. □

ಪರಿವರ್ತನೆಯ ರೂವಾರಿ



ಹೌದು,
ಈ ದರಿದ್ರನನ್ನು ಮನುಷ್ಯನನ್ನಾಗಿ
ನಾನೇ ಮಾಡಿದ್ದು;

ಈತ ಹೀಗೆಂದು ತಿಳಿದಿದ್ದರೆ
ನನ್ನಿಂದ
ಮನುಷ್ಯನೇ ಆಗುತ್ತಿರಲಿಲ್ಲ.

ಕಳ್ಳ, ಕಪಟ, ದುಷ್ಟ
ಈತನಿಂದ ನನಗೆ ಅಪಾಯ–
ಕಟ್ಟಿಟ್ಟ ಬುತ್ತಿ ಎಂದು ತಿಳಿದೇ
ಭಯಪಟ್ಟು ಅಂತಃಕರಣಕ್ಕೆ
ಮೊರೆ ಹೋಗಿ ಮಾನವೀಯತೆ ಮೆರೆದೆ.

ರೊಟ್ಟಿ ಹುಟ್ಟಿ ಹುಟ್ಟಿಸುವಲ್ಲಿ
ಸದಾ ನಿರತ ನಾನು
ಅಷ್ಟೇ ಏನು!
ಹುಟ್ಟಿದ ರೊಟ್ಟಿ
ತಟ್ಟಿದ ರೊಟ್ಟಿಗೆ
ನಾನು ಬೆಲೆ ಕಟ್ಟಿದಷ್ಟು
ಬೇರಾರೂ ಕಟ್ಟುವುದಿಲ್ಲ.

ಸರ್ಕಾರದ ಖಜಾನೆಯ ಲೆಕ್ಕದಲ್ಲಂತು
ಹೀಗೆ ಹುಟ್ಟಿದ ರೊಟ್ಟಿಗೆ ಬೆಲೆಯಿಲ್ಲ!
ಬೆಲೆ ಇಲ್ಲವೇ ಇಲ್ಲ.

ಹುಟ್ಟಿದ ರೊಟ್ಟಿಯ ಸೃಷ್ಟಿಕರ್ತ
ತಾನೇ ಎಂದು
ಭ್ರಮಿಸಿಕೊಂಡಿದೆಯಷ್ಟೆ.

ಅಂತೆಯೇ
'ಸರ್ಕಾರದ ಕೆಲಸ
ದೇವರ ಕೆಲಸ'
ಎಂದು
ವಿಧಾನಸೌಧದ ಮೇಲೆ
ಬರೆದುಕೊಂಡಿದೆ.

ರೊಟ್ಟಿಗೆ ಬೆಲೆ ಕಟ್ಟುವುದು ತಿಳಿದಿದ್ದರೆ
ಕಾಯಕವೇ ಕೈಲಾಸ
ಎಂಬ ಫಲಕ
ದಾರಿದ್ರ್ಯದ ಮೇಲೆ
ಬೆಳು ತೆಲ್ಲುವಂತಾಗುತ್ತಿತ್ತು!

ಈಗ ಇದು
ಸೂರ್ಯೋದಯದ ಪೂರ್ವವೂ ಅಲ್ಲ
ಸೂರ್ಯಾಸ್ತದ ಪಶ್ಚಿಮವೂ ಅಲ್ಲ

ಬೆಳಕು– ಕತ್ತಲೆಯ ಬೆಲೆ
ಗೊತ್ತಿಲ್ಲದವರಿಗೆ
ದಿಕ್ಕು–ದೆಸೆಯ ಗೊಡವೆಯಾದರೂ ಏನು!

ಅವಿತು ಕೂತ
ಕವಿಯೊಳಗಿನ ಕವಿತೆ
ಕವಿಗೆ ತಿಳಿದಿದ್ದರೆ
ಅವನು ಕವಿಯೇ ಆಗುತ್ತಿರಲಿಲ್ಲ
ದರಿದ್ರ ಮನುಷ್ಯನೂ ಅಗುತ್ತಿರಲಿಲ್ಲ!

ಹೊರಗೆ ಬಂದಾಗ
ನಾನು ಕವಿತೆಯಾದಾಗ
ನನ್ನದೆಂದು ಜಂಬಕೊಳ್ಳುವುದೊಂದು ಬಿಟ್ಟರೆ
ಕವಿಗೆ ಏನೂ ಗೊತ್ತಿರದು.
ಕವಿತೆ ಶಿಶು: ಕವಿಗೋರಿ

○ ಅರ್ಜುನ ಕೋರಟಕರ

ಚುನಾವಣೆಯ ಪಾಠಗಳು

(41ನೇ ಪುಟದಿಂದ)

ಮಟ್ಟದಲ್ಲಿದೆ. ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ ಅದು ಸರ್ಕಾರದ ಪ್ರಾದೇಶಿಕ ನೀತಿಯ ಬಳಿ ಬಂದು ಬೀಳುತ್ತದೆ. ಕಳೆದ ಅದೆಷ್ಟೋ ವರ್ಷಗಳಿಂದ ರಾಯಚೂರು, ಗುಲಬರ್ಗಾ, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಹತ್ತನೆಯ ತರಗತಿ ಮತ್ತು ಪದವಿ ಪೂರ್ವ ತರಗತಿಗಳ ಫಲಿತಾಂಶ ತೀರಾ ಕೆಳಮಟ್ಟದಲ್ಲುಳಿದಿದೆ. ಆದರೆ ಇದನ್ನು ಸರಿಪಡಿಸುವ ಬಗ್ಗೆ ಸರ್ಕಾರ ಏನು ಮಾಡಿದೆಯೆಂದರೆ ಅನೇಕ ಕಾರ್ಯಕ್ರಮಗಳ ಪಟ್ಟಿಯನ್ನು ಇಲಾಖೆ ತೋರಿಸುತ್ತದೆ. ಆದರೆ ಅಲ್ಲಿ ಫಲಿತಾಂಶವನ್ನು ಉತ್ತಮಪಡಿಸುವ ಬಗ್ಗೆ ನಿರ್ದಿಷ್ಟವಾಗಿ ಯಾವುದೇ ಪ್ರಯತ್ನ ನಡೆದಿಲ್ಲ. ಸರ್ಕಾರವು ಪ್ರಾದೇಶಿಕ ಅಸಮಾನತೆಯನ್ನು ಗಂಭೀರವಾಗಿ ಪರಿಗಣಿಸಿಲ್ಲವೆನ್ನುವುದಕ್ಕೆ ಹತ್ತನೆಯ-ಪಿಯುಸಿ ಪರೀಕ್ಷೆಗಳ ಫಲಿತಾಂಶವೇ ಸಾಕ್ಷಿ. ರಾಯಚೂರಿನ ಕೆಳಮಟ್ಟದ ಫಲಿತಾಂಶದ ಬಗ್ಗೆ ಮತ್ತು ಅಲ್ಲಿನ ಕಾಲೇಜುಗಳಲ್ಲಿ ಅಧ್ಯಾಪಕರೇ ಇಲ್ಲದಿರುವ ಬಗ್ಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಗಮನವನ್ನು ಸೆಳೆದಾಗ 'ಎಲ್ಲಕಡೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೋ ಅದನ್ನೆ ರಾಯಚೂರಿನಲ್ಲೂ' ತೆಗೆದುಕೊಂಡಿರುವುದಾಗಿ ತಿಳಿಸಿದ್ದಾರೆ. ಈ ಜಿಲ್ಲೆಯಲ್ಲಿ 2006-07 ರಿಂದ 15 ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಾಚಾರ್ಯರೇ ಇಲ್ಲ ಮತ್ತು ಅಲ್ಲಿ 155 ಅಧ್ಯಾಪಕರ ಹುದ್ದೆಗಳ ಖಾಲಿಯಿವೆ. ಈ ಬಗ್ಗೆಯ ಕೊರತೆಗಳನ್ನು ಸರಿಪಡಿಸಲು ಮೂರು ವರ್ಷಗಳು ಬೇಕೆ?. ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಜಿಲ್ಲೆಗಳಲ್ಲಿ 10ನೆಯ ಮತ್ತು ಪಿಯುಸಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸರ್ಕಾರ ವಿಶೇಷ ಕಾರ್ಯತಂತ್ರವನ್ನೆನಾದರೂ ರೂಪಿಸಬೇಡವೇ?.

ಕನಿಷ್ಠ ಈ ಜಿಲ್ಲೆಗಳ್ಲಿನ ಮಕ್ಕಳು ಎಸ್‌ಎಸ್‌ಎಲ್‌ಸಿಯನ್ನಾದರೂ ಪಾಸು ಮಾಡಿಕೊಂಡರೆ ಯಾವುದಾದರೂ ಸಣ್ಣಪುಟ್ಟ ಕೆಲಸವಾದರೂ ದೊರೆಯುವ ಸಾಧ್ಯತೆಯಿದೆ. ಅದಕ್ಕೆ ಬೇಕಾದ ಅನುಕೂಲಗಳನ್ನು ಮಾಡಿಕೊಡುವ ಬಗ್ಗೆ ಸರ್ಕಾರ ಯೋಚಿಸದಿದ್ದರೆ ಹೇಗೆ? ಪ್ರಾದೇಶಿಕ ಅಸಮಾನತೆ ನಿವಾರಣೆಯೆಂದರೆ ಕೇವಲ ರಸ್ತೆ, ಸೇತುವೆ, ಕಾಮಗಾರಿ, ಚರಂಡಿ, ಕಾಂಟ್ರಾಕ್ಟ್‌ಗಿರಿ ಮುಂತಾದವುಗಳೇ ಅಲ್ಲವೆನ್ನುವುದು ನಮ್ಮ ಜನಪ್ರತಿನಿದಿಗಳಿಗೆ ಅರ್ಥವಾಗುತ್ತಿಲ್ಲ. ಈ ಭಾಗದಲ್ಲಿ ಅಭಿವೃದ್ಧಿಯ ಸ್ಥಿತಿ ಎಷ್ಟು ಹದಗೆಟ್ಟಿದೆ ಎಂಬುದನ್ನು ಒಂದು ಉದಾಹರಣೆ ಮೂಲಕ ತಿಳಿಸಬಯಸುತ್ತೇನೆ. ಮೇ ತಿಂಗಳ 20-21-22ರಂದು ಕೊಪ್ಪಳ ಜಿಲ್ಲೆಯಲ್ಲಿ ಭಾರಿ ಮಳೆಯಾಯಿತು. ಇದರಿಂದ ರಸ್ತೆ ಸಂಚಾರ ಅಸ್ತವ್ಯಸ್ತವಾಗಿಬಿಟ್ಟಿತು. ಕೊಪ್ಪಳದ ಮೇಲೆ ರಾಷ್ಟ್ರೀಯ ಹೆದ್ದಾರಿಯೊಂದು ಹಾದು ಹೋಗುತ್ತದೆ. ಆದರೆ ಮಳೆ ಬಂದು ಬಿಟ್ಟರೆ ಅಲ್ಲಿನ ರಾಷ್ಟ್ರೀಯ ಹೆದ್ದಾರಿಯ ಮೇಲೆ ಓಡಾಡುವುದು ಸಾಧ್ಯ ವಿಲ್ಲ. ಗದಗಿನಿಂದ ಕೊಪ್ಪಳದ ಕಡೆ ಬರಬೇಕೆಂದರೆ ಸುತ್ತಿಬಳಸಿಕೊಂಡು ಬರಬೇಕು. ಏಕೆಂದರೆ ಮಳೆ ಬಂದರೆ ಹಳ್ಳಗಳು ಓಡಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇದು 21ನೆಯ ಶತಮಾನದಲ್ಲಿ ಜಿಲ್ಲಾ ಕೇಂದ್ರದ ಹತ್ತಿರ ಇರುವ ರಸ್ತೆಗಳ ಸ್ಥಿತಿ ಎಂದರೆ ನಂಬುವುದು ಅಸಾಧ್ಯ. ಆದರೆ ಇದು ನಂಬಲೇಬೇಕಾದ ಸಂಗತಿ. ಪ್ರಾದೇಶಿಕ ಅಸಮಾನ ತೆಯೆಂಬುದು ನಮ್ಮ ರಾಜ್ಯದಲ್ಲಿ ಎಷ್ಟೊಂದು ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂಬುದು ಇದರಿಂದ ತಿಳಿಯುತ್ತದೆ.

ಸರ್ಕಾರವು ಕಾಟಾಚಾರಕ್ಕೆ ಡಾ.ಡಿ.ಎಮ್. ನಂಜುಂಡಪ್ಪ ಸಮಿತಿ ವರದಿ ಬಗ್ಗೆ ಮಾತಾಡುತ್ತದೆ. ಆದರೆ 2008-09ರ ಸಾಲಿನಲ್ಲಿ ಈ ಬಗ್ಗೆ ಏನೂ ನಡೆದಿಲ್ಲವೆಂದರೆ ಯಾರಿಗೂ ಆಶ್ಚರ್ಯವಾಗಬೇಕಾಗಿಲ್ಲ. ಈ ಸಮಿತಿ, ಮಂಡಳಿ, ಕಾರ್ಯಪಡೆ, ಕ್ರಿಯಾ ಯೋಜನೆ ಮುಂತಾದವುಗಳೆಲ್ಲ ಸಂತೆಯ ಹೊತ್ತಿಗೆ ಎರಡು ಮೊಳ ಬಟ್ಟೆ ನೇಯುವ ಕೆಲಸ ಮಾತ್ರವಾಗಿದೆ. ಅಲ್ಲದಿದ್ದರೆ ಮೇಲೆ ತಿಳಿಸಿದ ಸಂಗತಿಗಳು ಸರಿಯಾಗಬೇಕಾಗಿತ್ತು. ಈಗಾಗಲೆ ಮತ್ತೆ ಮತ್ತೆ ನನ್ನ ಅಂಕಣದಲ್ಲಿ ಹೇಳಿರುವಂತೆ ಡಾ.ಡಿ.ಎಮ್. ನಂಜುಂಡಪ್ಪ ಸಮಿತಿಯ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗಾಗಿ ಸರ್ಕಾರವು ಹೆಚ್ಚುವರಿಯಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿಲ್ಲ. ಅದು ಕೇವಲ ಹೆಸರಿಗೆ ಮಾತ್ರವಿದೆ. ಕೇಳಿದರೆ ಕಡತಗಳನ್ನು ತೆಗೆದು ಪುಂಖಾನುಪುಂಖವಾಗಿ ಅಂಕಿಅಂಶಗಳನ್ನು ಸರ್ಕಾರವು ನಮ್ಮ ಮುಂದಿಡುತ್ತದೆ.

ಸರ್ಕಾರವು ಕಾಟಾಚಾರಕ್ಕೆ ಡಾ.ಡಿ.ಎಮ್. ನಂಜುಂಡಪ್ಪ ಸಮಿತಿ ವರದಿ ಬಗ್ಗೆ ಮಾತಾಡುತ್ತದೆ. ಆದರೆ 2008-09ರ ಸಾಲಿನಲ್ಲಿ ಈ ಬಗ್ಗೆ ಏನೂ ನಡೆದಿಲ್ಲವೆಂದರೆ ಯಾರಿಗೂ ಆಶ್ಚರ್ಯವಾಗಬೇಕಾಗಿಲ್ಲ. ಈ ಸಮಿತಿ, ಮಂಡಳಿ, ಕಾರ್ಯ ಪಡೆ, ಕ್ರಿಯಾ ಯೋಜನೆ ಮುಂತಾದವುಗಳೆಲ್ಲ ಸಂತೆಯ ಹೊತ್ತಿಗೆ ಎರಡು ಮೊಳ ಬಟ್ಟೆ ನೇಯುವ ಕೆಲಸ ಮಾತ್ರವಾಗಿದೆ. ಅಲ್ಲದಿದ್ದರೆ ಮೇಲೆ ತಿಳಿಸಿದ ಸಂಗತಿಗಳು ಸರಿಯಾಗಬೇಕಾಗಿತ್ತು. ಈಗಾಗಲೆ ಮತ್ತೆ ಮತ್ತೆ ನನ್ನ ಅಂಕಣದಲ್ಲಿ ಹೇಳಿರುವಂತೆ ಡಾ.ಡಿ.ಎಮ್. ನಂಜುಂಡಪ್ಪ ಸಮಿತಿಯ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗಾಗಿ ಸರ್ಕಾರವು ಹೆಚ್ಚುವರಿಯಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿಲ್ಲ. ಅದು ಕೇವಲ ಹೆಸರಿಗೆ ಮಾತ್ರವಿದೆ. ಕೇಳಿದರೆ ಕಡತಗಳನ್ನು ತೆಗೆದು ಪುಂಖಾನುಪುಂಖವಾಗಿ ಅಂಕಿಅಂಶಗಳನ್ನು ಸರ್ಕಾರವು ನಮ್ಮ ಮುಂದಿಡುತ್ತದೆ. ಅದರ ಫಲವೇನೆಂದರೆ ಮಾತ್ರ ಅಲ್ಲಿ ಏನೂ ಇಲ್ಲ. ಈ ಬಗ್ಗೆ ನಾವು ಗಂಭೀರವಾಗಿ ಯೋಜಿಸಬೇಕಾಗಿದೆ. □

ಸಂವಾದ





ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ದಲಿತ ಪ್ರಧಾನಿ ಮತ್ತು ದಲಿತ ಚಿಕಿತ್ಸಾ ಕ್ರಮ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಈ ದೇಶಕ್ಕೆ ದಲಿತ ಪ್ರಧಾನಿಯ ಅಗತ್ಯತೆ ಇದೆ. ಈ ಅಂಕಣ ದಲಿತರ ವೇದಿಕೆಯಾಗಿದೆ ಎನ್ನುವ ಕಾರಣಕ್ಕೆ ನಾನು ಈ ವಿಚಾರವನ್ನು ಮಂಡಿಸುತ್ತಿಲ್ಲ. ಕಳೆದ ಹನ್ನೊಂದು ವರ್ಷಗಳಿಂದ ಬರೆಯುತ್ತಾ ಬಂದಿರುವ ಅಂಕಣದಲ್ಲಿ ಎಂದೂ ನಾನು ದಲಿತ ಪ್ರಧಾನಿಯ ಬಗ್ಗೆ ಪ್ರಸ್ತಾಪ ಮಾಡಿರಲಿಲ್ಲ. ಆದರೆ ಈಗ ಎಲ್ಲ ಭಾರತೀಯರೂ ದಲಿತ ಪ್ರಧಾನಿಯನ್ನು ಅಪೇಕ್ಷಿಸುವ ಸಂದರ್ಭ ಬಂದಿದೆ. ಅದೃಷ್ಟವಶಾತ್ ಮಾಯಾವತಿಯಂತಹ ಓರ್ವ ಸಮರ್ಥ ಪ್ರಧಾನಿ ಅಭ್ಯರ್ಥಿ ನಮ್ಮ ನಡುವೆ ಇದ್ದಾರೆ. ದೇಶದ ಅತಿದೊಡ್ಡ ರಾಜ್ಯದ ಮುಖ್ಯಮಂತ್ರಿಯಾಗಿರುವ ಮಾಯಾವತಿ ಚುನಾವಣೆಯಲ್ಲಿ ಆರಿಸಿ ಬಂದಿದ್ದಾರೆಯೇ ಹೊರತು ನಾಮಕರಣಗೊಂಡಿಲ್ಲ. ಅವರ ವರ್ಚಸ್ಸು ಡಾರ್ಜಿಲಿಂಗ್‌ನಿಂದ ದಮನ್ ಮತ್ತು ದೀವ್‌ವರೆಗೆ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಬ್ಬಿದೆ.

ಸಂಪ್ರದಾಯವಾದಿ ದಲಿತ ದೃಷ್ಟಿಕೋನದ ದಲಿತ ಪ್ರಧಾನಿಯನ್ನು ನಾನು ಪ್ರತಿಪಾದಿಸುತ್ತಿಲ್ಲ. ದಲಿತ ಪ್ರಧಾನಿ ಕೇವಲ ದಲಿತರ ಏಳ್ಗೆಗಾಗಿ ಮಾತ್ರ ಕೆಲಸ ಮಾಡುವಂತಾಗಬಾರದು. ದಲಿತರಿಗಾಗಿ ಪಡಿತರ ಚೀಟಿಗಳು, ಉದ್ಯೋಗ, ಉಚಿತ ಆಹಾರ, ಅಥವಾ ಹಂದಿ ಮತ್ತಿತರ ಜಾನುವಾರುಗಳನ್ನು ಖರೀದಿಸಲು ಹಣ ಸಹಾಯವನ್ನಾಗಲೀ ನಾನು ಕೇಳುತ್ತಿಲ್ಲ.

ಭಾರತೀಯ ಸಮಾಜದ ಸ್ವಾಸ್ಥ್ಯಕ್ಕಾಗಿ 'ದಲಿತ ಚಿಕಿತ್ಸಾ ಕ್ರಮ (ಥೆರಪಿ)' ಬಳಸುವ ಪ್ರಧಾನಿಯ ಪರವಾಗಿ ನಾನು ಮಾತನಾಡುತ್ತಿದ್ದೇನೆ. ದಲಿತ ಪ್ರಧಾನಿಗೆ ಆಸಕ್ತಿ ಇರಲಿ, ಇಲ್ಲದಿರಲಿ ಆತ/ ಆಕೆ ಭಾರತೀಯ ಸಮಾಜದ ಮೇಲೆ ದಲಿತ ಚಿಕಿತ್ಸಾ ಕ್ರಮವನ್ನು ಬಳಸಬೇಕು. ಕೆಲವು ತೊಡಕುಗಳಿಗೆ ಚಿಕಿತ್ಸೆಯೇ ಸರಿಯಾದ ಮಾರ್ಗ ಎಂದು ವೈದ್ಯಕೀಯ ಶಾಸ್ತ್ರ ಕೂಡ ನಂಬುತ್ತದೆ.

ನಾನು ಪ್ರತಿಪಾದಿಸುವ ದಲಿತ ಪ್ರಧಾನಿ ದಲಿತರನ್ನು 'ಗುರುತಿಸುವ ರೀತಿ'ಯನ್ನು ಬದಲಾಯಿಸುತ್ತಾರೆ. ದಲಿತ ಪ್ರಧಾನಿ ದೇಶದ ಕಾರ್ಯಾಂಗದ ಮುಖ್ಯಸ್ಥ ಮಾತ್ರವಲ್ಲದೆ, ಸಮಾಜದ ಮುಖ್ಯವಾಹಿನಿಯ ನಾಯಕತ್ವ ಕೂಡ ವಹಿಸಿರುತ್ತಾರೆ. ಓರ್ವ ದಲಿತ ದೇಶವನ್ನು ಆಳುವಂತಾದಾಗ ಸಮಾಜದ ಮುಖ್ಯವಾಹಿನಿ ದಲಿತರನ್ನು ಅಪವಿತ್ರ, ಅಸ್ಪೃಶ್ಯರೆಂದು ನೋಡುವ ಪರಿಪಾಠ ಕಡಿಮೆಯಾಗುತ್ತದೆ. ಶಾಲಾಮಕ್ಕಳು ಬಾಲ್ಯದಿಂದಲೇ ದಲಿತರನ್ನು ಹೊಸ ದೃಷ್ಟಿಕೋನದಲ್ಲಿ ನೋಡುವಂತಾಗುತ್ತದೆ.

ದೇಶವನ್ನು ಪ್ರತಿನಿಧಿಸುವ ದಲಿತ ಪ್ರಧಾನಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಬರಾಕ್ ಒಬಾಮಾರಂತಹ ನಾಯಕರೊಂದಿಗೆ ಹಸ್ತಲಾಘವ ಮಾಡುವ ದೃಶ್ಯವನ್ನು ಭಾರತದ ಮುಖ್ಯವಾಹಿನಿಯು ತಮ್ಮ ಮನೆಯ ಟಿ.ವಿ ಪರದೆಗಳಲ್ಲಿ, ದೈನಂದಿನ ಪತ್ರಿಕೆಗಳಲ್ಲಿ ನೋಡುತ್ತಾರೆ. ಪ್ರತಿದಿನ ಸುದ್ದಿಯಲ್ಲಿರುವ ದಲಿತ ಪ್ರಧಾನಿಯನ್ನು ಜನ ನೋಡುತ್ತಿರುತ್ತಾರೆ. ತಮ್ಮ ಕಣ್ಣುಗಳ ಮೂಲಕ ಕಂಡ ಹೊಸ ನೆಲೆಗಟ್ಟಿನ ದಲಿತರ ಚಿತ್ರಣ ಮುಖ್ಯವಾಹಿನಿಯ ಸಮಾಜದ ಕೇಂದ್ರ ನರಮಂಡಲ ವ್ಯವಸ್ಥೆಗೆ ತಲುಪುತ್ತದೆ. ದಲಿತ ಪ್ರಧಾನಿ ಒಂದು ವೇಳೆ ತಪ್ಪು ಮಾಡಿದರೂ ಕೂಡ ಸಮಾಜದ ನರಮಂಡಲ ಆತ/ ಆಕೆಯನ್ನು ದೇಶದ ನಾಯಕ/ ನಾಯಕಿ ಎಂದೇ ಗುರುತಿಸುತ್ತದೆ. ಉದಾ ಹರಣೆಗೆ ಜಾಡಮಾಲಿಗಳು, ಹಂದಿ ಸಾಕುವವರು, ಚಮ್ಮಾರರು, ಕೃಷಿ ಕಾರ್ಮಿಕರು ಇಂತಹವರೇ ದಲಿತರು ಎಂಬ ತೀರ್ಮಾನಗಳು ಬದಲಾಗುತ್ತಾ ಬರುತ್ತದೆ.

ದೇಶದ ನಾಯಕತ್ವ ವಹಿಸುವ ದಲಿತ ಪ್ರಧಾನಿ 'ದಲಿತ ಚಿಕಿತ್ಸಾ ಕ್ರಮ'ವನ್ನು ಸಮರ್ಪಕವಾಗಿ ಬಳಸಿರುತ್ತಾರೆ. ಓರ್ವ ದಲಿತನನ್ನು ಪ್ರಧಾನಿ ಎಂದು ದೇಶದ ಜನತೆ ಒಪ್ಪಿಕೊಂಡರೆ, ಲಕ್ಷಾಂತರ ಮಂದಿ ದಲಿತರು ಸಮಾಜದ ಮುಖ್ಯವಾಹಿನಿಯ ಅಡುಗೆಮನೆಗಳನ್ನು ಪ್ರವೇಶಿಸಲು ಒಪ್ಪಿಗೆ ಸಿಗುತ್ತದೆ. ನಿಧಾನವಾಗಿ ದಲಿತ ಯುವಕ/ಯುವತಿಯರು ಮೇಲ್ಜಾತಿ ಜನರ ಮನೆಗಳಲ್ಲಿ ಮಲಗುವ ಕೋಣೆಗಳಿಗೆ ಕೂಡ ಹೋಗಿ ಬರುವ ವಾತಾವರಣ ಸೃಷ್ಟಿಯಾಗುತ್ತದೆ.

'ದಲಿತ ಚಿಕಿತ್ಸಾ ಕ್ರಮ' ಲಕ್ಷಾಂತರ ಮಂದಿ ದಲಿತರ ಮೇಲೂ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. ಓರ್ವ ದಲಿತ ದೇಶದ ಪ್ರಧಾನಿ ಪಟ್ಟ ಅಲಂಕರಿಸಿರುವಾಗ "ಸಮಾಜ ನಮ್ಮನ್ನ ಬೆಳೆಯಲು ಬಿಡುತ್ತಿಲ್ಲ" ಎಂದು ದೂರುವ ಹಕ್ಕು ದಲಿತರಿಗಿರುವುದಿಲ್ಲ. ದಲಿತ ಪ್ರಧಾನಿಯಿಂದಾಗಿ ದಲಿತರ ಆತ್ಮವಿಶ್ವಾಸ, ಘನತೆ ಒಮ್ಮಿಂದೊಮ್ಮೆ ಹೆಚ್ಚುತ್ತದೆ. ನಮ್ಮಲ್ಲಿ ಟ್ರಕ್ ಮತ್ತು ಬಸ್ಸುಗಳ ಮಾಲಿಕತ್ವ ಹೊಂದಿರುವ ಬಹಳಷ್ಟು ದಲಿತರಿದ್ದಾರೆ. ಆದರೆ ಯಾವುದೇ ಬಸ್ಸು ಅಥವಾ ಟ್ರಕ್ಕುಗಳ ಮೇಲೆ ದಲಿತ್ ಎಕ್ಸ್ ಪ್ರೆಸ್, ದಲಿತ್ ಮೇಲ್ ಅಥವಾ ದಲಿತ್ ಗೂಡ್ಸ್ ಕ್ಯಾರಿಯರ್ ಎಂಬ ಘೋಷಣೆಗಳನ್ನು ನಾವು ನೋಡುವುದಕ್ಕೆ ಸಾಧ್ಯವಿಲ್ಲ. ಆದರೆ, ದಲಿತ ಪ್ರಧಾನಿಯ ನೈತಿಕ ಬೆಂಬಲದಿಂದಾಗಿ ದಲಿತರು ದಲಾಲ್ ಸ್ಟ್ರೀಟ್‌ನಲ್ಲಿ ಆತ್ಮವಿಶ್ವಾಸದಿಂದ ನಡೆದಾಡುವಂಥಹ ವಾತಾವರಣ ನಿರ್ಮಾಣವಾಗುವುದು ನಿಸ್ಸಂಶಯ.

ಅಮೆರಿಕದ ಕಪ್ಪು ಜನಾಂಗದ ಮಂದಿಗೆ ಇದೇ ರೀತಿಯ ಅನುಭವವಾಗಿದೆ. ಒಬಾಮಾ ಆಯ್ಕೆಯ ನಂತರ ಅಮೆರಿಕಾಗೆ ತೆರಳಿ ಬಹಳಷ್ಟು ಮಂದಿ ಕಪ್ಪು ಬುದ್ಧಿಜೀವಿಗಳನ್ನು ನಾನು ಭೇಟಿ ಮಾಡಿದ್ದೇನೆ. ಒಬಾಮಾ ಆಯ್ಕೆಯ ನಂತರ ಕಪ್ಪು ಜನಾಂಗದ ಆತ್ಮಗೌರವ ಹೆಚ್ಚಿದೆ. ಕಪ್ಪು ಜನಾಂಗದ ಹುಡುಗರು ಬಿಳಿಯ ಸಮಾಜದವರಿಗೆ ವರಗಳಾಗಿ ಒಪ್ಪಿಗೆಯಾಗುವ ಪ್ರಮಾಣ ಹೆಚ್ಚಾಗಿದೆ. ಹಾಗೆಯೇ ಬಿಳಿಯರು ಕಪ್ಪು ಜನಾಂಗದವರನ್ನು ತಮ್ಮ ಮಾಲೀಕರಾಗಿ ಕೂಡ ಒಪ್ಪಿಕೊಳ್ಳುವ ವಾತಾವರಣ ನಿರ್ಮಾಣವಾಗುತ್ತಿದೆ. 'ಕರಿಯರ ಚಿಕಿತ್ಸಾ ಕ್ರಮ'ದ ಮೂಲಕ ಅಮೆರಿಕಾ ಬದಲಾವಣೆ ಕಾಣಲು ಸಾಧ್ಯವಾಗುವುದಾದರೆ, 'ದಲಿತ ಚಿಕಿತ್ಸಾ ಕ್ರಮ'ದ ಮೂಲಕ ಭಾರತದಲ್ಲಿಯೂ ಇಂಥಹಾ ಬದಲಾವಣೆ ಖಂಡಿತ ಸಾಧ್ಯವಿದೆ.

ದುರದೃಷ್ಟವಶಾತ್ ಭಾರತದಲ್ಲಿ ಉತ್ತಮ ಸಮಾಜ ವಿಜ್ಞಾನಿಗಳ ಕೊರತೆಯಿದೆ. ರಾಜಕಾರಣ ಕೇವಲ "ಆಡಳಿತ"ಕ್ಕೆ ಸಂಬಂಧಪಟ್ಟ ವಿಷಯವಲ್ಲ. ಸಾಮಾಜಿಕವಾಗಿ ವಿಘಟಿತಗೊಂಡಿರುವ ಈ ಸಮಾಜವನ್ನು ಹೊಸ ರೀತಿಯಲ್ಲಿ ರಚಿಸುವುದೂ ಕೂಡ ರಾಜಕಾರಣವೇ. ಇತ್ತೀಚೆಗೆ ಅಸ್ತಿತ್ವಕ್ಕೆ ಬರುತ್ತಿರುವ ಬಹುತೇಕ ಎಲ್ಲ ರಾಜಕೀಯ ಪಕ್ಷಗಳಿಗೂ ಜಾತಿ ಮುದ್ರೆ ಇದ್ದೇ ಇದೆ.

ಸ್ವಾತಂತ್ರ್ಯಾನಂತರ 1952 ರಲ್ಲಿ ನಡೆದ ಮೊದಲ ಮಹಾಚುನಾವಣೆಯ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದುದಕ್ಕಿಂತ ಹೆಚ್ಚು ಜಾತಿ ಆಧಾರಿತ ರಾಜಕೀಯ ಪಕ್ಷಗಳು ಇಂದು ನಮ್ಮೊಡನೆ ಇವೆ. 1952 ರಿಂದಾಚೆಗೆ ಭಾರತ ಬಹಳಷ್ಟು

'ದಲಿತ ಚಿಕಿತ್ಸಾ ಕ್ರಮ' ಲಕ್ಷಾಂತರ ಮಂದಿ ದಲಿತರ ಮೇಲೂ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. ಓರ್ವ ದಲಿತ ದೇಶದ ಪ್ರಧಾನಿ ಪಟ್ಟ ಅಲಂಕರಿಸಿರುವಾಗ "ಸಮಾಜ ನಮ್ಮನ್ನ ಬೆಳೆಯಲು ಬಿಡುತ್ತಿಲ್ಲ" ಎಂದು ದೂರುವ ಹಕ್ಕು ದಲಿತರಿಗಿರುವುದಿಲ್ಲ. ದಲಿತ ಪ್ರಧಾನಿಯಿಂದಾಗಿ ದಲಿತರ ಆತ್ಮವಿಶ್ವಾಸ, ಘನತೆ ಒಮ್ಮಿಂದೊಮ್ಮೆ ಹೆಚ್ಚುತ್ತದೆ. ನಮ್ಮಲ್ಲಿ ಟ್ರಕ್ ಮತ್ತು ಬಸ್ಸುಗಳ ಮಾಲಿಕತ್ವ ಹೊಂದಿರುವ ಬಹಳಷ್ಟು ದಲಿತರಿದ್ದಾರೆ. ಆದರೆ ಯಾವುದೇ ಬಸ್ಸು ಅಥವಾ ಟ್ರಕ್ಕುಗಳ ಮೇಲೆ ದಲಿತ್ ಎಕ್ಸ್‌ಪ್ರೆಸ್, ದಲಿತ್ ಮೇಲ್ ಅಥವಾ ದಲಿತ್ ಗೂಡ್ಸ್ ಕ್ಯಾರಿಯರ್ ಎಂಬ ಘೋಷಣೆಗಳನ್ನು ನಾವು ನೋಡುವುದಕ್ಕೆ ಸಾಧ್ಯವಿಲ್ಲ. ಆದರೆ, ದಲಿತ ಪ್ರಧಾನಿಯ ನೈತಿಕ ಬೆಂಬಲದಿಂದಾಗಿ ದಲಿತರು ದಲಾಲ್ ಸ್ಟ್ರೀಟ್‌ನಲ್ಲಿ ಆತ್ಮವಿಶ್ವಾಸದಿಂದ ನಡೆದಾಡುವಂಥಹ ವಾತಾವರಣ ನಿರ್ಮಾಣವಾಗುವುದು ನಿಸ್ಸಂಶಯ.

ಕನ್ನಡಕ್ಕೆ:
ಸತ್ಯಪ್ರಕಾಶ್ ಎಂ ಆರ್

ಅಭಿವೃದ್ಧಿ ಕಂಡಿದೆ. ಅಭಿವೃದ್ಧಿ ಜಾತಿಯನ್ನು ನಗಣ್ಯವಾಗಿಸುವ ಸಮಾಜವನ್ನು ನಿರ್ಮಿಸಬೇಕಿತ್ತು. ಆದರೆ ಅದಾಗಲಿಲ್ಲ. ಯಾಕೆಂದರೆ ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಬದಲಾಯಿಸಲು ರಾಜಕಾರಣಕ್ಕೆ ಅವಕಾಶವನ್ನು ನಾವು ಕೊಡಲಿಲ್ಲ. ಆದರೆ ಈ ಲೋಕಸಭಾ ಚುನಾವಣೆ ಅಂತಹ ದೊಡ್ಡ ಅವಕಾಶವನ್ನು ನಮಗೆ ನೀಡಿದೆ. ಈ ದೇಶ ನಾನು ಪ್ರತಿಪಾದಿಸುವ ಹಾಗೆ ದಲಿತ ಪ್ರಧಾನಿಯನ್ನು ಆಯ್ಕೆ ಮಾಡುವಂತಾದರೆ ಇತಿಹಾಸದ ಹೊಸಮುಟ ತೆರೆದಂತಾಗುತ್ತದೆ.

ಭಾರತೀಯ 'ಬೌದ್ಧಿಕ'ವಲಯದ ವೈಫಲ್ಯ

ಚುನಾವಣಾ ಪ್ರಕ್ರಿಯೆ ಆರಂಭವಾದಾಗ ಮುಂಬೈ ಮೂಲದ ಇಂಗ್ಲಿಷ್ ಪತ್ರಿಕೆಯೊಂದು 15ನೇ ಲೋಕಸಭೆಯ ಭವಿಷ್ಯದ ಬಗ್ಗೆ ನನ್ನ ಅಭಿಪ್ರಾಯವನ್ನು ತಿಳಿಸುವ ಲೇಖನವನ್ನು ಬರೆಯುವಂತೆ ಕೋರಿತು. ಮಾರ್ಚ್ 27ರಂದು ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನವನ್ನು ನಾನು ಈ ರೀತಿ ಆರಂಭಿಸಿದೆ:

"ಈ ಬಾರಿ 15ನೇ ಲೋಕಸಭಾ ಚುನಾವಣೆ ಹಲವಾರು ಕಾರಣಗಳಿಂದಾಗಿ ವಿಭಿನ್ನವಾಗಿರುತ್ತದೆ. ಹೈನಾಗಳು ಮತ್ತು ಕಾಡುನಾಯಿಗಳ ನಡುವೆ ನಡೆಯುವ ಕಾಳಗವಿದು. ನೈತಿಕತೆಗೆ ಬೆಲೆಯಿಲ್ಲದೆ, ನೀತಿ ನಡವಳಿಕೆಗಳು ಹಾಸ್ಯಾಸ್ಪದಗೊಳ್ಳುವ ಸಂದರ್ಭವಿದು. ಈ ಸಲದ ಸಾರ್ವತ್ರಿಕ ಚುನಾವಣೆ ರಾಷ್ಟ್ರಮಟ್ಟದಲ್ಲಿ ನಡೆಯುವ ಪಂಚಾಯತಿ ಚುನಾವಣೆಯೆಂದರೂ ತಪ್ಪಾಗುವುದಿಲ್ಲ. ಚುನಾವಣೆಯಲ್ಲಿ ಮತದಾರರಿಗೆ ಹಾಡಹಗಲೇ ಆಮಿಷಗಳನ್ನೊಡ್ಡುವ ಪರಿಪಾಠ ಆರಂಭವಾಗುತ್ತದೆ. ಕುರುಡು ಭಾರತಕ್ಕೆ ಕಪ್ಪುಪಟ್ಟಿ ಕಟ್ಟುವ ಮೂಲಕ 'ಸರಿಪಡಿಸುವ' ಕೆಲಸವನ್ನು ಈ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಪೈಪೋಟಿಯ ಮೇಲೆ ಮಾಡುತ್ತವೆ.

ಈಗಾಗಲೇ ನಿರ್ಗಮನ ಸಮೀಕ್ಷೆಗಳು ಯಾವುದೇ ಒಕ್ಕೂಟಕ್ಕೆ ಸ್ಪಷ್ಟ ಬಹುಮತ ಬರುವುದಿಲ್ಲವೆಂದು ಹೇಳಿವೆ. ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷಗಳ ಭಾಷಣ ಮತ್ತು ಚರ್ಚೆಗಳ ಗುಣಮಟ್ಟವನ್ನು ನಾವು ನೋಡುತ್ತಾ ಬಂದಿದ್ದೇವೆ. ಮಾರ್ಚ್ 27ರ ನನ್ನ ಅಂಕಣ ಎಷ್ಟು ಸತ್ಯ ನೀವೇ ನೋಡಿ. ಏಪ್ರಿಲ್ 16ರಿಂದ ಮೇ 16ರವರೆಗಿನ ಚುನಾವಣಾ ಪ್ರಚಾರದ ವೇಳೆ ನಡೆದ ಸಾರ್ವಜನಿಕ ಭಾಷಣಗಳು ಯಾವುದೇ ಕಾಡುಮೃಗಗಳ ಕಾಳಗಗಳಿಗಿಂತ ಭಿನ್ನವಾಗಿಯೇನೂ ಇರಲಿಲ್ಲ. ಯಾವುದೇ ಒಂದು ಸಮಾಜ ನೈತಿಕವಾಗಿ ಸೋತರೆ, ಅದು ಆ ಸಮಾಜದ ಎಲ್ಲ ವರ್ಗಗಳ ಸೋಲು, ಬುದ್ಧಿಜೀವಿಗಳ ಹಾಗೂ ಮಾಧ್ಯಮಗಳ ಸೋಲೂ ಹೌದು.

ರಾಷ್ಟ್ರದ ಎಲ್ಲ ವರ್ಗಗಳ ಸಮಗ್ರ ನೈತಿಕ ಅಧಃಪತನ ಯಾವ ಮಟ್ಟದ್ದಾಗಿತ್ತೆಂದರೆ, ಉನ್ನತ ವರ್ಗಗಳ ಬುದ್ಧಿಜೀವಿಗಳು ಈ ವೈಫಲ್ಯವನ್ನು ಕೂಡ ಸಂಭ್ರಮದಿಂದ ಆಚರಿಸುವಂತಾಗಿದ್ದು ಇದರ ಕರಾಳತೆಯನ್ನು ಪ್ರತಿಬಿಂಬಿಸುತ್ತದೆ. ಈ ಉನ್ನತ ವರ್ಗಗಳ ಬೌದ್ಧಿಕವಲಯ ಕೂಡ "ಪ್ರಾದೇಶಿಕ ಪಕ್ಷಗಳು ಅನಿವಾರ್ಯ" ಎಂಬ ಸಹಮತದ ವಾದ ಮಂಡಿಸುವುದನ್ನು ಬಿಡಲಿಲ್ಲ. ಇವರಲ್ಲಿ ಕೆಲವರಂತೂ ನೈತಿಕ ಮೌಲ್ಯಗಳನ್ನು ರೊಮ್ಯಾಂಟಿಕ್ ನೆಲೆಗಟ್ಟಿನಲ್ಲಿಟ್ಟು "ಪ್ರಜಾತಂತ್ರ ವ್ಯವಸ್ಥೆಯನ್ನು ಈ ಪ್ರಾದೇಶಿಕ ಪಕ್ಷಗಳು ಗಟ್ಟಿಗೊಳಿಸುತ್ತದೆ" ಎಂದೆಲ್ಲಾ ವಿತಂಡವಾದ ಮಂಡಿಸತೊಡಗಿದರು.

ಆದರೆ ಅಮೆರಿಕಾದ ಚುನಾವಣಾ ಪ್ರಕ್ರಿಯೆಯನ್ನು

ಪತ್ರಿಕೆಗಳು ಮತ್ತು ಟಿ.ವಿ ಮಾಧ್ಯಮಗಳ ಮೂಲಕ ಈ ರಾಜಕೀಯ ಪಕ್ಷಗಳನ್ನು ಗಂಭೀರವಾಗಿ ತನಿಖೆಗೆ ಒಳಪಡಿಸಬೇಕಾಗಿತ್ತು. "ಪ್ರಣಾಳಿಕೆಯ ಈ ಭಾಗವನ್ನು ವಿವರಿಸಿ," "ದೇಶ ಎದುರಿಸುತ್ತಿರುವ ಐದು ಪ್ರಮುಖ ಸಮಸ್ಯೆಗಳನ್ನು ಗುರುತಿಸಿ ಮತ್ತು ಅವುಗಳಿಗೆ ನೀವು ಸೂಚಿಸುವ ಪರಿಹಾರಗಳನ್ನು ತಿಳಿಸಿ," "ದೇಶದ ಭವಿಷ್ಯದ ಬಗ್ಗೆ ಒಂದು ಯೋಜನೆಯನ್ನು ಹೊಂದಿರದ ನೀವು ಈ ದೇಶವನ್ನು ಹೇಗೆ ಆಳುವುದಕ್ಕೆ ಸಾಧ್ಯ," "ನಿಮ್ಮ ರಾಜಕೀಯ ಪ್ರವೇಶದ ಕಾರಣಗಳನ್ನು ತಿಳಿಸಿ," "ಈ ರಾಜಕೀಯ ಪಕ್ಷ ಅಥವಾ ಒಕ್ಕೂಟದ ಅಸ್ತಿತ್ವಕ್ಕೆ ಸಮರ್ಥನೆಯಿಲ್ಲದ ಮೇಲೆ ಇದನ್ನು ಯಾಕೆ ಸೃಷ್ಟಿಸಿದಿರಿ?" ಈ ರೀತಿಯ ಗಂಭೀರವಾದ ಪ್ರಶ್ನೆಗಳನ್ನು ಮಾಧ್ಯಮಗಳು ಕೇಳಲೇ ಇಲ್ಲ. ಚುನಾವಣಾ ಪ್ರಚಾರಕ್ಕೆ ಬೌದ್ಧಿಕ ನೆಲೆಗಟ್ಟನ್ನು ಒದಗಿಸುವ ಬದಲು, ಈ ಬುದ್ಧಿಜೀವಿಗಳ ವಲಯ ನೈತಿಕ ಅಧಃಪತನದಲ್ಲಿ ಸಹಭಾಗಿಯಾಯಿತು.

ಗಮನಿಸಿರುವ ನಾವು, ಕ್ಲಿಂಟನ್ ಮತ್ತು ಒಬಾಮಾ ಅಮೆರಿಕಾದ ಭವಿಷ್ಯದ ಬಗ್ಗೆ ನಡೆಸಿದ ಚರ್ಚೆಗಳ ಉನ್ನತ ಗುಣಮಟ್ಟವನ್ನು ನೋಡಿದ್ದೇವೆ. ಬರಾಕ್ ಒಬಾಮಾ ಮತ್ತು ಜಾನ್ ಮ್ಯಾಕ್‌ಕೇನ್ ನಡುವಿನ ಚರ್ಚೆಗಳು ಎಷ್ಟು ತೀಕ್ಷ್ಣವಾಗಿ ಮತ್ತು ದೀರ್ಘವಾಗಿತ್ತೆಂದು ಕೂಡ ನಾವು ನೋಡಿದ್ದೇವೆ. ಈ ಅಭ್ಯರ್ಥಿಗಳು ಅಮೆರಿಕಾದ ಇತಿಹಾಸವನ್ನು ಮುಂದಿಟ್ಟು ವರ್ತಮಾನದ ಬಗ್ಗೆ ಚರ್ಚಿಸಿದರು. ಅಮೆರಿಕಾದ ಭವಿಷ್ಯಕ್ಕೆ ತಮ್ಮ ಯೋಚನೆ/ ಯೋಜನೆಗಳನ್ನು ಮಂಡಿಸಿದರು. ಆರ್ಥಿಕತೆ ಮುಖ್ಯವಾಗಿ ಕಂಡರೂ, ಪ್ರಾಥಮಿಕ ಶಿಕ್ಷಣ, ಆರೋಗ್ಯ, ವಸತಿ ಮತ್ತು ವಿಮೆ ಇಂತಹ ವಿಚಾರಗಳು ಕೂಡ ಅಷ್ಟೇ ಪ್ರಮುಖವಾಗಿ ಚರ್ಚೆಗೊಳಗಾದವು.

ಅಮೆರಿಕಾದ ಬೌದ್ಧಿಕವಲಯ ಚುನಾವಣಾ ಪ್ರಚಾರದ ಮೇಲೆ ತೀವ್ರ ಆಸಕ್ತಿ ವಹಿಸಿತ್ತು. ಒಬಾಮಾ ಮತ್ತು ಮ್ಯಾಕ್‌ಕೇನ್ ಮಂಡಿಸಿದ ಪ್ರತಿಯೊಂದು ಯೋಜನೆ ಅಥವಾ ನೀತಿ ಸಂಬಂಧಿತ ಹೇಳಿಕೆಗಳನ್ನು ಕಠಿಣ ಪರೀಕ್ಷೆಗೆ ಒಳಪಡಿಸುತ್ತಿತ್ತು. ಈ ಬುದ್ಧಿಜೀವಿಗಳ ವಲಯ ಚುನಾವಣಾ ಪ್ರಚಾರಕ್ಕೆ ಬೌದ್ಧಿಕ ನೆಲೆಗಟ್ಟು ಒದಗಿಸುವುದರಲ್ಲಿ ಯಶಸ್ಸು ಸಾಧಿಸಿತು.

ಆದರೆ ಭಾರತದಲ್ಲಿ ಕಳೆದ ಏಪ್ರಿಲ್ 16ರಿಂದ ಮೇ 16ರವರೆಗೆ ಯಾವ ಮಟ್ಟದ ಚರ್ಚೆಗಳನ್ನು ನಾವು ಕಂಡಿದ್ದೇವೆ ಹೇಳಿ? ಸ್ಪರ್ಧೆಯಲ್ಲಿದ್ದ ಪ್ರಮುಖ ರಾಜಕೀಯ ಪಕ್ಷಗಳ ಪ್ರಣಾಳಿಕೆಯ ಪ್ರಮುಖ ನೀತಿ/ ಯೋಜನೆಗಳೇನು? ಯಾರಿಗಾದರೂ ಈ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳ ಒಂದು ವಾಕ್ಯವಾದರೂ ನೆನಪಿನಲ್ಲಿದೆಯಾ? ಎಂಥಹಾ ವಿಪರ್ಯಾಸ! 15ನೇ ಲೋಕಸಭಾ ಚುನಾವಣಾ ಪ್ರಚಾರದ ಅವಧಿಯಲ್ಲಿ ರಾಜಕೀಯ ಪಕ್ಷಗಳು ದೇಶ ಎದುರಿಸುತ್ತಿರುವ ಯಾವುದಾದರೂ ಒಂದು ಪ್ರಮುಖ ಸಮಸ್ಯೆಯನ್ನು ಗುರುತಿಸಲು ಕೂಡ ವಿಫಲವಾದವು. ಇನ್ನು ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಂತೂ ದೂರದ ಮಾತು!

ಬಹುಶಃ ಪ್ರಾದೇಶಿಕ ಯೋಧರ (ನಾಯಕರು)ನ್ನು ನಾವು ಕ್ಷಮಿಸಬಹುದು. ಪ್ರಾಂತೀಯತೆಯ ಕೂಸುಗಳಾದ ಈ ಪ್ರಾದೇಶಿಕ ಪಕ್ಷಗಳ ನಾಯಕರಿಂದ ರಾಷ್ಟ್ರಮಟ್ಟದಲ್ಲಿ ನೈತಿಕ ರಾಜಕಾರಣ ಬಯಸುವುದೇ ತಪ್ಪು. ಈ ನಾಯಕರಿಗೆ ತಂತಮ್ಮ ರಾಜ್ಯಗಳ ಜೇನುಗೂಡುಗಳ ಜೇನು ಸವಿಯುವುದರಲ್ಲಿಯೇ ಹೆಚ್ಚಿನ ಆಸಕ್ತಿ. ಇನ್ನು ದೇಶದ ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳು, ಪ್ರಾದೇಶಿಕ ಪಕ್ಷಗಳಂತೆ ನಡೆದುಕೊಂಡಿದ್ದನ್ನು ಕೂಡ ನಾವು ಕ್ಷಮಿಸಲೇಬೇಕು! ಈ ಎರಡು ಪಕ್ಷಗಳ ನಾಯಕರು ಕೂಡ ಜೇನು ಬೇಟೆಗಾರರೇ ಅಲ್ಲವೇ?! ಯಾವುದೇ ದೇಶ ಸಮಗ್ರವಾಗಿ ನೈತಿಕ ದಿವಾಳಿತನ ಎದುರಿಸುತ್ತಿರುವ ಸಂದರ್ಭದಲ್ಲಿ ದೇಶವನ್ನು ಸರಿದಾರಿಗೆ ಕೊಂಡೊಯ್ಯುವ ಗುರುತರ ಹೊಣೆಗಾರಿಗೆ ಬೌದ್ಧಿಕವಲಯದ ಮೇಲಿದೆ.

ಆದರೆ ಏಪ್ರಿಲ್ 16ರಿಂದ ಮೇ 16ರವರೆಗೆ ನಡೆದ ಚುನಾವಣಾ ಪ್ರಚಾರದ ಅವಧಿಯಲ್ಲಿ ನಡೆದದ್ದು ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿತ್ತು. ಅನೈತಿಕ ವಿಚಾರಗಳನ್ನು ಮಂಡಿಸುವುದರಲ್ಲಿ, ಕೀಳುಮಟ್ಟದ ಚರ್ಚೆಗಳನ್ನು ಮಾಡುವುದರಲ್ಲಿ ನಿರತರಾಗಿದ್ದ ರಾಜಕೀಯ ಪಕ್ಷಗಳನ್ನು, ನಾಯಕರನ್ನು ತರಾಟೆಗೆ ತೆಗೆದುಕೊಳ್ಳುವ ಬದಲು, ದೇಶದ ಬುದ್ಧಿಜೀವಿಗಳು ಈ ರಾಜಕಾರಣಿಗಳ ಬೆಂಬಲಿಗರಾಗಿ ನಿಂತು ಒಟ್ಟಾರೆ ರಾಷ್ಟ್ರದ ನೈತಿಕ ಅಧಃಪತನಕ್ಕೆ ಕಾರಣರಾದರು.

ಪತ್ರಿಕೆಗಳು ಮತ್ತು ಟಿ.ವಿ ಮಾಧ್ಯಮಗಳ ಮೂಲಕ ಈ ರಾಜಕೀಯ ಪಕ್ಷಗಳನ್ನು ಗಂಭೀರವಾಗಿ ತನಿಖೆಗೆ ಒಳಪಡಿಸಬೇಕಾಗಿತ್ತು. "ಪ್ರಣಾಳಿಕೆಯ ಈ ಭಾಗವನ್ನು ವಿವರಿಸಿ," "ದೇಶ ಎದುರಿಸುತ್ತಿರುವ ಐದು ಪ್ರಮುಖ ಸಮಸ್ಯೆಗಳನ್ನು ಗುರುತಿಸಿ ಮತ್ತು ಅವುಗಳಿಗೆ ನೀವು ಸೂಚಿಸುವ ಪರಿಹಾರಗಳನ್ನು ತಿಳಿಸಿ," "ದೇಶದ ಭವಿಷ್ಯದ ಬಗ್ಗೆ ಒಂದು ಯೋಜನೆಯನ್ನು ಹೊಂದಿರದ ನೀವು ಈ ದೇಶವನ್ನು ಹೇಗೆ ಆಳುವುದಕ್ಕೆ ಸಾಧ್ಯ," "ನಿಮ್ಮ ರಾಜಕೀಯ ಪ್ರವೇಶದ ಕಾರಣಗಳನ್ನು ತಿಳಿಸಿ," "ಈ ರಾಜಕೀಯ ಪಕ್ಷ ಅಥವಾ ಒಕ್ಕೂಟದ ಅಸ್ತಿತ್ವಕ್ಕೆ ಸಮರ್ಥನೆ ಯಿಲ್ಲದ ಮೇಲೆ ಇದನ್ನು ಯಾಕೆ ಸೃಷ್ಟಿಸಿದಿರಿ?" ಈ ರೀತಿಯ ಗಂಭೀರವಾದ ಪ್ರಶ್ನೆಗಳನ್ನು ಮಾಧ್ಯಮಗಳು ಕೇಳಲೇ ಇಲ್ಲ.

ಚುನಾವಣಾ ಪ್ರಚಾರಕ್ಕೆ ಬೌದ್ಧಿಕ ನೆಲೆಗಟ್ಟನ್ನು ಒದಗಿಸುವ ಬದಲು, ಈ ಬುದ್ಧಿಜೀವಿಗಳ ವಲಯ ನೈತಿಕ ಅಧಃಪತನದಲ್ಲಿ ಸಹಭಾಗಿಯಾಯಿತು. 15ನೇ ಲೋಕಸಭಾ ಚುನಾವಣೆಯ ರಾಜಕೀಯಕ್ಕೆ ಬೌದ್ಧಿಕ ದಿಕ್ಕು ತೋರಿಸುವ ಬದಲು, ತಾನೇ ದಿಕ್ಕುತಪ್ಪಿತು. ಈ ನೈತಿಕ ದಿವಾಳಿತನದ ಅತ್ಯಂತ ಅಶ್ಲೀಲ ಉದಾಹರಣೆಗಳು ಸುದ್ದಿವಾಹಿನಿಗಳಲ್ಲಿ ಕಂಡುಬಂದವು. ದುರದೃಷ್ಟವಶಾತ್ ನಾನೂ ಕೂಡ ಇಂಥಹಾ ಚರ್ಚೆಗಳಲ್ಲಿ ಭಾಗಿಯಾಗಬೇಕಾಯಿತು.

ಚುನಾವಣಾ ಪ್ರಕ್ರಿಯೆ ಇನ್ನೂ ನಡೆಯುತ್ತಿದ್ದ ಸಂದರ್ಭದಲ್ಲಿ ರಾಜಕೀಯ ನಾಯಕರು ಟಿ.ವಿ ಸ್ಟುಡಿಯೋಗಳಲ್ಲಿ ಕುಳಿತು ಚುನಾವಣೆಯ ಗೆಲುವಿನ ಬಗ್ಗೆ, ಗೆಲುವಿನ

ನಂತರ ಹೊಸ ಮಿತ್ರಪಕ್ಷಗಳನ್ನು ಸೆಳೆಯುವ ಬಗ್ಗೆ ಮಾತನಾಡುತ್ತಿದ್ದರು. ರಾಜಕೀಯ ನಾಯಕರ ಈ ರೀತಿಯ ಅನೈತಿಕ ನಡವಳಿಕೆಗಳನ್ನು ಖಂಡಿಸಿ ಅವರನ್ನು ತರಾಟೆಗೆ ತೆಗೆದುಕೊಳ್ಳುವ ಬದಲು, ಟಿ.ವಿ. ವಾಹಿನಿಗಳ ನಿರೂಪಕರು ಕೂಡ ಅವರೊಂದಿಗೆ ಸೇರಿ ಇಂತಹಾ ಅನೈತಿಕ ಸಾಧ್ಯತೆಗಳ ಬಗ್ಗೆ ಚರ್ಚೆ ಮಾಡಿದ್ದಂತೂ ದುರಂತವೇ ಸರಿ. ನಾವು ಅನೈತಿಕ ಪ್ರಕ್ರಿಯೆಯ ಭಾಗವಾಗಿ ಯಾವ ಮಟ್ಟಕ್ಕಿಳಿದಿದ್ದೇವೆ ಎಂದು ಈ ನಿದರ್ಶನ ಸ್ಪಷ್ಟಪಡಿಸುತ್ತದೆ. ಯಾವುದೇ ಒಂದು ರಾಷ್ಟ್ರ ತನ್ನ ಜವಾಬ್ದಾರಿಯನ್ನು ನಿಭಾಯಿಸಲು ಯಾವಾಗ ಸೋಲುತ್ತದೆಯೋ ಆಗೆಲ್ಲಾ ಮರುಹುಟ್ಟಿಗೆ ಅವಕಾಶವಿರುತ್ತದೆ. ಆದರೆ ಯಾವ ರಾಷ್ಟ್ರದ ಬೌದ್ಧಿಕವಲಯ ಸಂಪೂರ್ಣ ವಿಫಲವಾಗುತ್ತದೆಯೋ ಅಂತಹ ಸಮಾಜವನ್ನು ದಾರಿಗೆ ತರಲು ಪೀಳಿಗೆಗಳು ಉರುಳಬೇಕಾಗುತ್ತದೆ.

ಸಾಮಾನ್ಯರ ಆರ್ಥಿಕ ವಿಚಾರಗಳು

2008ರ ಮೇ ತಿಂಗಳಲ್ಲಿ ದೆಹಲಿಯಿಂದ ಬಿಹಾರಕ್ಕೆ ಹೊರಟಿದ್ದ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದೆ. ಪ್ರಯಾಣದ ನಡುವೆ ಕಾನೂನು ಬಾಹಿರವಾಗಿ ಸಿಗರೆಟ್ ಸೇದುತ್ತಾ ಬಾಗಿಲ ಬಳಿ ನಿಂತಿದ್ದೆ. ನಿಲ್ದಾಣವೊಂದರಲ್ಲಿ ಬಿಹಾರ ಮೂಲದ ಕುಟುಂಬವೊಂದು ರೈಲು ಹತ್ತಲು ಪ್ರಯತ್ನಿಸುತ್ತಿತ್ತು. ಅಷ್ಟರಲ್ಲಿ ಚಲಿಸಲು ಆರಂಭಿಸಿದ ರೈಲಿನ ಎರಡನೆಯ ದರ್ಜೆಯ ಬೋಗಿ ಮುಂದೆ ಹೋಗಿತ್ತು. ಕೆಳ ಮಧ್ಯಮವರ್ಗದವರಂತೆ ಕಾಣುತ್ತಿದ್ದ ಆ ಕುಟುಂಬ ನಾನು ಪ್ರಯಾಣಿಸುತ್ತಿದ್ದ ಎ.ಸಿ. ಬೋಗಿಯನ್ನಾದರೂ ಹತ್ತೋಣವೆಂದು ಪ್ರಯತ್ನ ನಡೆಸುತ್ತಿದ್ದರು. ಗಂಡ, ಹೆಂಡತಿ ಮತ್ತು ಮೂವರು ಮಕ್ಕಳ ಆ ಕುಟುಂಬ ರೈಲು ಹತ್ತಲು ನಾನು ಮತ್ತು ನನ್ನ ಜೊತೆ ಸಿಗರೆಟ್ ಸೇದುತ್ತಿದ್ದ ಸಹ ಪ್ರಯಾಣಿಕ ಇಬ್ಬರೂ ಸಹಾಯ ಮಾಡಿದೆವು.

ಎರಡನೆಯ ದರ್ಜೆಯ ಬೋಗಿಗೆ ತಲುಪಿಸಲು ಸಹಾಯ ಮಾಡುತ್ತೇವೆಂದು ನಾವು ಅವರನ್ನು ಸಮಾಧಾನಪಡಿಸಿದೆವು. "ದಲಿತರ ಆಹಾರ ಪದ್ಧತಿ, ಉದ್ಯೋಗ ಮತ್ತು ಜೀವನಶೈಲಿಯ ಬದಲಾವಣೆ" ಕುರಿತ ಅಧ್ಯಯನ ಕೈಗೊಳ್ಳಲು ನಾನು ಉತ್ತರಪ್ರದೇಶಕ್ಕೆ ಹೊರಟಿದ್ದೆ. ನನ್ನ ಅಧ್ಯಯನಕ್ಕೆ ಸೂಕ್ತವಾದ ಕುಟುಂಬವೊಂದು ನನಗೆ ಹೀಗೆ ರೈಲಿನಲ್ಲಿಯೇ ದೊರಕಿತು. ಅವರು ಹೊತ್ತುಕೊಂಡಿದ್ದ ವಸ್ತುಗಳ ಬಗ್ಗೆ ನಾನು ವಿಚಾರಿಸಿದೆ. ಅವರ ಬಳಿ ಒಂದು ಪ್ರೆಷರ್ ಕುಕ್ಕರ್, ಒಂದು ಕಡಿಮೆ ಬೆಲೆಯ ಸೆಲ್‌ಫೋನ್ ಮತ್ತು ಊರಿನಲ್ಲಿರುವ ಕುಟುಂಬದ ಸದಸ್ಯರಿಗಾಗಿ ಖರೀದಿಸಿದ್ದ ಹೊಸಬಟ್ಟೆ ಇದ್ದವು. ತಮ್ಮ ಕುಟುಂಬದವರಿಗಾಗಿ ಪ್ರೆಷರ್ ಕುಕ್ಕರ್, ಹಾಗೂ ಮುಂದಿನವಾರ ಮದುವೆಯಾಗಲಿದ್ದ ಸಂಬಂಧಿಕರ ಮಗಳಿಗೆ ಉಡುಗೊರೆಯಾಗಿ ನೀಡಲು ಸೆಲ್‌ಫೋನ್ ಖರೀದಿಸಿದ್ದರು.

ಈ ವರ್ಷದ ಏಪ್ರಿಲ್ ತಿಂಗಳಲ್ಲಿ ನಾನು ಮಹಾರಾಷ್ಟ್ರದ ಯಾವತ್ಮಾಳ್ ಜಿಲ್ಲೆಯ ಕೆಲವು ಹಳ್ಳಿಗಳಿಗ ಭೇಟಿ ನೀಡಿದ್ದೆ. ಇಂಥಹಾ ಒಂದು ಹಳ್ಳಿ ಕೊಲಂ. ಇಲ್ಲಿ ಕೊಲಂ ಎಂಬ ಪ್ರಾಚೀನವಾದ ಬುಡಕಟ್ಟು ಸಮುದಾಯದ ಜನ ವಾಸಿಸುತ್ತಿದ್ದಾರೆ. ಆದರೆ ಈ ಸಮುದಾಯದ ಬಹಳಷ್ಟು ಮಂದಿ ಯುವಕ-ಯುವತಿಯರು ಇತ್ತೀಚೆಗೆ ಸ್ನಾನಕ್ಕೆ ಶಾಂಪೂ ಬಳಸಲು ಶುರುಮಾಡಿದ್ದಾರೆ. 50 ಪೈಸೆಗೆ ಶಾಂಪೂ ಪ್ಯಾಕೆಟ್ ಸಿಗುತ್ತಿರುವುದು ಇದಕ್ಕೆ ಕಾರಣ.

ಕೊಲಂ ಸಮುದಾಯದ ಕಥೆ ಹೀಗಾದರೆ, ಇನ್ನು ದೆಹಲಿಯಲ್ಲಿ ನಾನು ವಾಸಿಸುತ್ತಿರುವ ಅಪಾರ್ಟ್‌ಮೆಂಟ್‌ನಲ್ಲಿ ಬಹುತೇಕ ಎಲ್ಲರ ಮನೆಗಳಲ್ಲಿ ಕೂಲರ್‌ಗಳ ಬದಲಿಗೆ ಏರ್ ಕಂಡಿಷನರ್‌ಗಳು ಬಂದಿವೆ. ಇನ್ನು ವಿಂಡೋ ಎ.ಸಿ ಬಳಸುತ್ತಿದ್ದ ಮನೆಗಳಲ್ಲಿ ಈಗ ಸ್ಪ್ಲಿಟ್ ಎ.ಸಿಗಳನ್ನು ಬಳಸಲು ಆರಂಭಿಸಿದ್ದಾರೆ. ಇನ್ನು ಹಲವರ ಮನೆಗಳಲ್ಲಿದ್ದ ಹಳೆಯ ಟಿ.ವಿ ಸೆಟ್‌ಗಳ ಸ್ಥಳದಲ್ಲಿ ಈಗ ಎಲ್‌ಸಿಡಿ ಟಿ.ವಿ. ಸೆಟ್‌ಗಳು ಬಂದಿವೆ. ಎರಡು ವಾರಗಳ ಹಿಂದೆ ನನ್ನ ಸಂಬಂಧಿಕರೊಬ್ಬರು ಮದುವೆ ನಡೆಯಿತು. ಚುನಾವಣಾ ಬಿಸಿಯಲ್ಲಿ ಮದುವೆಗೆ ಹೋಗಲು ನನಗೆ ಸಾಧ್ಯವಾಗಿರಲಿಲ್ಲ. ಆದರೆ ಆ ಮದುವೆಯಲ್ಲಿ ಒಂದು ವಿಚಿತ್ರ ಘಟನೆ ನಡೆದಿದೆ. ಅಂದು ಮದುವೆಗೆ ಬಂದ ಅತಿಥಿಗಳಿಗೆ ಹೆಣ್ಣಿನ ಮನೆಯವರು ತಂಪು ಪಾನೀಯ ನೀಡಲಿಲ್ಲ ಎನ್ನುವ ಕಾರಣಕ್ಕೆ ಗಂಡಿನ ಕಡೆಯವರು ಬೇಸರ ಮಾಡಿಕೊಂಡಿದ್ದರಂತೆ!

ಈ ದೇಶದಲ್ಲಿ ಇನ್ನೂ ಇಂಥಹಾ ಹತ್ತು ಹಲವು ತಮಾಷೆಯ ಕಥೆಗಳಿವೆ. ಈ ಹಿಂದೆ ಪ್ರಬಲರಾಗಿದ್ದ ಜಮೀನ್ದಾರಿ ಕುಟುಂಬವೊಂದು ಬಡವಾದ ಒಂದು ಕಥೆ ಕೇಳಿ. ತಮ್ಮ ಹಿಂದಿನ ವೈಭವವಾದ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ಈ ಕುಟುಂಬ ತಮ್ಮ ಬಳಿಯಿದ್ದ ಬಹುತೇಕ ಜಮೀನನ್ನು ಮಾರಾಟ ಮಾಡಿದ್ದಾರೆ. ಒಂದು ಟಿ.ವಿ. ಯನ್ನು ಖರೀದಿಸಲು ಕಷ್ಟಪಡುತ್ತಿರುವ ಈ ಜಮೀನ್ದಾರಿ ಕುಟುಂಬ ದಶಕಗಳ ಹಿಂದೆ ನಿರ್ಮಿಸಿದ ದೊಡ್ಡ ಮನೆಯನ್ನು ಹೊಂದಿದೆ. ತಮ್ಮ ಮನೆಯಲ್ಲಿ ಟಿ.ವಿ. ಇದೆ ಎಂದು ತೋರಿಸಿಕೊಳ್ಳಲು ಟಿ.ವಿ ಇಲ್ಲದಿದ್ದರೂ ಮನೆಯ ಮೇಲೆ ಆಂಟೆನಾ ಜೋಡಿಸಿದ್ದಾರೆ ಇವರು!

ಇತ್ತೀಚಿನ ದಿನಗಳಲ್ಲಿ ಭಾರತೀಯ ಸಮಾಜದಲ್ಲಿ ವಿಚಿತ್ರವಾದ ಬದಲಾವಣೆ ಘಟಿಸುತ್ತಿರುವುದನ್ನು ದೇಶದ ಬೌದ್ಧಿಕವಲಯ ಗಮನಿಸುತ್ತಿಲ್ಲವೆಂದು ನನಗನಿಸುತ್ತಿದೆ. ದಿಢೀರನೆ ಸಮಾಜದಲ್ಲಿ ಭೋಗವಸ್ತುಗಳು ಪ್ರತಿಷ್ಠೆಯ ಹೆಗ್ಗುರುತುಗಳಾಗಿ ಬೆಳೆದುಬಿಟ್ಟಿವೆ. ಆರ್ಥಿಕತೆ ದೇಶದ ರಾಜಕಾರಣವನ್ನು ನಿಯಂತ್ರಣದಲ್ಲಿರಿಸಿಕೊಳ್ಳುವ ಹಂತಕ್ಕೆ ಬಂದಿದೆ. ಕಾಂಗ್ರೆಸ್‌ನ ಅದ್ಭುತ ಗೆಲುವಿಗೆ ಇದೇ ನಿಜವಾದ ಕಾರಣ. ನಗರಗಳಲ್ಲಿ ಶ್ರೀಮಂತರು ತಮ್ಮ ಸಣ್ಣ ಕಾರುಗಳ ಬದಲಿಗೆ ದೊಡ್ಡ ಕಾರುಗಳನ್ನು ಖರೀದಿಸುತ್ತಿದ್ದರೆ, ಹಳ್ಳಿಗಳಲ್ಲಿರುವ ಜನ ಬೈಸಿಕಲ್‌ಗಳನ್ನು ಖರೀದಿಸುತ್ತಿದ್ದಾರೆ. ಶ್ರೀಮಂತರಾಗಲೀ ಬಡವರಾಗಲೀ ಭೋಗವಸ್ತುಗಳಿಗೆ ಮಹತ್ವ ನೀಡುತ್ತಿದ್ದಾರೆ. ದೇಶದ ಎಲ್ಲ ಬಡವರೂ ಬೈಸಿಕಲ್‌ಗಳನ್ನು ಮತ್ತು ಟಿ.ವಿ.ಗಳನ್ನು ಹೊಂದಿದ್ದಾರೆ ಎಂದು ನಾನು ಹೇಳುತ್ತಿಲ್ಲ. ಅಥವಾ ಎಲ್ಲ ಶ್ರೀಮಂತರು ದೊಡ್ಡ ಕಾರುಗಳನ್ನು ಖರೀದಿಸುತ್ತಿದ್ದಾರೆ ಎಂದೂ ನಾನು ಹೇಳುತ್ತಿಲ್ಲ. ಆದರೆ ದೇಶದ ಜನ ಭೋಗವಸ್ತುಗಳಿಗೆ ಮಾರು ಹೋಗಿರುವುದಂತೂ ನಿಜ.

ಸಮಾಜದ ಆಶೋತ್ತರಗಳಿಗೆ ವ್ಯತಿರಿಕ್ತವಾದ ಸರಕ (ವಿಚಾರವ)ನ್ನು ಮಾರಾಟ ಮಾಡಲು ಹೋದ ಪಕ್ಷಗಳು ಚುನಾವಣೆಯಲ್ಲಿ ಸೋತು ಸುಣ್ಣವಾದವು. "ಸಮರ್ಥ ನಾಯಕತ್ವ, ಸದೃಢ ಸರ್ಕಾರ" ಎಂಬ ಬಿ.ಜೆ.ಪಿ ಘೋಷಣೆ ಜನರಿಗೆ ಹಿಡಿಸಲಿಲ್ಲ. ಇನ್ನು ಎಡಪಕ್ಷಗಳ "ಬಿಜೆಪಿ, ಕಾಂಗ್ರೆಸ್ಸೇತರ ಸರ್ಕಾರ"ದ ಘೋಷಣೆಗೆ ಜನ ಮಣೆ ಹಾಕಲಿಲ್ಲ. "ದಲಿತರ ಮಗಳು ಪ್ರಧಾನಿ ಯಾಕಾಗಬಾರದು?" ಎಂಬ ಬಿಎಸ್‌ಪಿಯ ಪ್ರಶ್ನೆಗೆ "ಭಾರತದ ಮಗಳು ಪ್ರಧಾನಿ ಯಾಕಾಗಬಾರದು?" ಎಂದು ಮತದಾರರು ಮರುಪ್ರಶ್ನೆ ಹಾಕಿದರು. ಒಂದೆರಡು ನಿದರ್ಶನಗಳನ್ನು ಬಿಟ್ಟರೆ, ಪ್ರಾದೇಶಿಕ ಪಕ್ಷಗಳ ರಾಷ್ಟ್ರೀಯತೆಗೆ ಜನ ಕ್ಯಾರೆ ಅನ್ನಲಿಲ್ಲ.

ಆದರೆ ಇದಲ್ಲಕ್ಕಿಂತ ಭಿನ್ನವಾಗಿ ಕಾಂಗ್ರೆಸ್ ಪಕ್ಷ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿತ್ತು. ಅಣು ಒಪ್ಪಂದ, ಆರ್ಥಿಕ ವೃದ್ಧಿ ಮತ್ತು ಯುವಶಕ್ತಿಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದ ಕಾಂಗ್ರೆಸ್ ಯಶಸ್ಸು ಗಳಿಸಲು ಸಾಧ್ಯವಾಯಿತು. ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ 45 ವರ್ಷದೊಳಗಿನ ಶೇ. 75ರಷ್ಟು ಮಂದಿಗೆ ಕಾಂಗ್ರೆಸ್ ಹತ್ತಿರವಾಯಿತು. ಶಾಂಪೂ ಪ್ಯಾಕೆಟ್‌ಗಳು, ಪ್ರೆಷರ್ ಕುಕ್ಕರ್‌ಗಳು, ಸೆಲ್‌ಫೋನ್‌ಗಳು, ಬೈಸಿಕಲ್‌ಗಳು, ದೊಡ್ಡ ಕಾರುಗಳು ಮತ್ತು ಸ್ಪ್ಲಿಟ್ ಎ.ಸಿ.ಗಳ ಹಂಬಲದಲ್ಲಿರುವ ದೇಶದ ಬಹುಸಂಖ್ಯಾತರ ಆಶೋತ್ತರಗಳಿಗೆ ಸ್ಪಂದಿಸುವ ಸಾಧ್ಯತೆ ಕಾಂಗ್ರೆಸ್‌ಗಿದೆ ಎಂದು ಜನತೆಗನಿಸಿತು. ಕಾಂಗ್ರೆಸ್‌ನ ಗೆಲುವಿನಿಂದಾಗಿ ವಿರೋಧಪಕ್ಷಗಳು ಮತ್ತು ಚುನಾವಣಾ ಪಂಡಿತರು ಈಗ ಮಣ್ಣು ಮುಕ್ಕಿದಂತಾಗಿದೆ.

ಭಾರತ ಸಾಮಾಜಿಕವಾಗಿ ಎಷ್ಟೇ ವೈವಿಧ್ಯಮಯವಾಗಿರಬಹುದು, ಬಹುಸಂಸ್ಕೃತಿ ಇಲ್ಲಿ ಅಸ್ತಿತ್ವದಲ್ಲಿರಬಹುದು. ಆದರೆ ಇತಿಹಾಸದ ಒಂದು ಅವಧಿಯಲ್ಲಿ ಒಂದು 'ಪ್ರಮುಖವಾದ ವಿಚಾರ' ಎಲ್ಲ ಅಸ್ಮಿತೆಗಳನ್ನು ಮೀರುತ್ತದೆ. ಈ ಚುನಾವಣೆಯಲ್ಲಿ ಎಲ್ಲ ಅಸ್ಮಿತೆಗಳನ್ನು ಮೀರಿದ್ದು ಸಾಮಾನ್ಯರ ಆರ್ಥಿಕ ವಿಚಾರಗಳು.

* * * *

ಲೋಕಸಭಾ ಚುನಾವಣೆಯ ವೇಳೆ ಬಹಳಷ್ಟು ಮಂದಿ ದಲಿತರು, ರಾಹುಲ್ ಗಾಂಧಿ ದಲಿತ ಮತದಾರರ ಮೇಲೆ ಯಾವ ರೀತಿಯ ಪರಿಣಾಮ ಬೀರಿದ್ದಾರೆ ಎಂದು ನನ್ನನ್ನು ಕೇಳುತ್ತಿದ್ದರು. ಕಟ್ಟಾ ಬಿಎಸ್‌ಪಿ ಕಾರ್ಯ

ಸಮಾಜದ ಆಶೋತ್ತರಗಳಿಗೆ ವ್ಯತಿರಿಕ್ತವಾದ ಸರಕ (ವಿಚಾರವ)ನ್ನು ಮಾರಾಟ ಮಾಡಲು ಹೋದ ಪಕ್ಷಗಳು ಚುನಾವಣೆಯಲ್ಲಿ ಸೋತು ಸುಣ್ಣವಾದವು. "ಸಮರ್ಥ ನಾಯಕತ್ವ, ಸದೃಢ ಸರ್ಕಾರ" ಎಂಬ ಬಿ.ಜೆ.ಪಿ ಘೋಷಣೆ ಜನರಿಗೆ ಹಿಡಿಸಲಿಲ್ಲ. ಇನ್ನು ಎಡಪಕ್ಷಗಳ "ಬಿಜೆಪಿ, ಕಾಂಗ್ರೆಸ್ಸೇತರ ಸರ್ಕಾರ"ದ ಘೋಷಣೆಗೆ ಜನ ಮಣೆ ಹಾಕಲಿಲ್ಲ. "ದಲಿತರ ಮಗಳು ಪ್ರಧಾನಿ ಯಾಕಾಗಬಾರದು?" ಎಂಬ ಬಿಎಸ್‌ಪಿಯ ಪ್ರಶ್ನೆಗೆ "ಭಾರತದ ಮಗಳು ಪ್ರಧಾನಿ ಯಾಕಾಗಬಾರದು?" ಎಂದು ಮತದಾರರು ಮರುಪ್ರಶ್ನೆ ಹಾಕಿದರು. ಒಂದೆರಡು ನಿದರ್ಶನಗಳನ್ನು ಬಿಟ್ಟರೆ, ಪ್ರಾದೇಶಿಕ ಪಕ್ಷಗಳ ರಾಷ್ಟ್ರೀಯತೆಗೆ ಜನ ಕ್ಯಾರೆ ಅನ್ನಲಿಲ್ಲ. ಆದರೆ ಇದಲ್ಲಕ್ಕಿಂತ ಭಿನ್ನವಾಗಿ ಕಾಂಗ್ರೆಸ್ ಪಕ್ಷ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿತ್ತು.

ದಲಿತರನ್ನು ಕುರಿತು ಕಾಂಗ್ರೆಸ್‌ನ ಎಡಬಿಡಂಗಿ ನೀತಿ

ಕರ್ತರು ರಾಹುಲ್ 'ನಾಟಕ'ದ ಬಗ್ಗೆ ಖಾರವಾದ ಮಾತುಗಳನ್ನಾಡುತ್ತಿದ್ದರೆ, ಅವರ ಕೋಪವನ್ನು ಶಮನ ಮಾಡುವ ಕೆಲಸ ವನ್ನು ನಾನು ಮಾಡಿದ್ದೇನೆ. "ಓರ್ವ ಭರವಸೆಯ ಯುವ ರಾಜಕಾರಣಿಯಾಗಿ ದಲಿತರ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಲು ದಲಿತರ ಮನೆಗಳಿಗೆ ಭೇಟಿ ನೀಡುವ ಅಧಿಕಾರ ರಾಹುಲ್ ಗಾಂಧಿಗಿದೆ" ಎಂಬುದು ನನ್ನ ವಾದ.

ದಲಿತ ಮತದಾರರ ಮೇಲೆ ರಾಹುಲ್ ಗಾಂಧಿ ಪ್ರಭಾವ ಬೀರುವಲ್ಲಿ ನಿಜಕ್ಕೂ ಯಶಸ್ವಿಯಾಗಿದ್ದಾರೆ. ಉತ್ತರ ಪ್ರದೇಶದಲ್ಲಿ ದಲಿತರ ಒಂದು ವರ್ಗ ಕಾಂಗ್ರೆಸ್‌ಗೆ ಮತಹಾಕಿದ್ದಂತೂ ನಿಜ. ಇನ್ನು ಇತರ ರಾಜ್ಯಗಳಲ್ಲಿ ದಲಿತರು ಬಿಎಸ್‌ಪಿ ಅಥವಾ ಕಾಂಗ್ರೆಸ್‌ಗೆ ಮತ ಚಲಾಯಿಸಿದ್ದಾರೆ. ರಾಷ್ಟ್ರಾದ್ಯಂತ ಬಿಎಸ್‌ಪಿಗೆ ಲಭಿಸಿರುವ ಮತಗಳ ಪ್ರಮಾಣ ಶೇ. 6.18 ಮಾತ್ರ. ರಾಹುಲ್ ಗಾಂಧಿ ಅವರ ಯಶಸ್ಸಿನ ಪರಿಣಾಮವಾಗಿ ಕೆಲವು ಚುನಾವಣಾ ವಿಶ್ಲೇಷಕರು ಕಾಂಗ್ರೆಸ್ ಪಕ್ಷವನ್ನು 'ರಾಹುಲ್ ಕಾಂಗ್ರೆಸ್' ಎಂದು ಕರೆಯಲು ಆರಂಭಿಸಿದ್ದಾರೆ. ಈ ರೀತಿಯ ವಿಶ್ಲೇಷಣೆಗಳ ಬಗ್ಗೆ ಕೂಡ ನನ್ನ ಅಭ್ಯಂತರವೇನೂ ಇಲ್ಲ.

ಆದರೆ ರಾಹುಲ್ ಗಾಂಧಿ ಅವರ ದಲಿತರ ಮನೆಯಲ್ಲಿನ ವಾಸ್ತವ್ಯದ ನಂತರ ದಲಿತರನ್ನು ಕುರಿತ ಕಾಂಗ್ರೆಸ್‌ನ ನೀತಿಯಲ್ಲೇನಾದರೂ ಬದಲಾವಣೆಯಾಗಿದೆಯೇ ಎನ್ನುವುದು ನನ್ನ ಪ್ರಶ್ನೆ. 2004ರ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಕಾಂಗ್ರೆಸ್ ಪಕ್ಷ ಹೇಗೆಲ್ಲಾ ಈಡೇರಿಸಿದೆ ಎಂದು ಪ್ರಧಾನಿ ಮನಮೋಹನ್ ಸಿಂಗ್, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಚುನಾವಣಾ ಪ್ರಚಾರಗಳಲ್ಲಿ ಮತದಾರರಿಗೆ ಹೇಳುತ್ತಾ ಬಂದರು. ಆದರೆ ಕಾಂಗ್ರೆಸ್‌ಗೆ ದಲಿತರ ಬಗ್ಗೆ ಇರುವ ಕಾಳಜಿಯಾದರೂ ಎಂಥಹುದು?

ದಲಿತರ ಬಗ್ಗೆ ಕಾಂಗ್ರೆಸ್ ಇಲ್ಲಿಯವರೆಗೆ ಹೊಂದಿದ್ದ ಕಾಳಜಿ ಮತ್ತು ರಾಹುಲ್ ಪ್ರಭಾವದ ಬಳಿಕ ದಲಿತರನ್ನು ಕುರಿತ ಪಕ್ಷದ ನೀತಿಯಲ್ಲಾಗಿರುವ ಬದಲಾವಣೆಯನ್ನು ತಿಳಿದುಕೊಳ್ಳಲು 2004 ಮತ್ತು 2009ರ ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯನ್ನು ಗಮನಿಸಬೇಕು.

ಉದಾರೀಕರಣದ ಬಳಿಕ ದಲಿತ ಮಧ್ಯಮವರ್ಗ ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ತಮ್ಮ ಪಾಲನ್ನು ಕೇಳಲಾರಂಭಿಸಿದೆ. ಆರ್ಥಿಕ ಸುಧಾರಣೆಯಿಂದ ಖಾಸಗೀಕರಣ ಕೂಡ ಬಂದು ಸಾರ್ವಜನಿಕ ವಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ಉದ್ಯೋಗ ಕಡಿತವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗಾಗಿ ದಲಿತರು ಖಾಸಗಿ ವಲಯದಲ್ಲಿ ಮೀಸಲಾತಿಗಾಗಿ ಬೇಡಿಕೆಯಿಟ್ಟಿದ್ದಾರೆ. ಆರ್ಥಿಕ ಸುಧಾರಣೆಯ ಬಳಿಕ ಭಾರತದಲ್ಲಿ ಸೃಷ್ಟಿಯಾಗುತ್ತಿರುವ ಅಭೂತಪೂರ್ವ ಸಿರಿವಂತಿಕೆಯಲ್ಲಿ ದಲಿತರು ಕೂಡ ತಮ್ಮ ಪಾಲನ್ನು ಕೇಳುತ್ತಿದ್ದಾರೆ. ದಲಿತರ ಬೇಡಿಕೆಗಳಿಗೆ ಸ್ಪಂದಿಸಿದ ಕಾಂಗ್ರೆಸ್ ಪಕ್ಷ 2004ರ ಚುನಾವಣಾ ಪ್ರಣಾಳಿಕೆಯಲ್ಲಿ ಈ ಕೆಳಗಿನ ಭರವಸೆಗಳನ್ನು ನೀಡಿತ್ತು:

"ಖಾಸಗಿ ವಲಯದಲ್ಲಿ ಸೂಕ್ತವಾದ ಪ್ರಮಾಣದಲ್ಲಿ ದಲಿತರಿಗೆ ಉದ್ಯೋಗ ಖಾತ್ರಿಗೊಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ರಾಷ್ಟ್ರಮಟ್ಟದಲ್ಲಿ ಸಹಮತ ತರಲು ಪ್ರಯತ್ನಿಸುತ್ತದೆ. ದುರ್ಬಲ ವರ್ಗಗಳ ಯುವಕರ ಆಶೋತ್ತರಗಳಿಗೆ ಉದ್ಯಮಿಗಳು ಯಾವ ರೀತಿ ಸ್ಪಂದಿಸಲು ಸಾಧ್ಯ ಎಂಬುದನ್ನು ಗುರುತಿಸಲು ಖಾಸಗಿ ಉದ್ಯಮದೊಂದಿಗೆ ಪಕ್ಷ ಮಾತುಕತೆ ನಡೆಸುತ್ತದೆ."

"ದಲಿತರು ಮತ್ತು ಆದಿವಾಸಿ ಸಮುದಾಯಗಳಲ್ಲಿ ಉದ್ಯಮ ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ಈ ಸಮುದಾಯಗಳು ನಡೆಸುವ ಉದ್ಯಮಗಳಿಗೆ ವಿಶೇಷ ಆದ್ಯತೆಯನ್ನು ನೀಡಿ ಉತ್ಪನ್ನಗಳ ಖರೀದಿ ವ್ಯವಸ್ಥೆ ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲಸೌಲಭ್ಯ ವ್ಯವಸ್ಥೆ ಒದಗಿಸಲು ನಿರ್ಣಾಯಕ ಪ್ರಯತ್ನ ನಡೆಸಲಾಗುವುದು."

ಕಳೆದ ಐದು ವರ್ಷಗಳಲ್ಲಿ ಖಾಸಗಿ ವಲಯದಲ್ಲಿನ ಮೀಸಲಾತಿಯ ಬಗ್ಗೆ ರಾಷ್ಟ್ರಮಟ್ಟದಲ್ಲಿ ಸಹಮತವನ್ನು ಕಾಣಲು ಸಾಧ್ಯವಾಗಿದೆಯೇ? ದಲಿತ ಉದ್ಯಮಶೀಲತೆಗೆ ಬೆಂಬಲವನ್ನಾಗಲೀ, ದಲಿತರ ಉತ್ಪನ್ನಗಳ ಖರೀದಿಗೆ ವಿಶೇಷ ಆದ್ಯತೆಯನ್ನಾಗಲೀ ನೀಡಲಾಗುತ್ತಿದೆಯೇ ಎಂಬ ಪ್ರಶ್ನೆಗಳನ್ನು ಈಗ ಕೇಳಬೇಕಾಗಿದೆ.

> "ಖಾಸಗಿ ವಲಯದಲ್ಲಿ ಸೂಕ್ತವಾದ ಪ್ರಮಾಣದಲ್ಲಿ ದಲಿತರಿಗೆ ಉದ್ಯೋಗ ಖಾತ್ರಿಗೊಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ರಾಷ್ಟ್ರಮಟ್ಟದಲ್ಲಿ ಸಹಮತ ತರಲು ಪ್ರಯತ್ನಿಸುತ್ತದೆ. ದುರ್ಬಲ ವರ್ಗಗಳ ಯುವಕರ ಆಶೋತ್ತರಗಳಿಗೆ ಉದ್ಯಮಿಗಳು ಯಾವ ರೀತಿ ಸ್ಪಂದಿಸಲು ಸಾಧ್ಯ ಎಂಬುದನ್ನು ಗುರುತಿಸಲು ಖಾಸಗಿ ಉದ್ಯಮದೊಂದಿಗೆ ಪಕ್ಷ ಮಾತುಕತೆ ನಡೆಸುತ್ತದೆ." "ದಲಿತರು ಮತ್ತು ಆದಿವಾಸಿ ಸಮುದಾಯಗಳಲ್ಲಿ ಉದ್ಯಮ ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ಈ ಸಮುದಾಯಗಳು ನಡೆಸುವ ಉದ್ಯಮಗಳಿಗೆ ವಿಶೇಷ ಆದ್ಯತೆಯನ್ನು ನೀಡಿ ಉತ್ಪನ್ನಗಳ ಖರೀದಿ ವ್ಯವಸ್ಥೆ ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲಸೌಲಭ್ಯ ವ್ಯವಸ್ಥೆ ಒದಗಿಸಲು ನಿರ್ಣಾಯಕ ಪ್ರಯತ್ನ ನಡೆಸಲಾಗುವುದು." ಕಳೆದ ಐದು ವರ್ಷಗಳಲ್ಲಿ ಖಾಸಗಿ ವಲಯದಲ್ಲಿನ ಮೀಸಲಾತಿಯ ಬಗ್ಗೆ ರಾಷ್ಟ್ರಮಟ್ಟದಲ್ಲಿ ಸಹಮತವನ್ನು ಕಾಣಲು ಸಾಧ್ಯವಾಗಿದೆಯೇ? ದಲಿತ ಉದ್ಯಮಶೀಲತೆಗೆ ಬೆಂಬಲವನ್ನಾಗಲೀ, ದಲಿತರ ಉತ್ಪನ್ನಗಳ ಖರೀದಿಗೆ ವಿಶೇಷ ಆದ್ಯತೆಯನ್ನಾಗಲೀ ನೀಡಲಾಗುತ್ತಿದೆಯೇ ಎಂಬ ಪ್ರಶ್ನೆಗಳನ್ನು ಈಗ ಕೇಳಬೇಕಾಗಿದೆ.

2009ರ ಚುನಾವಣಾ ಪ್ರಣಾಳಿಕೆಯಲ್ಲಿ ರಾಹುಲ್‌ರ ಕಾಂಗ್ರೆಸ್ ಈ ಕೆಳಗಿನ ಭರವಸೆಗಳನ್ನು ನೀಡಿದೆ:

"ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಖಾಸಗಿವಲಯದಲ್ಲಿ ಮೀಸಲಾತಿ ಒದಗಿಸಲು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಪೂರ್ಣ ಬದ್ಧವಾಗಿದೆ. ಪಕ್ಷ ಈಗಾಗಲೇ ಈ ವಿಚಾರದ ಬಗ್ಗೆ ರಾಷ್ಟ್ರಮಟ್ಟದಲ್ಲಿ ಚರ್ಚೆಯನ್ನು ಆರಂಭಿಸಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಒಬಿಸಿಗಳ ಮೀಸಲಾತಿಗೆ ತೊಡಕಾಗದಂತೆ ಎಲ್ಲ ಸಮುದಾಯಗಳ ದುರ್ಬಲ ವರ್ಗಗಳಿಗೆ ಮೀಸಲಾತಿ ನೀಡುವ ಬಗ್ಗೆ ಪ್ರಯತ್ನ ನಡೆಸಲಾಗುವುದು."

"ಉದ್ಯಮಶೀಲತೆ: ಶಿಕ್ಷಣದ ಜೊತೆಗೆ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಮತ್ತು ಮಹಿಳೆಯರ ಅಭಿವೃದ್ಧಿಗೆ ಬೃಹತ್ ಮಟ್ಟದಲ್ಲಿ 'ಉದ್ಯಮ ಪ್ರಗತಿ ಯೋಜನೆ' ಕೂಡ ಮುಖ್ಯ ಎಂಬುದು ಕಾಂಗ್ರೆಸ್‌ನ ನಂಬಿಕೆ. ಈ ಸಮುದಾಯಗಳ ಉದ್ಯಮ ಚಟುವಟಿಕೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರಿ ಗುತ್ತಿಗೆಗಳನ್ನು ಕೊಡುವಾಗ ವಿಶೇಷ ಆದ್ಯತೆಯ ನೀತಿಯನ್ನು ಸರ್ಕಾರ ಜಾರಿಗೆ ತರಲಿದೆ."

ಖಾಸಗಿ ವಲಯದಲ್ಲಿ ದಲಿತರ/ ಆದಿವಾಸಿಗಳಿಗೆ ಮೀಸಲಾತಿ ಒದಗಿಸುವ ವಿಚಾರವನ್ನು "ರಾಹುಲ್ ಕಾಂಗ್ರೆಸ್" ಪ್ರಣಾಳಿಕೆ ಇನ್ನೂ ಗೊಂದಲಮಯವಾಗಿಸಿದೆ. ದಲಿತರು/ ಆದಿವಾಸಿ ವರ್ಗಗಳಿಗೇ ಮೀಸಲಾತಿ ನೀಡಲು ಖಾಸಗಿ ವಲಯ ಮೀನಮೇಷ ಎಣಿಸುತ್ತಿರುವಾಗ ಮೀಸಲಾತಿಯ ಗುಂಪಿಗೆ ಇನ್ನೂ ಕೆಲವು ಸಮುದಾಯಗಳನ್ನು ಸೇರಿಸುವುದರಿಂದ ಸಮಸ್ಯೆ ಇನ್ನೂ ಬಿಗಡಾಯಿಸುವುದಿಲ್ಲವೇ?

ದಲಿತರು/ ಆದಿವಾಸಿಗಳಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ಸಮುದಾಯಗಳ ಗುಂಪಿಗೆ ರಾಹುಲ್‌ರ ಕಾಂಗ್ರೆಸ್ 'ಮಹಿಳೆ'ಯರನ್ನು ಕೂಡ ಸೇರಿಸಿಬಿಟ್ಟಿದೆ. ಇದರಿಂದಾಗಿ ದಲಿತರಿಗೇನಾದರೂ ಲಾಭವಿದೆಯೇ? ಗೆಲುವಿನಿಂದ ಬೀಗುತ್ತಿರುವ ರಾಹುಲ್ ಕಾಂಗ್ರೆಸ್‌ಗೆ ಈ ಯಾವ ಪ್ರಶ್ನೆಗಳಿಗೂ ಉತ್ತರ ನೀಡುವ ಬಾಧ್ಯತೆಯೇನೂ ಇಲ್ಲ. ಕಾಂಗ್ರೆಸ್‌ನ ಅದ್ಭುತ ಗೆಲುವಿಗಾಗಿ ರಾಹುಲ್ ಗಾಂಧಿಗೆ ನನ್ನ ಶುಭಾಷಯಗಳು. ಆದರೆ ಮುಂದೊಂದು ದಿನ ರಾಹುಲ್ ಅವರ ದಲಿತರ ಮನೆ ವಾಸ್ತವ್ಯ ಮತ್ತು 2009ರ ರಾಹುಲ್ ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ವ್ಯಕ್ತಪಡಿಸಿರುವ ದಲಿತರ ಬಗೆಗಿನ ಕಾಳಜಿಯ ಎಡಬಿಡಂಗಿತನವನ್ನು ದಲಿತರು ಖಂಡಿತ ಅರ್ಥೈಸಿಕೊಳ್ಳಲಿದ್ದಾರೆ.

ಕಾಂಗ್ರೆಸ್‌ನ "ಯುವರಾಜ," ಹಾಗೂ "ಮುಂದಿನ ಪ್ರಧಾನಿ"ಯ ಬಗ್ಗೆ ನಾನು ಕಟು ಮಾತುಗಳನ್ನು ಆಡುವುದಿಲ್ಲ. ಆದರೆ ಈ ಮುಂದಿನ ಎರಡು ಸಾಧ್ಯತೆಗಳಲ್ಲಿ ಒಂದಂತೂ ಸತ್ಯ: 1. ರಾಹುಲ್‌ರ ದಲಿತರ ಮನೆಯ ವಾಸ್ತವ್ಯ ಒಂದು ದೊಡ್ಡ ನಾಟಕ. 2. ಕಾಂಗ್ರೆಸ್‌ನ ದಲಿತ ನೀತಿಯ ಬಗ್ಗೆ ರಾಹುಲ್‌ಗೆ ಯಾವುದೇ ರೀತಿಯ ತಿಳವಳಿಕೆ ಇಲ್ಲ.

ನೆನಪಿಡಿ. ಗೆಲುವಿನ ಮರೆಯಲ್ಲಿ ಯಾವಾಗಲೂ ಸೋಲು ಇದ್ದೇ ಇರುತ್ತದೆ. □

ಬುದ್ಧಾಯಣ

೪೬

ಆಕೆಯ ಬಣ್ಣ ಬಹುಕಾಲ ಬಾಳಲಿಲ್ಲ...!!

ಒಂದು ದಿನ ದರೋಡೆ ಕೋರರ ಗುಂಪೊಂದು ಆ ಗ್ರಾಮದ ಮೇಲೆ ದಾಳಿ ಮಾಡಿತು. ಗ್ರಾಮಸ್ಥರ ನಗ ನಾಣ್ಯ ಮುಂತಾದ ಸಂಪತ್ತನ್ನೆಲ್ಲ ಲೂಟಿ ಮಾಡಿತು. ಗ್ರಾಮಸ್ಥರಲ್ಲಿ ಕೆಲವರನ್ನು ಬಂಧಿಸಿ ಅವರ ಮೇಲೆ ಮೂಟೆಗಳನ್ನು ಹೊರಿಸಿಕೊಂಡು ಬರುತ್ತಿದ್ದರು. ಆ ಸಂದರ್ಭದಲ್ಲಿ ಬೋಧಿಸತ್ವರ ಹೆಂಡತಿಯಾದ ಸುಂದರಿಯನ್ನು ಕಂಡ ಆ ಗುಂಪಿನ ನಾಯಕ, ಆಕೆಯನ್ನು ಬಯಸಿದ ಆತ ಬಲವಂತದಿಂದ ಆಕೆಯನ್ನು ಹೊತ್ತುಕೊಂಡು ಹೋದ. ದೂರದ ಗ್ರಾಮವೊಂದಕ್ಕೆ ತೆರಳಿದ್ದ ಬೋಧಿಸತ್ವರು ಮನೆಗೆ ಬಂದರು. ಗ್ರಾಮಸ್ಥರಿಂದ ವಿಷಯ ತಿಳಿಯಲು ಕಂಗಾಲಾದರು.

ಸಿ ಎಚ್. ರಾಜಶೇಖರ್

ಬೋಧಿಸತ್ವರು ಅಂದಿನ ಆ ದಿನಗಳಲ್ಲಿ ಹಿಮಾಲಯದ ತಪ್ಪಲಿನ ಪ್ರಶಾಂತವಾಗಿ ಹರಿಯುತ್ತಿದ್ದ ಗಂಗಾನದಿಯ ದಡದ ಮೇಲೆ ಪರ್ಣಕುಟೀರವನ್ನು ಕಟ್ಟಿಕೊಂಡು ಏಕಾಂತವಾಗಿ ವಾಸಿಸುತ್ತಿದ್ದರು. ವೇದಾಧ್ಯಯನ ಮತ್ತು ಧ್ಯಾನದಲ್ಲಿ ತಮ್ಮ ಮನಸ್ಸನ್ನು ನೆಲೆ ನಿಲ್ಲಿಸಿಕೊಂಡು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಿದ್ದವರಾಗಿದ್ದರು.

ಅಂತಹ ಸಮಯದಲ್ಲಿ ಕಾಶಿ ರಾಜ್ಯದ ವಾರಣಾಸಿ ನಗರದಲ್ಲಿ ಶ್ರೇಷ್ಠಿಯೊಬ್ಬನಿದ್ದ. ಆಗರ್ಭ ಶ್ರೀಮಂತನಾದ ಆತನಿಗೆ ಏಕೈಕ ಪುತ್ರಿ ಇದ್ದಳು. ಯೌವನಾವಸ್ಥೆಗೆ ಬಂದ ಆಕೆ ಸುರಸುಂದರಿಯಾಗಿದ್ದಳು. ಆದರೆ ಸ್ವಭಾವದಲ್ಲಿ ದುಷ್ಟಳಾಗಿದ್ದಳು. ತನ್ನ ಮನೆಯಲ್ಲಿದ್ದ ಆಳುಕಾಳುಗಳಿಗೆ ಇನ್ನಿಲ್ಲದಂತೆ ತೊಂದರೆ ಕೊಡುತ್ತಿದ್ದಳು. ಹೀಗಿರಲು ಒಂದು ದಿನ ತನ್ನ ಸೇವಕಿಯರೊಂದಿಗೆ ಗಂಗಾನದಿಯ ದಡಕ್ಕೆ ಬಂದಳು. ಜಲಕ್ರೀಡೆಯಾಡಲು ಬಯಸಿ ನೀರಿಗಿಳಿದಳು. ಸಂಜೆ ಸೂರ್ಯಾಸ್ತವಾದರೂ ನೀರಿನಿಂದ ಮೇಲೆ ಬರಲಿಲ್ಲ. ಕತ್ತಲು ಆವರಿಸಿತು. ಆಕೆಯ ಸೇವಕರು ಇವಳ ಕಾಟದಿಂದ ಮುಕ್ತಿ ಹೊಂದಬೇಕೆಂದು ತಮ್ಮಲ್ಲಿ ಚರ್ಚಿಸಿ ನಿರ್ಧಾರಕ್ಕೆ ಬಂದರು.

ದಡದ ಮೇಲೆ ನಿಂತ ಅವರು ಈಜುತ್ತಿದ್ದ ಕುಮಾರಿಗೆ:

"ಒಡತಿ ಇಲ್ಲಿ ಬಂಡೆ ಇದೆ. ಅತ್ತ ಗುಂಡಿ ಇದೆ. ಆ ಕಡೆ ತಿರುಗಿದರೆ ಜಲಪಾತವಿದೆ!" ಎಂದು ಕೂಗಿ ಕೂಗಿ ನಿರ್ದೇಶನ ಕೊಡುತ್ತಿದ್ದರು. ಅಂತವರು ತಮ್ಮಲ್ಲಿಯೆ ಕೈ ಸಂಜ್ಞೆ ಮಾಡಿಕೊಂಡು ದೂರಸರಿಯ ತೊಡಗಿದರು. ಕೊನೆಗೆ ಅವರೆಲ್ಲ ಒಂದಾಗಿ ಊರಿನತ್ತ ನೆಡೆದರು.

ಈಕೆ ಈಜೂತ್ತಾ ರಭಸವಾಗಿ ಹರಿಯುತ್ತಿದ್ದ ಕೆಳಭಾಗಕ್ಕೆ ಬಂದಳು. ತಾನು ತಪ್ಪಿದನ್ನು ಕಂಡುಕೊಂಡಳು. ತನ್ನ ಸೇವಕಿಯರಿಗಾಗಿ ಕೂಗಿದಳು. ಅವರು ಕೈ ಕೊಟ್ಟ ಬಗ್ಗೆ ಖಾತರಿ ಪಡಿಸಿಕೊಂಡಳು. ಭಯಭೀತಳಾದ ಆಕೆ ಸಹಾಯಕ್ಕಾಗಿ ಚೀರತೊಡಗಿದಳು.

ಹೆಣ್ಣಿನ ಚಿತ್ಕಾರದ ಧ್ವನಿಯು ಬೋಧಿಸತ್ವರ ಕಿವಿಗೆ ಬಿದ್ದಿತು. ಅದು ಒಂಟಿ ಹೆಣ್ಣಿನ ಅಸಹಾಯಕ ಎಂಬುದನ್ನು ಖಾತರಿ ಪಡಿಸಿಕೊಂಡರು. ತಕ್ಷಣವೇ ಆಕೆಗೆ ಸಹಾಯ ಮಾಡಬೇಕೆಂದು ನಿರ್ಧರಿಸಿಕೊಂಡರು. ಹುಲ್ಲಿನ ದೊಂದಿಯನ್ನು ಹಚ್ಚಿಕೊಂಡು ಚೀತ್ಕಾರ ಬರುತ್ತಿದ್ದ ನದಿಯ ದಂಡೆಯ ಬಳಿ ಬಂದರು. ಒಂಟಿ ಹೆಣ್ಣೊಬ್ಬಳು ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿರುವುದನ್ನು ಕಂಡರು. ತಕ್ಷಣವೇ ನೀರಿಗೆ ದುಮಕಿ ಆಕೆಯನ್ನು ಅಪಾಯದಿಂದ ಕಾಪಾಡಿ ತನ್ನ ಆಶ್ರಮಕ್ಕೆ ಕರೆ ತಂದರು. ನಡುಗುತ್ತಿದ್ದ ಆಕೆಗೆ ಬೆಂಕಿಯ ಶಾಖವನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದರು. ಆಕೆಯು ಚಳಿಯಿಂದ ಪಾರಾದ ಮೇಲೆ ತಿನ್ನಲು ರುಚಿಕರವಾದ ಹಣ್ಣು ಹಂಪಲುಗಳನ್ನು ಕೊಟ್ಟರು. ಆಶ್ರಮದ ಒಳಗೆ ಮಲಗಲು ವ್ಯವಸ್ಥೆ ಮಾಡಿ ತಾವು ಹೊರಗಿನ ಜಗುಲಿಯಲ್ಲಿ ಮಲಗಿ ನಿದ್ರೆ ಹೋದರು.

ಮರುದಿನ ಮುಂಜಾನೆ ಆಕೆಯನ್ನು ನೋಡಲು ಜ್ವರದಿಂದ ನರಳುತ್ತಿದ್ದಳು. ಆಕೆಗೆ ಔಷದೋಪಚಾರ ಮಾಡಿದರು. ಆಕೆ ಎರಡು ಮೂರು ದಿನದಲ್ಲಿ ಸಂಪೂರ್ಣ ಗುಣ ಮುಖಳಾದಳು. ಬಳಿಕ: "ನೀನು ಯಾರು? ಇಲ್ಲಿಗೇಕೆ ಬಂದೆ?" ಎನ್ನಲು ಆಕೆ ತನ್ನ ಕಥೆ ಹೇಳಿದಳು. ಆಗ ಅವರು:

'ನೀನೀಗ ಗುಣಮುಖಳಾಗಿರುವೆ ನಿನ್ನ ಮನೆಗೆ ಹೋಗು!" ಎಂದರು. ಆಕೆಯು ಬೋಧಿಸತ್ವರ ತೇಜೋಮಯ ಸೌಂದರ್ಯಕ್ಕೆ ಮರುಳಾಗಿ ಆತನೊಂದಿಗೆ ರವಿಸಲು ಇಚ್ಚಿಸಿದಳು. ಆಕೆ ಮತ್ತೆ ರೋಗಿಯಂತೆ ನಟಿಸಲು ಪ್ರಾರಂಭಿಸಿದಳು. ಅದೇ ಸಮಯದಲ್ಲಿ ತನ್ನ ಸ್ತ್ರೀ ಸಹಜ ವೈಯ್ಯಾರಗಳಿಂದ ಬೋಧಿಸತ್ವರ ಸಂನ್ಯಾಸತ್ವವನ್ನು ಭಂಗಗೊಳಿಸಿ ತನ್ನ ಇಚ್ಚೆಯನ್ನು ಪೂರೈಸಿಕೊಂಡಳು.



ಅತ್ತ ಈಕೆಯ ಸೇವಕಿಯರು ತನ್ನ ಮನೆಗೆ ಹೋಗಿ:

ಕುಮಾರಿಯು ನದಿಯಲ್ಲಿ ಕೊಚ್ಚಿ ಹೋದಳು!" ಎಂದು ಸುಳ್ಳು ಹೇಳಿದರು.

ಅವರ ತಂದೆ ಹುಡುಕಬಾರದ ಕಡೆಯೆಲ್ಲ ನಿರಂತರ ಹುಡುಕಿ ತನ್ನ ಮಗಳು ನೀರು ಪಾಲಾದಳು ಎಂದು ನಿರ್ಧರಿಸಿ ಸುಮ್ಮನಾದರು. ಇತ್ತ ಬೋಧಿಸತ್ವರು ಆ ಕುಮಾರಿಯ ಪ್ರೇಮಪಾಶಕ್ಕೆ ಸಂಪೂರ್ಣವಾಗಿ ಬಲಿಯಾದರು. ಸಂನ್ಯಾಸತ್ವವನ್ನು ತ್ಯಜಿಸಿ ಗೃಹಸ್ಥರಾದರು. ಈಗಿರಲು ಒಂದು ದಿನ ಆ ಕುಮಾರಿಯು:

"ಸ್ವಾಮಿ, ನಾವು ಈ ನಾಡಿನಲ್ಲಿ ಇದ್ದು ಸಾಧಿಸುವುದಾದರೂ ಏನು? ಯಾವುದಾದರೂ ಗ್ರಾಮಕ್ಕೆ ಹೋಗೋಣ!" ಎಂದಳು. ಆಕೆಯ ಮಾತಿಗೆ ಬೆರಗಾದ ಬೋಧಿಸತ್ವರು ಕಾಡನ್ನು ತೊರೆದು ದೂರದ ಗ್ರಾಮವೊಂದಕ್ಕೆ ಬಂದು ನೆಲೆನಿಂತರು. ಜೀವನೋಪಾಯಕ್ಕಾಗಿ ಅವರು ಮಜ್ಜಿಗೆಯನ್ನು ಮಾರುವ ವೃತ್ತಿಯನ್ನು ಅವಲಂಬಿಸಿದರು. ಇವರ ಸಚ್ಚಾರಿತ್ರ್ಯದಿಂದ ಕೂಡಿದ ನಡೆನುಡಿ ಮತ್ತು ಪಾಂಡಿತ್ಯವನ್ನು ಕಂಡ ಗ್ರಾಮಸ್ಥರು ಇವರನ್ನು ಅಪಾರವಾಗಿ ಗೌರವಿಸುತ್ತಿದ್ದರು. ಇವರನ್ನು ತಕ್ರ (ಮಜ್ಜಿಗೆ) ಪಂಡಿತನೆಂದು ಸಂಬೋಧಿಸುತ್ತಿದ್ದರು. "ನಮಗೆ ಉಚಿತಾನುಚಿತವನ್ನು ತಿಳಿಸುತ್ತಾ ಇಲ್ಲಿಯೆ ಇರು" ಎಂದು ಆತನಿಗಾಗಿ ಊರ ಮುಂದೆ ಒಂದು ಕುಟೀರವನ್ನು ಕಟ್ಟಿಸಿಕೊಟ್ಟರು. ಆತನ ಸಂಸಾರ ನಿರ್ವಾಹಣೆಯ ಖರ್ಚುವೆಚ್ಚವನ್ನು ಗ್ರಾಮಸ್ಥರು ನಿಭಾಯಿಸುತ್ತಿದ್ದರು.

ಹೀಗಿರಲು ಒಂದು ದಿನ ದರೋಡೆಕೋರರ ಗುಂಪೊಂದು ಆ ಗ್ರಾಮದ ಮೇಲೆ ದಾಳಿ ಮಾಡಿತು. ಗ್ರಾಮಸ್ಥರ ನಗ ನಾಣ್ಯ ಮುಂತಾದ ಸಂಪತ್ತನ್ನೆಲ್ಲ ಲೂಟಿ ಮಾಡಿತು. ಗ್ರಾಮಸ್ಥರಲ್ಲಿ ಕೆಲವರನ್ನು ಬಂಧಿಸಿ ಅವರ ಮೇಲೆ ಮೂಟೆಗಳನ್ನು ಹೊರಿಸಿಕೊಂಡು ಬರುತ್ತಿದ್ದರು. ಆ ಸಂದರ್ಭದಲ್ಲಿ ಬೋಧಿಸತ್ವರ ಹೆಂಡತಿಯಾದ ಸುಂದರಿಯನ್ನು ಕಂಡನು. ಆ ಹುಂಪಿನ ನಾಯಕ, ಆಕೆಯನ್ನು ಬಯಸಿದ ಆತ ಬಲವಂತದಿಂದ ಆಕೆಯನ್ನು ಹೊತ್ತುಕೊಂಡು ಹೋದ.

ದೂರದ ಗ್ರಾಮವೊಂದಕ್ಕೆ ತೆರಳಿದ್ದ ಬೋಧಿಸತ್ವರು ಮನೆಗೆ ಬಂದರು. ಗ್ರಾಮಸ್ಥರಿಂದ ವಿಷಯ ತಿಳಿಯಲು ಕಂಗಾಲಾದರು. ಸ್ವಲ್ಪ ದಿನಗಳು ಕಳೆದ ಬಳಿಕ ದರೋಡೆಕೋರರ ಗುಂಪಿನ ನಾಯಕ ಆಕೆಯನ್ನು ಮದುವೆಯಾದ ಎಂಬ ಸುದ್ದಿಯು ತಿಳಿಯಿತು. ಆಗಲೂ ಕೂಡ ಬೋಧಿಸತ್ವರು. ಅವಳು ನನ್ನನ್ನು ಅತಿಯಾಗಿ ಪ್ರೀತಿಸಿ ಮದುವೆಯಾದಳು. ಹಾಗಿರಲು ಅವನೊಂದಿಗೆ ಒಪ್ಪಿ ಜೀವಿಸಲು ಹೇಗೆ ಸಾಧ್ಯ. ಸಮಯ ಸಾಧಿಸಿ ಒಂದಲ್ಲ ಒಂದು ದಿನ ಆಕೆ ತನ್ನ ಬಳಿ ಬರುವುದು ಖಚಿತ ಎಂದು ತಿಳಿದು ಕಾಯುತ್ತಾ ಕುಳಿತ.

ಆದರೆ ಸುಂದರಿಯಾದ ಬೋಧಿಸತ್ವರ ಹೆಂಡತಿಯ ಸೌಂದರ್ಯಕ್ಕೆ ಮರುಳಾದ ಆ ದರೋಡೆಕೋರ ಆಕೆಯನ್ನು ಅಪಾರ ಸುಖ ಸಂಪತ್ತಿನಿಂದ ನೋಡಿಕೊಳ್ಳತೊಡಗಿದ. ದಿನಗಳು ಕಳೆದ ಬಳಿಕ ಆ ಸುಖಕ್ಕೆ ಒಗ್ಗಿ ಹೋದ ಆಕೆ ಬೋಧಿಸತ್ವರನ್ನು ಮರೆತುಬಿಟ್ಟಳು. ಆದರೆ ಆತ ಒಂದಲ್ಲ ಒಂದು ದಿನ ಇಲ್ಲಿಗೆ ಬಂದೆ ಬರುತ್ತಾನೆ. ನನ್ನನ್ನು ತನ್ನ ಜ್ಞಾನಬಲದಿಂದ ಕರೆದುಕೊಂಡು ಹೋಗಿಯೇ ಹೋಗುತ್ತಾನೆ ಎಂಬ ಭಯವು ಮೂಡಿತು. ಈ ಸುಖದ ಮುಂದೆ ಸಂನ್ಯಾಸಿಯ ಸುಖ ತೃಣ ಮಾತ್ರ ಅನ್ನಿಸಿತು.

ಹೆಣ್ಣಿನ ಚಿತ್ಕಾರದ ಧ್ವನಿಯು ಬೋಧಿಸತ್ವರ ಕಿವಿಗೆ ಬಿದ್ದಿತು. ಅದು ಒಂಟಿ ಹೆಣ್ಣಿನ ಅಸಹಾಯಕ ಎಂಬುದನ್ನು ಖಾತರಿ ಪಡಿಸಿಕೊಂಡರು. ತಕ್ಷಣವೇ ಆಕೆಗೆ ಸಹಾಯ ಮಾಡಬೇಕೆಂದು ನಿರ್ಧರಿಸಿಕೊಂಡರು. ಹುಲ್ಲಿನ ದೊಂದಿಯನ್ನು ಹಚ್ಚಿಕೊಂಡು ಚೀತ್ಕಾರ ಬರುತ್ತಿದ್ದ ನದಿಯ ದಂಡೆಯ ಬಳಿ ಬಂದರು. ಒಂಟಿ ಹೆಣ್ಣೊಬ್ಬಳು ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿರುವುದನ್ನು ಕಂಡರು. ತಕ್ಷಣವೇ ನೀರಿಗೆ ದುಮುಕಿ ಆಕೆಯನ್ನು ಅಪಾಯದಿಂದ ಕಾಪಾಡಿ ತನ್ನ ಆಶ್ರಮಕ್ಕೆ ಕರೆ ತಂದರು. ನಡುಗುತ್ತಿದ್ದ ಆಕೆಗೆ ಬೆಂಕಿಯ ಶಾಖವನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದರು. ಆಕೆಯು ಚಳಿಯಿಂದ ಪಾರಾದ ಮೇಲೆ ತಿನ್ನಲು ರುಚಿಕರವಾದ ಹಣ್ಣು ಹಂಪಲುಗಳನ್ನು ಕೊಟ್ಟರು.

ಆದುದರಿಂದ ಆ ಬಡ ಸಂನ್ಯಾಸಿಯನ್ನು ನಂಬಿಸಿ ಇಲ್ಲಿಗೆ ಕರೆ ತಂದು ಉಪಾಯವಾಗಿ ಕೊಲೆ ಮಾಡಬೇಕೆಂದು ಸಂಚು ಹೂಡಿದಳು.

ತನ್ನ ಒಬ್ಬ ನಂಬಿಕಸ್ಥ ಸೇವಕನನ್ನು ಕರೆದು ನೀನು ನನ್ನ ಹಿಂದಿನ ಗಂಡನಾದ ಬೋಧಿಸತ್ವರ ಬಳಿ ಹೋಗಿ ನಾನು ಇಲ್ಲಿ ಬಲು ದುಃಖದಿಂದ ದಿನಗಳನ್ನು ಕಳೆಯುತ್ತಿದ್ದೇನೆ. ನೀನು ಈ ಸೇವಕನೊಂದಿಗೆ ಗುಪ್ತ ಮಾರ್ಗದಿಂದ ಬಂದು ನನ್ನನ್ನು ಕರೆದುಕೊಂಡು ಹೋಗು ಎಂದು ಹೇಳಿ ಕಳುಹಿಸಿದಳು.

ಬೋಧಿಸತ್ವರು ಅ ಸೇವಕನನ್ನು ಅನುಸರಿಸಿ ಬಂದು ತನ್ನ ಹಿಂದಿನ ಪತ್ನಿಯನ್ನು ಸಂಧಿಸಿದನು. ಆಕೆಯು ನಾನಾ ರೀತಿಯ ದುಃಖಗಳನ್ನು ತೋಡಿಕೊಂಡು ಬಲುವಾಗಿ ನಟಿಸಿ ನಂಬಿಸಿದಳು. ಬಳಿಕ ಆತನಿಗೆ ಊಟ ಮಾಡಿಸಿ:

"ಸ್ವಾಮಿ, ಕಳ್ಳರ ಸರದಾರ ನಾವು ಈಗ ಹೋದರೆ ಹಿಡಿದು ಕೊಂದು ಬಿಡುವುದು ಖಚಿತ. ಆತ ರಾತ್ರೆ ಕುಡಿದು ಮತ್ತನಾಗಿ ಮಲಗುತ್ತಾನೆ, ಆಗ ನಾವು ಸಮಯ ಸಾಧಿಸಿ ಓಡಿ ಹೋಗೋಣ!" ಎಂದು ನಂಬಿಸಿ ತನ್ನ ಮಂಚದ ಕೆಳಗೆ ಮಲಗಿಸಿದಳು.

ಎಂದಿನಂತೆಯೆ ಕಳ್ಳರ ಸರದಾರ ಬಂದನು. ಕುಡಿದು ಮತ್ತನಾದನು ಆಕೆಯೊಂದಿಗೆ ಮನ ಬಂದಂತೆ ರಮಿಸಿದನು. ಇದೇ ಸರಿಯಾದ ಸಮಯ ಎಂದು ಭಾವಿಸಿದ ಆಕೆ ಆತನನ್ನು ಉದ್ದೇಶಿಸಿ:

"ಸರದಾರ, ಈ ಸಮಯದಲ್ಲಿ ನನ್ನ ಹಿಂದಿನ ಗಂಡ ಬಂದು ಈಕೆ ನನ್ನ ಹೆಂಡತಿ. ಈಕೆಯನ್ನು ನನ್ನೊಂದಿಗೆ ಕಳುಹಿಸು ಎಂದು ಸಿದ್ದನಾದರೆ ಆಗ ನೀನು ಏನನ್ನು ಮಾಡುವೆ?" ಆತ ಮಂಚದಿಂದ ವೀರಾವೇಷದಿಂದ ಮೇಲೆದ್ದು, ಕೆಮ್ಮುತ್ತಾ ಕ್ಯಾಕರಿಸುತ್ತಾ"

"ಹಾಗೆ ಮಾಡುವೆ, ಹೀಗೆ ಮಾಡುವೆ, ಅವನ ಕೈಕಾಲು ಮುರಿಯುವಂತೆ ಹೊಡೆದು ಮತ್ತೆಂದೂ ಇತ್ತ ಬಾರದಂತೆ ಓಡಿಸುತ್ತೇನೆ!" ಎಂದ. ಆಗ ಆಕೆ ಮಂಚದಿಂದ ಕೆಳಗಿಳಿದು ಮಂಚದ ಅಡಿ ಹುದುಗಿ ಕುಳಿತಿದ್ದ ಗಂಡನನ್ನು ತೋರಿಸುತ್ತಾ:

"ಹಾಗಾದರೆ ಈಗ ಅದೇನು ಮಾಡುವೆಯೋ ಮಾಡು ನೋಡೋಣ!" ಎಂದು ಸೊಂಟದ ಮೇಲೆ ಕೈ ಹೊತ್ತು ನಿಂತಳು. ಆತ ಉಕ್ಕಿ ಬಂದ ರೋಷದಿಂದ ಬೋಧಿಸತ್ವರನ್ನು ಹಿಡಿದು ಒಂದೇ ಸಮನೆ ಚಚ್ಚ ತೊಡಗಿದ. ಬೋಧಿಸತ್ವರಿಗೆ ಆ ಸರದಾರನ ಏಟಿಗಿಂತ ತನ್ನ ಹೆಂಡತಿಯ ಕುತಂತ್ರ ಮತ್ತು ನಯವಂಚನೆ ಅಪಾರ ವೇದನೆಯನ್ನು ತಂದಿತು. ಆಗ ಅವರು:

"ಕುತಂತ್ರಿಗಳು, ಕೃತಘ್ನರರು, ಚಾಡಿಕೋರರು ಮತ್ತು ಮಿತ್ರರಲ್ಲಿ ಕಲಹವನ್ನು ತರುವವರು...!" ಎಂಬ ನಾಲ್ಕು ಪದಗಳನ್ನು ಪದೆ ಪದೆ ಹುಚ್ಚರಿಸ ತೊಡಗಿದರು.

ಇದರಿಂದ ಗಲಿಬಿಲಿಗೊಂಡ ಆ ಸರದಾರ ಹೊಡೆಯುವುದನ್ನು ನಿಲ್ಲಿಸಿದ. ಬೋಧಿಸತ್ವರ ಕೈಕಾಲುಗಳನ್ನು ಕಟ್ಟಿ ಬೇರೊಂದು ಕೋಣೆಯಲ್ಲಿ ಬಂಧಿಸಿ ಬೀಗ ಹಾಕಿದ. ಮತ್ತೆ ಬಂದ ಆಕೆಯೊಂದಿಗೆ ಮಲಗಿದ.

ಮರುದಿನ ಮುಂಜಾನೆ ಆತನಿಗೆ ಕುಡಿದ ಅಮಲು ಇಳಿಯಿತು. ತನ್ನ ಶತ್ರುವಿನ ಜ್ಞಾಪಕ ಬರಲು ಕೋಣೆಗೆ ಬಂದ. ಮತ್ತೆ ಮನ ಬಂದಂತೆ ಚಚ್ಚ ತೊಡಗಿದ. ಆಗಲೂ ಬೋಧಿಸತ್ವರು ಕಳ್ಳರ ಸರದಾರ ಮೇಲೆ ಕೋಪಗೊಳ್ಳದೆ ಹಿಂದಿನಂತೆಯೇ:

"ಕುತಂತ್ರಿಗಳು, ಕೃತಘ್ನರು, ಚಾಡಿಕೋರರು ಮತ್ತು ಮಿತ್ರರಲ್ಲಿ ಕಲಹವನ್ನು ತರುವವರು...!" ಎಂಬ ನಾಲ್ಕು ಪದಗಳು ಮತ್ತೆ ಮತ್ತೆ ಹುಚ್ಚರಿಸಿದರು. ಆ ಸರದಾರ ಗಲಿಬಿಲಿಗೊಂಡ. ನಾನು ಎಷ್ಟೇ ಹೊಡೆದರೂ, ಅಳದೆ ದುಃಖಪಡದೆ ಅಥವಾ ವ್ಯಾಘ್ರನಾಗದೆ ಈ ನಾಲ್ಕು ಪದಗಳನ್ನು ಮಾತ್ರ ಏಕೆ ಹೇಳುತ್ತಿದ್ದಾನೆ? ಅದರ ರಹಸ್ಯವನ್ನು ಅರಿಯಾಬೇಕೆಂದು:

"ಎಲ್ಲೈ ಪಂಡಿತನೇ, ಈ ನಾಲ್ಕು ಪದಗಳ ಅರ್ಥವೇನು? ಇದನ್ನು ಯಾರ ಕುರಿತು ಹೇಳುತ್ತಿರುವೆ?" ಎನ್ನಲು ಆತ ತನ್ನ ಹಿಂದಿನ ಕಥೆಯನ್ನು ಹೇಳಿ ಪೂರೈಸಿದ ಮೇಲೆ: "ಇದನ್ನು ಆ ಹೆಣ್ಣಿನ ಕುರಿತು ಆಡಿದ ಮಾತುಗಳು. ಆಕೆ ನನ್ನಿಂದ ಪ್ರಾಣವನ್ನು ಉಳಿಸಿಕೊಂಡು ನನಗೇ ಕುತಂತ್ರವನ್ನು ಎಸಗಿದಳು. ನನ್ನಿಂದ ಸುಖಪಡೆದು ಕೃತಘ್ನಳಾದಳು. ನಿನ್ನ ಮೇಲೆ ನನ್ನಲ್ಲಿ ಇಲ್ಲದ ಚಾಡಿಯನ್ನು ಹೇಳಿದಳು. ನಮ್ಮಿಬ್ಬರ ನಡುವೆ ವೃಥಾ ದ್ವೇಷವನ್ನು ಮೂಡಿಸಿದಳು. ಈ ಸತ್ಯವೂ ನನ್ನಲ್ಲಿ ಸಾಕ್ಷಾತ್ಕಾರವಾಗಲು ನಾನು ಆ ನಾಲ್ಕು ಪದಗಳನಷ್ಟೇ ಆಡಿದೆ!" ಎಂದ.

ಆ ಕಳ್ಳರ ಸರದಾರನಿಗೆ: 'ಇಂಥಹ ಸಾತ್ವಿಕ ಮನುಷ್ಯನಿಗೇ ಆಕೆ ಮೋಸ ಮಾಡಿರುವಾಗ ಈ ಹೆಣ್ಣು ನನಗೆ ಬಿಡುವಳೆ?' ಎಂದೆನಿಸಿತು. ಆಗ ಆತನಿಗೆ ತನ್ನ ತಪ್ಪಿನ ಪೂರ್ಣ ಅರಿವಾಗಿ ಮನವು ಪರಿವರ್ತನೆಯಾಯಿತು. ಸಮಯ ಸಾಧಿಸಿ ಆ ಸುಂದರಿಯನ್ನು ಕತ್ತರಿಸಿ ಹಾಕಿದ. ಬೋಧಿಸತ್ವರನ್ನು ಬಂಧನದಿಂದ ಬಿಡಿಸಿ ತನ್ನ ತಪ್ಪಿಗಾಗಿ ಕ್ಷಮೆ ಕೇಳಿದ. ಅವರನ್ನು ಆಲಂಗಿಸಿಕೊಂಡು:

"ನಿಮ್ಮಿಂದಾಗಿ ನನ್ನ ಒಳಗಣ್ಣು ತೆರೆಯಿತು. ಇನ್ನೂ ಮುಂದೆ ನಾನು ನಿಮ್ಮ ಶಿಷ್ಯ!" ಎಂದು ದರೋಡೆ, ಲೂಟಿ ಮತ್ತು ಹಿಂಸೆಯನ್ನು ತೊರೆದು ಅವರ ಹಿಂದೆ ನಡೆದ. □

'SAMVADA' Kannada Monthly, JULY 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಕವಿತೆಗಳು
ಕೆ.ಜಿ. ಶಂಕರಪಿಳ್ಳೆ
ಅನುವಾದ :
ತೇರ್‌ಳಿ ಎನ್. ಶೇಖರ್
ಬೆಲೆ : 120/-

ಲ ರೂ ಜ ಎ ಲ ನ್ವಾ
ಅನುವಾದ:
(ಶ್ರೀಮತಿ) ಶ್ರೀ ಹರ್ಲೇಕರ
ಬೆಲೆ : 350/-



ಕನುಪರ್ತಿ ವರಲಕ್ಷ್ಮಿ
ಪೀಲಾಪ್ರಗಡ ರಾಜ್ಯಲಕ್ಷ್ಮಿ
ಬೆಲೆ: 40/-



ಬಿಳಿಯ ಲಕೋಟೆ
ಬೆಂಗಾಲಿ ಮೂಲ: ಮತಿನಂದಿ
ಅನುವಾದ : ರಮಾ
ಬೆಲೆ : 100/-



ಸೂಫಿ ಹೇಳಿದ ಕಥೆ
ಕೆ.ಪಿ. ರಾಮನುಣ್ಣಿ
ಅನುವಾದ :
ಡಾ.ಅಶೋಕ ಕುಮಾರ್
ಬೆಲೆ : 100/-



ಅಕ್ಕಮಹಾದೇವಿ
ಗುರುಲಿಂಗ ಕಾಪಸೆ
ಬೆಲೆ: 40/-

ಒಂದು ಗಿಡ ಮತ್ತು ಎರಡು
ಹಕ್ಕಿಗಳು
ವಿಶ್ರಾಮ ಬೇಡೆಕರ
ಅನುವಾದ : ಕುಮುದಿನಿ
ಅಶೋಕ ಭೈರಣ್ಣ
ಬೆಲೆ : 225/-

ಪಿ. ಲಂಕೇಶ್
ಕೆ. ಮರುಳಸಿದ್ದಪ್ಪ
ಬೆಲೆ : 40/-

ಸ್ವಾಮಿ ವಿವೇಕಾನಂದ
ನಮಾಯಿ ಸದನ್ ಬೋಸ್
ಬೆಲೆ : 40/-

ಸುಂದರಿಯರು ಸುಂದರರು
ಉರೂಬ್
ಅನುವಾದ :
ಮೋಹನ ಕುಂಟಾರ್
ಬೆಲೆ : 250/-



ಶ್ರೀರಂಗ
ಎನ್ಕೆ.ಕುಲಕರ್ಣಿ
ಬೆಲೆ : 40/-

ಆರ್.ಕಲ್ಯಾಣಮ್ಮ
ಎಸ್.ಡಿ.ಶಶಿಕಲಾ
ಬೆಲೆ : 40/-



ನ ಹನ್ಯತೆ
ಮೈತ್ರೇಯಿ ದೇವಿ
ಅನುವಾದ : ಗೀತಾ
ವಿಜಯಕುಮಾರ್
ಬೆಲೆ : 250/-



ರಾಷ್ಟ್ರಕವಿ ಕುವೆಂಪು
ಪ್ರಭು ಶಂಕರ
ಬೆಲೆ: 40/-

ಆಧುನಿಕ ಮಹಾಭಾರತ
ಗುಂಟೂರು ಶೇಷೇಂದ್ರ ಶರ್ಮಾ
ಅನುವಾದ :
ಅರ್ಕಸಾಲಿ ವೃಷಭೇಂದ್ರಾಚಾರ್
ಬೆಲೆ : 200/-



ಕೇತು ವಿಶ್ವನಾಥರೆಡ್ಡಿ ಕತೆಗಳು
ತೆಲುಗು ಮೂಲ :
ಕೇತು ವಿಶ್ವನಾಥರೆಡ್ಡಿ
ಅನುವಾದ :
ಮೀರಾಸಾಬಿಹಳ್ಳಿ ಶಿವಣ್ಣ
ಬೆಲೆ : 120/-

ತ.ರಾ.ಸು
ಎಂ.ಎಸ್.ಪಾಟೀಲ
ಬೆಲೆ : 40/-

ಮಧುರಚೆನ್ನ
ಗುರುಲಿಂಗ ಕಾಪಸೆ
ಬೆಲೆ : 40/-

ನೆಲವೆದ್ದು ಬಡಿಯಿತು
ವಿಶ್ವಾಸ ಪಾಟೀಲ
ಕನ್ನಡಕ್ಕೆ : ಚಂದ್ರಕಾಂತ
ಪೋಕಳೆ
ಬೆಲೆ : 350/-